ಬುಧವಾರ, ಆಗಸ್ಟ್ 27, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಹಬ್ಬದ ಸಂಭ್ರಮ
ನಟಿ ತಾರಾ ಅನುರಾಧಾ ಅವರು ತಮ್ಮ ಮನೆಯಲ್ಲಿ ಗಣೇಶ ಹಬ್ಬ ಆಚರಿಸಿದರು



ಚಿನ್ನಕ್ಕೆ ಕೌರ್ ಗುರಿ
ಭಾರತದ ಶೂಟರ್ ಸಿಫ್ತ್ ಕೌರ್ ಸಮ್ರಾ ಅವರು ಕಜಾಕಸ್ತಾನದಲ್ಲಿ ನಡೆದ 16ನೇ ಏಷ್ಯನ್ ಚಾಂಪಿಯನ್‌ಷಿಪ್‌ನ ಮಹಿಳೆಯರ 50 ಮೀಟರ್ ರೈಫಲ್ ತ್ರೀ ಪೊಸಿಷನ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು



INDIA'S FIRST 5 YEAR WARRANTY* *Conditions apply

ಆಧಾರ್ ಕಾರ್ಡ್ ಮೇಲೆ$ ಲೋನ್ ಮತ್ತು ಕ್ಯಾಶ್ EMI

Get instant discount up to 10,000# on your credit card EMI HDFC BANK & on select cards#. Powered by pine labs #T&C apply

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or visit us on **www.HeroMotoCorp.com**. Accessories and features shown may not be a part of standard fitment. Always wear a helmet while riding a two-wheeler. ^Basis data available in public forum for products in 100cc Motorcycle segment. $Finance offer is at the sole discretion of the Financier, subject to its respective T&Cs. Available at select dealerships.T&C apply.

ಟೋಲ್ ಫ್ರೀ
1800 266 0018

AUTHORISED DEALERS: BENGALURU - HOSUR ROAD: RT KRISHNA HERO - PH: 9289923177. **LALBAGH ROAD: PRAKASH HERO - PH: 9289922117. BYATARAYANAPURA: BIMAL HERO** - PH: 9289922863. **PEENYA: SAI HERO** - PH: 9289922830. **HOSUR ROAD: RT KRISHNA HERO** - PH: 9289923177. **BANASHANKARI: SAI HERO** - PH: 9289922476. **BANASWADI: BHAGATH HERO** - PH: 9289922738. **MAGADI ROAD: POORNA HERO** - PH: 9289923212. **MARATHALLI: VAAYURATHA HERO** - PH: 9289923811. **RAJAJI NAGAR: MAX HERO** - PH: 9289923023. **KOLAR: SAI BALAJI HERO** PH. 9821745024. **CHIKKABALLAPUR: MANJUNATH HERO** - PH: 9821751332. **TUMKUR: SAI HERO** - PH: 9289922986. **B.H.ROAD – SAI HERO**, PH. 7022752841. **KAMAKSHIPALYA: POORNA MOTORS** – PH: 9606922534. **JP NAGAR: SAI HERO**, PH: 99002 36280. **KANAKPURA ROAD:** SAI HERO - 8904677394. **HOSKOTE: BHAGATH HERO** - PH: 8884600051. **K R PURAM: BHAGATH HERO** - PH: 7829488706. **JIGANI: RT KRISHNA HERO** – PH: 8762860999. **RT NAGAR: BIMAL HERO** 9535327710.. **TIPTUR: SAI HERO** PH. 9164840456. **KUNIGAL: SAI HERO** - PH: 7022752858. **DODDABALLAPURA: BIMAL HERO** 9742202125. **Associate Dealer: BELATHUR** - 9902649569. **MADIWALA** - 9731660639. **BANASHANKARI 3RD STAGE** - 9513353864. **BANNERGHATTA ROAD** - 41209619. **KENGERI** - 9739275523. **YELAHANKA** - 28462524, 9341025589. **MYSORE ROAD**:9611997733. **DEVANAHALLI** - 9964560599. **KANAKAPURA** - 9880212346. **BAGEPALLI** - 282828. **SRINIVASPUR** - 9738504002. **SIDLAGHATTA** - 254827. **NELAMANGALA** - 27723395. **PAVAGADA** - 9740324639. **MADHUGIRI** - 9972278989. **VIJAYAPURA**: 9449619920. **SIRA**: 9448417393. **CHANDAPURA**: 9481329064. **VIDYARANYAPURA:** 9606934533. **MAGADI:** 9482090890 **Also Available at: DUNNASANDRA:** 8310166369. **HSR LAYOUT**: 7428893265. **MATHIKERE**: 9035027951. **DOMLUR:** 7353919910- **J.P.NAGAR:** 9035024274. **RT NAGAR:** 9535327710. . **ATTIBELE:** 8050609104. **B NARAYANAPURA:** 9945472149. **VARTHUR**: 9900877227. **PAPAREDDYPALYA**: 9916678309. **ANEKAL**: 9739519252. **KONANKUNTE**: 9886122251. **SARJAPUR MAIN ROAD**: 8762860999. **BIDADI:** 9844767719. **RAMANAGARA:** 9663399909. **JIGANI:** 9986498884. **CHIKKANAYAKANAHALLI**: 9880807399. **TURUVEKERE:** 9448403205. **KORATAGERE**: 9731713711. **PERESANDRA**: 9901502049.

VML.5827.2025

ರಾಹುಲ್ ಗಾಂಧಿ ಮನವೊಲಿಕೆಗೆ ಚಿಂತನೆ

ಅಲೆಮಾರಿಗಳಿಗೆ ಪ್ರತ್ಯೇಕ ಮೀಸಲಾತಿಗೆ ಹೋರಾಟ ಸಮಿತಿ ಸಭೆ

• ಪಕ್ಷಾತೀತವಾಗಿ ಹೋರಾಟ ರೂಪಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕಾನೂನು ಹೋರಾಟ ಮುಂದುವರಿಸಲು ಸಹಮತ
- ತೆಲಂಗಾಣ ಮಾದರಿಯಲ್ಲಿ ಒಳ ಮೀಸಲು ಹಂಚಿಕೆಗೆ ಆಗ್ರಹ
- ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು ನಿರ್ಧಾರ

ಬೆಂಗಳೂರು: 'ಅಲೆಮಾರಿ ಸಮುದಾಯಗಳಿಗೆ ಶೇಕಡ 1ರಷ್ಟು ಪ್ರತ್ಯೇಕ ಮೀಸಲು ಕೊಡಿಸಲು ಖುದ್ದು ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಡೋಣ. ಅಗತ್ಯ ಬಿದ್ದರೆ ಕಾನೂನು ಹೋರಾಟದ ಕುರಿತು ಪರಿಶೀಲನೆ ಮಾಡೋಣ' ಎನ್ನುವ ಅಭಿಪ್ರಾಯ ವ್ಯಕ್ತವಾಯಿತು.

ಶಾಸಕರ ಭವನದಲ್ಲಿ ಮಂಗಳವಾರ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ಆಯೋಜಿಸಿದ್ದ ಸಭೆಯಲ್ಲಿ ವಿವಿಧ ಸಮುದಾಯಗಳ ಪ್ರಮುಖರು, ಸಾಹಿತಿಗಳು, ಹೋರಾಟಗಾರರು ಚರ್ಚಿಸಿದರು.

ನಾಗಮೋಹನ ದಾಸ್ ಆಯೋಗದ ವರದಿ ಅನುಸಾರ ಅಸ್ಪೃಶ್ಯ ಅಲೆಮಾರಿಗಳಿಗೆ ಶೇ 1ರಷ್ಟು ಪ್ರತ್ಯೇಕ ಮೀಸಲು ನೀಡಬೇಕು. ತೆಲಂಗಾಣ ಮಾದರಿ ಮೀಸಲು ಬಿಂದು ಅನುಸರಿಸಬೇಕು. ಅಲೆಮಾರಿ ಅಭಿವೃದ್ಧಿ ನಿಗಮದಲ್ಲಿ 49 ಅತಿಸೂಕ್ಷ್ಮ ಸಮುದಾಯಗಳಿಗೆ ಮಾತ್ರ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

ಮೀಸಲು ಪ್ರಮಾಣವನ್ನು ಶೇ 5.5ರಂತೆ ಎರಡೂ ಕಡೆಯವರಿಗೆ ನೀಡಿ, ಉಳಿಕೆ ಶೇ 1ರಷ್ಟನ್ನು ಅಲೆಮಾರಿಗಳಿಗೆ, ಇನ್ನೂ ಶೇ 1ರಷ್ಟನ್ನು ಉಳಿದ 29 ಜಾತಿಗಳಿಗೆ ಹಂಚುವ ಸೂತ್ರವನ್ನು ರೂಪಿಸುವುದು ಒಳ್ಳೆಯದು ಎನ್ನುವ ಸಲಹೆಗೂ ಸಹಮತ ವ್ಯಕ್ತವಾಯಿತು.

'ಮೂರು ದಶಕದ ನಿರಂತರ ಹೋರಾಟದ ನಂತರ ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಜಾರಿ ಮಾಡಿದ್ದು ಸ್ವಾಗತಾರ್ಹ. ಆದರೆ, ಅಲೆಮಾರಿಗಳಿಗೆ ಪ್ರತ್ಯೇಕ ಮೀಸಲು ಕೊಟ್ಟಿದ್ದರೆ ಎಲ್ಲರಿಗೂ ಸಮಾಧಾನವಾಗೋದು. ಸರ್ಕಾರದ ಸೌಲಭ್ಯದಿಂದ ವಂಚಿತ ಅಲೆಮಾರಿಗಳಿಗೆ ಪ್ರತ್ಯೇಕ ಮೀಸಲು ಸಿಗದೇ ಇದ್ದರೆ ಈಗಿನ ಪ್ರಯತ್ನಕ್ಕೆ ಗೌರವ ಬರುವುದಿಲ್ಲ. ಪಕ್ಷಾತೀತವಾಗಿ ಹೋರಾಟ ರೂಪಿಸಿ ಅವರಿಗೂ ನ್ಯಾಯ ಕಲ್ಪಿಸೋಣ' ಎಂದು ಸಭೆಯಲ್ಲಿ ಹಲವರು ಸಲಹೆ ನೀಡಿದರು.

'ಸದ್ಯವೇ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮತ್ತೊಮ್ಮೆ ಮನವಿ ಮಾಡೋಣ. ರಾಹುಲ್ ಗಾಂಧಿ ಅವರಿಗೂ ಪರಿಸ್ಥಿತಿ ಮನವರಿಕೆ ಮಾಡಿಕೊಡೋಣ. ಕಾನೂನು ಹೋರಾಟವನ್ನೂ ಮಾಡೋಣ. ಜನಾಭಿಪ್ರಾಯ ರೂಪಿಸುತ್ತಲೇ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಯತ್ನ ನಿಲ್ಲಿಸದಿರೋಣ' ಎಂದು ಕೆಲವರು ಅಭಿಪ್ರಾಯ ಸೂಚಿಸಿದರು.

ಒಳ ಮೀಸಲು ಹೋರಾಟಗಾರ ಎಸ್.ಮಾರೆಪ್ಪ, ವಡ್ಡಗೆರೆ ನಾಗರಾಜಯ್ಯ, ಬಸವರಾಜ್ ಕೌತಾಳ್, ಎ.ಎಸ್. ಪ್ರಭಾಕರ್, ನಿರಂಜನಾರಾಧ್ಯ, ರಹಮತ್ ತರೀಕೆರೆ, ಹುಲಿಕುಂಟೆ ಮೂರ್ತಿ, ಕುರುವ ಬಸವರಾಜ್, ಮೈತ್ರೇಯಿ, ಕೆ.ಷರೀಫಾ, ಶ್ರೀಪಾದಭಟ್, ಲೋಕೇಶ್ ಸಹಿತ ಹಲವರು ಇದ್ದರು.

> **ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣದಲ್ಲಿ ಅಲೆಮಾರಿಗಳಿಗೆ ಪ್ರತ್ಯೇಕ ಮೀಸಲು ನೀಡಿರುವಾಗ ಕರ್ನಾಟಕದಲ್ಲಿ ಇತರ ಸಮುದಾಯಗಳಲ್ಲಿಯೇ ಸೇರಿಸಬಾರದಿತ್ತು. ಮಾದಿಗ ಸಮುದಾಯ ಪಾಲು ಬಿಟ್ಟು ಕೊಡಲು ಸಿದ್ಧವಿದ್ದು ಇತರರನ್ನು ಮನ ಒಲಿಸಲಿ**
> **ದಾಸನೂರು ಕೂಸಣ್ಣ**

> **ಅಲೆಮಾರಿಗಳಿಗೆ ಸೌಲಭ್ಯ ಸಿಗುವವರೆಗೂ ಸಂಭ್ರಮ ಆಚರಿಸುವುದಿಲ್ಲ ಎನ್ನುವ ಮಾದಿಗ ಸಮುದಾಯದ ನಿಲುವು ಸ್ವಾಗತಾರ್ಹ. ಭಾವನಾತ್ಮಕ ಹೋರಾಟಕ್ಕಿಂತ ಹಕ್ಕಿನ ಭಾಷೆಯಲ್ಲಿಯೇ ಇದನ್ನು ಕೇಳಬೇಕು**
> **ಡಾ.ಎಚ್.ವಿ.ವಾಸು,** ಚಿಂತಕ

> **ಸಂಪುಟದ ತೀರ್ಮಾನವೇ ಅಂತಿಮವಲ್ಲ. ಈಗಲೇ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು ಮಾತುಕತೆ ಮೂಲಕ ಗೊಂದಲ ಬಗೆಹರಿಸಿಕೊಳ್ಳದಿದ್ದರೆ ಮತ್ತಷ್ಟು ಅನ್ಯಾಯಕ್ಕೆ ಒಳಗಾಗಬೇಕಾಗುತ್ತದೆ**
> **ರಾಜಪ್ಪ ದಳವಾಯಿ,** ಸಾಹಿತಿ



ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ಶಾಸಕರ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ 'ಸಮಾಲೋಚನಾ ಸಭೆ'ಯಲ್ಲಿ ರಾಜಪ್ಪ ದಳವಾಯಿ ಮಾತನಾಡಿದರು – ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಎರಡು ದಿನ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಎಲ್ಲೆಡೆ ಬುಧವಾರ ಮತ್ತು ಗುರುವಾರ ಭಾರಿ ಮಳೆಯಾಗುವ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, 'ಯೆಲ್ಲೊ ಅಲರ್ಟ್' ನೀಡಿದೆ.

ರಾಜ್ಯ ಎಲ್ಲಾ ಜಿಲ್ಲೆಗಳಲ್ಲಿ ಗಾಳಿ ಸಹಿತ ಜೋರು ಮಳೆಯಾಗುವ ಸಾಧ್ಯತೆ ಇದೆ. ಭಾರಿ ಮಳೆಯ ಮುನ್ಸೂಚನೆ ನೀಡಲಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬೀದರ್, ಕಲಬುರ್ಗಿ, ಬಾಗಲಕೋಟೆ, ಬೆಳಗಾವಿ, ಗದಗ, ಹಾವೇರಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ತಿಳಿಸಿದೆ.

ಈ ಜಿಲ್ಲೆಗಳಲ್ಲಿ ಹಲವೆಡೆ ಗಂಟೆಗೆ 40 ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸಬಹುದು. ಕರಾವಳಿಯಲ್ಲಿ ಪ್ರತಿ ಗಂಟೆಗೆ 50ರಿಂದ 60 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದ್ದು, ಮೀನುಗಾರರು ಸಮುದ್ರ ಪ್ರದೇಶಗಳಿಗೆ ಇಳಿಯದಂತೆ ಸೂಚಿಸಲಾಗಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಪ್ರತಿ ಗಂಟೆಗೆ 30ರಿಂದ 40 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ ಎಂದು ತಿಳಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಕದ್ರಾ, ಉಡುಪಿ ಜಿಲ್ಲೆಯ ಸಿದ್ದಾಪುರದಲ್ಲಿ ತಲಾ 4 ಸೆಂ.ಮೀ, ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ವೀಕ್ಷಣಾಲಯದಲ್ಲಿ 3 ಸೆಂ.ಮೀ, ಕ್ಯಾಸಲ್ ರಾಕ್‌ನಲ್ಲಿ 2 ಸೆಂ.ಮೀ. ಮಳೆ ದಾಖಲಾಗಿದೆ.

ಕಲ್ಯಾಣದ ವಿವಿಧೆಡೆ ಮಳೆ



ಕಲಬುರಗಿ: ಕಲ್ಯಾಣ ಕರ್ನಾಟಕದ ಕೊಪ್ಪಳ, ಬೀದರ್, ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಮಂಗಳವಾರ ಕೆಲ ಹೊತ್ತು ಮಳೆಯಾಗಿದೆ.

ಕೊಪ್ಪಳ ನಗರದಲ್ಲಿ ಗಣೇಶ ಚತುರ್ಥಿಗೆ ಪೂಜಾ ಸಾಮಗ್ರಿ ಖರೀದಿಯಲ್ಲಿ ತೊಡಗಿದ್ದವರಿಗೆ ಬಿರುಸಿನ ಮಳೆ ಅಡ್ಡಿಯಾಯಿತು. ಮಣ್ಣಿನ ಗಣಪತಿ ಮೂರ್ತಿಗಳನ್ನು ಮಾರಾಟಕ್ಕೆ ಇರಿಸಿದ್ದ ವ್ಯಾಪಾರಿಗಳು ಮಳೆಯಿಂದಾಗಿ ಮೂರ್ತಿಗಳ ರಕ್ಷಣೆ ಮಾಡಿಕೊಳ್ಳಲು ಪರದಾಟ ನಡೆಸಿದರು.

ಬೀದರ್ ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ದಿನವಿಡೀ ಜಿಟಿ ಜಿಟಿ ಮಳೆಯಾಗಿದ್ದರಿಂದ ಗಣೇಶನ ಹಬ್ಬದ ಖರೀದಿ ಹಾಗೂ ಸಿದ್ಧತೆಗೆ ತೊಡಕಾಯಿತು. ಆದರೆ, ಮಳೆ ಬಿಡುವು ಕೊಡದ ಲಕ್ಷಣ ಗೋಚರಿಸದ ಕಾರಣ ಜನ ಮಳೆಯಲ್ಲೇ ಖರೀದಿಸಿದರು. ಭಾಲ್ಕಿಯಲ್ಲೂ ಕೆಲ ಸಮಯ ಮಳೆಯಾಗಿದೆ.

ಯಾದಗಿರಿ ನಗರವೂ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಕೆಲ ಹೊತ್ತು ತುಂತುರು ಮಳೆಯಾಗಿದೆ. ಸುರಪುರ, ಹುಣಸಗಿ, ಶಹಾಪುರ ತಾಲ್ಲೂಕಿನ ಕೆಲವೆಡೆ ಮಳೆಯಾಗಿದೆ. ಕಲಬುರಗಿ ನಗರದಲ್ಲಿ ಇಡೀ ದಿನ ಮೋಡ ಕವಿದ ವಾತಾವರಣವಿತ್ತು. ಸಂಜೆ ಸಣ್ಣಗೆ ಮಳೆಯಾಯಿತು.

'ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿಯಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಬೇಡ' ಎಂದು ಬಿಜೆಪಿ ನಾಯಕರು ವಿರೋಧ ವ್ಯಕ್ತಪಡಿಸಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, 'ಚಾಮುಂಡಿ ಬೆಟ್ಟಕ್ಕೆ ಎಲ್ಲ ಧರ್ಮದವರಿಗೂ ಪ್ರವೇಶವಿದೆ. ಎಲ್ಲ ಸಮಾಜದವರು ಚಾಮುಂಡಿ ಬೆಟ್ಟಕ್ಕೆ ಹೋಗುತ್ತಾರೆ. ದೇವರ ಬಳಿ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ' ಎಂದರು.

'ಮಸೀದಿ, ದರ್ಗಾಗಳಿಗೆ, ಜೈನರ ಬಸದಿಗಳಿಗೆ, ಚರ್ಚ್, ಗುರುದ್ವಾರಗಳಿಗೆ ನಾವು ಹೋಗುವುದನ್ನು ಯಾರಾದರೂ ತಡೆದಿದ್ದಾರೆಯೇ? ಹಿಂದೂ ದೇವಸ್ಥಾನಗಳಿಗೆ ಅವರುಗಳು ಬರುವುದನ್ನು ನಾವು ವಿರೋಧಿಸಿದ್ದೇವೆಯೇ? ಯಾವುದೇ ಶ್ರದ್ಧಾ ಕೇಂದ್ರಗಳಿಗೆ ಯಾರು ಬೇಕಾದರೂ ಹೋಗಿ ಬರಬಹುದು' ಎಂದರು.

'ಎಷ್ಟೋ ಜನ ಹಿಂದೂಗಳು ಮುಸ್ಲಿಮರಾಗಿ, ಕ್ರಿಶ್ಚಿಯನ್ನರಾಗಿ ಹಾಗೂ ಬೇರೆ ಧರ್ಮದವರು ಹಿಂದೂಗಳಾಗಿ ಮತಾಂತರ ಆಗಿಲ್ಲವೇ? ಮುಸ್ಲಿಮರು ಹಿಂದೂ ಧರ್ಮದ ಆಚರಣೆಗಳನ್ನು ಮಾಡುತ್ತಿಲ್ಲವೇ? ಅಯೋಧ್ಯೆಯ ರಾಮನ ದರ್ಶನಕ್ಕೆ ಹಿಂದೂಗಳು ಮಾತ್ರ ಬರಬೇಕು ಎಂದು ಏಕೆ ಫಲಕ ಹಾಕಿಲ್ಲ? ಬಿಜೆಪಿ ಸರ್ಕಾರ ಇದ್ದ ವೇಳೆ ಹಾಗೂ ಈಗ ಇಡೀ ದೇಶದಲ್ಲಿ ಹಜ್ ಸಮಿತಿ, ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಗಳನ್ನು ಏಕೆ ರದ್ದು ಮಾಡಲಿಲ್ಲ? ಇದೆಲ್ಲವೂ ರಾಜಕೀಯ' ಎಂದು ತಿರುಗೇಟು ನೀಡಿದರು.

'ನಮ್ಮ ಸಂವಿಧಾನದ ಮೂಲಕ ಎಲ್ಲರಿಗೂ ಅವಕಾಶ ಹಾಗೂ ಸ್ವಾತಂತ್ರ್ಯ ಕಲ್ಪಿಸಲಾಗಿದೆ. ಎಲ್ಲರಿಗೂ ಅವರವರ ನಂಬಿಕೆ ಮೇಲೆ ವಿಶ್ವಾಸವಿದೆ. ಮುಸ್ಲಿಂ ಅಥವಾ ಕ್ರಿಶ್ಚಿಯನ್ ಹೆಣ್ಣು, ಹಿಂದು ಅಥವಾ ಇತರೇ ಧರ್ಮದ ಗಂಡಿಗೆ ಜನಿಸಿದ ಮಕ್ಕಳು ತಮಗೆ ಬೇಕಾದ್ದನ್ನು ಅನುಸರಿಸುತ್ತಾರೆ' ಎಂದು ಶಿವಕುಮಾರ್ ಹೇಳಿದರು.

'ಬಾನು ವಿರೋಧಿಗಳಿಗೆ ಸಮಾಜ ಒಡೆಯುವುದೇ ಕೆಲಸ'

ಹಾಸನ: 'ದಸರಾ ಮಹೋತ್ಸವ ಉದ್ಘಾಟಿಸಲು ಲೇಖಕಿ ಬಾನು ಮುಷ್ತಾಕ್ ಅವರಿಗೆ ಆಹ್ವಾನಿಸಿದ್ದನ್ನು ವಿರೋಧಿಸುತ್ತಿರುವವರಿಗೆ ಸಮಾಜ ಕಟ್ಟುವುದು, ಜನರನ್ನು ಒಟ್ಟಾಗಿ ಕರೆದೊಯ್ಯುವುದು ಬೇಡವಾಗಿದೆ. ಸಮಾಜ ಒಡೆಯುವುದೇ ಉದ್ಯೋಗ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ದೂರಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಜಾತಿ, ಧರ್ಮ ಎಂದು ಕನ್ನಡಕ್ಕೆ ಸಿಕ್ಕಿರುವ ಗೌರವ ಕಳೆಯಬೇಡಿ. ಯಾವುದೇ ಜಾತಿ, ಧರ್ಮಕ್ಕೆ ಸೇರಿದವರಾಗಿರಲಿ ಅವರು ಕನ್ನಡಿಗರ ಹೆಮ್ಮೆ. ನಾವು ಸ್ವಾಗತಿಸಬೇಕು. ಜಾತಿ, ಧರ್ಮದ ಹೆಸರಿನಲ್ಲಿ ಸಮಾಜ ಒಡೆಯುವುದು ಒಳ್ಳೆಯ ಕೆಲಸವಲ್ಲ' ಎಂದರು.

'ಬಾನು ಅವರ ಸಾಧನೆಯನ್ನು ಮರೆಯುವಂತಿಲ್ಲ. ಅವರು ಕನ್ನಡಿಗರ ಆಸ್ಮಿತೆ, ಸ್ವಾಭಿಮಾನ, ಗೌರವದ ಸಂಕೇತ. ಜನಪರ, ರೈತಪರ, ಶೋಷಿತ, ಮಹಿಳೆಯರ ಪರ ಧ್ವನಿ' ಎಂದು ಹೇಳಿದರು.


ನಂಬಿಕೆ ಇಲ್ಲದವರು ಬರೋದೆ ಇಲ್ವಲ್ಲ: ಜಿಟಿಡಿ

ಮೈಸೂರು: 'ಮೈಸೂರು ದಸರಾವನ್ನು ಈ ಹಿಂದೆ ಕವಿ ಕೆ.ಎಸ್.ನಿಸಾರ್ ಅಹಮದ್ ಉದ್ಘಾಟಿಸಿದ್ದರು. ಉದ್ಘಾಟಕರಿಗೆ ದೇವಿ ಚಾಮುಂಡೇಶ್ವರಿ ಮೇಲೆ ನಂಬಿಕೆ ಇಲ್ಲದಿದ್ದರೆ ಅವರು ಬರೋದೆ ಇಲ್ವಲ್ಲ' ಎಂದು ಶಾಸಕ ಜಿ.ಟಿ.ದೇವೇಗೌಡ ಪ್ರತಿಕ್ರಿಯಿಸಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಸಾಹಿತಿಗಳು, ನಟರು, ಮಠಾಧೀಶರು ಸೇರಿ ಗಣ್ಯರು ಉತ್ಸವ ಉದ್ಘಾಟಿಸುವ ಪರಂಪರೆ ಇದೆ. ದಸರಾದ ಉನ್ನತ ಮಟ್ಟದ ಸಮಿತಿಯಲ್ಲಿ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು, ಅಧಿಕಾರಿಗಳಿದ್ದಾರೆ. ಎಲ್ಲರೂ ನಿರ್ಧರಿಸಿ, ಉದ್ಘಾಟಕರನ್ನು ಆಯ್ಕೆ ಮಾಡಲು ಸಿದ್ದರಾಮಯ್ಯ ಅವರಿಗೆ ಅಧಿಕಾರ ನೀಡಿದ್ದೆವು. ಅವರ ತೀರ್ಮಾನ ಇದು' ಎಂದರು.

> **ಲೇಖಕಿ ಬಾನು ಮುಷ್ತಾಕ್ ಅವರೇನು ಗಡಿಪಾರು ಆಗಿದ್ದಾರಾ? ನಾವು ಲಾಡೆನ್‌ನಂತಹ ಭಯೋತ್ಪಾದಕನ ಆಯ್ಕೆ ಮಾಡಿದ್ದೇವಾ? ಬಿಜೆಪಿಯವರು ಅನಗತ್ಯವಾಗಿ ವಿವಾದ ಮಾಡುತ್ತಿದ್ದಾರೆ**
> **ಶರಣಬಸಪ್ಪ ದರ್ಶನಾಪುರ,** ಸಚಿವ

> **ಇಸ್ಲಾಂನಲ್ಲಿ ವಿಗ್ರಹ ಪೂಜೆಗೆ ಅವಕಾಶ ಇದ್ದರೆ, ಅದನ್ನು ಬಾನು ಮುಷ್ತಾಕ್ ಒಪ್ಪಿಕೊಳ್ಳುವುದಾದರೆ ದಸರಾ ಉದ್ಘಾಟನೆಗೆ ಬರುವುದರಲ್ಲಿ ನಮ್ಮ ಅಭ್ಯಂತರ ಇಲ್ಲ**
> **ಸುನೀಲ್ ಕುಮಾರ್,** ಬಿಜೆಪಿ ಶಾಸಕ



ಗಜಪಡೆ ತಾಲೀಮು

ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಮೈಸೂರು ದಸರಾ ಮಹೋತ್ಸವದ 'ಜಂಬೂಸವಾರಿ'ಯ ಸಿದ್ಧತೆಗಾಗಿ ಅಂಬಾರಿ ಆನೆ 'ಅಭಿಮನ್ಯು' ನೇತೃತ್ವದ 14 ಆನೆಗಳೂ ಮಂಗಳವಾರ ಮೊದಲ ಬಾರಿ ಒಟ್ಟಿಗೆ ಸಾಗಿದ ದೃಶ್ಯ ಕೆ.ಆರ್.ವೃತ್ತದಲ್ಲಿ ಕಂಡಬಂದಿದ್ದು ಹೀಗೆ...

'ನಾಡ ಹಬ್ಬ ಜಾತ್ಯತೀತತೆ ಸಂಕೇತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡದ ಜಾತ್ಯತೀತತೆ ಸಂಕೇತವಾಗಿರುವ ನಾಡಹಬ್ಬ ದಸರಾವನ್ನು ಸಂಪೂರ್ಣ ಧಾರ್ಮಿಕ ಹಬ್ಬವೆಂದು ಬಿಂಬಿಸಿ ರಾಷ್ಟ್ರ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಘನತೆ ಕುಸಿತಕ್ಕೆ ಕಾರಣರಾಗಿದ್ದಾರೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಟೀಕಿಸಿದ್ದಾರೆ.

'ಬಾನು ಮುಷ್ತಾಕ್ ಅವರನ್ನು ನಾಡಹಬ್ಬದ ಉದ್ಘಾಟಕರನ್ನಾಗಿ ಆಯ್ಕೆ ಮಾಡಿರುವ ಸರ್ಕಾರದ ತೀರ್ಮಾನವು ಸಂವಿಧಾನದ ಆಶಯಗಳಿಗೆ ಅನುಗುಣವಾಗಿದೆ. ನಾಡಿನ ಜಾತ್ಯಾತೀತತೆಗೆ ಸಲ್ಲಿಸಿರುವ ಗೌರವವೂ ಹೌದು. ಹಿಂದೆ ಇಲ್ಲದ ವಿರೋಧ ಈಗ ಕಂಡು ಬರುತ್ತಿರುವುದರ ಹಿಂದೆ ಮಹಿಳಾ ವಿರೋಧಿ ನಿಲುವಷ್ಟೇ ಅಲ್ಲ, ಒಂದು ರಾಜಕೀಯ ವರ್ಗದ ಅನ್ನ ಮತ್ತು ಅಧಿಕಾರದ ಪ್ರಶ್ನೆ ಅಡಗಿದೆ' ಎಂದಿದ್ದಾರೆ.

'ಜಯ ಚಾಮರಾಜೇಂದ್ರ ಒಡೆಯರ್ ಅವರು ಮೈಸೂರಿನ ಅರಸರಾಗಿದ್ದ ಸಂದರ್ಭದಲ್ಲಿ ಆನೆಯು ಹೊತ್ತು ತರುತ್ತಿದ್ದ ಪಲ್ಲಕಿಯ ಮೇಲೆ ತಾವೇ ಆಸೀನರಾಗಿರುತ್ತಿದ್ದರು. ಈಗ ಚಾಮುಂಡೇಶ್ವರಿಯ ವಿಗ್ರಹವನ್ನು ಕನ್ನಡದ ಪ್ರಾತಿನಿಧಿಕ ಸಂಕೇತವನ್ನಾಗಿ ಪಲ್ಲಕ್ಕಿಯಲ್ಲಿ ಕೂರಿಸುವುದು ಹೇಗೆ ಧಾರ್ಮಿಕತೆಯ ಕುರುಹಾಗುತ್ತದೆ' ಎಂದು ಪ್ರಶ್ನಿಸಿದ್ದಾರೆ.

'ವಿಜಯನಗರ ಸಾಮ್ರಾಜ್ಯದ ಪತನದ ನಂತರ ಮೈಸೂರಿನಲ್ಲಿ ದಸರಾ ಆಚರಣೆ ಆರಂಭವಾಗಿದ್ದು, ಹಂಪಿಯಲ್ಲಿ ನಡೆಯುತ್ತಿದ್ದ ದಸರಾ ದಿಬ್ಬಣದಲ್ಲಿ ಮುಸ್ಲಿಂ ಅರಬ್ಬರು, ಪರ್ಷಿಯನರು ಪಾಲ್ಗೊಳುತ್ತಿದ್ದ ಕುರಿತಂತೆ ದಾಖಲೆಗಳಿವೆ. ವಿರೋಧವು ನಮ್ಮ ಸಮಾಜವನ್ನು ನೂರಾರು ವರ್ಷಗಳ ಹಿಂದಕ್ಕೆ ಕೊಂಡೊಯ್ಯುವಂತಿದೆ' ಎಂದಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕನ್ನಡ ಸಾಮರಸ್ಯದ ನೆಲೆಗಳು ಶೀರ್ಷಿಕೆಯಡಿಯಲ್ಲಿ ಶೀಘ್ರ 40 ಕೃತಿಗಳನ್ನು ಲೋಕಾರ್ಪಣೆಗೊಳಿಸಲಿದೆ ಎಂದು ಬಿಳಿಮಲೆ ಹೇಳಿದ್ದಾರೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ರಾಜ್ಯ ಬಿಜೆಪಿ ಪತ್ರ

ಜಾತಿ ಪಟ್ಟಿಗೆ ಆಕ್ಷೇಪಣೆ: ಸಮಯ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ಮತ್ತು ಉಪ ಜಾತಿಗಳ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಇನ್ನೂ 10 ದಿನ ಅವಕಾಶ ನೀಡಬೇಕು ಎಂದು ಒತ್ತಾಯಿಸಿ ಬಿಜೆಪಿ ರಾಜ್ಯ ಘಟಕವು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಪತ್ರ ಬರೆದಿದೆ.

ಮಂಗಳವಾರ ಪಕ್ಷದ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್ ಕುಮಾರ್, 'ಆಯೋಗವು ಈಚೆಗೆ ಜಾತಿ ಮತ್ತು ಉಪ ಜಾತಿಗಳ ಪಟ್ಟಿ ಬಿಡುಗಡೆ ಮಾಡಿದ್ದು, ಆಕ್ಷೇಪಣೆ ಸಲ್ಲಿಸಲು ಏಳು ದಿನ ಅವಕಾಶ ನೀಡಿದೆ. ಈಗ ಹಬ್ಬದ ಕಾರಣಕ್ಕೆ ಸಾಲು-ಸಾಲು ರಜೆಗಳಿದ್ದು, ಈ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸಲು ಕಷ್ಟವಾಗುತ್ತದೆ. ಹೀಗಾಗಿ ಇನ್ನೂ 10 ದಿನ ಅವಕಾಶ ನೀಡಬೇಕು ಎಂದು ಕೋರಿದ್ದೇವೆ' ಎಂದು ಮಾಹಿತಿ ನೀಡಿದರು.

'ಆಯೋಗ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ 1,400 ಜಾತಿಗಳು ಇವೆ. ಆದರೆ, ಆ ಪಟ್ಟಿಯಲ್ಲಿ ಮುಸ್ಲಿಮರು ಮತ್ತು ಮುಸ್ಲಿಮ್ ಉಪ ಜಾತಿಗಳನ್ನು ಕೈಬಿಟ್ಟಿದ್ದಾರೆ. ಜಯಪ್ರಕಾಶ ಹೆಗ್ಡೆ ಅವರು ಮುಸ್ಲಿಮರಲ್ಲಿ 90 ಜಾತಿಗಳನ್ನು ಪಟ್ಟಿ ಮಾಡಿದ್ದರು. ಅವನ್ನು ಈಗ ಕೈಬಿಟ್ಟಿರುವುದು ಏತಕ್ಕೆ ಎಂಬುದರ ಬಗ್ಗೆ ವಿವರಣೆ ನೀಡಿ ಎಂದೂ ಕೋರಿದ್ದೇವೆ' ಎಂದು ತಿಳಿಸಿದರು.

'ಈ ಪಟ್ಟಿಗಳ ಬಗ್ಗೆ ಆಯೋಗದ ಅಧ್ಯಕ್ಷರು ಈಚೆಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ್ದರು. ಜಾತಿಯ ಪಟ್ಟಿ, ಪಟ್ಟಿ ವರ್ಗೀಕರಣದ ಮಾನದಂಡಗಳ ಬಗ್ಗೆ ಹಲವು ಗೊಂದಲಗಳಿವೆ. ಆ ಎಲ್ಲವನ್ನೂ ಅಧ್ಯಕ್ಷರು ನಿವಾರಿಸಬೇಕು. ಶೀಘ್ರದಲ್ಲೇ ಅವರನ್ನು ಭೇಟಿ ಮಾಡಿ, ವಿವರಗಳನ್ನು ಪಡೆಯುತ್ತೇವೆ' ಎಂದು ಹೇಳಿದರು.

ಒತ್ತಡದಿಂದ ಕ್ಷಮೆ: 'ಡಿ.ಕೆ.ಶಿವಕುಮಾರ್ ಅವರು ಸಂಘದ ಪ್ರಾರ್ಥನೆ ಹೇಳಿದ್ದು, ಇನ್ಯಾರದ್ದೋ ಒತ್ತಡ ಬಂತೆಂಬ ಕಾರಣಕ್ಕೆ ಕ್ಷಮೆ ಕೇಳಿದ್ದು, ಅತ್ಯಂತ ದುರಂತದ ಸಂಗತಿ. ಅವರು ಗಾಂಧಿ ಕುಟುಂಬಕ್ಕೆ ನಿಷ್ಠರಾಗಬೇಕೆಂದಲ್ಲ. ಸಂಘದ ಪ್ರಾರ್ಥನೆ ದೇಶ ಭಕ್ತಿಯನ್ನು ಹೇಳಿಕೊಡುತ್ತದೆ. ಅವರು ಮೊದಲು ದೇಶಭಕ್ತರಾಗಲಿ' ಎಂದು ಸುನಿಲ್ ಕುಮಾರ್ ಅವರು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ವಿಧಾನಸೌಧದ ಆವರಣದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಕೂಗಿದ್ದಕ್ಕೆ, ಸತೀಶ ಜಾರಕಿಹೊಳಿ ಅವರು ಹಿಂದೂ ಶಬ್ದ ಅಶ್ಲೀಲ ಎಂದುದಕ್ಕೆ ಶಿವಕುಮಾರ್ ಅವರು ಕ್ಷಮೆ ಕೇಳಬೇಕಿತ್ತು. ಆರೆಸ್ಸೆಸ್ ಪ್ರಾರ್ಥನೆ ಹೇಳಿದ್ದಕ್ಕೆ ಕ್ಷಮೆ ಕೇಳಬೇಕಿರಲಿಲ್ಲ' ಎಂದು ಹೇಳಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.95	8,275	6,509
ಹಾರಂಗಿ	2,859	2,857.74	1,789	2,000
ಕಬಿನಿ	2,284.00	2283.56	3,794	4,650
ಹೇಮಾವತಿ	2,922	2,921.85	7,788	7,735
ಲಿಂಗನಮಕ್ಕಿ	1,819	1,817;9	9,196	988
ಸೂಪಾ (ಮೀ)	564	557.13	6,914.62	4,234.11
ಮಾಣಿ	595	592.84	1,296	-
ತುಂಗಭದ್ರಾ	1,633	1,626.06	17,377	16,916
ಮಲಪ್ರಭಾ	2,079.5	2,078.50	5,679	4,094
ಘಟಪ್ರಭಾ	2175	2,174.21	7,034	4,304
ಭದ್ರಾ *	186	184.5	6,511	4,115
ಆಲಮಟ್ಟಿ (ಮೀ)	519.6	519.39	2,28,883	1,50,365
ನಾರಾಯಣಪುರ (ಮೀ)	492.25	491.71	1,55,000	1,61,430

* ನೆಲಮಟ್ಟದಿಂದ

ತೀವ್ರ ರಕ್ತಸ್ರಾವ: ಬಾಣಂತಿ, ಮಗು ಸಾವು

ಪ್ರಜಾವಾಣಿ ವಾರ್ತೆ

ದೇವದುರ್ಗ (ರಾಯಚೂರು ಜಿಲ್ಲೆ): ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ಲಭಿಸದೇ ಅರಕೇರಾ ತಾಲ್ಲೂಕಿನ ಭೋಗಿರಾಮನ ಗುಂಡ ಗ್ರಾಮದ ಬಾಣಂತಿ ಶಿವಮ್ಮ (29) ಮತ್ತು ಮಗು ಸೋಮವಾರ ಮೃತಪಟ್ಟಿದ್ದಾರೆ.



ಶಿವಮ್ಮ

ಗರ್ಭಿಣಿ ಶಿವಮ್ಮ ಅವರು ಪ್ರತಿ ತಿಂಗಳು ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಿಕೊಳ್ಳುತ್ತಿದ್ದರು. ಹೆರಿಗೆಗಾಗಿ ಭಾನುವಾರ ಆಸ್ಪತ್ರೆಗೆ ದಾಖಲಾಗಿದ್ದರು.

ಆಸ್ಪತ್ರೆಯಲ್ಲಿ ವೈದ್ಯರು ಇರಲಿಲ್ಲ. ನೋವು ಹೆಚ್ಚಾದ ಕಾರಣ ಸ್ಟಾಫ್ ನರ್ಸ್ ಹೆರಿಗೆ ಮಾಡಿಸಲು ಮುಂದಾಗಿದ್ದಾರೆ. ಈ ವೇಳೆ ತೀವ್ರ ರಕ್ತ ಸ್ರಾವವಾಗಿದೆ. ತಕ್ಷಣ ಸಿಬ್ಬಂದಿ ವೈದ್ಯರಿಗೆ ಮಾಹಿತಿ ನೀಡಿದ್ದಾರೆ. ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಶಿವಮ್ಮ ಅವರನ್ನು ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ಕಳುಹಿಸಿದ್ದಾರೆ. ರಕ್ತಸಾವ್ರ ಹೆಚ್ಚಾದ ಕಾರಣ ಮಾರ್ಗಮಧ್ಯದಲ್ಲಿ ತಾಯಿ ಮತ್ತು ಮಗು ಮೃತಪಟ್ಟಿದ್ದಾರೆ.

'ಬಾಣಂತಿ ಸಾವಿಗೆ ದೇವದುರ್ಗದ ಸಾರ್ವಜನಿಕ ಆಸ್ಪತ್ರೆ ಸಿಬ್ಬಂದಿಯ ನಿರ್ಲಕ್ಷ್ಯವೇ ಕಾರಣ' ಎಂದು ಮೃತರ ಸಹೋದರ ದುರುಗಪ್ಪ ಆರೋಪಿಸಿದ್ದಾರೆ.

'ಶಿವಮ್ಮ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ. ಆಗ ನಾನು ಆಸ್ಪತ್ರೆಯಲ್ಲಿ ಇರಲಿಲ್ಲ. ಆಂತರಿಕ ತನಿಖೆ ನಡೆಸಿದ್ದು, ಡಿಎಚ್‌ಒ ಅವರಿಗೆ ವರದಿ ನೀಡಲಾಗುವುದು' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬನದೇಶ್ವರ ಪ್ರತಿಕ್ರಿಯಿಸಿದ್ದಾರೆ.



ಪ್ಲಾಸ್ಟಿಕ್ ಬಾಟಲಿಗಳಿಂದ ತಯಾರಾದ ಮೂಷಕನ ಪ್ರತಿಕೃತಿ

ಪ್ಲಾಸ್ಟಿಕ್ ಬಾಟಲಿಯಲ್ಲಿ ಮೂಡಿದ ಮೂಷಕ

ಧಾರವಾಡ: ಪ್ಲಾಸ್ಟಿಕ್ ಬಳಕೆ ತ್ಯಜಿಸಲು ಜನರಲ್ಲಿ ಜಾಗೃತಿ ಮೂಡಿಸಲು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ 10 ಸಾವಿರಕ್ಕೂ ಹೆಚ್ಚು ಪ್ಲಾಸ್ಟಿಕ್ ಬಾಟಲಿ ಬಳಸಿ ಮೂಷಕನ ಪ್ರತಿಕೃತಿ ಸಿದ್ಧಪಡಿಸಿದೆ.

'ಪ್ಲಾಸ್ಟಿಕ್ ನಿಷೇಧ ಮತ್ತು ಪರಿಸರ ಸ್ನೇಹಿ ಗಣೇಶೋತ್ಸವಕ್ಕೆ ಪಾಲಿಕೆ ಆದ್ಯತೆ ನೀಡಿದೆ. ಜನದಟ್ಟಣೆ ಇರುವ ಸ್ಥಳದಲ್ಲಿ ಇದನ್ನು ಇಟ್ಟು, ಜನರಲ್ಲಿ ಜಾಗೃತಿ ಮೂಡಿಸಲಾಗುವುದು' ಎಂದು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ ತಿಳಿಸಿದ್ದಾರೆ.

ಪಾಲಿಕೆಯ 12 ವಲಯಗಳಿಂದ ಸಂಗ್ರಹಿಸಿದ ಪ್ಲಾಸ್ಟಿಕ್ ಬಾಟಲಿಗಳಿಂದ 20 ಅಡಿ ಎತ್ತರದ ಮೂಷಕವನ್ನು ತಯಾರಿಸಿದ್ದೇವೆ ಎಂದು ತಿಳಿಸಿದರು.

ಬೆಂಗಳೂರು, ಬೆಳಗಾವಿ, ವಿಜಯಪುರ, ತುಮಕೂರು ಜಿಲ್ಲೆಗಳಲ್ಲಿ ಅಧಿಕ ಪ್ರಕರಣ

ರಾಜ್ಯದಲ್ಲಿ 80 ಸಾವಿರ ಬಾಲ ಗರ್ಭಿಣಿಯರು

• ಖಲೀಲಅಹ್ಮದ ಶೇಖ

ಬೆಂಗಳೂರು: ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಬಾಲ ಗರ್ಭಿಣಿಯರ ಸಂಖ್ಯೆ ಹೆಚ್ಚಾಗುತ್ತಿದ್ದು, ಎರಡು ವರ್ಷ ಏಳು ತಿಂಗಳಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ 80,813 ಬಾಲಕಿಯರು ಗರ್ಭಿಣಿಯರಾದ ಪ್ರಕರಣಗಳು ದಾಖಲಾಗಿವೆ.

2023ರಿಂದ 2025ರ ಜುಲೈವರೆಗಿನ ಅವಧಿಯಲ್ಲಿ 14ರಿಂದ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಗರ್ಭಿಣಿಯರಾದ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ.

ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (ಆರ್‌ಸಿಎಚ್) ಪೋರ್ಟಲ್ ಮಾಹಿತಿ ಪ್ರಕಾರ, ಬೆಂಗಳೂರಿನಲ್ಲಿ 8,891, ಬೆಳಗಾವಿಯಲ್ಲಿ 8,169, ವಿಜಯಪುರದಲ್ಲಿ 6,229, ತುಮಕೂರಿನಲ್ಲಿ 4,282 ರಾಯಚೂರು 4,100, ಮೈಸೂರಿನಲ್ಲಿ 3,952, ಚಿತ್ರದುರ್ಗದಲ್ಲಿ 3,448, ಬಾಗಲಕೋಟೆಯಲ್ಲಿ 3,384, ಕಲಬುರಗಿಯಲ್ಲಿ 3,383, ಬಳ್ಳಾರಿಯಲ್ಲಿ 2,677, ಹಾಸನದಲ್ಲಿ 2,526 ಅತಿ ಹೆಚ್ಚು ಬಾಲ ಗರ್ಭಿಣಿಯರಿದ್ದರೆ, ಉಡುಪಿಯಲ್ಲಿ ಅತಿ ಕಡಿಮೆ (182) ಬಾಲ ಗರ್ಭಿಣಿಯರಿದ್ದಾರೆ.

'ಶಾಲೆ ಬಿಟ್ಟ ಮಕ್ಕಳು, ಬಾಲ್ಯವಿವಾಹ, ಮೊಬೈಲ್ ಮತ್ತಿತರ ವಸ್ತುಗಳ ಆಮಿಷ, ಸಾಮಾಜಿಕ ಮಾಧ್ಯಮಗಳ ಬಳಕೆ, ಪ್ರೀತಿಯ ನೆಪದಲ್ಲಿ ಮದುವೆಯಾಗುವುದಾಗಿ ನಂಬಿಸಿ ಲೈಂಗಿಕವಾಗಿ ಬಳಸಿಕೊಳ್ಳುವುದು ಹೆಚ್ಚಾಗಿ ಕಂಡು ಬಂದಿವೆ. ಇದರಲ್ಲಿ ಪೋಕ್ಸೊ ಪ್ರಕರಣಗಳ ಸಂಖ್ಯೆಯೇ ಅಧಿಕವಾಗಿವೆ' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

'ಬಾಲ ಗರ್ಭಿಣಿಯರಾಗದಂತೆ ತಡೆಗಟ್ಟುವ ನಿಟ್ಟಿನಲ್ಲಿ ಶಾಲಾ, ಕಾಲೇಜುಗಳಲ್ಲಿ ಕಾನೂನು ಸೇವಾ ಪ್ರಾಧಿಕಾರ, ಆರೋಗ್ಯ ಇಲಾಖೆ ಮೂಲಕ ಜಾಗೃತಿ ಮೂಡಿಸಬೇಕು. ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳನ್ನು ಗುರುತಿಸಿ, ಮತ್ತೆ ಸೇರಿಸಲು ಕ್ರಮ ಕೈಗೊಳ್ಳಬೇಕು. ಬಾಲ ಗರ್ಭಿಣಿಯರ ಪ್ರಕರಣಗಳು ಬೆಳಕಿಗೆ ಬಂದಾಗ ಆಯೋಗದ ಮೂಲಕ ಪೋಕ್ಸೊ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಈ ಮಕ್ಕಳ ಆರೈಕೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಇವರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಮಕ್ಕಳು ಮತ್ತು ಮಹಿಳೆಯರ ರಕ್ಷಣೆಗೆ ಕಾವಲು ಸಮಿತಿಗಳನ್ನು ರಚಿಸಲಾಗಿದೆ. ಇದು ಮಕ್ಕಳ ಹಾಗೂ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯಗಳು ಆಗದಂತೆ ಜಾಗೃತಿ ವಹಿಸಬೇಕು. ಈ ಸಮಿತಿಯಲ್ಲಿ ಶಿಕ್ಷಕರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು, ಗ್ರಾಮ ಲೆಕ್ಕಾಧಿಕಾರಿ, ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇರುತ್ತಾರೆ. ವಾರದಲ್ಲಿ ಒಂದು ಬಾರಿಯಾದರು ಕಾವಲು ಸಮಿತಿಯು ಸಭೆಯನ್ನು ನಡೆಸಿ, ಬಾಲ್ಯ ವಿವಾಹ, ಬಾಲ ಗರ್ಭಿಣಿಯರ ಪ್ರಕರಣಗಳು, ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯುವ ನಿಟ್ಟಿನಲ್ಲಿ ಚರ್ಚಿಸಬೇಕು' ಎಂದು ಹೇಳಿದರು.

ವರ್ಷವಾರು ಬಾಲಗರ್ಭಿಣಿಯರ ಸಂಖ್ಯೆ

ವಯಸ್ಸು	2023	2024	2025 (ಜುಲೈವರೆಗೆ)	ಒಟ್ಟು
14	157	89	30	276
15	431	283	72	786
16	1,460	741	196	2,397
17	6,618	3,587	931	11,136
18	31,045	26,311	8,862	66,218
ಒಟ್ಟು				80,813



> **ಶಾಲಾ-ಕಾಲೇಜು, ಮನೆ ಹಾಗೂ ಸಮುದಾಯದಲ್ಲಿ ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಬೇಕಿದೆ. ಬಾಲ್ಯ ವಿವಾಹ, ಬಾಲ ಗರ್ಭಿಣಿಯರ ಪ್ರಕರಣಗಳನ್ನು ತಡೆಯುವ ನಿಟ್ಟಿನಲ್ಲಿ ಜಾಗೃತಿ ಮೂಡಿಸಬೇಕು**
> **ಕೆ. ನಾಗಣ್ಣಗೌಡ,** ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ

ಸಂಕಷ್ಟದಲ್ಲಿ ಸ್ಫಟಿಕಶಿಲೆ ಉದ್ಯಮ

ಹೈದರಾಬಾದ್: ಭಾರತದಿಂದ ಆಮದು ಮಾಡಿಕೊಳ್ಳುವ ಉತ್ಪನ್ನಗಳ ಮೇಲೆ ಶೇ 50ರಷ್ಟು ತೆರಿಗೆ ವಿಧಿಸುವ ಅಮೆರಿಕದ ಕ್ರಮವು ಬುಧವಾರದಿಂದ ಜಾರಿಗೆ ಬರುತ್ತಿದ್ದು, ದೇಶದ ಸ್ಫಟಿಕಶಿಲೆ ಉದ್ಯಮ ಆತಂಕಕ್ಕೆ ಒಳಗಾಗಿದೆ.

ಅಮೆರಿಕದ ಈ ಕ್ರಮದಿಂದ ದೇಶೀಯ ಸ್ಫಟಿಕಶಿಲೆ ಉದ್ಯಮ ಎದುರಿಸುವ ಆರ್ಥಿಕ ಕುಸಿತ ತಡೆಗಟ್ಟಲು ಸರ್ಕಾರ ತುರ್ತಾಗಿ ಹಸ್ತಕ್ಷೇಪ ಮಾಡಬೇಕು ಎಂದು ಭಾರತೀಯ ಸ್ಫಟಿಕಶಿಲೆ ತಯಾರಕರ ಒಕ್ಕೂಟವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ಈ ವಲಯದಲ್ಲಿ ಉದ್ದಿಮೆದಾರರು ಅಂದಾಜು ₹5,000 ಕೋಟಿಗೂ ಹೆಚ್ಚು ಹೂಡಿಕೆ ಮಾಡಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಅಮೆರಿಕದಲ್ಲಿ ಮಾರುಕಟ್ಟೆ ಕಂಡುಕೊಂಡಿದ್ದ ಈ ವಲಯವು ಹೆಚ್ಚುವರಿ ಸುಂಕದಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ತಕ್ಷಣವೇ ಕೇಂದ್ರ ಸರ್ಕಾರ ಹಸ್ತಕ್ಷೇಪ ಮಾಡಿ ಸಮಗ್ರ ಪರಿಹಾರ ನೀಡಬೇಕು ಎಂದು ಒಕ್ಕೂಟವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೋರಿಕೆ ಸಲ್ಲಿಸಿದೆ.

ಸಾಲದ ಕಂತುಗಳ ಮರುಪಾವತಿ, ಬಡ್ಡಿ ಪಾವತಿಗೆ ಮೂರು ವರ್ಷಗಳವರೆಗೆ ವಿರಾಮ ನೀಡಬೇಕು. ಸ್ಫಟಿಕ ಶಿಲೆ ಮೇಲ್ಮೈ ಉತ್ಪನ್ನಗಳ ಮೇಲಿನ ಜಿಎಸ್‌ಟಿ ಅನ್ನು ಈಗಿನ ಶೇ 18ರಿಂದ ಶೇ 5ಕ್ಕೆ ಇಳಿಸುವುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒಕ್ಕೂಟ ಕೋರಿದೆ.



ಕೊಪ್ಪಳ ತಾಲ್ಲೂಕಿನ ಹುಲಿಗಿಯ ತುಂಗಭದ್ರಾ ನದಿಯ ತಟದಲ್ಲಿ ಮಂಗಳವಾರ ರಾತ್ರಿ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ನಡೆದ ತುಂಗಭದ್ರಾ ಆರತಿಯ ನೋಟ. ಕಾಶಿಯಿಂದ ಬಂದಿದ್ದ ಅರ್ಚಕರು ಆರತಿ ನೆರವೇರಿಸಿದರು

ಚಿತ್ರ: ಭರತ್ ಕಂದಕೂರ

ಬುಧವಾರ, ಆಗಸ್ಟ್ 27, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಿಂಧು ಶುಭಾರಂಭ

ಭಾರತದ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಅವರು ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಬಿಡಬ್ಲ್ಯುಎಫ್ ವಿಶ್ವ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಶುಭಾರಂಭ ಮಾಡಿದರು



‘ಅತ್ತಚ್ಚಮಯಂ’ ಮೆರವಣಿಗೆ

ಓಣಂ ಹಬ್ಬದ ಪೂರ್ವಭಾವಿಯಾಗಿ ಕೇರಳದ ಕೊಚ್ಚಿಯಲ್ಲಿ ಮಂಗಳವಾರ ‘ಅತ್ತಚ್ಚಮಯಂ’ ಮೆರವಣಿಗೆ ನಡೆಯಿತು





ಜಿಬಿಎ ರಚನೆ: ನಗರ ಆಡಳಿತದ ಮೇಲೆ ಹಿಡಿತ

ರಚನೆಯಾಗಲಿರುವ ಐದೂ ನಗರ ಪಾಲಿಕೆಗಳ ಮೇಲೆ ನಿಯಂತ್ರಣ; ಬಿಬಿಎಂಪಿ ಮುಖ್ಯ ಆಯುಕ್ತರಿಗೇ ಜಿಬಿಎ ಮುಖ್ಯ ಆಯುಕ್ತರ ಹುದ್ದೆ

• ಆರ್. ಮಂಜುನಾಥ್


ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರದೇಶ' (ಬಿಬಿಎಂಪಿ) ವ್ಯಾಪ್ತಿಯಲ್ಲಿ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ವನ್ನು (ಜಿಬಿಎ) ಸರ್ಕಾರ ರಚಿಸಿದ್ದು, ನಗರದ ಸಂಪೂರ್ಣ ಆಡಳಿತದ ಮೇಲೆ ಹಿಡಿತ ಸಾಧಿಸಲಿದೆ.

ಸೆಪ್ಟೆಂಬರ್ 2ರಂದು ಐದು ನಗರ ಪಾಲಿಕೆಗಳ ಅಂತಿಮ ಅಧಿಸೂಚನೆಯಾದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಸ್ತಿತ್ವ ಕಳೆದುಕೊಳ್ಳಲಿದ್ದು, ನಗರದ ಆಡಳಿತ ವ್ಯವಸ್ಥೆಯನ್ನು ಜಿಬಿಎ ತನ್ನ ತೆಕ್ಕೆಗೆ ತೆಗೆದುಕೊಳ್ಳಲಿದೆ.

ಬಿಬಿಎಂಪಿಯಲ್ಲಿ ಈಗಿರುವ ವಿಶೇಷ ಆಯುಕ್ತರೂ ಸೇರಿದಂತೆ ಜಂಟಿ ಆಯುಕ್ತ, ಉಪ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳನ್ನು ಜಿಬಿಎ ಅಥವಾ ಐದು ನಗರ ಪಾಲಿಕೆಗಳಿಗೆ ವರ್ಗಾಯಿಸಲು ಸರ್ವ ರೀತಿಯಲ್ಲೂ ಸಿದ್ಧತೆಯಾಗಿದೆ. ನಗರ ಪಾಲಿಕೆಯ ಮೂಲ ಕಾಮಗಾರಿಗಳನ್ನು ಹೊರತುಪಡಿಸಿದರೆ, ಅಂತರ ನಗರ ಪಾಲಿಕೆಗಳ ಯೋಜನೆಗಳನ್ನು ಜಿಬಿಎ ಸಿದ್ಧಪಡಿಸಿ, ನಿರ್ವಹಿಸಲಿದೆ. ಅಲ್ಲಿನ ತೀರ್ಮಾನಗಳಂತೆಯೇ ಕಾಮಗಾರಿಗಳು ನಡೆಯಲಿವೆ.

ಬೃಹತ್ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿಶೇಷ ಉದ್ದೇಶದ ಸಂಸ್ಥೆ (ಎಸ್‌ಪಿವಿ)– 'ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆ' (ಬಿ–ಸ್ಮೈಲ್) ಕಾರ್ಯ ನಿರ್ವಹಿಸುತ್ತಿದ್ದು, ಇದೂ ಜಿಬಿಎ ಅಡಿಯಲ್ಲಿ ಇರಲಿದೆ. ಬಿಡಿಎ, ಜಲಮಂಡಳಿ, ಬೆಸ್ಕಾಂ, ಬಿಎಂಟಿಸಿ, ನಗರ ಪೊಲೀಸ್, ನಗರ ಜಿಲ್ಲಾಧಿಕಾರಿ, ಅಗ್ನಿಶಾಮಕ ದಳಗಳೂ ಜಿಬಿಎ ವ್ಯಾಪ್ತಿಗೆ ಬರುವುದರಿಂದ ಎಲ್ಲ ಕಾಮಗಾರಿಗಳೂ ಇಲ್ಲೇ ನಿರ್ಧಾರವಾಗಲಿವೆ.

ಬಿಬಿಎಂಪಿ ಮುಖ್ಯ ಆಯುಕ್ತರಿಗೇ ಜಿಬಿಎ ಮುಖ್ಯ ಆಯುಕ್ತರ ಹುದ್ದೆಯನ್ನು ಹೆಚ್ಚುವರಿಯಾಗಿ ಮಂಗಳವಾರ ವಹಿಸಲಾಗಿದೆ. ಜಿಬಿಎಯ ಮುಖ್ಯ ನಗರ ಯೋಜಕ ಹಾಗೂ ಮುಖ್ಯ ಎಂಜಿನಿಯರ್ ಅವರ ಹುದ್ದೆಯನ್ನು ಅಧಿಸೂಚಿಸಿ, ನೇಮಿಸಬೇಕಿದೆ.



ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕಾರ್ಯವ್ಯಾಪ್ತಿ

- ಜಿಬಿಎ ಶಾಶ್ವತ ಉತ್ತರಾಧಿಕಾರ, ಸಾಮಾನ್ಯ ಮೊಹರನ್ನು ಹೊಂದಿ, ತನ್ನ ಹೆಸರಿನಲ್ಲಿ ಸ್ವತ್ತುಗಳನ್ನು ಅರ್ಜಿಸುವ, ಧಾರಣ ಮಾಡುವ, ವಿಲೇ ಮಾಡುವ ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುತ್ತದೆ
- ಜಿಬಿಎಗೆ ನೇಮಕವಾದ ಸದಸ್ಯರಲ್ಲದೆ, ರೈಲು ಮೂಲಸೌಕರ್ಯ ಅಭಿವೃದ್ಧಿ ಉದ್ಯಮ ನಿಯಮಿತ, ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಕೊಳೆಗೇರಿ ಅಭಿವೃದ್ಧಿ ಮಂಡಳಿ ಸೇರಿದಂತೆ ಸರ್ಕಾರ ಗೊತ್ತುಪಡಿಸಬಹುದಾದ ಯಾವುದೇ ಏಜೆನ್ಸಿ ಅಥವಾ ಇಲಾಖೆಯ ಅಧಿಕಾರಿಗಳು ಸಭೆಗೆ ವಿಶೇಷ ಆಹ್ವಾನಿತರಾಗಬಹುದು. ಅವರಿಗೆ ಮತದಾನದ ಹಕ್ಕು ಇರುವುದಿಲ್ಲ
- ಮೂಲಸೌಕರ್ಯ, ನಗರ ಯೋಜನೆ, ಆಡಳಿತ, ಕಾನೂನು, ಹಣಕಾಸು, ಜಾಗೃತ ದಳ ಹಾಗೂ ಇತರೆ ಪ್ರಕಾರ್ಯಗಳಿಗೆ ಅನುಕೂಲವಾಗಲು ಅಧಿಕಾರಿಗಳನ್ನು ನೇಮಿಸಿಕೊಳ್ಳಬಹುದು
- ಜಿಬಿಎ ಪ್ರದೇಶದಲ್ಲಿರುವ ನಗರ ಪಾಲಿಕೆಗಳಿಗೆ ಸಿಬ್ಬಂದಿ ನಿಯೋಜನೆ, ಜೇಷ್ಠತೆ, ಮುಂಬಡ್ತಿ, ಮುಖ್ಯ ಎಂಜಿನಿಯರ್ ವರೆಗಿನ ವೃಂದ ಮಟ್ಟದ ನಿಯೋಜನೆ, ಸೇವೆಯಿಂದ ವಜಾ, ಕಡ್ಡಾಯ ನಿವೃತ್ತಿ, ಕಡಿಮೆ ವೇತನ ಶ್ರೇಣಿ ಅಥವಾ ಹುದ್ದೆಗೆ ಇಳಿಸುವ ಕಾರ್ಯವನ್ನು ಜಿಬಿಎ ನಿಭಾಯಿಸಲಿದೆ
- ಜಿಬಿಎ ಅಧ್ಯಕ್ಷರು ಕನಿಷ್ಠ ಪ್ರತಿ ಮೂರು ತಿಂಗಳಿಗೊಮ್ಮೆ ಪ್ರಾಧಿಕಾರದ ಸಭೆ ಕರೆಯಬೇಕು. ಅಧ್ಯಕ್ಷರ ಉಪಸ್ಥಿತಿಯಲ್ಲಿ ಉಪಾಧ್ಯಕ್ಷರು ಸಭೆ ಅಧ್ಯಕ್ಷತೆ ವಹಿಸಬೇಕು
- ಜಿಬಿಎ ಸಭೆಯ ಮುಂದೆ ಬರುವ ವಿಷಯಗಳನ್ನು ಹಾಜರಿರುವ ಸದಸ್ಯರು ಬಹುಮತದ ಮೂಲಕ ತೀರ್ಮಾನಿಸಲಿದ್ದಾರೆ. ಸದಸ್ಯ ಕಾರ್ಯದರ್ಶಿ ಪ್ರತಿ ಸಭೆ ಮುಗಿದ ಮೂರು ದಿನಗಳೊಳಗೆ ಎಲ್ಲ ತೀರ್ಮಾನಗಳನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಪ್ರಕಟಿಸಬೇಕು
- ಜಿಬಿಎ ಅಡಿಯಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವ ಅಥವಾ ಮುಖ್ಯಮಂತ್ರಿಯವರು ಸೂಚಿಸುವ ಸಚಿವರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿಯನ್ನು ರಚಿಸಬೇಕು. ಸಮಿತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ಜಿಬಿಎ ಸಿದ್ಧಪಡಿಸಿದ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಬೇಕು
- ಗ್ರೇಟರ್ ಬೆಂಗಳೂರು ಪ್ರದೇಶದ ಮೂಲಸೌಕರ್ಯ ಅಭಿವೃದ್ಧಿಗಾಗಿ ಮಹಾ ಯೋಜನೆ (ಮಾಸ್ಟರ್ ಪ್ಲಾನ್) ಹೊಂದಲು ಎಲ್ಲ ಪ್ರಾಧಿಕಾರಗಳ ವ್ಯಾಪ್ತಿಯನ್ನು ಒಳಗೊಂಡ ಕ್ರಿಯಾಯೋಜನೆಯನ್ನು ಜಿಬಿಎ ರೂಪಿಸಬೇಕು
- ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಕಾಮಗಾರಿಗಳಿಗೆ ಅನುದಾನಗಳನ್ನು ಜಿಬಿಎ ಪಡೆದುಕೊಂಡು, ಅದರಿಂದಲೇ ಸಾಂಸ್ಥಿಕ ಮತ್ತು ಆಡಳಿತಾತ್ಮಕ ವೆಚ್ಚಗಳಿಗೆ ಭರಿಸಿಕೊಳ್ಳಬಹುದು
- ವಾರ್ಷಿಕ ಆಯವ್ಯಯ ಅಂದಾಜನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಬೇಕು. ಅಗತ್ಯ ಯೋಜನೆಗಳಿಗೆ ಸಾಲ ಪಡೆಯಬಹುದು
- ನಗರ ಪಾಲಿಕೆಗಳ ನಿಧಿಗಳಿಂದ ಕೈಗೊಳ್ಳಲಾಗುವ ಪ್ರಮುಖ ಕಾಮಗಾರಿಗಳನ್ನೂ ಜಿಬಿಎಗೆ ವಹಿಸಿಕೊಡಬೇಕು. ಒಂದಕ್ಕಿಂತ ಹೆಚ್ಚು ಪಾಲಿಕೆಗಳ ವ್ಯಾಪ್ತಿಯ ಯೋಜನೆಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವೇ ನಿರ್ವಹಿಸಲಿದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ಯೋಜನೆಗಳನ್ನು ರೂಪಿಸಿ, ಆರ್ಥಿಕ ಅಭಿವೃದ್ಧಿ ಏಜೆನ್ಸಿಗೆ ಅದನ್ನು ವಹಿಸಬಹುದು
- ಹವಾಮಾನ ಕ್ರಿಯಾ ಕೋಶವನ್ನು ರಚಿಸಿ, ಒಂದು ವರ್ಷದೊಳಗೆ ಹಸಿರು ಮನೆ ಅನಿಲ ಹೊರಸೂಸುವಿಕೆಯನ್ನು ತಗ್ಗಿಸಲು, ಕ್ರಿಯಾ ಮತ್ತು ಸ್ಥಿತಿಸ್ಥಾಪಕತ್ವ ಯೋಜನೆಗಳ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸಬೇಕು. ಇದಕ್ಕಾಗಿ ವಲಯ ತಜ್ಞರ ಸಮಿತಿಗಳನ್ನು ರಚಿಸಬಹುದು

ಸೀತಾರಾಮ್‌ಗೆ ಸ್ಥಾನ ಇಲ್ಲ

ವಿಧಾನ ಪರಿಷತ್ ಸದಸ್ಯರಾಗಿರುವ ಬೆಂಗಳೂರಿನ ನಿವಾಸಿಗಳಾದ ಎಂ.ಆರ್. ಸೀತಾರಾಮ್ ಸೇರಿದಂತೆ ಒಂಬತ್ತು ಮಂದಿಯನ್ನು ಜಿಬಿಎನಲ್ಲಿ ಪದನಿಮಿತ್ತ ಸದಸ್ಯರನ್ನಾಗಿ ನೇಮಕ ಮಾಡಿಲ್ಲ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ (ಜಿಬಿಜಿಎ) ಪ್ರಕಾರ, ಅಧ್ಯಾಯನ 3ರ ಉಪ ಪ್ರಕರಣ 5ರಲ್ಲಿ ಜಿಬಿಎಗೆ ಯಾರೆಲ್ಲ ಸದಸ್ಯರಾಗಬೇಕು ಎಂದು ವಿವರಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ವಾಸಿಸುವ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್‌ನ ಎಲ್ಲ ಸದಸ್ಯರು ಜಿಬಿಎ ಸದಸ್ಯರಾಗಿರಬೇಕು ಎಂದು ಹೇಳಲಾಗಿದೆ.

ವಿಧಾನ ಪರಿಷತ್ ಸದಸ್ಯರಾಗಿರುವ ಎಂ.ಆರ್. ಸೀತಾರಾಮ್, ಎಸ್.ಎಲ್. ಭೋಜೇಗೌಡ, ಬಿ. ಚಂದ್ರಶೇಖರ ಬಿ. ಪಾಟೀಲ, ಚಿದಾನಂದ್ ಎಂ. ಗೌಡ, ಮಧು ಜಿ. ಮಾದೇಗೌಡ, ರಾಮೋಜಿಗೌಡ, ಎಚ್.ಪಿ. ಸುಧಾಮದಾಸ್, ಡಿ.ಟಿ. ಶ್ರೀನಿವಾಸ್, ಉಮಾಶ್ರೀ ಅವರು ನಗರದಲ್ಲಿ ವಾಸವಿರುವುದು ವಿಧಾನ ಪರಿಷತ್‌ನ ಅಧಿಕೃತ ದಾಖಲೆಗಳಲ್ಲಿದೆ. ಆದರೆ, ಇವರನ್ನು ಜಿಬಿಎ ಸದಸ್ಯರನ್ನಾಗಿ ನೇಮಿಸಿಲ್ಲ. ವಿಧಾನ ಪರಿಷತ್‌ನ 20 ಸದಸ್ಯರು ಬೆಂಗಳೂರಿನಲ್ಲಿ ವಾಸ ಸ್ಥಳವನ್ನು ದಾಖಲಿಸಿದ್ದಾರೆ. ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಒಂಬತ್ತು ಮಂದಿಯನ್ನು ಮಾತ್ರ ಜಿಬಿಎ ಸದಸ್ಯರನ್ನಾಗಿ ನೇಮಿಸಲಾಗಿದೆ.

ಯಲಹಂಕ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಎರಡು ವಾರ್ಡ್‌ಗಳು ಚಿಕ್ಕಬಳ್ಳಾಪುರ ಲೋಕಸಭೆ ಕ್ಷೇತ್ರಕ್ಕೆ ಸೇರುತ್ತವೆ. ಆದರೂ ಅದರ ಸಂಸದ ಸುಧಾಕರ್ ಅವರನ್ನು ಜಿಬಿಎ ಸದಸ್ಯರನ್ನಾಗಿ ನೇಮಿಸಿಲ್ಲ.

ಜಿಬಿಎ ಸದಸ್ಯರು

ಸಿದ್ದರಾಮಯ್ಯ, ಮುಖ್ಯಮಂತ್ರಿ– ಅಧ್ಯಕ್ಷ
ಡಿ.ಕೆ. ಶಿವಕುಮಾರ್, ಬೆಂಗಳೂರು ನಗರಾಭಿವೃದ್ಧಿ ಸಚಿವ; ಉಪಾಧ್ಯಕ್ಷ
ಮುಖ್ಯ ಆಯುಕ್ತ, ಗ್ರೇಟರ್ ಬೆಂಗಳೂರು ಪ್ರಾಧಿಕಾರ– ಸದಸ್ಯ ಕಾರ್ಯದರ್ಶಿ
ಪದನಿಮಿತ್ತ ಸದಸ್ಯರು (ಜನಪ್ರತಿನಿಧಿಗಳು): ನಿರ್ಮಲಾ ಸೀತಾರಾಮನ್, ಕೇಂದ್ರ ಸಚಿವೆ; ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ; ರಾಜ್ಯದ ಆರು ಸಚಿವರು; ಲೋಕಸಭೆ ಹಾಗೂ ರಾಜ್ಯಸಭಾ ಸದಸ್ಯರು; ನಗರ ವ್ಯಾಪ್ತಿಯ ವಿಧಾನಸಭೆ ಕ್ಷೇತ್ರದ ಶಾಸಕರು; 11 ಮಂದಿ ವಿಧಾನ ಪರಿಷತ್ ಸದಸ್ಯರು; ಐದು ನಗರ ಪಾಲಿಕೆಗಳ ಮೇಯರ್.
ಪದನಿಮಿತ್ತ ಸದಸ್ಯರು (ಅಧಿಕಾರಿಗಳು): ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ; ಆಯುಕ್ತ, ಬಿಡಿಎ; ಬೆಂಗಳೂರು ನಗರ ಪೊಲೀಸ್ ಕಮಿಷನರ್; ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ಮೆಟ್ರೊ ರೈಲು ನಿಗಮ; ಮಹಾನಗರ ಆಯುಕ್ತ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ; ಸಿಇಒ, ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ; ಅಧ್ಯಕ್ಷ, ಬೆಂಗಳೂರು ಜಲಮಂಡಳಿ; ಆಯುಕ್ತ, ನಗರ ಭೂ ಸಾರಿಗೆ ನಿರ್ದೇಶನಾಲಯ; ವ್ಯವಸ್ಥಾಪಕ ನಿರ್ದೇಶಕ, ಬಿಎಂಟಿಸಿ; ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ; ಐದು ನಗರ ಪಾಲಿಕೆಗಳ ಆಯುಕ್ತರು; ನಗರ ಜಿಲ್ಲಾಧಿಕಾರಿ; ನಿರ್ದೇಶಕ, ಅಗ್ನಿಶಾಮಕ ದಳ; ಮುಖ್ಯ ನಗರ ಯೋಜಕ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಮುಖ್ಯ ಎಂಜಿನಿಯರ್, ಗ್ರೇಟರ್ ಬೆಂಗಳೂರು ಪ್ರಾಧಿಕಾರ.

ಡಿ.ಕೆ. ಶಿವಕುಮಾರ್ ಹೇಳಿದ್ದು...

- ಸೆಪ್ಟೆಂಬರ್ 2ಕ್ಕೆ ಐದು ನಗರ ಪಾಲಿಕೆಗಳ ಗಡಿಯ ಅಂತಿಮ ಅಧಿಸೂಚನೆ
- ಸೆಪ್ಟೆಂಬರ್ 3ರಿಂದ ವಾರ್ಡ್ ಮರುವಿಂಗಣೆ ಕಾರ್ಯ ಆರಂಭ
- ನವೆಂಬರ್ 1ರಂದು ವಾರ್ಡ್ ಗಡಿ ಅಂತಿಮ ಅಧಿಸೂಚನೆ
- ನವೆಂಬರ್ 2ರ ನಂತರ ವಾರ್ಡ್ ಮೀಸಲಾತಿ ಕರಡು ಅಧಿಸೂಚನೆ
- ಡಿಸೆಂಬರ್ 2ರ ನಂತರ ವಾರ್ಡ್ ಮೀಸಲಾತಿ ಅಂತಿಮ ಅಧಿಸೂಚನೆ



ಬುರುಡೆ ಹಾಗೂ ಮೂಳೆಗಳು

ಆತಂಕ ತಂದ ಬುರುಡೆ, ಮೂಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರದ ಜಿ.ಎಸ್. ಪಾಳ್ಯದ ರಾಜಕಾಲುವೆ ಬಳಿ ಮಂಗಳವಾರ ಸಿಕ್ಕಿದ ತಲೆಬುರುಡೆ ಹಾಗೂ ಮೂಳೆಗಳಿಂದ ಆತಂಕ ಸೃಷ್ಟಿಯಾಗಿತ್ತು.

ವೈದ್ಯಕೀಯ ವಿದ್ಯಾರ್ಥಿನಿಯೊಬ್ಬರು ಅಧ್ಯಯನಕ್ಕೆಂದು ಬಳಸಿದ್ದ ಬುರುಡೆ ಹಾಗೂ ಮೂಳೆಗಳವು ಎಂಬುದು ಅರಿವಾದ ಬಳಿಕ ಎಲ್ಲರೂ ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಜಿ.ಎಸ್. ಪಾಳ್ಯದ ರಾಜಕಾಲುವೆ ಸಮೀಪ ಮಂಗಳವಾರ ಬೆಳಿಗ್ಗೆ ಮೂಳೆಗಳು ಹಾಗೂ ಬುರುಡೆ ಕಂಡ ಸ್ಥಳೀಯರು ಪೊಲೀಸ್ ಸಹಾಯವಾಣಿ 112ಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಬುರುಡೆ ಹಾಗೂ ಮೂಳೆಗಳನ್ನು ಪರಿಶೀಲನೆ ನಡೆಸಿದರು.

ಸ್ಥಳಕ್ಕೆ ಪೊಲೀಸರು ಬಂದಿರುವುದನ್ನು ಗಮನಿಸಿದ ನಿವಾಸಿ ರಾಜಶೇಖರ್ ಅವರು ಬುರುಡೆ ರಹಸ್ಯ ಬಿಚ್ಚಿಟ್ಟರು.

ರಾಜಶೇಖರ್ ಅವರ ಪುತ್ರಿ ಎರಡನೇ ವರ್ಷದ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದು, ಪ್ರಾಯೋಗಿಕ ಅಧ್ಯಯನದ ಸಲುವಾಗಿ ಬುರುಡೆ ಹಾಗೂ ಮೂಳೆಗಳನ್ನು ಕಾಲೇಜಿನ ಪ್ರಯೋಗಾಲಯದಿಂದ ಮನೆಗೆ ತಂದಿದ್ದರು. ಅಧ್ಯಯನ ಮುಗಿದ ಬಳಿಕ ಮೂಳೆ ಹಾಗೂ ಬುರುಡೆಯನ್ನು ರಾಜಕಾಲುವೆ ಬಳಿ ಎಸೆಯಲಾಗಿತ್ತು. ಈ ವಿಚಾರ ತಿಳಿಯದೇ ಆತಂಕಕ್ಕೆ ಕಾರಣವಾಗಿತ್ತು.

'ರಾಜಶೇಖರ್, ಅವರ ಪುತ್ರಿ ಹಾಗೂ ಕಾಲೇಜು ಆಡಳಿತ ಮಂಡಳಿಯವರಿಂದ ಮಾಹಿತಿ ಪಡೆಯಲಾಗಿದೆ. ಲಿಖಿತವಾಗಿ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಅಧ್ಯಯನ ಸಲುವಾಗಿಯೇ ಅವುಗಳನ್ನು ಕಾನೂನಾತ್ಮಕವಾಗಿ ಬಳಸುತ್ತಿದ್ದರು ಎಂಬುದು ದೃಢಪಟ್ಟದ್ದರಿಂದ ಯಾವುದೇ ಪ್ರಕರಣ ದಾಖಲಿಸಿಲ್ಲ' ಎಂದು ಪೊಲೀಸರು ಹೇಳಿದರು.

ಪರಿಷ್ಕೃತ ಮಾಸ್ಟರ್ ಪ್ಲಾನ್‌ಗೆ ಜಾಗತಿಕ ಟೆಂಡರ್

ಸೆ. 30ರೊಳಗೆ ಅರ್ಜಿ ಸಲ್ಲಿಸಲು ಕಾಲಾವಕಾಶ: ಆರು ತಿಂಗಳಲ್ಲಿ ಆರ್‌ಎಂಪಿ–2041 ಕರಡು ಪ್ರಕಟಿಸುವ ಗುರಿ

• ಕೆ.ಎಸ್.ಸುನಿಲ್

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಎರಡು ವರ್ಷಗಳ ಬಳಿಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಾಸ್ಟರ್ ಪ್ಲಾನ್ – 2041 (ಆರ್‌ಎಂಪಿ–2041) ಸಿದ್ಧಪಡಿಸಲು ಜಾಗತಿಕ ಟೆಂಡರ್ ಕರೆದಿದೆ.

ನಗರದ ಭವಿಷ್ಯಕ್ಕಾಗಿ ಹೊಸ ಮತ್ತು ಸಮಗ್ರ ದೃಷ್ಟಿಕೋನ ಹೊಂದಿರುವ ಯೋಜನೆ ರೂಪಿಸಲಾಗುತ್ತಿದೆ. ಆರು ತಿಂಗಳಲ್ಲಿ ಆರ್‌ಎಂಪಿ–2041 ಕರಡು ಸಿದ್ಧಪಡಿಸುವ ಗುರಿ ಹೊಂದಿದ್ದು, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಏಜೆನ್ಸಿ ಆಯ್ಕೆ ಮಾಡಲು ಅರ್ಹ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಕೆಗೆ ಸೆಪ್ಟೆಂಬರ್ 30 ಅಂತಿಮ ದಿನ.

ಹಿಂದಿನ ನ್ಯೂನತೆಗಳನ್ನು ಸರಿಪಡಿಸಿ, ನಗರದ ವಿಸ್ತರಣೆ, ಹೆಚ್ಚುತ್ತಿರುವ ಜನಸಂಖ್ಯೆ, ವಾಹನ ದಟ್ಟಣೆ ನಿಯಂತ್ರಿಸಲು ಹೊಸ ಯೋಜನೆ ಭದ್ರ ಬುನಾದಿ ಹಾಕಲಿದೆ. ಪೂರ್ವಸಿದ್ಧತೆ ಪ್ರಕ್ರಿಯೆಯ ಭಾಗವಾಗಿ ಈ ಹಿಂದೆ ನೀಡಲಾದ ಟೆಂಡರ್ ಅಡಿ ಹೈಟೆಕ್ ತ್ರಿಡಿ ಡ್ರೋನ್ ಸಮೀಕ್ಷೆ ನಡೆಸಲಾಗುತ್ತದೆ. ಈ ಸಮೀಕ್ಷೆಯು ನಗರ ಮತ್ತು ಸುತ್ತಲಿನ ಪ್ರದೇಶಗಳ ವಿವರವಾದ ಪ್ರಾದೇಶಿಕ ಮತ್ತು ಭೌಗೋಳಿಕ ಮಾಹಿತಿ ಒದಗಿಸುವ ಗುರಿ ಹೊಂದಿದೆ.

ಮಾಸ್ಟರ್ ಪ್ಲಾನ್‌ನ ಪ್ರಮುಖ ಅಂಶಗಳ ಪೈಕಿ ಸಂಚಾರ ಕೇಂದ್ರಿ ಅಭಿವೃದ್ಧಿ ಮಾದರಿ (ಟಿಒಡಿ) ಅಡಿ ಎಲ್ಲಾ ರೀತಿಯ ವಾಹನಗಳ ಸುಗಮ ಸಂಚಾರ, ವಿಶೇಷವಾಗಿ ಗುಣಮಟ್ಟದ ಸಾರಿಗೆ ವ್ಯವಸ್ಥೆ ರೂಪಿಸುವುದಾಗಿದೆ. ನಗರದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಸಂಚಾರ ದಟ್ಟಣೆ ಕಡಿಮೆ ಮಾಡಲು, ಸುಲಲಿತವಾಗಿ ಜೀವನ ಸಾಗಿಸಲು ಬೇಕಾದ ಮೂಲ ಸೌಕರ್ಯ ಅಭಿವೃದ್ಧಿ ಪಡಿಸುವುದು ಯೋಜನೆಯ ಪ್ರಮುಖ ಅಂಶವಾಗಿದೆ.

ಮೂಲ ಯೋಜನೆಯ ಪ್ರಕಾರ, ಕರ್ನಾಟಕ ರಾಜ್ಯ ದೂರ ಸಂವೇದಿ ಕೇಂದ್ರವು ಡ್ರೋನ್ ಮೂಲಕ ಸಮೀಕ್ಷೆ ನಡೆಸಬೇಕಿತ್ತು. ಆದರೆ, ಸರ್ಕಾರ ಬದಲಾದ ಕಾರಣ ಖಾಸಗಿ ವಲಯಕ್ಕೆ ಸಮೀಕ್ಷಾ ಕಾರ್ಯ ವಹಿಸಲು ನಿರ್ಧರಿಸಿದೆ. ಸಮೀಕ್ಷಾ ಕಾರ್ಯದಲ್ಲಿ ಆಧುನಿಕ ತಂತ್ರಜ್ಞಾನ, ಬಳಕೆ ಅಧಿಕ ದಕ್ಷತೆ ಖಾತ್ರಿ ಪಡಿಸಲಾಗುತ್ತದೆ.

ಬೆಂಗಳೂರು ನಗರ 1,240 ಚದರ ಕಿ.ಮೀ. ವಿಸ್ತೀರ್ಣವನ್ನು ಒಳಗೊಂಡಿದೆ. ಇದರೊಂದಿಗೆ, 87.50 ಚದರ ಕಿ.ಮೀ. ಬೆಂಗಳೂರು ಮೈಸೂರು ಮೂಲಸೌಕರ್ಯ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ (ಬಿಎಂಐಸಿಎಪಿಎ) ವ್ಯಾಪ್ತಿಯೂ ಸೇರಿ ಆರ್‌ಎಂಪಿ ಸಿದ್ಧವಾಗಲಿದೆ. ಡ್ರೋನ್ ಸಮೀಕ್ಷೆಯು ಮಾಸ್ಟರ್ ಪ್ಲಾನ್ ರಚನೆಯನ್ನು ಬೆಂಬಲಿಸಲು ಮೂಲ ನಕ್ಷೆ, ಭೂ ಬಳಕೆಯ ನಕ್ಷೆ, ಡಿಜಿಟಲ್ ಎಲಿವೇಷನ್ ಮಾದರಿಯಂತಹ ಯೋಜನಾ ಸಾಧನಗಳನ್ನು ಒದಗಿಸುತ್ತದೆ.

'ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ವಿಧಾನದ ಮೂಲಕ ಸಮೀಕ್ಷೆ ಕೈಗೊಳ್ಳಲಾಗುವುದು. ಕೃಷಿ, ವಸತಿ, ವಾಣಿಜ್ಯ ಉದ್ದೇಶಕ್ಕೆ ಬಳಸುವ ಜಮೀನು ಎಷ್ಟು ಹಾಗೂ ಸರ್ಕಾರಿ ಜಮೀನು ಎಷ್ಟು? ಎಂಬುದನ್ನು ಮೌಲ್ಯಮಾಪನ ಮಾಡುವ ಮೂಲಕ ಆರ್‌ಎಂಪಿ–2041 ಸಮಗ್ರವಾಗಿರುವುದನ್ನು ಖಾತರಿ ಪಡಿಸಲಾಗುವುದು. ಎಲ್ಲಾ ಭಾಗಿದಾರರೊಂದಿಗೆ ಸಮಾಲೋಚನೆ ನಡೆಸಲಾಗುವುದು. ಮೂಲ ನಕ್ಷೆ ಈಗಾಗಲೇ ಸಿದ್ಧವಾಗಿದ್ದು, ವಿವರವಾದ ಭೂಬಳಕೆಯ ನಕ್ಷೆ ರಚಿಸಬೇಕಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

'ಕರಡು ಸಿದ್ಧವಾದ ನಂತರ, ಅದನ್ನು ಗೆಜೆಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಸಾರ್ವಜನಿಕರಿಗೆ ಸಲಹೆಗಳನ್ನು ನೀಡಲು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು 60 ದಿನಗಳ ಅವಕಾಶ ನೀಡಲಾಗುತ್ತದೆ. ಅಂತಿಮವಾಗಿ ಪ್ರಕಟಿಸುವ ಮೊದಲು ಈ ಮಾಹಿತಿಗಳನ್ನು ಪರಿಶೀಲಿಸಲಾಗುತ್ತದೆ. 2026ರ ಮಧ್ಯಭಾಗದ ವೇಳೆಗೆ ಸಂಪೂರ್ಣ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಪಾರದರ್ಶಕತೆ ಮತ್ತು ಸಕಾಲಕ್ಕೆ ಅನುಷ್ಠಾನ ಖಚಿತಪಡಿಸಿಕೊಳ್ಳಲು ಪ್ರತಿ ಹಂತದಲ್ಲೂ ಮೇಲ್ವಿಚಾರಣೆ ಮಾಡಲಾಗುತ್ತದೆ' ಎಂದು ಹೇಳಿದ್ದಾರೆ.

ಮತ್ತೆ ಕಾನೂನು ಸವಾಲು?

ಕಟ್ಟಡಗಳು, ವಿನ್ಯಾಸಗಳು ಮತ್ತು ಅಭಿವೃದ್ಧಿ ಯೋಜನೆಗಳಿಗೆ ಅನುಮೋದನೆಗಳನ್ನು ನೀಡಲು ಬಿಡಿಎ ಬಳಸುವ ಪ್ರಾಥಮಿಕ ದಾಖಲೆಯು ಮಾಸ್ಟರ್ ಪ್ಲಾನ್ ಆಗಿದೆ. ಪ್ರಸ್ತುತ ನಗರದಲ್ಲಿ 2005ರಲ್ಲಿ ಸಿದ್ಧಪಡಿಸಲಾದ ಪರಿಷ್ಕೃತ ಮಾಸ್ಟರ್ ಪ್ಲಾನ್ 2015 ಬಳಕೆಯಲ್ಲಿದ್ದು, ಇದನ್ನೇ 2025ರವರೆಗೆ ವಿಸ್ತರಿಸಲಾಗಿದೆ.

ಪ್ರಾಧಿಕಾರವು 2017ರ ಡಿಸೆಂಬರ್‌ನಲ್ಲಿ ಮಾಸ್ಟರ್ ಪ್ಲಾನ್ 2031 ಪ್ರಕಟಿಸಿತ್ತು. ಆದರೆ, ಸಂವಿಧಾನ 74ನೇ ತಿದ್ದುಪಡಿ ಅನ್ವಯ ಬೆಂಗಳೂರು ಮಹಾನಗರ ಯೋಜನಾ ಸಮಿತಿ (ಬಿಎಂಪಿಸಿ) ಈ ಯೋಜನೆ ಪರಿಷ್ಕರಿಸಬಹುದೇ ಹೊರತು ಬಿಡಿಎ ಅಲ್ಲ ಎಂಬ ಆಧಾರದ ಮೇಲೆ ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು. ಹಾಗಾಗಿ ಮಾಸ್ಟರ್ ಪ್ಲಾನ್‌ಗೆ ಹಿನ್ನಡೆಯಾಯಿತು. ಇದರಿಂದ ಅನೇಕ ಕಾನೂನು ಸವಾಲು ಎದುರಿಸಬೇಕಾಯಿತು. ಈಗಲೂ ಬಿಎಂಪಿಸಿ ರಚನೆಯಾಗದ ಕಾರಣ ಮಾಸ್ಟರ್ ಪ್ಲಾನ್‌ಗೆ ಮತ್ತೊಮ್ಮೆ ಕಾನೂನು ಸವಾಲು ಎದುರಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

> **ಕರಡು ಮಾಸ್ಟರ್ ಪ್ಲಾನ್ ತಯಾರಿಸಲು ಏಜೆನ್ಸಿಗೆ ಗರಿಷ್ಠ ನಾಲ್ಕು ತಿಂಗಳ ಅವಕಾಶ ನೀಡಲಾಗುವುದು. ಟೆಂಡರ್ ಅವಧಿ ಸೇರಿ ಆರು ತಿಂಗಳಲ್ಲಿ ಸಾರ್ವಜನಿಕ ಆಕ್ಷೇಪಣೆಗಾಗಿ ಕರಡು ಪ್ರಕಟಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ**
> **ಎಲ್. ಶಶಿಕುಮಾರ್,** ನಗರ ಯೋಜನಾ ಸದಸ್ಯ, ಬಿಡಿಎ



ಸಂಕ್ಷಿಪ್ತ ಸುದ್ದಿ

ಡಿಕೆಶಿ ಮಾನಹಾನಿ: ಜೆಡಿಎಸ್ ವಿರುದ್ಧ ಕಾಂಗ್ರೆಸ್ ದೂರು

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರಿಗೆ ಮಾನಹಾನಿ ಮಾಡುವ ಮತ್ತು ದ್ವೇಷ ಹರಡುವ ಉದ್ದೇಶದಿಂದ ನಕಲಿ ಪತ್ರವನ್ನು ಸೃಷ್ಟಿಸಿ ಪೋಸ್ಟ್ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಜೆಡಿಎಸ್‌ನ ಅಧಿಕೃತ ಸಾಮಾಜಿಕ ಜಾಲತಾಣದ ನಿರ್ವಹಕರ ವಿರುದ್ಧ ಕೆಪಿಸಿಸಿ ಮಂಗಳವಾರ ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ದೂರು ನೀಡಿದೆ.

ಜೆಡಿಎಸ್‌ನ ಸಾಮಾಜಿಕ ಮಾಧ್ಯಮ ನಿರ್ವಾಹಕರು ಎಐಸಿಸಿಯ ನಕಲಿ ಲೆಟರ್‌ಹೆಡ್‌ನಲ್ಲಿ ಪತ್ರವನ್ನು ಉದ್ದೇಶಪೂರ್ವಕವಾಗಿ ಸೃಷ್ಟಿಸಿ ಪ್ರಸಾರ ಮಾಡಿದ್ದಾರೆ ಎಂದು ದೂರಿನಲ್ಲಿ ಕೆಪಿಸಿಸಿ ವಕ್ತಾರ ಸಿ. ಎನ್. ಧನಂಜಯ ಅವರು ಆರೋಪಿಸಿದ್ದಾರೆ.

'ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಡಿ.ಕೆ. ಶಿವಕುಮಾರ್ ಅವರನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಲಾಗಿದೆ' ಎಂದು ಈ ನಕಲಿ ಪತ್ರದಲ್ಲಿದೆ ಎಂದು ದೂರಿನಲ್ಲಿ ಹೇಳಲಾಗಿದೆ.

'ನಕಲಿ ಪತ್ರವು ಅವಹೇಳನಕಾರಿ, ಮಾನಹಾನಿಕರ ಮತ್ತು ಸುಳ್ಳು ಹೇಳಿಕೆಯನ್ನು ಹೊಂದಿದೆ. ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಉದ್ದೇಶಪೂರ್ವಕ ದುರುಪಯೋಗ ಮತ್ತು ಅಧಿಕೃತ ದಾಖಲೆಗಳ ನಕಲಿ ಮಾಡುವುದು ಗಂಭೀರ ಸೈಬರ್ ಅಪರಾಧವಾಗಿದೆ' ಎಂದು ದೂರಿನಲ್ಲಿ ಅವರು ಹೇಳಿದ್ದಾರೆ.

ಬಿಎನ್‌ಎಸ್ ಮತ್ತು ಐಟಿ ಕಾಯ್ದೆಯ ವಿವಿಧ ವಿಭಾಗಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸುವಂತೆ ಕೆಪಿಸಿಸಿ ಮನವಿ ಮಾಡಿದೆ.

ಅರ್ಜಿ ಆಹ್ವಾನ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯವು (ಯುವಿಸಿಇ) 2025–26ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿ ಉಪನ್ಯಾಸಕರ ವಿವಿಧ ಹುದ್ದೆಗಳಿಗೆ ಅರ್ಜಿ ಅಹ್ವಾನಿಸಿದೆ.

ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದ ಅತಿಥಿ ಉಪನ್ಯಾಸಕರ ಹುದ್ದೆಗೆ ಆಸಕ್ತರು ಸೆಪ್ಟೆಂಬರ್ 8ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ:– https://uvce.karnataka.gov.in/en ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ವಿಳಾಸ: ಕುಲಸಚಿವರು, ಯುವಿಸಿಇ, ಕೆ.ಆರ್ ವೃತ್ತ, ಬೆಂಗಳೂರು–560 001

ರಾಜ್ಯ ಘಟಕದ ಅಧ್ಯಕ್ಷ



ವಿಜಯ ಜಾಧವ

ಬೆಂಗಳೂರು: ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ಕರ್ನಾಟಕ ಘಟಕಕ್ಕೆ ವಿಜಯ ಜಾಧವ ಅವರು ಅಧ್ಯಕ್ಷರಾಗಿ ನೇಮಕವಾಗಿದ್ದಾರೆ. ಗುಜರಾತ್‌ನ ಅಹಮದಾಬಾದ್‌ನಲ್ಲಿ ಇತ್ತೀಚೆಗೆ ನಡೆದ ಸಂಘದ ರಾಷ್ಟ್ರೀಯ ಕಾರ್ಯಕಾರಣಿ ಸಭೆಯಲ್ಲಿ ವಿಜಯ ಜಾಧವ ಅವರನ್ನು ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಸಂಘದ ರಾಷ್ಟ್ರೀಯ ಅಧ್ಯಕ್ಷ ಟಿ.ಸಿ. ರಾಠೋಡ್ ನೇಮಕ ಮಾಡಿದ್ದಾರೆ. ಇವರ ಅವಧಿ ಐದು ವರ್ಷಗಳವರೆಗೆ ಇರಲಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.



ಗೌರಿ ಹಬ್ಬದ ಪ್ರಯುಕ್ತ ಹಿತಚಿಂತನ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಬೊಮ್ಮಶೆಟ್ಟಹಳ್ಳಿ ಮತ್ತು ಶಾಮ ಭಟ್ಟರ ಪಾಳ್ಯ ಗ್ರಾಮದ 200 ಮಹಿಳೆಯರಿಗೆ ಬಾಗಿನ ವಿತರಿಸಲಾಯಿತು

ಹಳದಿ ಮಾರ್ಗ: ಹಳಿಗೆ ಬಿದ್ದ ಭದ್ರತಾ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ'ದ ಹಳದಿ ಮಾರ್ಗದ ಹಳಿಗೆ ಭದ್ರತಾ ಸಿಬ್ಬಂದಿಯೊಬ್ಬರು ಆಕಸ್ಮಿಕವಾಗಿ ಬಿದ್ದಿದ್ದು, ಅವರನ್ನು ಪ್ರಯಾಣಿಕರು ರಕ್ಷಿಸಿದ್ದಾರೆ. ರಾಗಿಗುಡ್ಡ ಮೆಟ್ರೊ ನಿಲ್ದಾಣದಲ್ಲಿ ಮಂಗಳವಾರ ಬೆಳಿಗ್ಗೆ ಘಟನೆ ನಡೆದಿದೆ. ಮೆಟ್ರೊ ನಿಲ್ದಾಣದಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಘಟನೆ ದೃಶ್ಯವು ಸೆರೆಯಾಗಿದೆ.

ಹಳಿ ಮೇಲೆ ಭದ್ರತಾ ಸಿಬ್ಬಂದಿ ಬೀಳುತ್ತಿರುವುದನ್ನು ಗಮನಿಸಿದ ಮತ್ತೊಂದು ಬದಿಯಲ್ಲಿ ಕೆಲಸ ಮಾಡುತ್ತಿದ್ದ ಭದ್ರತಾ ಸಿಬ್ಬಂದಿ, ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಿದರು. ಬಳಿಕ ಅವರನ್ನು ಮೇಲಕ್ಕೆ ಎತ್ತಲಾಯಿತು.

52 ವರ್ಷದ ಭದ್ರತಾ ಸಿಬ್ಬಂದಿಗೆ ಯಾವುದೇ ಗಾಯವಾಗಿಲ್ಲ. ಅಪಾಯದಿಂದ ಪಾರಾಗಿದ್ದಾರೆ. ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಿದ್ದರಿಂದ ಹಳದಿ ಮಾರ್ಗದಲ್ಲಿ ಮೆಟ್ರೊ ಸಂಚಾರವು ಆರು ನಿಮಿಷ ವ್ಯತ್ಯಯ ಆಗಿತ್ತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ. ಭದ್ರತಾ ಸಿಬ್ಬಂದಿ ಹೆಚ್ಚಿನ ಅವಧಿ ಕೆಲಸ ಮಾಡಿದ್ದರು. ನಿದ್ರೆಯ ಮಂಪರಿನಲ್ಲಿ ಹಳಿಯ ಮೇಲೆ ಬಿದ್ದಿದ್ದಾರೆ ಎನ್ನಲಾಗಿದೆ.



ಸೋಮವಾರ ತಡರಾತ್ರಿ ಗುಂಡಿ ಮುಚ್ಚುವ ಕಾರ್ಯ ಪರಿಶೀಲನೆ

'ಗುಣಮಟ್ಟದೊಂದಿಗೆ ರಸ್ತೆ ಗುಂಡಿ ದುರಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುಣಮಟ್ಟ ಕಾಪಾಡಿಕೊಂಡು ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದರು.

ಬಾಗಲೂರು ರಸ್ತೆ, ಸಂದೀಪ್ ಉನ್ನಿಕೃಷ್ಣನ್ ರಸ್ತೆ ಹಾಗೂ ಈಜೀಪುರ ರಸ್ತೆಯಲ್ಲಿ ಸೋಮವಾರ ತಡರಾತ್ರಿ ಗುಂಡಿ ಮುಚ್ಚುವ ಕಾರ್ಯವನ್ನು ಪರಿಶೀಲಿಸಿ, ಅವರು ಮಾತನಾಡಿದರು.

'ರಸ್ತೆ ಗುಂಡಿಗಳನ್ನು ಮುಚ್ಚುವ ವಿಚಾರವಾಗಿ ನಗರದ ಶಾಸಕರೆಲ್ಲರೂ ಗಮನಕ್ಕೆ ತಂದಿದ್ದರು. ನಗರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಸಲುವಾಗಿ 'ರಸ್ತೆ ಗುಂಡಿ ಗಮನ' ತಂತ್ರಾಂಶ ಸಿದ್ಧಪಡಿಸಿದ್ದೇವೆ. ಪೊಲೀಸರಿಗೂ ಅವರ ಠಾಣೆಗಳ ವ್ಯಾಪ್ತಿಯಲ್ಲಿ ಗುಂಡಿಗಳಿರುವ ಪಟ್ಟಿ ಕೊಡಲು ತಿಳಿಸಲಾಗಿತ್ತು. ಇತ್ತೀಚೆಗೆ ಬಾಗಲೂರು ರಸ್ತೆಯಲ್ಲಿ ಹೋದಾಗ ರಸ್ತೆ ಸ್ಥಿತಿ ನೋಡಿ ಬೇಸರವಾಗಿತ್ತು' ಎಂದರು.

'ನಗರದ ಎಲ್ಲ ಕಡೆ ರಸ್ತೆ ಗುಂಡಿ ಮುಚ್ಚುವ ಕೆಲಸ ಮಾಡಲಾಗುತ್ತಿದೆ. 5,000ಕ್ಕೂ ಹೆಚ್ಚು ಗುಂಡಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 4,400 ರಸ್ತೆ ಗುಂಡಿಗಳನ್ನು ಆದ್ಯತೆ ಮೇಲೆ ಮುಚ್ಚಲು ಸೂಚಿಸಲಾಗಿದೆ. ನಾಲ್ಕು ದಿನಗಳಿಂದ 2,200 ಗುಂಡಿಗಳನ್ನು ಮುಚ್ಚಲಾಗಿದೆ' ಎಂದು ಹೇಳಿದರು.

'ನಗರದಲ್ಲಿ ಸ್ವಚ್ಛತೆ ಕಾಪಾಡುವ ಕೆಲಸ ಮಾಡಲಾಗುತ್ತಿದ್ದು, ಸ್ಕೈವಾಕ್‌ಗಳನ್ನು ಸ್ವಚ್ಛ ಮಾಡಲಾಗಿದೆ. ರಸ್ತೆ ಗುಂಡಿಗಳನ್ನು ಮುಚ್ಚಿ ಹೋಗುವುದು ಮಾತ್ರವಲ್ಲ, ಗುಣಮಟ್ಟದ ಕೆಲಸ ಆಗಬೇಕು. ಈ ನಿಟ್ಟಿನಲ್ಲಿ ಹಾಟ್ ಮಿಕ್ಸ್, ಕೋಲ್ಡ್ ಮಿಕ್ಸ್ ಹಾಗೂ ಇಕೋಫಿಕ್ಸ್ ಸೇರಿದಂತೆ ಮೂರೂ ಮಾದರಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಬಾಗಲೂರು ರಸ್ತೆ, ಈಜೀಪುರ ರಸ್ತೆಯಲ್ಲಿ ಪರಿಶೀಲನೆ
- ಸಮಸ್ಯೆ ಪರಿಹಾರಕ್ಕೆ 'ರಸ್ತೆ ಗುಂಡಿ ಗಮನ' ತಂತ್ರಾಂಶ ಸಿದ್ಧ
- 5000ಕ್ಕೂ ಹೆಚ್ಚು ಗುಂಡಿ ಗುರುತು



ಬಾಗಲೂರು ರಸ್ತೆಯಲ್ಲಿ ಗುಂಡಿ ಮುಚ್ಚುವ ಕಾರ್ಯವನ್ನು ಡಿ.ಕೆ. ಶಿವಕುಮಾರ್ ವೀಕ್ಷಿಸಿದರು

₹14.80 ಕೋಟಿ ದಂಡ ಸಂಗ್ರಹ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರವು ಅವಕಾಶ ಕಲ್ಪಿಸಿದ್ದು, ನಾಲ್ಕು ದಿನಗಳಲ್ಲಿ (ಆಗಸ್ಟ್ 23ರಿಂದ 26ರವರೆಗೆ) ಒಟ್ಟು 5,25,551 ಪ್ರಕರಣಗಳು ಇತ್ಯರ್ಥಗೊಂಡಿವೆ. ₹14.80 ಕೋಟಿ ದಂಡ ಸಂಗ್ರಹವಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಪೊಲೀಸ್ ಇಲಾಖೆಯಲ್ಲಿ ಸಂಚಾರ ಇ–ಚಲನ್‌ನಲ್ಲಿ ದಾಖಲಾದ ಪ್ರಕರಣಗಳಿಗೆ ದಂಡ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಪ್ರಕರಣ ಗಳಲ್ಲಿ ದಂಡ ಪಾವತಿಸಲು ರಿಯಾಯಿತಿ ನೀಡಿ ಸರ್ಕಾರವು ಆದೇಶಿಸಿತ್ತು. ಈ ಆದೇಶವು ಆ.23ರಿಂದ ಜಾರಿಗೆ ಬಂದಿದ್ದು ಸೆ.12ರ ವರೆಗೆ ರಿಯಾಯಿತಿ ಅಡಿ ದಂಡ ಪಾವತಿಸಬಹುದಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಬಿಟಿಪಿ ಅಸ್ತ್ರಂ, ಕರ್ನಾಟಕ ರಾಜ್ಯ ಪೊಲೀಸ್(ಕೆಎಸ್‌ಪಿ) ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ಅಥವಾ ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲಿ ವಾಹನದ ನೋಂದಣಿ ಸಂಖ್ಯೆ ನಮೂದಿಸಿ ಸಂಚಾರ ಉಲ್ಲಂಘನೆ ಪ್ರಕರಣಗಳನ್ನು ತಿಳಿದುಕೊಳ್ಳಬಹುದು. ಬಳಿಕ, ಪಾವತಿಸಲು ಇಚ್ಛಿಸುವ ದಂಡದ ಮೊತ್ತವನ್ನು ಆಯ್ಕೆ ಮಾಡಿದರೆ, ರಿಯಾಯಿತಿ ಮೊತ್ತದ ಪಾವತಿಯ ಆಯ್ಕೆ ಲಭ್ಯವಾಗುತ್ತದೆ. ನಂತರ, ದಂಡದ ಮೊತ್ತ ಪಾವತಿ ಸಬಹುದು ಎಂದು ಸಂಚಾರ ಪೊಲೀಸರು ಕೋರಿದ್ದಾರೆ.

ಬುಧವಾರ, ಆಗಸ್ಟ್ 27, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 238 | ಪುಟ 18

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಯುದ್ಧನೌಕೆ ಸೇರ್ಪಡೆ

ರಹಸ್ಯವಾಗಿ ಕಾರ್ಯಾಚರಣೆ ಮಾಡಬಲ್ಲ ಎರಡು ಯುದ್ಧನೌಕೆಗಳು ಮಂಗಳವಾರ ನೌಕಾಪಡೆಗೆ ಸೇರ್ಪಡೆಗೊಂಡಿವೆ 9



ಪ್ರಿಯ ಓದುಗರು, ಜಾಹೀರಾತುದಾರರು, ಏಜೆಂಟರು ಮತ್ತು ಪತ್ರಿಕಾ ವಿತರಕರಿಗೆ **ಗಣೇಶ ಚತುರ್ಥಿಯ ಶುಭಾಶಯಗಳು**



ಬಿಡುವು

ಗಣೇಶ ಚತುರ್ಥಿಯ ಪ್ರಯುಕ್ತ ಕಚೇರಿಗೆ ಬುಧವಾರ ರಜೆ. ಹೀಗಾಗಿ ಗುರುವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

ಸೆನ್ಸೆಕ್ಸ್ 80,786 | ನಿಫ್ಟಿ 24,712 | $/₹ 87.69 | ಚಿನ್ನ (Std. 10g) ₹1,06,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,24,000 (ಬೆಂಗಳೂರು) | ದಿನದ ಬೆಳವಣಿಗೆಗಳಿಗಾಗಿ www.prajavani.net ನೋಡಿ..

ಹೆಚ್ಚುವರಿ ಸುಂಕ; ಇಂದು ಜಾರಿ

ಭಾರತದ ಸರಕುಗಳ ಮೇಲೆ ಶೇ 50ರಷ್ಟು ಸುಂಕ; ಟ್ರಂಪ್ ನಿರ್ಧಾರದಿಂದ ಪರಿಣಾಮ

ವಾಷಿಂಗ್ಟನ್/ ನವದೆಹಲಿ (ಪಿಟಿಐ/ ರಾಯಿಟರ್ಸ್): ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 25ರಷ್ಟು ಹೆಚ್ಚುವರಿ ಸುಂಕ ವಿಧಿಸುವ ಸಂಬಂಧ ಕರಡು ಅಧಿಸೂಚನೆಯನ್ನು ಅಮೆರಿಕ ಹೊರಡಿಸಿದೆ. ಡೊನಾಲ್ಡ್ ಟ್ರಂಪ್ ಆಡಳಿತದ ಈ ನಿರ್ಧಾರವು ಭಾರತದ ರಫ್ತುದಾರರ ಮೇಲೆ ತೀವ್ರ ಪರಿಣಾಮ ಬೀರಲಿದೆ ಎಂದು ವಿಶ್ಲೇಷಿಸಲಾಗಿದೆ.

ಕೆಲವೊಂದು ವಿನಾಯಿತಿಗಳನ್ನು ಹೊರತುಪಡಿಸಿದರೆ, ಅಮೆರಿಕದ ಮಾರುಕಟ್ಟೆ ಪ್ರವೇಶಿಸುವ ಭಾರತದ ಸರಕುಗಳ ಮೇಲಿನ ಒಟ್ಟು ಸುಂಕ ಈಗ ಶೇಕಡ 50ರಷ್ಟಾಗಿದೆ. ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕವು ಮೊದಲು ಶೇ 25ರಷ್ಟು ಸುಂಕ ವಿಧಿಸಿತ್ತು. ಇದು ಆಗಸ್ಟ್ 7ರಂದು ಜಾರಿಯಾಗಿತ್ತು.

‘ಭಾರತದ ಸರಕುಗಳ ಮೇಲಿನ ಹೊಸ ಸುಂಕ ವ್ಯವಸ್ಥೆ ಆಗಸ್ಟ್ 27ರ ಮಧ್ಯರಾತ್ರಿ 12.01ರ (ಭಾರತೀಯ ಕಾಲಮಾನ ಬುಧವಾರ ಬೆಳಿಗ್ಗೆ 9.31) ಬಳಿಕ ಜಾರಿಗೆ ಬರಲಿದೆ’ ಎಂದು ಅಮೆರಿಕದ ಹೋಮ್‌ಲ್ಯಾಂಡ್ ಸೆಕ್ಯುರಿಟಿ ಇಲಾಖೆಯು (ಕಸ್ಟಮ್ಸ್ ವಿಭಾಗ) ಸೋಮವಾರ ಹೊರಡಿಸಿದ ಆದೇಶದಲ್ಲಿ ತಿಳಿಸಿದೆ.

‘ಅಮೆರಿಕಕ್ಕೆ ಕಳುಹಿಸಲಿಕ್ಕಾಗಿ ಆಗಸ್ಟ್ 27ರ ಮಧ್ಯರಾತ್ರಿ 12.01ಕ್ಕೂ ಮೊದಲು ಹಡಗುಗಳಿಗೆ ಲೋಡ್ ಮಾಡಿರುವ ಭಾರತದ ಸರಕುಗಳಿಗೆ ಹೆಚ್ಚುವರಿ ಸುಂಕದಿಂದ ವಿನಾಯಿತಿ ನೀಡಲಾಗುವುದು’ ಎಂದು ಆದೇಶದಲ್ಲಿ ತಿಳಿಸಲಾಗಿದೆ. 10



ಅಮೆರಿಕದ ಗ್ರಾಹಕರು ಈಗಾಗಲೇ ಹೊಸ ಆರ್ಡರ್‌ಗಳನ್ನು ನಿಲ್ಲಿಸಿದ್ದಾರೆ. ಹೆಚ್ಚುವರಿ ಸುಂಕದಿಂದಾಗಿ ಸೆಪ್ಟೆಂಬರ್‌ನಿಂದ ರಫ್ತು ಪ್ರಮಾಣ ಶೇ 20-30ರಷ್ಟು ಕಡಿಮೆಯಾಗಬಹುದು

ಪಂಕಜ್ ಛಡ್ಡಾ, ಅಧ್ಯಕ್ಷರು, ಎಂಜಿನಿಯರಿಂಗ್ ರಫ್ತು ಉತ್ತೇಜನ ಮಂಡಳಿ

ಶೇ 55ರಷ್ಟು ಸರಕುಗಳ ಮೇಲೆ ಪರಿಣಾಮ

- ಭಾರತವು ಅಮೆರಿಕಕ್ಕೆ ರಫ್ತು ಮಾಡುವ ಒಟ್ಟು ಸರಕಿನಲ್ಲಿ ಶೇ 55ರಷ್ಟು ಸರಕುಗಳ ಮೇಲೆ ಹೆಚ್ಚುವರಿ ಸುಂಕ ಪರಿಣಾಮ ಬೀರಬಹುದು ಎಂದು ರಫ್ತುದಾರರ ಒಕ್ಕೂಟ ಅಂದಾಜಿಸಿದೆ
- ಹಣಕಾಸು ಸಚಿವಾಲಯದ ಮೂಲಗಳ ಪ್ರಕಾರ, 48 ಬಿಲಿಯನ್ ಡಾಲರ್‌ಗೂ (₹4.20 ಲಕ್ಷ ಕೋಟಿ) ಹೆಚ್ಚಿನ ಮೊತ್ತದ ವ್ಯಾಪಾರದ ಮೇಲೆ ಪರಿಣಾಮ ಆಗಲಿದೆ
- ಭಾರತವನ್ನು ಹೊರತುಪಡಿಸಿದರೆ ಅಮೆರಿಕದಿಂದ ಶೇ 50ರಷ್ಟು ಆಮದು ಸುಂಕ ಎದುರಿಸುತ್ತಿರುವ ದೇಶ ಬ್ರೆಜಿಲ್ ಮಾತ್ರ



ಯಾವೆಲ್ಲಾ ಸರಕು?

ಅಮೆರಿಕವು ಭಾರತದಿಂದ ಆಮದು ಮಾಡಿಕೊಳ್ಳುತ್ತಿರುವ ಜವಳಿ, ಸಿದ್ಧ ಉಡುಪು, ಮುತ್ತು/ಹರಳು, ಆಭರಣಗಳು, ಸೀಗಡಿ, ಚರ್ಮದ ಉತ್ಪನ್ನಗಳು, ಪಾದರಕ್ಷೆ, ಡೇರಿ ಉತ್ಪನ್ನಗಳು, ರಾಸಾಯನಿಕಗಳು ಹಾಗೂ ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಯಂತ್ರೋಪಕರಣಗಳ ಮೇಲೆ ಹೆಚ್ಚಿನ ಸುಂಕದ ಹೊರೆ ಬೀಳಲಿದೆ.

ಔಷಧ, ತೈಲ ಉತ್ಪನ್ನಗಳು ಮತ್ತು ಎಲೆಕ್ಟ್ರಾನಿಕ್ ವಸ್ತುಗಳನ್ನು ಹೆಚ್ಚುವರಿ ಸುಂಕದ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

ಭಾರತದ ಪ್ರತಿಸ್ಪರ್ಧಿಗಳಿಗೆ ಲಾಭ

ಹೆಚ್ಚುವರಿ ಸುಂಕ ಜಾರಿಯಾಗಿರುವುದರಿಂದ ಅಮೆರಿಕದ ಜತೆ ದ್ವಿಪಕ್ಷೀಯ ವ್ಯಾಪಾರ ಸಂಬಂಧ ಹೊಂದಿರುವ ಭಾರತದ ಪ್ರತಿಸ್ಪರ್ಧಿ ದೇಶಗಳಿಗೆ ಲಾಭವಾಗಲಿದೆ. ಅಮೆರಿಕದ ಮಾರುಕಟ್ಟೆಯಲ್ಲಿ ಭಾರತದ ಪ್ರತಿಸ್ಪರ್ಧಿಗಳಾಗಿರುವ ಮ್ಯಾನ್ಮಾರ್ (ಶೇ 40), ಥಾಯ್ಲೆಂಡ್ ಮತ್ತು ಕಾಂಬೋಡಿಯ (ಶೇ 26), ಬಾಂಗ್ಲಾದೇಶ (ಶೇ 35), ಇಂಡೊನೇಷ್ಯಾ (ಶೇ 32), ಚೀನಾ ಮತ್ತು ಶ್ರೀಲಂಕಾ (ಶೇ 30), ಮಲೇಷ್ಯಾ (ಶೇ 25), ಫಿಲಿಪ್ಪೀನ್ಸ್ ಮತ್ತು ವಿಯೆಟ್ನಾಂ (ಶೇ 20) ದೇಶಗಳ ಸರಕುಗಳಿಗೆ ಕಡಿಮೆ ಸುಂಕ ವಿಧಿಸಲಾಗುತ್ತಿದೆ.

ಭಾರತಕ್ಕೆ ವಿಧಿಸಿರುವ ಸುಂಕದ ಪ್ರಮಾಣ ಹೆಚ್ಚಾಗಿರುವುದರಿಂದ ಅಮೆರಿಕದಲ್ಲಿ ಭಾರತದ ಸರಕುಗಳ ಮಾರಾಟದ ಬೆಲೆ ಹೆಚ್ಚಾಗಲಿದೆ. ಇದರಿಂದ ಆ ವಸ್ತುಗಳಿಗೆ ಬೇಡಿಕೆ ಕಡಿಮೆ ಆಗಬಹುದು.

ನಿರಾಣಿ ಪುತ್ರನ ವಿರುದ್ಧ ತನಿಖೆ: ‘ಸುಪ್ರೀಂ’ ಸಮ್ಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಧೋಳದ ನಿರಾಣಿ ಶುಗರ್ಸ್‌ನ ಡಿಸ್ಟಿಲರಿ ಘಟಕದ ಎಫ್ಲ್ಯುಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್‌ನ (ಇಟಿಪಿ) ಬಾಯ್ಲರ್ ಸ್ಫೋಟಗೊಂಡು ನಾಲ್ವರು ಕಾರ್ಮಿಕರು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಮಾಜಿ ಸಚಿವ ಮುರುಗೇಶ ನಿರಾಣಿ ಅವರ ಪುತ್ರ ವಿಜಯ್ ನಿರಾಣಿ ಮತ್ತು ಇತರರ ವಿರುದ್ಧ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಅವಕಾಶ ನೀಡಿದೆ.

ಈ ಪ್ರಕರಣದ ವಿಚಾರಣೆ ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್‌ನ 2023 ರ ಆದೇಶವನ್ನು ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ರದ್ದುಗೊಳಿಸಿದೆ. 8

Lilly A MEDICINE COMPANY

ತೂಕ ಇಳಿಕೆಗೆ ಜೈವಿಕ ಪ್ರತಿರೋಧ ಎಂದರೇನು?

ತೂಕ ಇಳಿಕೆಗೆ ಜೈವಿಕ ಪ್ರತಿರೋಧ ಎಂದರೆ ನೀವು ತೂಕ ಇಳಿಸಿಕೊಳ್ಳಲು ಪ್ರಯತ್ನಿಸಿದಾಗ ನಿಮ್ಮ ದೇಹವು ಅದಕ್ಕೆ ಪ್ರತಿರೋಧ ಒಡ್ಡುವುದು. ಹೆಚ್ಚುವರಿಯಾಗಿ, ನಿಮ್ಮ ದೇಹದಲ್ಲಿ ಹಾರ್ಮೋನುಗಳ ಪ್ರತಿಕ್ರಿಯೆಯಿಂದಾಗಿ ನಿಮಗೆ ಕಡಿಮೆ ಹೊಟ್ಟೆ ತುಂಬಿದ ಭಾವನೆ ಉಂಟಾಗಿ ಹೆಚ್ಚು ಹಸಿವಾಗಬಹುದು.[1]

ಹೆಚ್ಚಿನ ಮಾಹಿತಿ ಪಡೆಯಲು ನಿಮ್ಮ ವೈದ್ಯರೊಂದಿಗೆ ಮಾತನಾಡಿ.

References:
1. Ochner CN, Barrios DM, Lee CD, Pi-Sunyer FX. Biological mechanisms that promote weight regain following weight loss in obese humans. Physiol Behav. 2013;120:106-113. PP-MG-IN-0561

ಕ್ಷಮೆ ಕೋರುವೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಯಾವುದೇ ತಪ್ಪು ಮಾಡಿಲ್ಲ. ಯಾರ ಮನಸ್ಸನ್ನೂ ನೋಯಿಸುವ ಉದ್ದೇಶ ನನ್ನದಲ್ಲ. ಆದರೂ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ‘ಇಂಡಿಯಾ ಮೈತ್ರಿ ಕೂಟ’ದ ನಾಯಕರಿಗೆ ನೋವಾಗಿದ್ದರೆ ಕ್ಷಮೆ ಕೋರುತ್ತೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.



ವಿಧಾನಸಭೆಯಲ್ಲಿ ತಾವು ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆಯ ಸಾಲುಗಳನ್ನು ಉಲ್ಲೇಖಿಸಿರುವುದು ವಿವಾದಕ್ಕೀಡಾದ ಕಾರಣ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಸ್ಪಷ್ಟನೆ ನೀಡಿದ ಶಿವಕುಮಾರ್, ‘ನಾನು ವಿರೋಧ ಪಕ್ಷಗಳ ಕಾಲೆಳೆಯಲು ಗೀತೆಯ ಸಾಲುಗಳನ್ನು ಪ್ರಸ್ತಾಪಿಸಿದ್ದೇನೆ. ನನ್ನ ಕೆಲವು ಸ್ನೇಹಿತರು ಇದರಲ್ಲಿ ರಾಜಕೀಯ ಮಾಡಿ, ಗೊಂದಲ ಮೂಡಿಸಲು ಹೊರಟಿದ್ದಾರೆ’ ಎಂದರು.

‘ಆರ್‌ಎಸ್‌ಎಸ್ ಹೊಗಳುವುದು ನನ್ನ ಉದ್ದೇಶ ಆಗಿರಲಿಲ್ಲ. ಆದರೆ, ನಿರ್ದಿಷ್ಟ ಭಾಗವನ್ನು ಮಾತ್ರ ಕಟ್ ಆ್ಯಂಡ್ ಪೇಸ್ಟ್ ಮಾಡಿ, ಬೇರೆ ವಿಚಾರಗಳ ಜೊತೆ ಬೆರೆಸಿ ರಾಷ್ಟ್ರಮಟ್ಟದ ಸುದ್ದಿ ಮಾಡಲಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು ಮತ್ತು ನಂತರ ಆರ್‌ಎಸ್‌ಎಸ್ ಹೇಗೆ ಬೇರೂರಿದೆ ಎಂದು ಅರಿತಿದ್ದೇನೆ. ರಾಜ್ಯದಲ್ಲಿ ಈ ಸಂಘಟನೆ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ರಾಜಕೀಯ ನಾಯಕನಾಗಿ ಅರಿತಿದ್ದೇನೆ. ಪಕ್ಷದ ಅಧ್ಯಕ್ಷನಾಗಿ ವಿರೋಧಿ ಸಂಘಟನೆ ಬಗ್ಗೆ ತಿಳಿಯುವುದು ನನ್ನ ಕರ್ತವ್ಯ’ ಎಂದು ಹೇಳಿದರು. 8

‘ಬೆದರಿಕೆಗಳಿಗೆ ಹೆದರುವ ರಕ್ತ ನನ್ನದಲ್ಲ’

‘ನನ್ನನ್ನು ಬೆದರಿಸಿ ಕ್ಷಮೆ ಕೇಳಿಸಲಾಗಿದೆ ಎಂಬ ಭಾವನೆ ಬೇಡ. ಬೆದರಿಕೆಗಳಿಗೆ ಹೆದರುವ ರಕ್ತ ನನ್ನದಲ್ಲ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ನಡೆದ ಸಾತನೂರು ಘಟನೆ, ಬೇರೆ ಬೇರೆ ಘಟನೆಗಳು, ಸದನದಲ್ಲಿ ನಡೆದ ಘಟನೆಗಳು, ಆಪರೇಷನ್ ಕಮಲ ಆದಾಗ ಏನಾಯಿತು? ಯಾರು ಯಾರು ಯಾವ ಮೂಲದಿಂದ ನಮ್ಮ ಪಕ್ಷಕ್ಕೆ ಬಂದಿದ್ದಾರೆ. ಬೇರೆ ಪಕ್ಷಕ್ಕೆ ಹೋಗಿದ್ದಾರೆ ಎಂಬುದು ಗೊತ್ತಿರಬೇಕು. ನನ್ನ ಬದ್ಧತೆ, ಸಿದ್ಧಾಂತದ ಬಗ್ಗೆ ಗೊತ್ತಿಲ್ಲದೆ ಯಾರಾದರೂ ರಾಜಕೀಯ ಮಾಡಿದರೆ ಅದು ಅವರ ಇಚ್ಛೆ’

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಚಿನಕುರುಳಿ ಪ್ರಕಾಶ್ ಶೆಟ್ಟಿ



ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಪ್ರದೇಶ’ದಲ್ಲಿ (ಬಿಬಿಎಂಪಿ) ಬೃಹತ್ ಯೋಜನೆಗಳು ಹಾಗೂ ರಚನೆಯಾಗಲಿರುವ ಐದು ನಗರ ಪಾಲಿಕೆಗಳಿಗೆ ಹಣಕಾಸು ಹಂಚಿಕೆ ಮಾಡುವ ಅಧಿಕಾರವುಳ್ಳ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ವನ್ನು (ಜಿಬಿಎ) ರಚಿಸಿ, ನಗರಾಭಿವೃದ್ಧಿ ಇಲಾಖೆ ಮಂಗಳವಾರ ಅಧಿಸೂಚನೆ ಹೊರಡಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಬಿಎ ಅಧ್ಯಕ್ಷರಾಗಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯನ್ನು ‘ಗ್ರೇಟರ್ ಬೆಂಗಳೂರು ಪ್ರದೇಶ’ ಎಂದು ಹೆಸರಿಸಿ, ‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ’ಯನ್ನು 2025ರ ಮೇ 15ರಂದು ಜಾರಿ ಮಾಡಲಾಗಿತ್ತು. ಅಂದಿನಿಂದ ನಾಲ್ಕು ತಿಂಗಳಲ್ಲಿ ಜಿಬಿಎ ರಚನೆಯಾಗಬೇಕಿತ್ತು.

ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜಿಬಿಎಗೆ ಉಪಾಧ್ಯಕ್ಷರಾಗಿದ್ದಾರೆ. ಬಿಬಿಎಂಪಿಯ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಅವರಿಗೆ ಜಿಬಿಎ ಮುಖ್ಯ ಆಯುಕ್ತರ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಲಾಗಿದ್ದು, ಅವರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರದೇಶ ವ್ಯಾಪ್ತಿಯ ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ ಸದಸ್ಯರು ಜಿಬಿಎಗೆ ಪದನಿಮಿತ್ತ ಸದಸ್ಯರಾಗಿದ್ದಾರೆ. ಬಿಡಿಎ, ಬೆಸ್ಕಾಂ, ಜಲಮಂಡಳಿ, ನಗರ ಪೊಲೀಸ್, ಬಿಎಂಟಿಸಿ ಸೇರಿದಂತೆ ವಿವಿಧ ಇಲಾಖೆಗಳ ಮುಖ್ಯಸ್ಥರೂ ಸೇರಿ ಒಟ್ಟು 72 ಮಂದಿಯನ್ನು ಪದ ನಿಮಿತ್ತ ಸದಸ್ಯರನ್ನಾಗಿ ನೇಮಿಸಿ, ಆದೇಶಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲೇ ಐದು ನಗರ ಪಾಲಿಕೆಗಳನ್ನು ರಚಿಸಿ, ಜುಲೈ 19ರಂದು ಕರಡು ಅಧಿಸೂಚನೆ ಹೊರಡಿಸಲಾಗಿದ್ದು, ಸೆಪ್ಟೆಂಬರ್ 2ರಂದು ನಗರ ಪಾಲಿಕೆಗಳ ಗಡಿಯ ಅಂತಿಮ ಅಧಿಸೂಚನೆ ಹೊರಬೀಳಲಿದೆ. ನಂತರ ಬಿಬಿಎಂಪಿ ಅಸ್ತಿತ್ವ ಕಳೆದುಕೊಳ್ಳಲಿದೆ. ನಂತರ ವಾರ್ಡ್ ಪುನರ್ ವಿಂಗಡಣೆ ಕಾರ್ಯ ಆರಂಭವಾಗಲಿದೆ.

ತಿಮರೋಡಿ ಮನೆಯಲ್ಲಿ ಮಹಜರು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ), ಉಜಿರೆ ಬಳಿಯ, ಮಹೇಶ್ ಶೆಟ್ಟಿ ತಿಮರೋಡಿ ಅವರ ಮನೆಯಲ್ಲಿ ಮಂಗಳವಾರ ಮಹಜರು ನಡೆಸಿತು.



ಮಹೇಶ್ ಶೆಟ್ಟಿ

ವಿಧಿ ವಿಜ್ಞಾನ ತಜ್ಞರು ಹಾಗೂ ಸಾಕ್ಷಿದೂರುದಾರ ಸಹ ಎಸ್‌ಐಟಿ ಅಧಿಕಾರಿಗಳ ಜೊತೆಗೆ ತಿಮರೋಡಿ ಅವರ ಮನೆಗೆ ಬೆಳಿಗ್ಗೆ 9 ಗಂಟೆ ಸುಮಾರಿಗೆ ತೆರಳಿದರು. ಅಲ್ಲಿ ಸಾಕ್ಷಿ ದೂರುದಾರನನ್ನು ತಡರಾತ್ರಿಯವರೆಗೂ ವಿಚಾರಣೆಗೆ ಒಳಪಡಿಸಿದರು.

‘ಮಹೇಶ್ ಶೆಟ್ಟಿ ಮನೆಯಲ್ಲಿ ಸಾಕ್ಷಿ ದೂರುದಾರ ಕೆಲ ಸಮಯ ಉಳಿದುಕೊಂಡಿದ್ದರು. ಆ ಸಂದರ್ಭದಲ್ಲಿ ನಡೆದ ಕೆಲ ವಿದ್ಯಮಾನಗಳ ಬಗ್ಗೆ ಅಧಿಕಾರಿಗಳು ಮಂಗಳವಾರ ಅವರಿಂದ ಮಾಹಿತಿ ಕಲೆಹಾಕಿದರು. ಈ ಬಗ್ಗೆ ಹೇಳಿಕೆ ದಾಖಲಿಸಿಕೊಂಡರು’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಮೃತದೇಹ ಹೂಳುವುದಕ್ಕೆ ಸಂಬಂಧಿಸಿ ಸಾಕ್ಷಿ ದೂರುದಾರ ವಿಚಾರಣೆ ವೇಳೆ ಹಲವರ ಹೆಸರು ತಿಳಿಸಿದ್ದು, ಪುರಾವೆ ಲಭ್ಯವಾದರೆ ಅವರನ್ನು ವಿಚಾರಣೆಗೆ ಒಳಪಡಿಸಲು ಎಸ್‌ಐಟಿ ಮುಂದಾಗಿದೆ. ಈ ಹಿಂದೆ ಧರ್ಮಸ್ಥಳ ಗ್ರಾಮದಲ್ಲಿ ಸಿಕ್ಕಿದ್ದ ಗುರುತುಪತ್ತೆಯಾಗದ ಮೃತದೇಹಗಳ ವಿಲೇವಾರಿ ಸಂದರ್ಭದಲ್ಲಿ ಹಾಜರಿದ್ದವರಿಂದಲೂ ಎಸ್‌ಐಟಿ ಹೇಳಿಕೆ ದಾಖಲಿಸಿಕೊಂಡಿದೆ ಎಂದು ಗೊತ್ತಾಗಿದೆ. 4A

ಸುಜಾತಾ ಭಟ್ ಎಸ್‌ಐಟಿ ಎದುರು ಹಾಜರು

‘ಮಗಳು ಅನನ್ಯಾ ಭಟ್ ಧರ್ಮಸ್ಥಳಕ್ಕೆ ತೆರಳಿದ್ದ ವೇಳೆ ನಾಪತ್ತೆ ಆಗಿದ್ದಾಳೆ’ ಎಂದು ದೂರು ನೀಡಿದ್ದ ಸುಜಾತಾ ಭಟ್ ವಿಶೇಷ ತನಿಖಾ ತಂಡದ ಎದುರು ವಿಚಾರಣೆಗೆ ಹಾಜರಾದರು. ಬೆಳಿಗ್ಗೆಯಿಂದ ರಾತ್ರಿವರೆಗೆ ಎಸ್‌ಐಟಿ ಕಚೇರಿಯಲ್ಲೇ ಇದ್ದರು. ‘ಮಗಳು ನಾಪತ್ತೆಯಾದ ಬಗ್ಗೆ ಸುಜಾತಾ ಭಟ್ ನೀಡಿದ್ದ ದೂರಿನ ಕುರಿತು ಆಕೆಯಿಂದ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

68% ಮಕ್ಕಳು ಆರೋಗ್ಯಕರ ತೂಕ ಹೊಂದಿದ್ದಾರೆ. ಆದರೆ, 32% ಮಕ್ಕಳು ಇದುವರೆಗೂ ಹಸಿವು ಅಥವಾ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಈ ವ್ಯತ್ಯಾಸ ಸರಿದೂಗಿಸಲು ನೆರವಾಗಿರಿ.



ಇಂಡಿಯಾ ಗೇಟ್ ಸಂಸ್ಥೆಯು, ತನ್ನ ಗ್ರೈನ್ಸ್ ಆಫ್ ಹೋಪ್ ಎಂಬ ಉಪಕ್ರಮದ ಮೂಲಕ ಹಲವಾರು ತಟ್ಟೆಗಳಲ್ಲಿ ಆಹಾರ ಉಣಬಡಿಸುತಿದ್ದು, ಇದೊಂದು ಎಂದಿಗೂ ಮುಗಿಯದ ಪಯಣವಾಗಿದೆ. ನಿಮ್ಮ ಸಹಕಾರ ಲಭಿಸಿದರೆ, ಹಸಿವಿನಲ್ಲೇ ನಿದ್ರೆಗೆ ಜಾರುತ್ತಿರುವ ಇನ್ನೂ ಹೆಚ್ಚು ಮಕ್ಕಳಿಗೆ ನಾವು ಉಣಬಡಿಸಬಲ್ಲೆವು. ನಮ್ಮ ವಿಡಿಯೋ ಶೇರ್ ಮಾಡಿರಿ, ನೀವು ಶೇರ್ ಮಾಡುವ ಪ್ರತಿ ವಿಡಿಯೋಗೂ ಹಸಿವಿನಲ್ಲಿರುವ ಒಬ್ಬ ಮಗುವಿಗೆ ಒಂದು ಭೋಜನ ಪೂರೈಸುತ್ತೇವೆ. ನಿಮ್ಮ ಈ ಒಂದು ಸರಳ ಕಾರ್ಯದಿಂದಾಗಿ ಭಾರಿ ಬದಲಾವಣೆ ಉಂಟಾಗುತ್ತದೆ, #ಫ್ರೀಡಂಫ್ರಂಹಂಗರ್ ಎಂಬ ಸಂತೋಷವನ್ನು ಭವಿಷ್ಯದಲ್ಲಿ ಪ್ರತಿಯೊಬ್ಬ ಮಗುವಿಗೂ ತಲುಪಿಸುವಂತೆ ನಮ್ಮನ್ನು ಪ್ರೇರೇಪಿಸಬಲ್ಲದು.

1 ಶೇರ್ = 1 ಭೋಜನ

WORLD'S NO.1 INDIA GATE PURE BASMATI RICE | GRAINS OF HOPE

#ಫ್ರೀಡಂಫ್ರಂಹಂಗರ್

ಇಂಡಿಯಾ ಗೇಟ್‌ನ ಉಪಕ್ರಮ

ನೆರವು ನೀಡಲು ಸ್ಕ್ಯಾನ್ ಮಾಡಿ

www.indiagategrainsofhope.com

*Niti Aayog 'Transforming Child Nutrition' Report, 2023

ಹವಾಮಾನ ಮುನ್ಸೂಚನೆ: ನಗರದಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ

ಒಕ್ಕಲೆಬ್ಬಿಸುವ ಕ್ರಮಕ್ಕೆ ಆಕ್ರೋಶ

ಬೆಂಗಳೂರು: ಕಾಡುಗೋಡಿಯ ದಿನ್ನೂರು ಗ್ರಾಮದಲ್ಲಿ ನೆಲಸಿರುವ ದಲಿತ ರೈತರನ್ನು ಒಕ್ಕಲೆಬ್ಬಿಸುವ ಘಟನೆ ಖಂಡಿಸಿ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ಬಿಕ್ಲು ಶಿವ ಹತ್ಯೆ: ಆರೋಪಿ ಜಗ್ಗನ ಬಂಧನ

ದೆಹಲಿ ವಿಮಾನ ನಿಲ್ದಾಣದಲ್ಲಿ ಸಿಐಡಿ ಪೊಲೀಸರ ಕಾರ್ಯಾಚರಣೆ
● ಚೆನ್ನೈ ಮೂಲಕ ದುಬೈಗೆ ಪರಾರಿಯಾಗಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದ ಮೊದಲನೇ ಆರೋಪಿ ಜಗದೀಶ್ ಅಲಿಯಾಸ್ ಜಗ್ಗನನ್ನು ತಿಂಗಳ ಬಳಿಕ ಸಿಐಡಿ ಪೊಲೀಸರು ಬಂಧಿಸಿದ್ದಾರೆ. ಕೃತ್ಯ ಎಸಗಿದ ಬಳಿಕ ಜಗ್ಗ ವಿದೇಶದಲ್ಲಿ ತಲೆಮರೆಸಿಕೊಂಡಿದ್ದ.

ಆರೋಪಿ ಸೆರೆಗೆ ಸಿಐಡಿ ಪೊಲೀಸರು ಲುಕ್‌ಔಟ್ ನೋಟಿಸ್ ಜಾರಿ ಮಾಡಿದ್ದರು. ದೆಹಲಿ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದು ಬಂಧಿಸಿದ್ದಾರೆ. ಸಿಐಡಿ ಎಸ್ಪಿ ವೆಂಕಟೇಶ್ ಅವರ ನೇತೃತ್ವದ ತಂಡವು ಕಾರ್ಯಾಚರಣೆ ನಡೆಸಿತ್ತು.

ಜುಲೈ 15ರಂದು ಭಾರತಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಿಕ್ಲು ಶಿವನ ಹತ್ಯೆಯಾದ ನಂತರ ಪ್ರಕರಣದ ಮೊದಲನೇ ಆರೋಪಿ ಜಗದೀಶ್ ತಲೆಮರೆಸಿಕೊಂಡಿದ್ದ. ಆತನ ಬಂಧನಕ್ಕೆ ವಿಶೇಷ ತಂಡಗಳನ್ನು ರಚಿಸಲಾಗಿತ್ತು. ವಿಶೇಷ ತಂಡಗಳು ತಮಿಳುನಾಡು, ಆಂಧ್ರಪ್ರದೇಶ, ಕೇರಳ ಸೇರಿದಂತೆ ಹಲವು ಕಡೆಗಳಲ್ಲಿ ಶೋಧ ನಡೆಸುತ್ತಿದ್ದರೂ ಆತನ ಸುಳಿವು ಸಿಕ್ಕಿರಲಿಲ್ಲ. ಜಗ್ಗ ಚೆನ್ನೈ ಮೂಲಕ ದುಬೈಗೆ ಪರಾರಿ

ಮುಖ್ಯಾಂಶಗಳು
- ಭಾರತಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹತ್ಯೆ
- ಬಂಧನಕ್ಕಾಗಿ ವಿಶೇಷ ತಂಡಗಳ ರಚನೆ

ಆಗಿದ್ದಾನೆ ಎಂಬ ಮಾಹಿತಿ ಲಭ್ಯವಾಗಿತ್ತು.

ಆರೋಪಿಯು ದುಬೈ, ಮಲೇಷ್ಯಾ, ಶ್ರೀಲಂಕಾ, ಇಂಡೊನೇಷ್ಯಾ ಮತ್ತು ಥಾಯ್ಲೆಂಡ್‌ನಲ್ಲಿ ಸುತ್ತಾಟ ನಡೆಸಿದ್ದಾನೆ ಎಂಬುದು ಗೊತ್ತಾಗಿದೆ.

ಬಿಕ್ಲು ಶಿವು ಕೊಲೆ ಪ್ರಕರಣದ ಐದನೇ ಆರೋಪಿ, ಕೆಆರ್ ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರನ್ನು ಭಾರತಿನಗರ ಠಾಣೆಯ ಪೊಲೀಸರು ಎರಡು ಬಾರಿ ವಿಚಾರಣೆ ನಡೆಸಿದ್ದರು. ನಂತರ, ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರವು ಸಿಐಡಿಗೆ ವಹಿಸಿತ್ತು.

‘ಪ್ರಕರಣದ ಸಂಬಂಧ ಬೈರತಿ ಬಸವರಾಜ್ ಅವರ ವಿಚಾರಣೆಯನ್ನು ಈಗಾಗಲೇ ನಡೆಸಲಾಗಿದೆ. ಜಗ್ಗನ ಬಂಧನ ಆಗಿರುವುದರಿಂದ ಮತ್ತೊಮ್ಮೆ ಶಾಸಕರಿಗೆ ನೋಟಿಸ್ ಜಾರಿ ವಿಚಾರಣೆ ನಡೆಸುವ ಸಾಧ್ಯತೆಯಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಜುಲೈ 15ರಂದು ತಡರಾತ್ರಿ



ದೆಹಲಿ ವಿಮಾನ ನಿಲ್ದಾಣದಲ್ಲಿ ಆರೋಪಿಯನ್ನು ಬಂಧಿಸಿದ ಸಿಐಡಿ

ಹಲಸೂರು ಕೆರೆ ಬಳಿ ರೌಡಿ ಶಿವಪ್ರಕಾಶ್ ಅವರ ಮೇಲೆ ದುಷ್ಕರ್ಮಿಗಳು ದಾಳಿ ಮಾಡಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿ ಆಗಿದ್ದರು. ಕೊಲೆ ಪ್ರಕರಣದ ಸಂಬಂಧ 16 ಆರೋಪಿಗಳನ್ನು ಬಂಧಿಸಲಾಗಿತ್ತು.

ಬಿಕ್ಲು ಶಿವನ ಕೊಲೆಯಾದ ದಿನವೇ ಆರೋಪಿ ಜಗದೀಶ್ ನಗರವನ್ನು ಬಿಟ್ಟು ಪರಾರಿಯಾಗಿದ್ದ. ಆತನ ಚಲನವಲನ ಟೋಲ್‌ವೊಂದರಲ್ಲಿ ಅಳವಡಿಸಿದ್ದ ಸಿ.ಸಿ. ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

ಈ ಪ್ರಕರಣದ ಆರೋಪಿಗಳಾದ ಕಿರಣ್, ಮದನ್, ಸ್ಯಾಮ್ಯುಯಲ್, ಪ್ರದೀಪ್, ವಿಮಲ್, ಅನಿಲ್, ಕೋಲಾರ ಜಿಲ್ಲೆ ಮಾಲೂರಿನ ಅವಿನಾಶ್ ದೀನಹಳ್ಳಿ, ಸುದರ್ಶನ್, ಮುರುಗೇಶ್ ಹಾಗೂ ನರಸಿಂಹ ಸೇರಿದಂತೆ 16 ಮಂದಿಯನ್ನು ಬಂಧಿಸಲಾಗಿದೆ.

83 ಪ್ರಕರಣ ದಾಖಲಾಗಿದ್ದ ನಾಲ್ವರ ಬಂಧನ

ಬೆಂಗಳೂರು: ಐಷಾರಾಮಿ ಜೀವನಕ್ಕಾಗಿ ಬೀಗ ಹಾಕಿದ ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಗೋವಿಂದರಾಜನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಎಚ್.ಡಿ.ಕೋಟೆ ನಿವಾಸಿ ಮಹಮ್ಮದ್ ಫಯಾಜ್(59), ಮಹಮ್ಮದ್ ಫರಾಜ್(35), ಚಿಕ್ಕಮಗಳೂರಿನ ಭೂದೇಶ್(52), ಆರ್.ಟಿ.ನಗರ ನಿವಾಸಿ ಪ್ರಸಾದ್(49) ಬಂಧಿತರು. ಆರೋಪಿಗಳಿಂದ ₹44.24 ಲಕ್ಷ ಮೌಲ್ಯದ 475 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

ಆರೋಪಿಗಳ ಪೈಕಿ ಮಹಮ್ಮದ್ ಫಯಾಜ್ ವಿರುದ್ಧ 25 ಪ್ರಕರಣಗಳು, ಫರಾಜ್ ವಿರುದ್ಧ 35 ಪ್ರಕರಣ, ಭೂದೇಶ್ ವಿರುದ್ಧ ಐದು ಪ್ರಕರಣ, ಪ್ರಸಾದ್ ವಿರುದ್ಧ 18 ಪ್ರಕರಣಗಳು ದಾಖಲಾಗಿವೆ.

ಆರೋಪಿಗಳು ಇತ್ತೀಚೆಗೆ ಠಾಣೆ ವ್ಯಾಪ್ತಿಯ ಮೂಡಲಪಾಳ್ಯ ನಿವಾಸಿ ಬಸವರಾಜು ಎಂಬುವವರ ಮನೆಯ ಬೀಗ ಒಡೆದ ಕಳ್ಳತನ ಮಾಡಿ ಪರಾರಿಯಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ.

ಬಂಧಿತರು ಕೆಲವು ವರ್ಷಗಳಿಂದ ಮನೆ ಕಳ್ಳತನ, ಬ್ಯಾಂಕ್, ಜ್ಯುವೆಲ್ಲರಿ ಶಾಪ್ ದರೋಡೆ ಮಾಡುತ್ತಿದ್ದರು. ಬೀದರ್, ಹುಬ್ಬಳ್ಳಿ, ಚಿತ್ರದುರ್ಗ, ಬೆಂಗಳೂರು, ಹಾಸನ, ಮಂಡ್ಯ ಸೇರಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬ್ಯಾಂಕ್ ಹಾಗೂ ಜ್ಯುವೆಲ್ಲರಿ ಶಾಪ್‌ಗಳಲ್ಲಿ, ಮನೆಕಳ್ಳತನ ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಕಲ್ಯಾಣ ಮಂಟಪಕ್ಕೆ ನುಗ್ಗಿ ಕಳ್ಳತನ: ಆರೋಪಿ ಸೆರೆ

ಬೆಂಗಳೂರು: ಮದುವೆ ಸಮಾರಂಭ ನಡೆಯುತ್ತಿದ್ದ ವೇಳೆ ಕಲ್ಯಾಣ ಮಂಟಪಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಕಳ್ಳನನ್ನು ಮಾಗಡಿ ರೋಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಜಿಲ್ಲೆಯ ಗುಬ್ಬಿಯ ಪರಮೇಶ್ ಬಂಧಿತ ಆರೋಪಿ.

ಆರೋಪಿಯಿಂದ 400 ಗ್ರಾಂ ಚಿನ್ನಾಭರಣ, ₹91 ಸಾವಿರ ನಗದು ಸಹಿತ ₹36.91 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕಲ್ಯಾಣ ಮಂಟಪಗಳನ್ನೇ ಗುರಿಯಾಗಿಸಿ ಮದುವೆ ಸಮಾರಂಭಗಳಿಗೆ ಅತಿಥಿಯ ಸೋಗಿನಲ್ಲಿ ಆರೋಪಿ ತೆರಳುತ್ತಿದ್ದ. ಮಾಂಗಲ್ಯ ಧಾರಣೆ ಸಂದರ್ಭದಲ್ಲಿ ವಧು, ವರನ ಕಡೆಯವರ ರೂಮ್‌ಗೆ ಹೋಗಿ ಚಿನ್ನಾಭರಣ, ನಗದು ದೋಚಿಕೊಂಡು ಪರಾರಿಯಾಗುತ್ತಿದ್ದ. ನಂತರ, ಕದ್ದ ಚಿನ್ನಾಭರಣಗಳನ್ನು ಮಾರಾಟ ಮಾಡಿ ಮೋಜು ಮಸ್ತಿಯಲ್ಲಿ ತೊಡಗುತ್ತಿದ್ದ. ಮಾಗಡಿ ರಸ್ತೆ, ಬಸವನಗುಡಿ, ಕಾಮಾಕ್ಷಿಪಾಳ್ಯ, ಕೆಂಗೇರಿ ಠಾಣೆಗಳ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿದ್ದ ಎಂದು ಪೊಲೀಸರು ಹೇಳಿದರು.

ಮಾಗಡಿ ರಸ್ತೆಯ ಇಂಡಸ್ಟ್ರಿಯಲ್ ಟೌನ್‌ನಲ್ಲಿರುವ ಕಮ್ಯುನಿಟಿ ಸೆಂಟರ್‌ನ ರೂಮ್‌ಗೆ ನುಗ್ಗಿದ್ದ ಆರೋಪಿ, ₹31 ಸಾವಿರ ನಗದನ್ನು ಕದ್ದು ಪರಾರಿಯಾಗಿದ್ದ ಎಂದು ಪೊಲೀಸರು ತಿಳಿಸಿದರು.



ಪರಮೇಶ್

ಮೂವರು ಆರೋಪಿಗಳ ಬಂಧಿಸಿದ ಕಲಾಸಿಪಾಳ್ಯ ಠಾಣೆ ಪೊಲೀಸರು

ಕೇಸರಿ ಶಾಲು ತೆಗೆಯುವಂತೆ ಸೂಚಿಸಿ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ರಾವೆಲ್ ಏಜೆನ್ಸಿ ಉದ್ಯೋಗಿಗಳ ಮೇಲೆ ಹಲ್ಲೆ ನಡೆಸಿ ನಿಂದಿಸಿದ್ದ ಆರೋಪದ ಅಡಿ ಮೂವರು ಆರೋಪಿಗಳನ್ನು ಕಲಾಸಿಪಾಳ್ಯ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಗುರಪ್ಪನಪಾಳ್ಯದ ಅಜೀಜ್ ಖಾನ್ (37), ನಾಗವಾರದ ತಬ್ರೇಜ್ (30) ಹಾಗೂ ಬಿದರಹಳ್ಳಿ ಬನಶಂಕರಿ ಎರಡನೇ ಹಂತದ ಇಮ್ರಾನ್ ಖಾನ್ (35) ಬಂಧಿತರು.

ರಾಯಲ್ ಟ್ರಾವೆಲ್ಸ್ ಕಂಪನಿಯ ಲೋಡಿಂಗ್ ಹಾಗೂ ಅನ್ ಲೋಡಿಂಗ್ ವಿಭಾಗದ ಉಸ್ತುವಾರಿ ಹರಿಕೃಷ್ಣ ಅವರು ನೀಡಿದ ದೂರು ಆಧರಿಸಿ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ



ಅಜೀಜ್ ಖಾನ್



ಇಮ್ರಾನ್ ಖಾನ್



ತಬ್ರೇಜ್

‘ದೂರುದಾರ ಹರಿಕೃಷ್ಣ ಹಾಗೂ ಬಿಹಾರದ ಸುರೇಂದ್ರ ಕುಮಾರ್ ಅವರು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಆರೋಪಿಗಳು ಬಂದಿದ್ದರು. ‘ನೀನು ಏಕೆ ಕೇಸರು ಶಾಲು ಹಾಕಿಕೊಂಡು ಕೆಲಸ ಮಾಡುತ್ತಿದ್ದೀಯಾ’ ಎಂಬುದಾಗಿ ಸುರೇಂದ್ರ ಕುಮಾರ್ ಅವರನ್ನು ಆರೋಪಿಗಳು ಪ್ರಶ್ನಿಸಿ ನಿಂದಿಸಿ ಹಲ್ಲೆ ನಡೆಸಿದ್ದರು’ ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ನಾನು ಮಧ್ಯಪ್ರವೇಶಿಸಿದಾಗ, ಆರೋಪಿಗಳು ನನ್ನನ್ನು ನಿಂದಿಸಿದರು. ನನ್ನ ಅಂಗಿಯನ್ನು ಹರಿದುಹಾಕಿ ಹಲ್ಲೆ ನಡೆಸಿದರು. ಕಾರ್ಮಿಕರಿಗೆ ಕೇಸರಿ ಶಾಲು ಧರಿಸಲು ಏಕೆ ಅವಕಾಶ ನೀಡಲಾಗಿದೆ ಎಂದು ಪ್ರಶ್ನಿಸಿದರು. ಶಾಲು ತೆಗೆದುಹಾಕಿ ಹೋಗುವಂತೆ ಬೆದರಿಕೆ ಹಾಕಿದರು’ ಎಂಬುದಾಗಿ ಹರಿಕೃಷ್ಣ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮೂವರನ್ನು ಬಂಧಿಸಲಾಗಿದ್ದು, ತನಿಖೆ ನಡೆಯುತ್ತಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆಗಸ್ಟ್ 24ರಂದು ಕಲಾಸಿಪಾಳ್ಯ ಬಿಎಂಟಿಸಿ ಬಸ್ ನಿಲ್ದಾಣದ ಎದುರಿನ ರಾಯಲ್ ಟ್ರಾವೆಲ್ ಕಚೇರಿ ಬಳಿ ಘಟನೆ ನಡೆದಿ ದೆ ಎಂದು ಪೊಲೀಸರು ತಿಳಿಸಿದರು. ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 115(2) (ಸ್ವಯಂ ಪ್ರೇರಣೆಯಿಂದ ನೋವು ಉಂಟು ಮಾಡುವುದು), 302 (ಯಾವುದೇ ವ್ಯಕ್ತಿಯ ಧಾರ್ಮಿಕ ಭಾವನೆಗಳನ್ನು ಗಾಸಿಗೊಳಿಸುವ ಉದ್ದೇಶದಿಂದ ನಿಂದನೆ), 352 (ಉದ್ದೇಶಪೂರ್ವಕ ಅವಮಾನ) ಮತ್ತು 3(5) (ಸಾಮಾನ್ಯ ಉದ್ದೇಶ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಕಸ ತೆರವು ಮಾಡಿದ ಅಧಿಕಾರಿಗಳು



ಪೌರ ಕಾರ್ಮಿಕರೊಂದಿಗೆ ಬಂದು ಸ್ವಚ್ಛಗೊಳಿಸಿದ ಪಂಚಾಯತ್ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಿದರಹಳ್ಳಿಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಸ್ತೆ ಮತ್ತು ಬೀದಿ ಬದಿಗಳಲ್ಲಿ ಮಂಗಳವಾರ ಪೌರ ಕಾರ್ಮಿಕರು ಸ್ವಚ್ಛತಾ ಕಾರ್ಯ ಕೈಗೊಂಡರು.

‘ಪ್ರಜಾವಾಣಿ’ ‘ಕಸ ಎಲ್ಲೆಂದರಲ್ಲಿ: ಇದು ಬಿದರಹಳ್ಳಿ’ ಎಂಬ ವರದಿ ಪ್ರಕಟಿಸಿತ್ತು. ವರದಿಗೆ ಸ್ಪಂದಿಸಿದ ಅಧಿಕಾರಿಗಳು ಸ್ವಚ್ಛತಾ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ರಸ್ತೆ ಬದಿ ತ್ಯಾಜ್ಯವನ್ನು ಟ್ರ್ಯಾಕ್ಟರ್‌ನಲ್ಲಿ ಸಾಗಿಸಿದರು.

‘ಬಿದರಹಳ್ಳಿಯಿಂದ ಕಿತ್ತಗನೂರು ಸಂಪರ್ಕ ಮುಖ್ಯರಸ್ತೆಯ ಅಕ್ಕಪಕ್ಕದ ಜಮೀನುಗಳ ಮಾಲೀಕರು ವ್ಯಾಜ್ಯ ಹೂಡಿದ್ದಾರೆ. ವ್ಯಾಜ್ಯದಿಂದಾಗಿ ಜಮೀನುಗಳು ಖಾಲಿಯಾಗಿ ಬಿದ್ದಿವೆ. ಇಲ್ಲಿ ಜನವಸತಿ ಇಲ್ಲ. ಕೆಲ ಬಡಾವಣೆಗಳಲ್ಲಿ ಯಾರು ಇಲ್ಲದ ವೇಳೆಯಲ್ಲಿ ಖಾಲಿ ಜಾಗದ ರಸ್ತೆ ಪಕ್ಕದಲ್ಲಿ ಕಸ ಸುರಿದು ಹೋಗುತ್ತಾರೆ’ ಎಂದು ಬಿದರಹಳ್ಳಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಎನ್.ಮುನಿರಾಜು ಹೇಳಿದರು.



ನಂದನ ಪ್ಯಾಲೇಸ್
BENGALURU: 080 46 13 11 11
CHENNAI: +91 89255 27979
@nandhanapalace
www.nandhanarestaurants.com
ಬೆಂಗಳೂರು ಮತ್ತು ಚೆನ್ನೈನಾದ್ಯಂತ ಶಾಖೆಗಳನ್ನು ಹೊಂದಿದ್ದೇವೆ
ರೆಸ್ಟೋರೆಂಟ್ | ಬ್ಯಾಂಕ್ವೆಟ್ | ಟೇಕ್‌ಅವೇ | ಹೋಮ್ ಡೆಲಿವರಿ | ಕ್ಲೌಡ್ ಕಿಚನ್



• 10 am to 8 pm • Open All Days • Master / Visa Card Accepted
INNERWEAR • LEISUREWEAR • ACTIVEWEAR • KIDSWEAR • SOCKS

Venues In Bangalore

Vimanapura Post: HAL Kalyana Mantapa, 629, HAL Old Township, Near HAL Old Airport, Bangalore.
Infantry Road: Safina Plaza
Jayanagar: Srinivasa Sagar Kalyan Mahal, 2nd block, (Near Ashoka Pillar)
Banshankari: Sri Hari Kalyana Mantap, 30th Main, B.S.K. 3rd Stage, Near K.I.M.S. Hospital.
Bannerghatta: Billava Bhavana, No. 63, Opp. Meenakshi Temple.
R. R Nagar: Vasavi Mahal Kalyana Mantapa, Next To Reliance Digital,Ideal Homes I Phase.
Vijay Nagar: Five O Gallery 17th Cross, M.C. Road, Near Vijay Nagar Bus Stop.
Malleswaram: The Canara Union, No.42, 8th Main, Canara Union Road.
Koramangala: Apoorva International, #35A,Raheja Arcade, Opp Star Box, Bangalore -95
Basavanagudi: Amolak Apparels, 7/3, 1st Floor, Opp Karnataka Bank, Bangaluru 560004

Org. by: Surya Agency Pvt. Ltd.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

OUTREACH Association of Volunteers for Rural Development, Bengaluru
Applications invited for the following contractual post:
DEPUTY DIRECTOR
Project handling, proposal writing, fund raising, donor communication, and compliance.
Apply with CV to outreach@outreachindia.org by 19.09.2025 (5:00 PM).
For details see website www.outreachindia.org

M.S.RAMAIAH FOUNDATION (MSRF Knowledge for all)
No. 23, M S Ramaiah Road, Gokula, Bangalore 560054
Invites applications from experienced individuals for the posts of
•HEAD - ADMISSIONS
•TELECALLERS
MSRF is a trust that runs educational Institutions in the areas of Management Studies, Business Studies and Legal Studies.
The Institutes under the aegis of MSRF are:
Ramaiah Institute of Management Studies (RIMS)
Ramaiah Institute of Business Studies (RIBS)
Ramaiah Institute of Legal Studies (RILS)
The Head - Admissions will be expected to motivate and lead a competent team to drive admissions for PGDM, BA (Journalism), BBA, BCom, BCA, BA-LLB and BBA-LLB courses.
The Assistant Manager - Admissions will assist the Head - Admissions in implementing strategic action plans.
Telecallers will be responsible to call prospective students and work towards closure.
Salary will not be a constraint for deserving candidates and will be commensurate with experience.
Interested candidates may email their applications/CV to director@rimsbangalore.in within 7 days.

JOBS CORNER

ಹಿರಿಯ ನಾಗರಿಕರಿಗಾಗಿ ಉದ್ಯೋಗ ಮೇಳ
ಹೆಚ್ಚು ಅನುಭವ. ಹೆಚ್ಚು ನಂಬಿಕೆ. ಇರುವ ಹಿರಿಯರನ್ನು ನೇಮಿಸಿ.
ಕೌಶಲ್ಯಯುತ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಉದ್ಯೋಗದಾತರನ್ನು ಆಹ್ವಾನಿಸುತ್ತಿದ್ದೇವೆ.
Jobs 60+
ಯಾಕೆ ಹಿರಿಯರನ್ನು ನೇಮಿಸಬೇಕು?
▸ ಶಾರೀರಿಕವಾಗಿ ಸದೃಢರಾಗಿರುವವರು (55 ರಿಂದ 70 ವಯಸ್ಸಿನವರು)
▸ ವ್ಯಾಪಕ ಅನುಭವ ಮತ್ತು ಪರಿಣಿತಿ
▸ ವಿಶ್ವಾಸಾರ್ಹ ಮತ್ತು ನಿಷ್ಠಾವಂತ ಉದ್ಯೋಗಿಗಳು
▸ ಕಡಿಮೆ ವೆಚ್ಚದಲ್ಲಿ ಉತ್ತಮ ಮಾನವ ಸಂಪನ್ಮೂಲ
7 ಸೆಪ್ಟೆಂಬರ್ 2025
ಬೆಳಿಗ್ಗೆ 9 ರಿಂದ 3
ಸೆಂಟ್ ಜೋಸೆಫ್ ವಿಶ್ವವಿದ್ಯಾಲಯ, ಲ್ಯಾಂಗ್ ಫೋರ್ಡ್ ರಸ್ತೆ, ಬೆಂಗಳೂರು
www.nightingalesjobs60plus.com
jobs60plus@nightingaleseldercare.com
080 42426565 / +91 9243737214 / 8951441316
ನೋಂದಣಿ ಉಚಿತ
ನೈಟಿಂಗೇಲ್ ಎಂಪವರ್‌ಮೆಂಟ್ ಫೌಂಡೇಶನ್ ಹಾಗೂ ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್, ಸೆಂಟ್ ಜೋಸೆಫ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಲಾಗಿದೆ

General

REPUTED DISGNOSTICS at Tumkur Road required Marketing person, Receptionist and other Diagnostics staffs. Interested candidates call 63649-35735

REQUIRED IMMEDIATELY Communication Skilled MANAGERS, LADY EXECUTIVES. MARKETING EXECUTIVES. Good Salary. Walkin V&V GROUP, Behind IIMB, Bannerghatta Road: 99000-54462

Engg/ Production Technical

WANTED DIPLOMA/ B.E. Electrical Engineer Fresher or 3 Years Experience in Multistoried Building Electrification works.Contact-9845016736 Mail: seemaele@gmail.com

Multiple Vacancy

HOUSE KEEPING LADY/ BOY @ Seegehalli, Kadugodi and North Indian Lorry Driver @ Davanagere. 8971517825/ 9591672408.

RENTAL PROPERTIES

Accommodation Available

Flats

FOUR BEDROOM Fully AirConditioned Rs100000 monthly rent maintenance extra South Facing Vastu Whatsapp 98452-28595

REAL ESTATE SELLING

Residential/ Commercial

Hoskote

PLOT FOR IMMEDIATE SALE Location:Haraluru,Hoskote 6000sqft atRs.2500/sqft West facing Corner plot,5Km toHoskote Government hospital with BMTC accessCall: +91 9448011981

House

Malagala

MALAGALA, NAGARBHAVIBUILDING For Sale 15x40 - G+3 & Bachelor room on Terrace North facing East Entrance with Vasthu - 2 BHK in each floor 10 year old before Ring Road near Arwin School - BBMP “B” & E Khatha - Rs.1.15 Cr / Owner - M.N.Manjunatha Mobile No.9900058030

PERSONAL

Change of Name

CHANGE OF NAME
I, SARA SADAF SHARIFF, residing at No. 65, 3rd Cross, Akkamma Block, Dinnur Main Road, R.T. Nagar, Bengaluru-560032 have changed my name to SARA SADAF vide affidavit dated 19.08.2025 before notary T.C Thimmaraja, Bengaluru. Henceforth I shall be called SARA SADAF only

CHANGE OF NAME
I, FATEH MUHAMMED SHARIFF residing at No. 06, 2nd B Cross, Linden Street, Austin Town, Bengaluru-560047, have changed my name to FATEH MOHAMMED SHARIFF vide affidavit dated 26-08-2025 sworn before advocate and notary M. Narendran, Bengaluru. Henceforth I shall be called FATEH MOHAMMED SHARIFF only.

I NAGAJYOTHI PATNAM, Residing at B005, Wing1, Gopalan Aqua, Ambedkarnagar Road, Whitefield, Bangalore - 560066, have changed to New name NAGAJYOTHI DONIPARTHI PRASAD, vide affidavit dated 26/08/2025 before notary Veena J. Bangalore

CHANGE OF NAME
I, Motilal, residing at No. 109, Lakshman Rao Road, B.V.K. Iyenger Road Cross, Chickpet, Bengaluru-560053, have changed my name to MOTILAL P CHOUDRY vide affidavit dated 12.08.2025 before notary B. Chitra, Bengaluru. Henceforth I shall be called MOTILAL P CHOUDRY only.

EDUCATION
To Place your Classified Ads Contact: 9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD ಪ್ರಜಾವಾಣಿ
Wishing all our Readers & Advertisers a very Happy Gowri-Ganesha Festival



For Advertisement Bookings Contact:
080- 4555 7160 / 162 / 163 / 164

ಸ್ಥಾಪನೆ:1907
ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
ಕಛೇರಿ : 26678572 : 26600512 : 26609066. ಪ್ರಧಾನ ವ್ಯವಸ್ಥಾಪಕರು : 26617980
ಟೆಲಿಫ್ಯಾಕ್ಸ್ : (080) 26617980. E-mail : accounts@bccbl.co.in | Web : www.bccbl.co.in



119ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನೋಟೀಸು

ಬ್ಯಾಂಕಿನ ಎಲ್ಲಾ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ದಿನಾಂಕ : 31.03.2025 ಕ್ಕೆ ಮುಕ್ತಾಯಗೊಂಡ (2024-25ನೇ ಸಾಲಿನ) 119ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 14.09.2025ನೇ ಭಾನುವಾರ ಬೆಳಿಗ್ಗೆ: 10.00 ಗಂಟೆಗೆ ಸರಿಯಾಗಿ ಬ್ಯಾಂಕಿನ ಪ್ರಧಾನ ಕಛೇರಿ / ಆಡಳಿತ ಕಛೇರಿ : ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ರ ಆವರಣದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್ ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಾಡು ಮಾಡಲಾಗಿದೆ. ಮಾನ್ಯ ಸದಸ್ಯರುಗಳೆಲ್ಲರೂ ಸಕಾಲಕ್ಕೆ ಆಗಮಿಸಿ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ. ಈಗಾಗಲೇ ಸದಸ್ಯರ ವಿಳಾಸಗಳಿಗೆ ಸೂಚನಾ ಪತ್ರಗಳನ್ನು ಅಂಚೆ ಮೂಲಕ ಸಕಾಲದಲ್ಲಿ ಕಳುಹಿಸಲಾಗಿದೆ. ಒಂದು ವೇಳೆ ಸೂಚನಾ ಪತ್ರ ತಲುಪದೇ ಇದ್ದಲ್ಲಿ ಇದನ್ನೇ ಸೂಚನಾ ಪತ್ರ ಎಂದು ಪರಿಗಣಿಸಿ, ತಪ್ಪದೇ ಸಭೆಗೆ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ.

ಶ್ರೀ. ಆವಲಹಳ್ಳಿ ಚಂದ್ರಪ್ಪ. ಆರ್
ಅಧ್ಯಕ್ಷರು

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಮಂಜುನಾಥ.ಪಿ, ಬಿ.ಕಾಂ., ಎ.ಡಿ.ಸಿ.ಬಿ,
ಪ್ರಧಾನ ವ್ಯವಸ್ಥಾಪಕರು

ಸೂಚನೆ: ಸದಸ್ಯರನ್ನು, ಸರ್ವಸದಸ್ಯರ ಮಹಾಸಭೆಯಲ್ಲಿ ಸದಸ್ಯತ್ವದ ಕಾರ್ಡುಗಳ ಮೂಲಕ ಗುರುತಿಸಲಾಗುವುದರಿಂದ ಸದಸ್ಯರು ತಪ್ಪದೇ ತಮ್ಮ ಸದಸ್ಯತ್ವದ ಕಾರ್ಡು (Membership Identity Card) ಗಳನ್ನು ತರಬೇಕಾಗಿ ವಿನಂತಿ

ಕರ್ನಾಟಕ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಸದಸ್ಯತ್ವ ಸಂಖ್ಯೆ, ಷೇರು ಬಂಡವಾಳ, ಮೀಸಲು ನಿಧಿ ಮತ್ತು ಇತರೆ ನಿಧಿಗಳು, ಠೇವಣಿಗಳು, ಒಟ್ಟು ದುಡಿಯುವ ಬಂಡವಾಳ, ಸದಸ್ಯರುಗಳಿಗೆ ಸಾಲ ಸೌಲಭ್ಯ ನೀಡಿಕೆ, ಬ್ಯಾಂಕು ಹೂಡಿರುವ ಗುಂತಾಯಗಳು, ಒಟ್ಟು ವ್ಯವಹಾರ, ಲಾಭ ಗಳಿಕೆ, ಶೇಕಡ ಶೂನ್ಯದಲ್ಲಿ ನಿವ್ವಳ ಅನುತ್ಪಾದಕ ಸಾಲಗಳು, 'ಎ' ಆಡಿಟ್ ಶ್ರೇಣಿ ಹೀಗೆ ಎಲ್ಲಾ ವಿಷಯಗಳಲ್ಲಿ ನಂ.1 ಸ್ಥಾನದಲ್ಲಿ ಯಶಸ್ವಿಯಾಗಿ ಮುಂದುವರೆಯುತ್ತಿರುವ ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು-18 ತನ್ನ ಸದಸ್ಯರುಗಳಿಗೆ/ ಗ್ರಾಹಕರುಗಳಿಗೆ 2025ನೇ ವರ್ಷದ ಗೌರಿ ಗಣೇಶ ಹಬ್ಬದ ಶುಭಾಷಯಗಳನ್ನು ಕೋರುತ್ತೇವೆ.

ಬ್ಯಾಂಕಿನ ಸಂಕ್ಷಿಪ್ತ ಆರ್ಥಿಕ ವಿವರ (ದಿನಾಂಕ : 31.03,2025 ರಲ್ಲಿದ್ದಂತೆ)

1.	ಷೇರು ಬಂಡವಾಳ	ರೂ.	95,94,58,332
2.	ಮೀಸಲು ನಿಧಿ ಮತ್ತು ಇತರೆ ನಿಧಿಗಳು	ರೂ.	525,48,99,645
3.	ಠೇವಣಿಗಳು	ರೂ.	2158,88,87,919
4.	ದುಡಿಯುವ ಬಂಡವಾಳ	ರೂ.	2780,32,45,896
5.	ಸಾಲಗಳ ಸೌಲಭ್ಯ ನೀಡಿಕೆ	ರೂ.	1381,51,62,690
6.	ಗುಂತಾಯಗಳಲ್ಲಿ ಹೂಡಿಕೆ	ರೂ.	1235,08,56,790
7.	ನಿವ್ವಳ ಲಾಭ	ರೂ.	28,77,68,539
8.	ನಿವ್ವಳ ಅನುತ್ಪಾದಕ ಸಾಲ	ರೂ.	0%
9.	ಆಡಿಟ್ ಶ್ರೇಣಿ	ರೂ.	“A”
10.	CRAR	ರೂ.	24.71%
11.	ಡಿವಿಡೆಂಡ್ ಸೂಚಿಸಿರುವುದು (2024-25 ರ ಸಾಲಿಗೆ)	ರೂ.	ಶೇಕಡ 15 ರಂತೆ

ಉತ್ತಮ ಬ್ಯಾಂಕಿಂಗ್ ಸೇವೆ / ಬ್ಯಾಂಕಿಂಗ್ ವ್ಯವಹಾರದಲ್ಲಿ ಕನಿಷ್ಠ ಸೇವಾ ಶುಲ್ಕ / ಕಡಿಮೆ ಬಡ್ಡಿ ದರದಲ್ಲಿ ಒಡವೆ ಸಾಲ ಮತ್ತು ಇತರೆ ಸಾಲ ಸೌಲಭ್ಯ / ಠೇವಣಿಗಳ ಮೇಲೆ ಉತ್ತಮ ಬಡ್ಡಿದರ ಇತ್ಯಾದಿ ಸೌಲಭ್ಯ ಪಡೆಯಲು ನಮ್ಮೊಂದಿಗೆ ವ್ಯವಹರಿಸಿ.

‘ಗೌರಿ’ ಹಬ್ಬದ ಸಂಭ್ರಮ, ಗಣೇಶ ಪ್ರತಿಷ್ಠಾಪನೆಗೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರಿ ಹಬ್ಬವನ್ನು ಮಂಗಳವಾರ ಜನ ಸಂಭ್ರಮದಿಂದ ಆಚರಿಸಿದರು. ಬೆಳಿಗ್ಗೆಯಿಂದಲೇ ಮನೆ ಸ್ವಚ್ಛಗೊಳಿಸಿ, ಬಾಗಿಲು ತೊಳೆದು ಗೌರಿ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಿದರು. ಹೆಣ್ಣು ಮಕ್ಕಳು, ಅಕ್ಕಪಕ್ಕದವರು, ಸಂಬಂಧಿಕರಿಗೆ ಬಾಗಿನ ಅರ್ಪಿಸಿದರು. ಪರಸ್ಪರ ಹಬ್ಬದ ಶುಭಾಶಯ ಕೋರಿದರು.

ಗೌರಿ ಮೂರ್ತಿ, ಮೊರ, ಹೂವು, ಹಣ್ಣು, ಮಾವಿನ ಎಲೆ ಇತರೆ ಸಾಮಗ್ರಿಗಳನ್ನು ಒಳಗೊಂಡ ‘ಬಾಗಿನ’ವನ್ನು ವಿನಿಮಯ ಮಾಡಿಕೊಂಡರು. ಹಬ್ಬದ ಅಂಗವಾಗಿ ದೇವಾಲಯಗಳಲ್ಲಿ ಮಹಿಳೆಯರ ಸಂಭ್ರಮ ಜೋರಾಗಿತ್ತು. ದೇವಾಲಯಗಳಲ್ಲೂ ವಿಶೇಷ ಪೂಜಾ ಕಾರ್ಯಗಳು ನಡೆದವು.

ಬುಧವಾರ ಗಣೇಶ ಹಬ್ಬ ಇರುವುದರಿಂದ ಗಣಪತಿ ಮೂರ್ತಿ ಪ್ರತಿಷ್ಠಾಪನೆಗೆ ಸಿದ್ಧತೆಗಳು ಭರದಿಂದ ಸಾಗಿದವು. ಬೀದಿ ಬೀದಿಗಳಲ್ಲಿ ತೆರೆದಿರುವ ಅಂಗಡಿಗಳಲ್ಲಿ ಗಣಪತಿ ಮೂರ್ತಿಗಳ ಖರೀದಿ ಜೋರಾಗಿತ್ತು.

ಗಾಂಧಿ ಬಜಾರ್, ಜಯನಗರ, ಬಸವನಗುಡಿ, ಬನಶಂಕರಿ, ರಾಜಾಜಿನಗರ, ಮಲ್ಲೇಶ್ವರ ಸೇರಿ ನಗರದ ವಿವಿಧ ಭಾಗಗಳಲ್ಲಿ ಹೂವು, ಹಣ್ಣಿನ ತಾತ್ಕಾಲಿಕ ಮಳಿಗೆಗಳು, ಗಣಪತಿ ಮೂರ್ತಿಯ ಅಂಗಡಿಗಳು ತಲೆ ಎತ್ತಿವೆ. ಗಣೇಶೋತ್ಸವವನ್ನು ಅದ್ದೂರಿಯಾಗಿ ಆಚರಣೆ ಮಾಡಲು ಬೀದಿ ಬೀದಿಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಯುವಕರ ಪಡೆ ಸಿದ್ಧತೆ ನಡೆಸಿತ್ತು.



ಗೌರಿ ಹಬ್ಬದ ಅಂಗವಾಗಿ ಮಹಾಲಕ್ಷ್ಮಿಪುರದ ಮನೆಯೊಂದರಲ್ಲಿ ಮಂಗಳವಾರ ಮಹಿಳೆಯರು ಪರಸ್ಪರ ಬಾಗಿನ ನೀಡಿ ಹಬ್ಬ ಆಚರಿಸಿದರು– ಚಿತ್ರ: ರಂಜು ಪಿ.

ವಿಸರ್ಜನೆಗೆ ಅಣಿ

ಗಣೇಶ ಮೂರ್ತಿಗಳ ವಿಸರ್ಜನೆಗಾಗಿ ನಗರದಲ್ಲಿ 41 ಕೆರೆ ಅಂಗಳದಲ್ಲಿ ತಾತ್ಕಾಲಿಕ ಕಲ್ಯಾಣಿ ನಿರ್ಮಿಸಲಾಗಿದ್ದು, 489 ಸಂಚಾರಿ ಟ್ಯಾಂಕ್‌ಗಳನ್ನು ಬಿಬಿಎಂಪಿ ಸಜ್ಜುಗೊಳಿಸಿದೆ.

ಕೆರೆಗಳಲ್ಲದೆ, ಸಂಚಾರಿ ಟ್ಯಾಂಕ್‌ಗಳು ಎಲ್ಲ ವಾರ್ಡ್‌ಗಳಲ್ಲಿಯೂ ಲಭ್ಯವಾಗಲಿವೆ. ಗಣೇಶ ಮೂರ್ತಿಗಳ ವಿಸರ್ಜನೆಗೆ ಸಂಬಂಧಿಸಿದಂತೆ ಮೇಲ್ವಿಚಾರಣೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಈಗಾಗಲೇ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಸಂಪೂರ್ಣ ವಿವರಗಳನ್ನು ವೆಬ್‌ಸೈಟ್: https://apps.bbmpgov.in/ganesh2025/ ನಲ್ಲಿ ಪಡೆಯಬಹುದು

ವಸಂತ ಗಿಳಿಯಾರ್ ವಿರುದ್ಧ ಪ್ರಕರಣ ದಾಖಲು

ಬೆಳ್ತಂಗಡಿ: ಧರ್ಮ–ಧರ್ಮಗಳ ನಡುವೆ, ದ್ವೇಷ ಹುಟ್ಟುವಂತೆ ಪ್ರಚೋದನಕಾರಿಯಾಗಿ ಮಾತನಾಡಿ ಅದನ್ನು ಸಾಮಾಜಿಕ ಮಾಧ್ಯಮವಾದ ಯುಟ್ಯೂಬ್‌ನಲ್ಲಿ ಪ್ರಸಾರ ಮಾಡಿದ್ದ ಆರೋಪದಲ್ಲಿ ವಸಂತ ಗಿಳಿಯಾರ್ ಎಂಬುವವರ ವಿರುದ್ಧ ಸಾಮಾಜಿಕ ಹೋರಾಟಗಾರ ಶೇಖರ್ ಲಾಯಿಲ ನೀಡಿದ ದೂರಿನಂತೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.












ಸೌರಚಾಲಿತ ಕಾರುಗಳ ರೇಸ್ ಒಂದು ಈಚೆಗೆ ಆಸ್ಟ್ರೇಲಿಯಾದಲ್ಲಿ ನಡೆಯಿತು. '2025ರ ಬ್ರಿಡ್ಜ್‌ಸ್ಟೋನ್ ವರ್ಲ್ಡ್ ಸೋಲಾರ್ ಚಾಲೆಂಜ್' ಟ್ರೋಫಿಗಾಗಿ 34 ತಂಡಗಳು ಭಾಗವಹಿಸಿದ್ದವಂತೆ!

'ಹಸಿರು ಉಕ್ಕು' ಪರಿಸರಕ್ಕೆ ಉಸಿರು



• ವಿಕ್ರಮ ಜೋಶಿ

'ಇಷ್ಟೊಂದು ವಿಷಾನಿಲಗಳನ್ನು ಸೇವಿಸುತ್ತಿರುವ ಮೊದಲ ನಾಗರಿಕತೆ ನಮ್ಮದು' - ಎಂದು ಬಹಳ ಕಾಲದ ಹಿಂದೆಯೇ ಅಮೆರಿಕದ ಪ್ರಸಿದ್ಧ ಕಾರ್ಮಿಕರ ನಾಯಕ ವಾಲ್ಟರ್ ಯೂಟರ್ ಹೇಳಿದ್ದರು.




ಇಂದು ಮಾನವಕುಲದ ಸಂರಕ್ಷಣೆ ಆಗಬೇಕೆಂದರೆ ಮೊದಲು ಪರಿಸರದ ಸಂರಕ್ಷಣೆಯಾಗಬೇಕು. ಅದು ಕೇವಲ ಪರಿಸರ ದಿನಾಚರಣೆಯನ್ನು ಆಚರಿಸಿ ಮುಗಿಸುವುದರಲ್ಲಿಲ್ಲ. ನಮ್ಮ ಕೈಗಾರಿಕಾ ಪ್ರಕ್ರಿಯೆಗಳ ಸ್ವರೂಪವೇ ರೂಪಾಂತರಗೊಳ್ಳಬೇಕಿದೆ. ಆ ನಿಟ್ಟಿನಲ್ಲಿ 'ಹಸಿರು ಉಕ್ಕು' ಅಥವಾ 'ಗ್ರೀನ್ ಸ್ಟೀಲ್' ಎನ್ನುವುದು ಇತ್ತೀಚಿಗೆ ಕೈಗಾರಿಕಾ ಕ್ಷೇತ್ರದಲ್ಲಿನ 'ಬಜ್ ವರ್ಡ್'. ಇದೊಂದು ಪರಿಸರಪ್ರೇಮಿ ತಂತ್ರಜ್ಞಾನವಾಗಿರುವುದೇ ಇದಕ್ಕೆ ಕಾರಣ. ನಮ್ಮ ಬದುಕಿನಲ್ಲಿ ಗಾಳಿಯ ಅವಶ್ಯಕತೆ ಎಷ್ಟೋ ಅಷ್ಟೇ ಉಕ್ಕಿನದೂ ಇದೆ. ಮನೆಯ ಪಾತ್ರೆಯಿಂದ ಹಿಡಿದು ಓಡಾಡುವ ವಾಹನದ ತನಕ; ಬರೆಯುವ ಲೇಖನಿಯ ಮೊನೆಯಿಂದ ಶುರುವಾಗಿ ವಿಮಾನದ ಇಂಜಿನ್‌ವರೆಗೂ; ಮುಟ್ಟಿದಲ್ಲೆಲ್ಲಾ ನಮಗೆ ಸಿಗುವುದು ಉಕ್ಕಿನ ಉತ್ಪನ್ನಗಳು.

ಕ್ರಿ. ಪೂ. 1800ರಲ್ಲಿಯೇ ಕಬ್ಬಿಣ ಹಾಗೂ ಉಕ್ಕಿನ ಉತ್ಪನ್ನಗಳನ್ನು ಮನುಷ್ಯರು ಬಳಕೆ ಮಾಡುತ್ತಿದ್ದರು ಎಂಬುದಕ್ಕೆ ಈಗ ಸಾಕ್ಷಿಗಳು ಲಭಿಸಿವೆ. ಭಾರತದಲ್ಲೂ ಕ್ರಿ. ಪೂ. 500ನೆಯ ಶತಮಾನದಲ್ಲಿಯೇ ಕಬ್ಬಿಣದ ಅನೇಕ ರೂಪಗಳನ್ನು ಉತ್ಪಾದಿಸಿ, ಮಧ್ಯಪೂರ್ವ ದೇಶಗಳಿಗೆ ರಫ್ತು ಮಾಡುತ್ತಿದ್ದರು ಎಂಬುದನ್ನು ಇತಿಹಾಸದಲ್ಲಿ ಓದಬಹುದಾಗಿದೆ. ಆದರೆ ಆಧುನಿಕ ಯುಗದಲ್ಲಿ ಮೊತ್ತಮೊದಲ ಬಾರಿಗೆ ಉತ್ಕೃಷ್ಟ ಮಟ್ಟದ ಉಕ್ಕನ್ನು ತಯಾರಿಸಿದ್ದು ಹೆನ್ರಿ ಬೆಸ್ಸೆಮರ್, 1856ರಲ್ಲಿ. ಹೀಗಾಗಿ ಕಬ್ಬಿಣ ಹಾಗೂ ಉಕ್ಕಿಗೆ ನಾಲ್ಕು ಸಾವಿರ ವರ್ಷಗಳ ಇತಿಹಾಸವಿದ್ದರೂ ಇಂದು ನಾವು ಬಳಸುತ್ತಿರುವ ಉಕ್ಕಿನ ಪರಿಚಯವು ನಮಗಾಗಿದ್ದು ಕೇವಲ ಎರಡು ಶತಮಾನಗಳ ಹಿಂದಷ್ಟೇ. ಬೆಂಕಿ ಮತ್ತು ಚಕ್ರದ ನಂತರ ಆದ ಆವಿಷ್ಕಾರಗಳಲ್ಲಿ ಉಕ್ಕಿನ ಅವಿಷ್ಕಾರವೂ ಪ್ರಮುಖವಾದುದು. ಅಂದಿನಿಂದ ಇಂದಿನವರೆಗೆ ಈ ಜಗತ್ತು ಇಷ್ಟೊಂದು ಬೆಳೆಯಲು ಮುಖ್ಯ ಕಾರಣವೇ ಈ 'ಸ್ಟೀಲ್'. ಅಂದು ಪ್ರತಿ ವರ್ಷ ಸುಮಾರು ಹತ್ತು ಲಕ್ಷ ಟನ್ ಸ್ಟೀಲ್ ಉತ್ಪಾದನೆಯಾಗುತ್ತಿದ್ದರೆ, ಇಂದು ಪ್ರತಿವರ್ಷಕ್ಕೆ ಸುಮಾರು ಇನ್ನೂರು ಕೋಟಿ ಟನ್ ಸ್ಟೀಲ್ ಉತ್ಪಾದನೆಯಾಗುತ್ತದೆ. ಇದನ್ನು ಇನ್ನೊಂದು ಬಗೆಯಲ್ಲಿ ಹೇಳಬೇಕೆಂದರೆ, ಅಂದಿಗೆ ಹೋಲಿಸಿದರೆ ಇಂದು ಉಕ್ಕಿನ ಉತ್ಪಾದನೆ 20,00,000 ಪಟ್ಟು ಹೆಚ್ಚಿದೆ. ಕೈಗಾರಿಕಾ ಕ್ರಾಂತಿಯ ನಾಲ್ಕನೆಯ ಚರಣದಲ್ಲಿರುವ ಈ ಜಗತ್ತಿನಲ್ಲಿ ಆಗುತ್ತಿರುವ ಒಟ್ಟೂ ಇಂಗಾಲದ ಡೈ-ಆಕ್ಸೈಡ್ ಹೊರಸೂಸುವಿಕೆಯ ಶೇ. 10ರಷ್ಟು ಭಾಗವು ಉಕ್ಕಿನ ಉತ್ಪಾದನೆಯಿಂದಲೇ ಬರುತ್ತಿರುವುದು ಗಮನೀಯ ಅಂಶ. ಈ ಪರಿಸ ಹಾನಿ ಅನಿಲಗಳ ಹೊರಸೂಸುವಿಕೆಯನ್ನು ಕಡಿಮೆ (ಶೇ. 90-95) ಮಾಡಬಲ್ಲ ಸಾಮರ್ಥ್ಯವನ್ನು ಹಸಿರು ಉಕ್ಕು ಹೊಂದಿದೆ!

ಉಕ್ಕಿನ ತಯಾರಿಕೆಯಲ್ಲಿ ಅತಿ ಹೆಚ್ಚು ಕಾರ್ಬನ್ ಡೈಆಕ್ಸೈಡ್ ಹೊರಸೂಸುವಿಕೆಗೆ ಕಾರಣ ಅಲ್ಲಿ ಬಳಕೆಯಾಗುವ 'ಬ್ಲಾಸ್ಟ್ ಫರ್ನೆಸ್' ಅಥವಾ ಊದುಕುಲುಮೆ ಮತ್ತು ಕಲ್ಲಿದ್ದಲಿನ ಕೋಕ್. ಹಸಿರು ಉಕ್ಕಿನಲ್ಲಿ ಕಲ್ಲಿದ್ದಲ್ಲು, ಊದು ಕುಲುಮೆಗಳ ಬದಲು ಜಲಜನಕ ಅಥವಾ ವಿದ್ಯುಚ್ಛಕ್ತಿಯನ್ನು ಬಳಸಲಾಗುತ್ತದೆ. ಹಸಿರು ಉಕ್ಕನ್ನು ನಾಲ್ಕು ಬಗೆಗಳಿಂದ ತಯಾರಿಸಬಹುದು:

1. ಜಲಜನಕದ ಬಳಕೆ

ಈ ಬಗೆಯಲ್ಲಿ ಉಕ್ಕನ್ನು ತಯಾರಿಸುವುದಕ್ಕೆ 'ಹೈಡ್ರೋಜನ್ ಬೇಸ್ಡ್ ಡೈರೆಕ್ಟ್ ರೆಡ್ಯೂಸ್ ಐರನ್' (H-DRI) ಎನ್ನುತ್ತಾರೆ. ಇದರಲ್ಲಿ ಅದಿರನ್ನು ಕುದಿಸಲು ಕಲ್ಲಿದ್ದಲಿನ ಬದಲು ಜಲಜನಕವನ್ನು ಇಂಧನವನ್ನಾಗಿ ಬಳಸಲಾಗುತ್ತದೆ. ಕಲ್ಲಿದ್ದಲಿನ ಉಪಯೋಗದಿಂದ ರಾಸಾಯನಿಕ ಕ್ರಿಯೆಯಲ್ಲಿ ಕಾರ್ಬನ್ ಡೈ-ಆಕ್ಸೈಡ್ ವಾತಾವರಣಕ್ಕೆ ಸೇರಿದರೆ ಜಲಜನಕದಿಂದಾಗಿ ನೀರು (H_2O) ಬಿಡುಗಡೆಯಾಗುತ್ತದೆ.



2. ನವೀಕರಿಸಬಹುದಾದ ಶಕ್ತಿಮೂಲದ ವಿದ್ಯುತ್ ಬಳಕೆ


ಕಬ್ಬಿಣದ ಅದಿರನ್ನು ಕರಗಿಸಲು ಊದುಕುಲುಮೆಯಲ್ಲಿ ಇಂಧನವಾಗಿ ಕಲ್ಲಿದ್ದಲನ್ನು ಬಳಸದೆ ವಿದ್ಯುಚ್ಛಕ್ತಿಯ ಕುಲುಮೆಯನ್ನು ಬಳಸುವುದು ಹಸಿರು ಉಕ್ಕಿನ ತಯಾರಿಕೆಯ ಇನ್ನೊಂದು ಬಗೆ. ವಿಶೇಷವಾಗಿ ಇಲ್ಲಿ ಉಪಯೋಗಿಸಲ್ಪಡುವ ವಿದ್ಯುಚ್ಛಕ್ತಿಯು ನವೀಕರಿಸಬಹುದಾದ ಮೂಲದಿಂದ ಬಂದಿರುತ್ತದೆ. ಉದಾಹರಣೆಗೆ, ಜಲವಿದ್ಯುತ್ ಸ್ಥಾವರ.

3. ಇಂಗಾಲದ ಗ್ರಹಣ-ಸಂಗ್ರಹಣ


'ಕಾರ್ಬನ್ ಕ್ಯಾಪ್ಚರ್' ಅಥವಾ 'ಸ್ಟೋರೇಜ್' (ಇಂಗಾಲ ಗ್ರಹಣ-ಸಂಗ್ರಹಣ) ಪ್ರಕ್ರಿಯೆಯಲ್ಲಿ ಉಕ್ಕಿನ ಕಾರ್ಖಾನೆಗಳು ಹೊರಸೂಸುವ ಇಂಗಾಲದ ಡೈ-ಆಕ್ಸೈಡನ್ನು ವಾತಾವರಣಕ್ಕೆ ಬಿಡದೆ, ಅದನ್ನು ಕಾರ್ಬನ್ ಕ್ಯಾಪ್ಚರ್ ತಂತ್ರಜ್ಞಾನದ ಮೂಲಕ ಸಂಗ್ರಹಿಸಲಾಗುತ್ತದೆ. ಹೀಗೆ ತಯಾರಿಸುವ ಉಕ್ಕಿಗೆ ಹಸಿರುಮಾನ್ಯತೆಯನ್ನು ನೀಡಲಾಗುತ್ತದೆ.

4. ಜೈವಿಕ ಪದಾರ್ಥಗಳ ಬಳಕೆ

ಕೊನೆಯ ಬಗೆಯೆಂದರೆ ಕಲ್ಲಿದ್ದಲಿನ ಕೋಕ್ ಬದಲು ಜೈವಿಕ ಪದಾರ್ಥಗಳನ್ನು ಕುಲುಮೆಯಲ್ಲಿ ಬಳಸುವುದು. ಇದರಿಂದ ಕೂಡ ಹಸಿರು ಉಕ್ಕನ್ನು ತಯಾರಿಸಲು ಸಾಧ್ಯ.



ಜಗತ್ತಿನಾದ್ಯಂತ ಹಸಿರು ಉಕ್ಕಿನ ಉತ್ಪಾದನೆಗೆ ತುಂಬಾ ಒತ್ತು ನೀಡಲಾಗುತ್ತಿದೆ. ಭಾರತದ ಉಕ್ಕಿನ ಕಂಪನಿಗಳಾದ ಟಾಟಾ ಸ್ಟೀಲ್, ಜೆಎಸ್‌ಡಬ್ಲ್ಯು ಸ್ಟೀಲ್; ಯುರೋಪಿನ ಅರ್ಸೆಲ್ ಮಿತ್ತಲ್ ಹಾಗೂ ಇನ್ನಿತರೆ ಉಕ್ಕಿನ ಕಂಪನಿಗಳು; ಮಧ್ಯಪೂರ್ವ ದೇಶಗಳಲ್ಲಿ ಕೂಡ ಹಸಿರು ಉಕ್ಕಿನ ಉತ್ಪಾದನೆಯು ಮುನ್ನಡೆ ಪಡೆದಿದೆ. ಚೀನಾವು ಜಗತ್ತಿನಲ್ಲಿ ಅತಿ ಹೆಚ್ಚು ಉಕ್ಕನ್ನು ತಯಾರಿಸುವ ದೇಶವಾಗಿದೆ. ಎಲ್ಲಾ ದೇಶಗಳು ಸೇರಿ ತಯಾರಿಸುವುದಕ್ಕಿಂತ ಹೆಚ್ಚು ಉಕ್ಕನ್ನು ಕೇವಲ ಚೀನಾ ಒಂದೇ ತಯಾರಿಸುತ್ತದೆ. ಅವರೂ ನಿಧನವಾಗಿ ಹಸಿರು ತಂತ್ರಜ್ಞಾನದ ಕಡೆಗೆ ವಾಲುತ್ತಿದ್ದಾರೆ. ಆದರೆ ಹಸಿರು ಉಕ್ಕಿನ ತಯಾರಿಕೆಯು ಮುಖ್ಯವಾಹಿನಿಯನ್ನು ಪಡೆಯಲು ಇನ್ನೂ ತನಕ ಸಾಧ್ಯವಾಗದಿರಲು ಮುಖ್ಯಕಾರಣಗಳೆಂದರೆ ಇದು ಸಾಧಾರಣ ಉಕ್ಕಿಗಿಂತ ಮೂರು ಪಟ್ಟು ದುಬಾರಿ, ಎಲ್ಲ ಕಡೆಯೂ ನವೀಕರಿಸಬಹುದಾದ ಶಕ್ತಿಯಿಂದ ತಯಾರಿಸಿದ ವಿದ್ಯುಚ್ಛಕ್ತಿಯ ಲಭ್ಯವಿಲ್ಲ; ಜಲಜನಕದ ಸರಬರಾಜಿಗೆ ಇನ್ನೂ ಮೂಲಭೂತ ಸೌಕರ್ಯಗಳು ಪ್ರಬುದ್ಧವಾಗಿಲ್ಲ. ಅಂತೆಯೇ ಇಂಗಾಲದ ಸೆರೆಹಿಡಿಯುವಿಕೆಯು ಇನ್ನೂ ನವಜಾತ ತಂತ್ರಜ್ಞಾನ. ಇವೆಲ್ಲ ಕಾರಣಗಳು ಹಸಿರು ಉಕ್ಕು ಪರಿಸರದ ಸುಸ್ಥಿತಿಗೆ ಅನುಕೂಲವಾಗಿದ್ದರೂ ಸಂಪೂರ್ಣವಾಗಿ ಅದರ ಮೇಲೆಯೇ ಅವಲಂಬಿತವಾಗಲು ಸಾಧ್ಯವಾಗುತ್ತಿಲ್ಲ.



ಫೇಸ್‌ಬುಕ್‌ನಲ್ಲಿ 'ಕಾಪಿರೈಟ್' ವಂಚನೆಯ ಜಾಲ

• ಅವಿನಾಶ್ ಬಿ.

ಕೈಗೊಂದು ಸ್ಮಾರ್ಟ್‌ಫೋನ್, ಅದಕ್ಕೆ ಇಂಟರ್‌ನೆಟ್ ಸಂಪರ್ಕ - ಇಷ್ಟಿದ್ದರೆ ಲೋಕವನ್ನೇ ಮರೆತುಬಿಡುವವರು ಮತ್ತು ರೀಲ್ಸ್, ಸ್ಟೋರೀಸ್ ಎಂದು ಅಮೂಲ್ಯ ಸಮಯವನ್ನು ವ್ಯರ್ಥ ಮಾಡುವವರನ್ನೇ ಗುರಿಯಾಗಿರಿಸಿಕೊಂಡು ಈಗ ವಂಚಕರು ತಮ್ಮ ಕಾರ್ಯವಿಧಾನವನ್ನೂ 'ಅಪ್‌ಗ್ರೇಡ್' ಮಾಡಿಕೊಂಡಿದ್ದಾರೆ! ಇಂಟರ್‌ನೆಟ್-ವ್ಯಸನಿಗಳಿಂದಾಗಿ ದುಡ್ಡು ಮಾಡುವ ವಿಧಾನವಂತೂ ಈಗ ವಂಚಕರಿಗೆ ಸರಳವಾಗಿಬಿಟ್ಟಿದೆ. ಇದಕ್ಕೆ ಕಾರಣ, ಸೈಬರ್ ವಂಚನೆಯ ಕುರಿತು ಮಾಧ್ಯಮಗಳು, ಪೊಲೀಸರು ಸಾಕಷ್ಟು ಎಚ್ಚರಿಸಿದರೂ, ಮಾರ್ಗಸೂಚಿಗಳನ್ನೆಲ್ಲಾ ಅನುಸರಿಸಲು ವ್ಯವಧಾನವಿಲ್ಲ ಎಂದುಕೊಳ್ಳುತ್ತಾ ಸ್ಮಾರ್ಟ್‌ಫೋನ್ ಪರದೆಯ ಮೇಲೆ ಬೆರಳಾಡಿಸುವವರ ಸಂಖ್ಯೆ ಹೆಚ್ಚಾಗಿರುವುದು.



ಫೇಕ್ ಹೆಸರಿನ ಫೇಸ್‌ಬುಕ್ ಪ್ರೊಫೈಲ್‌ಗಳ ಬಗ್ಗೆ ಎಚ್ಚರ

ಈಗಾಗಲೇ ನಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಿಂದಲೇ ಚಿತ್ರ, ಮಾಹಿತಿ ಕದ್ದು, ಅದನ್ನೇ ಅಳವಡಿಸಿ ಮತ್ತೊಂದು ಫೇಕ್ ಪ್ರೊಫೈಲ್ ಸೃಷ್ಟಿಸಿ, ನಮ್ಮ ಸ್ನೇಹಿತರಲ್ಲಿ 'ತೀರಾ ಅನಿವಾರ್ಯವಿದೆ, ಒಂದ್ಹತ್ತು ಸಾವಿರ ದುಡ್ಡು ಬೇಕಿತ್ತು, ನಾಳೆನೇ ಕೊಡ್ತೇನೆ, ಗೂಗಲ್ ಪೇ ಮಾಡಿ' ಎಂದು ಯಾಚಿಸುವವರ ಜಾಲಕ್ಕೆ ಬಲಿಯಾಗಿ ಅದೆಷ್ಟೋ ಮಂದಿ ದುಡ್ಡನ್ನು ಕಳೆದುಕೊಂಡಿದ್ದಾರೆ. ಇದು ನೇರವಾದ ಸುಲಿಗೆ. ಆದರೆ ಇತ್ತೀಚೆಗೆ ಮತ್ತೊಂದು ಜಾಲ ಸಕ್ರಿಯವಾಗಿದೆ. ಅದೆಂದರೆ, ಕೃತಿಸ್ವಾಮ್ಯ (ಕಾಪಿರೈಟ್) ಉಲ್ಲಂಘನೆಯ ಬೆದರಿಕೆಯೊಡ್ಡಿ ಹಣ ಸುಲಿಯುವ ತಂತ್ರ. 'ನೀವು ಕೃತಿಸ್ವಾಮ್ಯ ಉಲ್ಲಂಘಿಸಿ ಕಂಟೆಂಟ್ ಅಪ್‌ಲೋಡ್ ಮಾಡಿದ್ದೀರಿ, ತಕ್ಷಣ ಸರಿಪಡಿಸಿಕೊಳ್ಳಿ' ಎಂಬ ಬೆದರಿಕೆಯ ಸಂದೇಶ ನೇರವಾಗಿ ನಮ್ಮ ಇನ್‌ಬಾಕ್ಸ್‌ನೊಳಗೇ ಬಂದಿರುತ್ತದೆ.

ವಂಚನೆ ಹೇಗೆ?

ಫೇಸ್‌ಬುಕ್ ಜನಪ್ರಿಯ ಪುಟ ಅಥವಾ ಪ್ರೊಫೈಲ್ ಇದ್ದಲ್ಲಿ ಮತ್ತು ಅದರಲ್ಲಿ ಹೆಚ್ಚು ವಿಡಿಯೊ, ಚಿತ್ರ, ಮಾಹಿತಿ ಶೇರ್ ಆಗುತ್ತಿದ್ದಲ್ಲಿ, ಅಂಥವರನ್ನೇ ಟಾರ್ಗೆಟ್ ಮಾಡುತ್ತಾರೆ, ವಂಚಕರು. ಇದಕ್ಕಾಗಿ, ಜನರನ್ನು ಸುಲಭವಾಗಿ ಆತಂಕಕ್ಕೀಡು ಮಾಡಲು ಅವರು ಕಂಡುಕೊಂಡ ಉಪಾಯವೆಂದರೆ, ಫೇಸ್‌ಬುಕ್ ಲೋಗೊವನ್ನು ಪ್ರೊಫೈಲ್ ಚಿತ್ರವಾಗಿ ಬಳಸಿರುವ ಒಂದು ಫೇಸ್‌ಬುಕ್ ಪ್ರೊಫೈಲ್ ಮತ್ತು ಅದರ ಹೆಸರೇ 'Facebook Copyright Violation' ಎಂಬ ಮಾದರಿಯಲ್ಲಿರುತ್ತದೆ. ಈ ಪ್ರೊಫೈಲ್ ಮೂಲಕ ನಮ್ಮ ಯಾವುದಾದರೂ ಪೋಸ್ಟ್‌ಗೆ ಕಾಮೆಂಟ್ ಮಾಡುವಾಗ ನಾವಂತೂ ಬೆಚ್ಚಿ ಬೀಳುತ್ತೇವೆ. ವಿಶೇಷವಾಗಿ ಯೋಚಿಸುವ ವ್ಯವಧಾನ ಇಲ್ಲದಿರುವ ಫೇಸ್‌ಬುಕ್ ಪುಟದ ಮಾಲೀಕರು ಮತ್ತು ಆ್ಯಡ್ಮಿನ್‌ಗಳಿಗೆ ಇದೊಂದು ಸಂಕಷ್ಟ. ಅದರಲ್ಲಿ, 'ನಿಮ್ಮ ಪುಟವನ್ನು ಬ್ಲಾಕ್ ಮಾಡಲಾಗುತ್ತದೆ, ತಕ್ಷಣವೇ ಕ್ರಮ ಕೈಗೊಳ್ಳಿ' ಎಂಬ ಸೂಚನೆಯೊಂದಿಗೆ ಲಿಂಕ್ ಕೂಡ ನೀಡಲಾಗಿರುತ್ತದೆ.

ಫೇಸ್‌ಬುಕ್‌ನಿಂದ ಬಂದಿರುವ ಅಧಿಕೃತ ಸಂದೇಶದಂತೆಯೂ, ಲೀಗಲ್ ನೋಟಿಸ್ ಮಾದರಿಯಲ್ಲೂ ಇರಬಹುದಾದ ಈ ಸಂದೇಶ ಗಳನ್ನು ನಾವು ನಂಬುತ್ತೇವೆ. ಸರಿಪಡಿಸಲು ಅಥವಾ ಬ್ಲಾಕ್ ಮಾಡಿದ ನಿರ್ಧಾರದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅದರಲ್ಲಿರುವ ಲಿಂಕ್ ಮೇಲೆ ಕ್ಲಿಕ್ ಮಾಡುತ್ತೇವೆ. ಈ ಲಿಂಕ್ ವಂಚಕರ ಜಾಲತಾಣಕ್ಕೆ (ಫೀಶಿಂಗ್ ತಾಣ) ನಮ್ಮನ್ನು ಕರೆದೊಯ್ಯುತ್ತದೆ. ರೀಲ್ಸ್ ನೋಡುತ್ತಾ ಕಾಲ ಕಳೆಯುತ್ತಿದ್ದ ನಾವು, ಒಮ್ಮೆ ಪಾರಾದರೆ ಸಾಕು ಎಂಬ ಧಾವಂತದಲ್ಲಿ ವ್ಯವಧಾನವಿಲ್ಲದಿದ್ದರೂ ಎಂದಿನಂತೆಯೇ, ಮರುಪರಿಶೀಲಿಸುವ ಗೋಜಿಗೆ ಹೋಗದೆ ಈ ಲಿಂಕ್ ಕ್ಲಿಕ್ ಮಾಡುತ್ತೇವೆ; ಮಾಹಿತಿ ಸಂಗ್ರಹಕ್ಕಾಗಿಯೇ ವಿನ್ಯಾಸಪಡಿಸಲಾದ ಈ ಜಾಲತಾಣದಲ್ಲಿ ಕೇಳಿದ ಮಾಹಿತಿಯನ್ನು ನೀಡುತ್ತೇವೆ. ಇವುಗಳಲ್ಲಿ ನಮ್ಮ ಲಾಗಿನ್ ಕ್ರೆಡೆನ್ಷಿಯಲ್‌ಗಳು, ಫೋನ್ ನಂಬರ್, ಇಮೇಲ್ ವಿಳಾಸ ಸಹಿತ ವೈಯಕ್ತಿಕ ಮಾಹಿತಿಯೂ ಸೇರಿರುತ್ತವೆ. ಬಿಜಿನೆಸ್ ಅಥವಾ ಜನಪ್ರಿಯ ಸಮುದಾಯ ಪುಟಗಳನ್ನು ನಿರ್ವಹಿಸುತ್ತಿರುವ ಆ್ಯಡ್ಮಿನ್‌ಗಳೇ ಈ ವಂಚಕರ ಟಾರ್ಗೆಟ್.

ಏನು ಸಮಸ್ಯೆಯಾಗಬಹುದು?

ಈ ರೀತಿ ವಂಚಕರೊಂದಿಗೆ ನಾವು ಹಂಚಿಕೊಂಡ ಮಾಹಿತಿ ಆಧಾರದಲ್ಲಿ, ಈ ಪುಟವನ್ನೇ ವಂಚಕರು ಸ್ವಾಧೀನಪಡಿಸಿಕೊಳ್ಳಬಹುದು, ಅದರಲ್ಲಿರುವ ಸೂಕ್ಷ್ಮವಾದ ಬಿಜಿನೆಸ್ ಸಂಬಂಧಿತ ಮಾಹಿತಿಗಳನ್ನು ಪಡೆದುಕೊಳ್ಳಬಹುದು, ನಮ್ಮ ಫೋನ್ ನಂಬರ್, ಆಧಾರ್ ಸಂಖ್ಯೆ ಮುಂತಾದವುಗಳ ಮಾಹಿತಿ ಪಡೆದು ಬ್ಯಾಂಕಿಂಗ್ ವಿವರಗಳನ್ನೂ ಪಡೆದುಕೊಳ್ಳಬಹುದು ಮತ್ತು ಬ್ಲ್ಯಾಕ್‌ಮೇಲ್ ಮಾಡುವ ಸಾಧ್ಯತೆಯೂ ಇರುತ್ತದೆ. ಜೊತೆಗೆ, ಸ್ನೇಹಿತರಿಂದ ಹಣ ಸುಲಿಗೆ ಮಾಡುವ ಅಪಾಯವೂ ಇರುತ್ತದೆ. ತಮ್ಮ ದಂಧೆ ಇಲ್ಲವೇ ಬೇರಾವುದೇ ಉತ್ಪನ್ನಗಳ ಪ್ರಚಾರಕ್ಕಾಗಿ, ಅಕ್ರಮ, ಅಶ್ಲೀಲ ವಿಚಾರಗಳನ್ನು ಹಂಚಿಕೊಳ್ಳುವುದಕ್ಕಾಗಿ ಅವರು ಅದನ್ನು ಬಳಸಿಕೊಳ್ಳುವ ಸಾಧ್ಯತೆಗಳಿವೆ. ಇದರಿಂದ ಜನಪ್ರಿಯವಾಗಿರುವ ಪುಟಕ್ಕೆ ಕಳಂಕ ತಟ್ಟಬಹುದು, ಫೇಸ್‌ಬುಕ್ ಸಮುದಾಯ ಪುಟದ ವಿಶ್ವಾಸಾರ್ಹತೆಗೆ ಧಕ್ಕೆಯಾಗಬಹುದು.

ಏನು ಮಾಡಬೇಕು?

ಸುಲಭ ದಾರಿ ಎಂದರೆ, ವಿವೇಚನೆ ಉಪಯೋಗಿಸಿ ಇಂಟರ್‌ನೆಟ್ ಅನ್ನು ಬಳಸುವುದು. ಸಮಸ್ಯೆಯಾದ ತಕ್ಷಣ ಅಥವಾ ಇಂಥ ಸಂದೇಶಗಳು ಕಂಡುಬಂದ ತಕ್ಷಣ ಫೇಸ್‌ಬುಕ್ ಸಪೋರ್ಟ್ ವಿಭಾಗವನ್ನು ಅಥವಾ ಅದರ ಸಹಾಯ ಕೇಂದ್ರವನ್ನು ಸಂಪರ್ಕಿಸಿ, ಈ ಬಗ್ಗೆ ಕ್ರಮಕ್ಕೆ ವಿನಂತಿಸುವುದು ಸೂಕ್ತ. ಯಾವುದೇ ಲಿಂಕ್‌ನ URL ಗಮನಿಸಿ, ವಿಶ್ವಾಸಾರ್ಹ ಪುಟವೇ ಎಂದು ದೃಢೀಕರಿಸಿಕೊಳ್ಳುವುದು ಅತ್ಯಂತ ಮುಖ್ಯ. ಶಂಕಾರ್ಹ ಲಿಂಕ್‌ಗಳನ್ನು ಕ್ಲಿಕ್ ಮಾಡಲೇಬಾರದು ಎಂಬ ನಿಯಮ ಪಾಲಿಸಲೇಬೇಕು. ಮತ್ತು, ಈ ರೀತಿ ಶಂಕಾರ್ಹ ಪ್ರೊಫೈಲ್ ಅನ್ನು ಫೇಸ್‌ಬುಕ್ (ಮೆಟಾ) ತಂಡಕ್ಕೆ ರಿಪೋರ್ಟ್ ಮಾಡಬೇಕು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ಜೀವ ಕ್ರಿಯೆಗಳು

29) ಸಸ್ಯಗಳಲ್ಲಿ ಸಾಗಾಣಿಕೆಗಳ ಬಗ್ಗೆ ಬರೆಯಿರಿ


ಉತ್ತರ:– (.....ಹಿಂದಿನ ಸಂಚಿಕೆಯಿಂದ)

ಸಸ್ಯವು ಸಾಕಷ್ಟು ನೀರಿನ ಪೂರೈಕೆಯನ್ನು ಹೊಂದಿದ್ದರೆ ಪತ್ರರಂಧ್ರಗಳ ಮೂಲಕ ನಷ್ಟವಾದ ನೀರು ಎಲೆಗಳಲ್ಲಿನ ಕ್ಸೈಲಂ ನಳಿಕೆಗಳ ಮೂಲಕ ಮರುಪೂರೈಕೆಯಾಗುತ್ತದೆ. ವಾಸ್ತವವಾಗಿ ಎಲೆಗಳ ಜೀವಕೋಶದಿಂದ ಆವಿಯಾಗುವ ನೀರಿನ ಅಣುಗಳು ಚೋಷಣ(suction)ವನ್ನು ಉಂಟುಮಾಡುತ್ತದೆ ಇದು ಬೇರುಗಳ ಕ್ಸೈಲಂಕೋಶಗಳಿಂದ ನೀರನ್ನು ಎಳೆದುಕೊಳ್ಳುತ್ತದೆ. ಗಾಳಿಗೆ ತೆರೆದ ಸಸ್ಯದ ಭಾಗಗಳಿಂದ ಆವಿಯ ರೂಪದಲ್ಲಿ ನೀರು ನಷ್ಟವಾಗುವುದನ್ನು ಬಾಷ್ಪವಿಸರ್ಜನೆ ಎನ್ನುವರು. ಹೀಗೆ ಬಾಷ್ಪವಿಸರ್ಜನೆಯು ಬೇರಿನಿಂದ ಎಲೆಗಳಿಗೆ ನೀರು ಮತ್ತು ಅದರಲ್ಲಿ ಕರಗಿರುವ ಲವಣಗಳ ಹೀರುವಿಕೆ ಮತ್ತು ಮೇಲ್ಮುಖ ಚಲನೆಗೆ ಸಹಾಯ ಮಾಡುತ್ತದೆ. ತಾಪದ ನಿಯಂತ್ರಣದಲ್ಲೂ ಇದು ನೆರವಾಗುತ್ತದೆ. ನೀರಿನ ಸಾಗಾಣಿಕೆಯಲ್ಲಿ ಬೇರಿನ ಒತ್ತಡದ ಪರಿಣಾಮವು ರಾತ್ರಿಯ ಸಮಯದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಬೆಳಗಿನ ಸಮಯದಲ್ಲಿ ಪತ್ರರಂಧ್ರಗಳು ತೆರೆದಿದ್ದಾಗ ಬಾಷ್ಪವಿಸರ್ಜನೆಯ ಸೆಳೆತವು ಕ್ಸೈಲಮ್‌ನಲ್ಲಿ ನೀರಿನ ಚಲನೆಗೆ ಪ್ರಮುಖ ಚಾಲಕ ಶಕ್ತಿಯಾಗುತ್ತದೆ.

ಎಲೆಗಳಿಂದ ಸಸ್ಯದ ಉಳಿದ ಭಾಗಗಳಿಗೆ ಚಯಾಪಚಯ ಕ್ರಿಯೆಗಳ, ವಿಶೇಷವಾಗಿ ದ್ಯುತಿಸಂಶ್ಲೇಷಣೆಯ ಉತ್ಪನ್ನಗಳು ಸಾಗಾಣಿಕೆಯಾಗುತ್ತವೆ ವಿಲೀನಗೊಳ್ಳಬಲ್ಲ ದ್ಯುತಿಸಂಶ್ಲೇಷಣೆಯ ಉತ್ಪನ್ನಗಳ ಸಾಗಾಣಿಕೆಯನ್ನು ವಸ್ತು ಸ್ಥಾನಾಂತರಣ (translocation) ಎಂದು ಕರೆಯುತ್ತಾರೆ ಮತ್ತು ಇದು ವಾಹಕ ಅಂಗಾಂಶದ ಫ್ಲೋಯಂ ಭಾಗದಲ್ಲಿ ಜರುಗುತ್ತದೆ. ದ್ಯುತಿಸಂಶ್ಲೇಷಣೆಯ ಉತ್ಪನ್ನಗಳ ಜೊತೆಗೆ ಅಮೈನೋ ಆಮ್ಲಗಳು ಮತ್ತು ಇತರ ವಸ್ತುಗಳನ್ನು ಫ್ಲೋಯಂ ಸಾಗಿಸುತ್ತದೆ. ಈ ವಸ್ತುಗಳು ವಿಶೇಷವಾಗಿ ಬೇರುಗಳು, ಹಣ್ಣುಗಳು ಮತ್ತು ಬೀಜಗಳಂಥ ಸಂಗ್ರಹಣಾ ಅಂಗಗಳಿಗೆ ಮತ್ತು ಬೆಳೆಯುತ್ತಿರುವ ಅಂಗಗಳಿಗೆ ಪೂರೈಸಲ್ಪಡುತ್ತವೆ. ಆಹಾರ ಮತ್ತು ಇತರ ವಸ್ತುಗಳ ಸ್ಥಾನಾಂತರಣವು ಜರಡಿನಾಳದ ಪಾರ್ಶ್ವ ಸಂಗಾತಿ ಜೀವಕೋಶದ ಸಹಾಯದಿಂದ ಮೇಲ್ಮುಖ ಹಾಗೂ ಕೆಳಮುಖ ಎರಡೂ ದಿಕ್ಕುಗಳಲ್ಲಿ ನಡೆಯುತ್ತದೆ. ಸರಳ ಭೌತ ಬಲಗಳಿಂದ ವ್ಯಾಪಕವಾಗಿ ವಿವರಿಸಲ್ಪಟ್ಟ ಕ್ಸೈಲಂನಲ್ಲಿನ ಸಾಗಾಣಿಕೆಗೆ ಹೋಲಿಸಿದರೆ, ಫ್ಲೋಯಂನಲ್ಲಿ ಶಕ್ತಿಯನ್ನು ಬಳಸಿಕೊಂಡು ವಸ್ತುಗಳ ಸ್ಥಾನಾಂತರಣವನ್ನು ಸಾಧಿಸಲಾಗುತ್ತದೆ. ಎಟಿಪಿ ಯಿಂದ ಶಕ್ತಿಯನ್ನು ಬಳಸಿಕೊಂಡು ಸುಕ್ರೋಸ್‌ನಂತಹ ವಸ್ತುವನ್ನು ಫ್ಲೋಯಂ ಅಂಗಾಂಶಕ್ಕೆ ವರ್ಗಾಯಿಸಲಾಗುತ್ತದೆ. ಇದು ಅಂಗಾಂಶದ ಅಭಿಸರಣ ಒತ್ತಡವನ್ನು (osmotic pressure) ಹೆಚ್ಚಿಸಿ ನೀರು ಅದರೊಳಗೆ ಪ್ರವೇಶಿಸಲು ಕಾರಣವಾಗುತ್ತದೆ. ಈ ಒತ್ತಡವು ಫ್ಲೋಯಂನಿಂದ ವಸ್ತುಗಳು ಕಡಿಮೆ ಒತ್ತಡವಿರುವ ಅಂಗಾಂಶಗಳಿಗೆ ಚಲಿಸುವಂತೆ ಮಾಡುತ್ತದೆ. ಇದು ಸಸ್ಯದ ಅವಶ್ಯಕತೆಗೆ ಅನುಗುಣವಾಗಿ ವಸ್ತುಗಳನ್ನು ಸಾಗಿಸಲು ಫ್ಲೋಯಂಗೆ ಅನುವು ಮಾಡಿಕೊಡುತ್ತದೆ. ಉದಾಹರಣೆಗೆ, ಬೇಸಿಗೆ ಕಾಲದಲ್ಲಿ ಮೊಗ್ಗುಗಳು ಬೆಳವಣಿಗೆಯಾಗಲು ಶಕ್ತಿಯ ಅಗತ್ಯವಿರುವುದರಿಂದ ಬೇರು ಅಥವಾ ಕಾಂಡದ ಅಂಗಾಂಶಗಳಲ್ಲಿ ಸಂಗ್ರಹವಾಗಿರುವ ಶರ್ಕರ ಪದಾರ್ಥಗಳು ಮೊಗ್ಗುಗಳಿಗೆ ಸಾಗಿಸಲ್ಪಡುತ್ತವೆ.

30) ಮನುಷ್ಯರ ವಿಸರ್ಜನಾಂಗವ್ಯೂಹದ ಚಿತ್ರದ ಬರೆಯಿರಿ

ಉತ್ತರ:–



31) ಮನುಷ್ಯರ ವಿಸರ್ಜನಾಂಗವ್ಯೂಹದ ಬಗ್ಗೆ ಬರೆಯಿರಿ

ಉತ್ತರ:– ಮನುಷ್ಯರಲ್ಲಿ ವಿಸರ್ಜನೆ ಮನುಷ್ಯರ ವಿಸರ್ಜನಾಂಗವ್ಯೂಹವು ಒಂದು ಜೊತೆ ಮೂತ್ರಪಿಂಡಗಳು, ಒಂದು ಜೊತೆ ಮೂತ್ರನಾಳಗಳು, ಒಂದು ಮೂತ್ರಕೋಶ ಮತ್ತು ಒಂದು ಮೂತ್ರದ್ವಾರವನ್ನು ಒಳಗೊಂಡಿದೆ.

ಮೂತ್ರಪಿಂಡಗಳು ಉದರಭಾಗದಲ್ಲಿ, ಬೆನ್ನುಮೂಳೆಯ ಎರಡೂ ಪಾರ್ಶ್ವಗಳಲ್ಲಿ ಒಂದೊಂದರಂತೆ ಇವೆ. ಮೂತ್ರವು ಮೂತ್ರಪಿಂಡಗಳಲ್ಲಿ ಉತ್ಪತ್ತಿಯಾಗಿ ಮೂತ್ರನಾಳಗಳ ಮೂಲಕ ಹರಿದು ಮೂತ್ರದ್ವಾರದ ಮೂಲಕ ವಿಸರ್ಜನೆಯಾಗುವವರೆಗೂ ಮೂತ್ರಕೋಶದಲ್ಲಿ ಸಂಗ್ರಹವಾಗುತ್ತದೆ

ರಕ್ತದಿಂದ ತ್ಯಾಜ್ಯವಸ್ತುಗಳನ್ನು ಸೋಸಿ ಹೊರತೆಗೆಯುವುದು ಮೂತ್ರ ತಯಾರಿಕೆಯ ಉದ್ದೇಶವಾಗಿದೆ. ಶ್ವಾಸಕೋಶಗಳಲ್ಲಿ ರಕ್ತದಿಂದ ಕಾರ್ಬನ್ ಡೈಆಕ್ಸೈಡ್‌ಅನ್ನು ತೆಗೆದುಹಾಕುವಂತೆ ಮೂತ್ರಪಿಂಡಗಳಲ್ಲಿ ರಕ್ತದಿಂದ ಯೂರಿಯಾ ಅಥವಾ ಯೂರಿಕ್ ಆಮ್ಲಗಳಂಥ ನೈಟ್ರೋಜನ್‌ಯುಕ್ತ ತ್ಯಾಜ್ಯಗಳನ್ನು ತೆಗೆದುಹಾಕಲಾಗುತ್ತದೆ. ಮೂತ್ರಪಿಂಡಗಳಲ್ಲಿರುವ ಮೂಲಭೂತ ಸೋಸುವ ಘಟಕಗಳೆಂದರೆ ಶ್ವಾಸಕೋಶಗಳಲ್ಲಿರುವಂಥ ಅತ್ಯಂತ ತೆಳುವಾದ ಭಿತ್ತಿಯನ್ನು ಹೊಂದಿರುವ ಲೋಮನಾಳಗಳ ಗುಂಪು ಎಂಬುದು ಆಶ್ಚರ್ಯವಲ್ಲ. ಮೂತ್ರಪಿಂಡದಲ್ಲಿರುವ ಪ್ರತಿಯೊಂದು ಲೋಮನಾಳಗಳ ಗುಂಪು ಸೋಸಲ್ಪಟ್ಟ ದ್ರವವನ್ನು ಸಂಗ್ರಹಿಸುವ ಬಟ್ಟಲಿನಾಕಾರದ ತುದಿ ಇರುವ ಒಂದು ನಾಳದ ಸಂಪರ್ಕದಲ್ಲಿ ಇರುತ್ತದೆ

ಪ್ರತಿಯೊಂದು ಮೂತ್ರಪಿಂಡವು ನೆಫ್ರಾನ್‌ಗಳೆಂದು ಕರೆಯಲ್ಪಡುವ ಒತ್ತೊತ್ತಾಗಿ ಜೋಡಿಸಲ್ಪಟ್ಟ ಈ ಸೋಸುವ ಘಟಕಗಳನ್ನು ಭಾರೀ ಸಂಖ್ಯೆಯಲ್ಲಿ ಹೊಂದಿದೆ. ಪ್ರಾರಂಭಿಕ ಹಂತದ ಸೋಸುವಿಕೆಯಲ್ಲಿ ಶೋಧಿಸಲ್ಪಟ್ಟ ಗ್ಲುಕೋಸ್, ಅಮೈನೋ ಆಮ್ಲ, ಲವಣಗಳು ಮತ್ತು ಹೆಚ್ಚಿನ ಪ್ರಮಾಣದ ನೀರಿನಂಥ ಆಯ್ದ ಕೆಲವು ವಸ್ತುಗಳು ಮೂತ್ರವು ನಾಳದಲ್ಲಿ ಮುಂದೆ ಹರಿದಂತೆ ಪುನಃ ಹೀರಲ್ಪಡುತ್ತವೆ. ಮರುಹೀರಿಕೆಯಾಗುವ ನೀರಿನ ಪ್ರಮಾಣವು ದೇಹದಲ್ಲಿ ನೀರು ಎಷ್ಟು ಅಧಿಕವಾಗಿದೆ ಮತ್ತು ಎಷ್ಟು ಪ್ರಮಾಣದ ಕರಗಿದ ತ್ಯಾಜ್ಯಗಳನ್ನು ವಿಸರ್ಜಿಸಬೇಕಾಗುತ್ತದೆ ಎಂಬುದನ್ನು ಆಧರಿಸಿದೆ.

ಪ್ರತಿಯೊಂದು ಮೂತ್ರಪಿಂಡದಲ್ಲಿ ಉತ್ಪತ್ತಿಯಾದ ಮೂತ್ರವು ಅಂತಿಮವಾಗಿ ಮೂತ್ರಪಿಂಡಗಳನ್ನು (ಮುಂದುವರಿಯುವುದು)

CHEMISTRY

The d- and f-Block Elements

19. Melting points of transition metals increases upto d^5 configuration and then decreases. Explain

Ans:-The melting points of transition metals first increase across a period because the number of unpaired electrons rises, strengthening the metallic bond. After reaching a maximum, the melting points decrease as d-electrons begin to pair up, reducing the number of unpaired electrons and thus the strength of the metallic bond. This trend results in high melting points for elements with many unpaired electrons, such as Chromium, and lower melting points for those with fully filled or completely empty d-orbitals, like Zinc

This is because upto d^5 configuration, the number of unpaired electrons increases. So metallic bond becomes stronger and hence melting point becomes higher. After d^5 configuration, pairing of electrons takes place and number of unpaired electrons decreases. Metallic bond becomes weaker and hence melting point decreases.

20. Mercury is the liquid at room temperature, Zn and Cd are soft metals with low melting points. Explain.

Ans: Mercury, Zinc (Zn), and Cadmium (Cd) are liquid or soft metals with low melting points because their completely filled d-orbitals prevent the formation of strong metallic bonds. Only their s-electrons are available for metallic bonding, resulting in weak interatomic attractions, which means less energy is needed to overcome these forces and break the bonds, hence their liquid state (in the case of mercury) and low melting points and softness.

Due to the absence of unpaired electrons in Hg, Zn and Cd metallic bond is very weak. Therefore their melting point are less. Hence Hg exists as liquid at room temperature and Zn and Cd are soft.

21. Why do transition elements exhibit higher enthalpies of automation?

Ans:- Because of large number of unpaired electrons in their atoms, they have stronger interatomic interaction and hence stronger bonding between atoms, resulting in higher enthalpies of atomization.

Transition elements have high enthalpies of atomization due to strong metallic bonds formed by a large number of unpaired d-electrons, which contribute to stronger interatomic interactions and bonding. The presence of these unpaired electrons leads to a greater extent of metallic bonding, requiring more energy to break these bonds and separate the atoms.

22. Enthalpy of atomization is maximum in the middle of each transition series. Why?

Ans:- The enthalpy of atomization is maximum in the middle of a transition series because these elements typically have the greatest number of unpaired d-electrons, which leads to stronger interatomic metallic bonding.

More unpaired electrons allow for more effective d-orbital overlap, resulting in stronger metallic bonds that require more energy to break, hence a higher enthalpy of atomization.

23. In the series Sc (Z = 21) to Zn (Z = 30), the enthalpy of atomization of zinc is the lowest, i.e., 126 kJ mol^{-1}. Why?

Ans: The extent of metallic bonding of an element decides the enthalpy of atomization. The more extensive the metallic bonding of an element, the more will be its enthalpy of atomization. In all transition metals (except Zn, electronic configuration: $3d^{10}4s^2$), there are some unpaired electrons that account for their stronger metallic bonding. Due to the absence of these unpaired electrons, the inter-atomic electronic bonding is the weakest in Zn and as a result, it has the least enthalpy of atomization.

24. Enthalpy of atomization is more in 4d and 5d series than 3d series. Give reason.

Ans: The enthalpy of atomization is higher for the 4d and 5d transition metal series compared to the 3d series due to the poor shielding effect of f-electrons in the 5d series, leading to weaker shielding of valence electrons, and the presence of more frequent and stronger metal-metal bonds in 4d and 5d metals

25. Even though more number of unpaired electrons are present in Mn (3d series) Te (4d series) and Re (5d series) their melting points are less. Why?

Ans: Manganese (Mn), Technetium (Te), and Rhenium (Re) have low melting points not because they lack unpaired electrons, but because their half-filled d-orbitals (Mn: $3d^5$, Tc: $4d^5$, Re: $5d^5$) create a very stable electronic configuration.

26. Explain the variation of atomic and ionic sizes (radii) of transition metals.

Ans: Atomic and ionic radii of transition metals generally decrease slightly from left to right across a series due to the increasing nuclear charge, which pulls electrons closer. However, this decrease is small and less uniform than in s- and p-block elements because the added d-electrons provide an increasing shielding effect that partially counteracts the nuclear attraction. Down a group, radii increase due to the addition of new electron shells, though the third transition series exhibits a notable contraction due to lanthanoid contraction

Example: In 3d series atomic radius decreases from Sc to Cr due to increase in effective nuclear charge. From Cr–Cu atomic radius remains almost same. This is because the increase in effective nuclear charge is compensated by shielding effect or screening effect.

(Contd…….)

ಚಿಟಿಕೆ ಸುದ್ದಿ

ಚಾರ್ಮಾಡಿ: ರಾತ್ರಿ ವೇಳೆ ಬಿಗಿ ತಪಾಸಣೆ

ಮೂಡಿಗೆರೆ (ಚಿಕ್ಕಮಗಳೂರು): ತಾಲ್ಲೂಕಿನಿಂದ ಕರಾವಳಿಯನ್ನು ಸಂಪರ್ಕಿಸುವ ಚಾರ್ಮಾಡಿ ಘಾಟ್‌ನಲ್ಲಿ ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯುವ ಸಲುವಾಗಿ ಹೊಸ ನಿಯಮ ಜಾರಿಗೆ ಬಂದಿದೆ.

ಕೊಟ್ಟಿಗೆಹಾರದ ಬಳಿ ರಾತ್ರಿ ವೇಳೆ ಚೆಕ್ ಪೋಸ್ಟ್ ದಾಟುವ ಎಲ್ಲಾ ವಾಹನಗಳನ್ನು ಕಡ್ಡಾಯವಾಗಿ ತಪಾಸಣೆ ಮಾಡಿ, ಐದು ವಾಹನಗಳು ಒಟ್ಟಾಗಿ ಹೊರಡುವಂತೆ ವ್ಯವಸ್ಥೆ ರೂಪಿಸಲಾಗಿದೆ.

‘ರಾತ್ರಿ 10ರಿಂದ ಬೆಳಿಗ್ಗೆ 6 ರವರೆಗೆ ಗೇಟ್ ಮುಚ್ಚಿರಲಿದೆ. ಕೊಟ್ಟಿಗೆಹಾರ ಚೆಕ್ ಪೋಸ್ಟ್ ಮೂಲಕ ಹಾದು ಹೋಗುವ ಎಲ್ಲಾ ವಾಹನಗಳ ವಿವರಗಳು ಸಿಸಿಟಿವಿಯಲ್ಲಿ ದಾಖಲಾಗಲಿವೆ’ ಎಂದು ಜಿಲ್ಲಾ ಎಸ್‌ಪಿ ವಿಕ್ರಂ ಅಮಟೆ ತಿಳಿಸಿದ್ದಾರೆ.

‘ದಲಿತರು ಸಿ.ಎಂ ಆದರೆ ತಪ್ಪೇನು’

ಯಾದಗಿರಿ: ‘ರಾಜ್ಯದಲ್ಲಿ ದಲಿತರು ಮುಖ್ಯಮಂತ್ರಿ ಆಗಬಹುದು. ಆಗಬಾರದು ಎಂದು ಎಲ್ಲಿಯಾದರೂ ಇದೆಯಾ?’ ಎಂದು ಸಚಿವ ಶರಣಬಸಪ್ಪ ದರ್ಶನಾಪುರ ಮಂಗಳವಾರ ಇಲ್ಲಿ ಪ್ರಶ್ನಿಸಿದರು.



ಶರಣಬಸಪ್ಪ ದರ್ಶನಾಪುರ

ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್‌ನಲ್ಲಿ ಯಾರು ಬೇಕಾದರೂ ಸಿ.ಎಂ ಆಗಬಹುದು. ಬಿಜೆಪಿಯವರು ತಮ್ಮ ಪಕ್ಷದ ಹಿರಿಯ ದಲಿತ ನಾಯಕರನ್ನು ರಾಜ್ಯ ಘಟಕದ ಅಧ್ಯಕ್ಷರಾಗಿ ಮತ್ತು ಮುಂದಿನ ಸಿ.ಎಂ ಅಭ್ಯರ್ಥಿ ಎಂದು ಘೋಷಿಸಲಿ’ ಎಂದು ಸವಾಲು ಹಾಕಿದರು.

‘ಮುಳ್ಳಯ್ಯನಗಿರಿ ಪ್ರವಾಸ ಮುಂದೂಡಿ’



ಚಿಕ್ಕಮಗಳೂರು: ಗಣೇಶ ಚತುರ್ಥಿ ಹಬ್ಬದ ಸಂದರ್ಭದಲ್ಲಿ ಮುಳ್ಳಯ್ಯನಗಿರಿ, ಬಾಬಾಬುಡನ್‌ಗಿರಿ ಪ್ರವಾಸ ಮಾಡಲು ಉದ್ದೇಶಿಸಿದ್ದರೆ ಮುಂದೂಡಬೇಕು ಎಂದು ಜಿಲ್ಲಾಡಳಿತ ಸಲಹೆ ಮಾಡಿದೆ.

40ಕ್ಕೂ ಹೆಚ್ಚು ಗ್ರಾಮಗಳವರು ಮೇಲು ಗದ್ದುಗೆ ಮುಳ್ಳಯ್ಯನಗಿರಿ, ಸೀತಾಳಯ್ಯನ ಗಿರಿ, ಗುರು ನಾರುಕಂತೆ ಮಠಗಳಲ್ಲಿ ಪೂಜೆ ಮಾಡುವುದು ಆಚರಣೆ.

ಈ ಮಾರ್ಗಗಳಲ್ಲಿ ಅಪಘಾತಗಳು ಸಂಭವಿಸುವ ಸಾಧ್ಯತೆಗಳಿವೆ. ಆದ್ದರಿಂದ ಮುಂಗಡವಾಗಿ ಕೊಠಡಿ ಕಾಯ್ದಿರಿಸಿರುವ ಪ್ರವಾಸಿಗರನ್ನು ಹೊರತುಪಡಿಸಿ ಉಳಿದವರು ಪ್ರವಾಸ ಮುಂದೂಡುವಂತೆ ಜಿಲ್ಲಾಧಿಕಾರಿ ಮನವಿ ಮಾಡಿದ್ದಾರೆ.

ರಾಷ್ಟ್ರೀಯ ಪ್ರಶಸ್ತಿಗೆ ಶ್ರೀದೇವಿ ಆಯ್ಕೆ

ಕಲಬುರಗಿ: ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯ ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಪಾಲಿಟೆಕ್ನಿಕ್‌ಗಳಲ್ಲಿನ ಶಿಕ್ಷಕರಿಗೆ ನೀಡುವ 2025ನೇ ಸಾಲಿನ ರಾಷ್ಟ್ರೀಯ ಪ್ರಶಸ್ತಿಗೆ ಇಲ್ಲಿನ ಶರಣಬಸವ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಶ್ರೀದೇವಿ ಕಲ್ಯಾಣ್ ಆಯ್ಕೆಯಾಗಿದ್ದಾರೆ.



ಶ್ರೀದೇವಿ

ಪ್ರಶಸ್ತಿ ₹50,000 ನಗದು ಮತ್ತು ಬೆಳ್ಳಿ ಪದಕ ಒಳಗೊಂಡಿದೆ.

21 ಶಿಕ್ಷಕರಿಗೆ ಸೆ. 5ರಂದು ಪ್ರಶಸ್ತಿ ಪ್ರದಾನ ಆಗಲಿದೆ. ಉಡುಪಿಯ ಮಣಿಪಾಲ ತಂತ್ರಜ್ಞಾನ ಸಂಸ್ಥೆಯ ಶೋಭಾ ಎಂ.ಇ., ಬೆಂಗಳೂರಿನ ಐಐಎಂನ ಪ್ರೊ.ಶ್ರೀವರ್ಧಿನಿ ಕೇಶವಮೂರ್ತಿ ಝಾ ಅವರೂ ಆಯ್ಕೆಯಾಗಿದ್ದಾರೆ.

ಜಿಲ್ಲಾ ಆಸ್ಪತ್ರೆಯಲ್ಲೇ ಭ್ರೂಣಲಿಂಗ ಪತ್ತೆ?

ಅಜ್ಞಾತ ಸ್ಥಳದಲ್ಲಿ ಶಸ್ತ್ರಚಿಕಿತ್ಸೆ ರಕ್ತಸ್ರಾವದಿಂದಾಗಿ ವಾಣಿವಿಲಾಸ ಆಸ್ಪತ್ರೆಗೆ

ಪ್ರಜಾವಾಣಿ ವಾರ್ತೆ

ರಾಮನಗರ: ನಗರದ ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲೇ ಬೆಂಗಳೂರಿನ ಮಹಿಳೆಯೊಬ್ಬರಿಗೆ ಭ್ರೂಣಲಿಂಗ ಪತ್ತೆ ಪರೀಕ್ಷೆ ಮಾಡಿರುವ ಆರೋಪ ಕೇಳಿ ಬಂದಿದೆ.

ಆರೋಪದ ಬೆನ್ನಲ್ಲೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಸವಪೂರ್ವ ಲಿಂಗ ಪತ್ತೆ ಮತ್ತು ಭ್ರೂಣಹತ್ಯೆ ತಡೆ (ಪಿಸಿ ಆ್ಯಂಡ್ ಪಿಎನ್‌ಡಿಟಿ) ಕಾರ್ಯಕ್ರಮದ ಉಪ ನಿರ್ದೇಶಕ ಡಾ. ವಿವೇಕ್ ದೊರೈ ಆಸ್ಪತ್ರೆಗೆ ಭೇಟಿ ನೀಡಿದ್ದಾರೆ.

ಸ್ಕ್ಯಾನಿಂಗ್ ವಿಭಾಗದ ರೇಡಿಯಾಲಜಿಸ್ಟ್ ಡಾ. ಶಶಿ ಹಾಗೂ ಇತರ ಸಿಬ್ಬಂದಿಯನ್ನು ಸಹ ವಿಚಾರಣೆ ನಡೆಸಿ ಹೇಳಿಕೆ ಪಡೆದಿರುವ ಡಾ. ವಿವೇಕ್, ಭ್ರೂಣಪತ್ತೆಗೆ ಬಳಸಿದ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಯಂತ್ರವನ್ನು ಜಪ್ತಿ ಮಾಡಿದ್ದಾರೆ.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಿರಂಜನ್, ಜಿಲ್ಲಾ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ.ಸಿ. ಮಂಜುನಾಥ್ ಸೇರಿದಂತೆ ಇತರ ಅಧಿಕಾರಿಗಳೊಂದಿಗೆ ಸಭೆ ನಡೆಸಿರುವ ಅವರು, ಆರೋಪದ ತನಿಖೆ ಮುಗಿಯುವವರೆಗೆ ಯಂತ್ರವನ್ನು ಬಳಸಬಾರದು ಎಂದು ನಿರ್ದೇಶನ ನೀಡಿದ್ದಾರೆ.



ಪತಿ ಜೊತೆ ಬಂದಿದ್ದರು: ‘ಬೆಂಗಳೂರು ನಗರ ಜಿಲ್ಲೆಯ ತಾತ ಗುಣಿಯ ಮಹಿಳೆಗೆ ಇಬ್ಬರು ಪುತ್ರಿಯರಿದ್ದಾರೆ. ಕಳೆದ ವಾರ ಪತಿಯೊಂದಿಗೆ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಸ್ಕ್ಯಾನಿಂಗ್ ಮಾಡಿಸಿಕೊಂಡಿದ್ದಾರೆ. ಮಹಿಳೆಗೆ ಆಶಾ ಕಾರ್ಯಕರ್ತೆಯೊಬ್ಬರು ಸಹಾಯ ಮಾಡಿದ್ದಾರೆ ಎನ್ನಲಾಗಿದೆ. ಆ ಬಗ್ಗೆಯೂ ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಮಹಿಳೆ, ಜಿಲ್ಲಾ ಆಸ್ಪತ್ರೆಯ ರೇಡಿಯಾಲಜಿಸ್ಟ್, ಸ್ಕ್ಯಾನಿಂಗ್ ವಿಭಾಗದ ಸಿಬ್ಬಂದಿ ನೀಡಿರುವ ಹೇಳಿಕೆ, ಸ್ಕ್ಯಾನಿಂಗ್ ವರದಿ ಜೊತೆಗೆ ಮಹಿಳೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರುವ ಜಾಗ ಹಾಗೂ ಅವರಿಗೆ ನೆರವಾಗಿರುವವರ ಸಂಪೂರ್ಣ ಮಾಹಿತಿ ಕಲೆ ಹಾಕಲಾಗುತ್ತಿದೆ. ಒಂದೆರಡು ದಿನದಲ್ಲಿ ಎಲ್ಲವೂ ಪೂರ್ಣಗೊಳ್ಳಲಿದ್ದು, ಬಳಿಕ ಪ್ರಕರಣ ದಾಖಲಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಡಾ. ವಿವೇಕ್ ದೊರೈ ಅವರಿಗೆ ‘ಪ್ರಜಾವಾಣಿ’ ಕರೆ ಮಾಡಿದಾಗ ಸ್ವೀಕರಿಸಲಿಲ್ಲ. ಸಂದೇಶಕ್ಕೂ ಪ್ರತಿಕ್ರಿಯಿಸಲಿಲ್ಲ.

ಘಟನೆ ಗೊತ್ತಾಗಿದ್ದು ಹೇಗೆ?

ಗರ್ಭದಲ್ಲಿರುವುದು ಹೆಣ್ಣುಭ್ರೂಣ ಎಂದು ಗೊತ್ತಾದ ಬಳಿಕ ಮಹಿಳೆ ಭ್ರೂಣ ತೆಗೆಸಲು ನಿರ್ಧರಿಸಿದ್ದಾರೆ. ಬೆಂಗಳೂರಿನ ಅಜ್ಞಾತ ಸ್ಥಳದಲ್ಲಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

ಶಸ್ತ್ರಚಿಕಿತ್ಸೆ ಬಳಿಕ ಮಹಿಳೆಗೆ ವಿಪರೀತ ರಕ್ತಸ್ರಾವವಾಗಿ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಆಗ ಕುಟುಂಬದವರು ವಾಣಿವಿಲಾಸ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ದಾಖಲಿಸಿದ್ದಾರೆ. ವೈದ್ಯರು ರಕ್ತಸ್ರಾವದ ಕುರಿತು ವಿಚಾರಿಸಿದಾಗ ಶಸ್ತ್ರಚಿಕಿತ್ಸೆ ಮೂಲಕ ಭ್ರೂಣ ತೆಗೆಯಲಾಗಿದೆ ಎಂಬುವುದು ಗೊತ್ತಾಗಿದೆ.

ವೈದ್ಯರು ಪ್ರಸವಪೂರ್ವ ಲಿಂಗ ಪತ್ತೆ ಮತ್ತು ಭ್ರೂಣ ಹತ್ಯೆ ತಡೆ ಕಾರ್ಯಕ್ರಮದ ಉಪ ನಿರ್ದೇಶಕ ಡಾ.ವಿವೇಕ್ ದೊರೈ ಅವರಿಗೆ ಮಾಹಿತಿ ನೀಡಿದ್ದಾರೆ. ಆಸ್ಪತ್ರೆಗೆ ಭೇಟಿ ನೀಡಿದ ಡಾ. ವಿವೇಕ್, ಮಹಿಳೆಯನ್ನು ವಿಚಾರಿಸಿದಾಗ ಭ್ರೂಣಲಿಂಗ ಪತ್ತೆಗೆ ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿಸಿದ್ದಾಗಿ ತಿಳಿಸಿದ್ದರು. ಸದ್ಯ ಮಹಿಳೆಯ ಆರೋಗ್ಯ ಸ್ಥಿತಿ ಸುಧಾರಿಸಿದೆ ಎಂದು ಮೂಲಗಳು ತಿಳಿಸಿವೆ.



ಬಿಮ್ಸ್ ನಿರ್ದೇಶಕ ಡಾ.ಅಶೋಕಕುಮಾರ ಶೆಟ್ಟಿ, ಪ್ರಭಾಕರ ಕೋರೆ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಎಂ.ದಯಾನಂದ ಒಡಂಬಡಿಕೆ ಪತ್ರಗಳನ್ನು ವಿನಿಮಯ ಮಾಡಿಕೊಂಡರು. ಪ್ರಭಾಕರ ಕೋರೆ, ಶಾಸಕ ಆಸಿಫ್ ಸೇಠ್ ಇದ್ದರು

ಕೆಎಲ್‌ಇ ಉಚಿತ ವೈದ್ಯಕೀಯ ಸೇವೆ

ಬೆಳಗಾವಿ: ಇಲ್ಲಿನ ಜಿಲ್ಲಾಸ್ಪತ್ರೆ ಆವರಣದಲ್ಲಿನ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ತಜ್ಞವೈದ್ಯರ ಉಚಿತ ಸೇವೆಗೆ ಕೆಎಲ್‌ಇ ಸಂಸ್ಥೆಯ ಪ್ರಭಾಕರ ಕೋರೆ ಆಸ್ಪತ್ರೆ ಜೊತೆ ಮಂಗಳವಾರ ಒಡಂಬಡಿಕೆ ಪ್ರಕ್ರಿಯೆ ನಡೆಯಿತು.

ಬಿಮ್ಸ್ ನಿರ್ದೇಶಕ ಡಾ.ಅಶೋಕಕುಮಾರ ಶೆಟ್ಟಿ ಮತ್ತು ಪ್ರಭಾಕರ ಕೋರೆ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಎಂ.ದಯಾನಂದ ಒಡಂಬಡಿಕೆ ಪತ್ರ ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಪ್ರಭಾಕರ ಕೋರೆ ಅವರು, ‘ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಸಿದ್ಧವಾಗಿ ಎರಡು ವರ್ಷವಾದರೂ ತಜ್ಞವೈದ್ಯರು ಇರಲಿಲ್ಲ. ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಅವರೊಂದಿಗೆ ಚರ್ಚಿಸಿದೆವು. ಸರ್ಕಾರ ತಜ್ಞವೈದ್ಯರನ್ನು ನೇಮಿಸುವವರೆಗೆ ಖಾಲಿ ಹುದ್ದೆಗಳು ಇರುವ 12 ವಿಭಾಗಗಳಿಗೆ ತಜ್ಞವೈದ್ಯರ ಸೇವೆಯನ್ನು ಉಚಿತವಾಗಿ ಒದಗಿಸುತ್ತೇವೆ’ ಎಂದರು.

ಎಸ್‌ಐಟಿಯೇ ಸಮರ್ಥವಾಗಿ ತನಿಖೆ ನಡೆಸುತ್ತಿದೆ: ಜಿ.ಪರಮೇಶ್ವರ

ಎನ್‌ಐಎ ತನಿಖೆ ಅಗತ್ಯವಿಲ್ಲ: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆಯನ್ನು ಎನ್‌ಐಎಗೆ ಕೊಡುವ ಅಗತ್ಯವಿಲ್ಲ. ರಾಜ್ಯದ ಎಸ್‌ಐಟಿಯೇ ಸಮರ್ಥವಾಗಿ ತನಿಖೆ ನಡೆಸುತ್ತಿದೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸತ್ಯ ಹೊರಗೆ ಬರಬೇಕು ಎಂದು ಕೋಟ್ಯಂತರ ಭಕ್ತರು ಕಾಯುತ್ತಿದ್ದಾರೆ. ಆರೋಪಿ ಚಿನ್ನಯ್ಯನನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ. ಎಸ್‌ಐಟಿಯವರು ವರದಿ ನೀಡಲಿ. ಮುಂದಿನ ಚರ್ಚೆ ಆನಂತರ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಈ ವಿಚಾರದಲ್ಲಿ ಸರ್ಕಾರ ತಪ್ಪೆಸಗಿದೆ ಎಂದು ಬಿಜೆಪಿಯವರು ಯಾವ ಆಧಾರದಲ್ಲಿ ಹೇಳುತ್ತಿದ್ದಾರೆ. ಎಸ್‌ಐಟಿ ರಚಿಸಿದ್ದೇ ತಪ್ಪು ಮತ್ತು ಷಡ್ಯಂತ್ರ ಎಂದು ಹೇಳುತ್ತಿರುವುದು ವಿಪರ್ಯಾಸ. ಮಹೇಶ್ ತಿಮರೋಡಿ ಮನೆಯಲ್ಲಿ ಎಸ್‌ಐಟಿ ಶೋಧ ನಡೆಸಿದೆ. ಇದರಲ್ಲಿ ಸರ್ಕಾರದ ಯಾವುದೇ ಹಸ್ತಕ್ಷೇಪ ಇಲ್ಲ. ಮಾಹಿತಿ ಮತ್ತು ಆಧಾರದ ಮೇಲೆ ಎಸ್‌ಐಟಿ ತನಿಖೆ ನಡೆಸುತ್ತಿದೆಯೇ ಹೊರತು, ಸರ್ಕಾರದ ನಿರ್ದೇಶನದಂತೆ ಅಲ್ಲ’ ಎಂದರು.

‘ಹೈಕಮಾಂಡ್ ನೋಡಿಕೊಳ್ಳುತ್ತದೆ’: ಡಿ.ಕೆ.ಶಿವಕುಮಾರ್ ಅವರು ಸದನದಲ್ಲಿ ಆರ್‌ಎಸ್‌ಎಸ್ ಪ್ರಾರ್ಥನೆ ಹಾಡಿದ್ದರ ಬಗ್ಗೆ ಪ್ರಶ್ನಿಸಿದಾಗ, ‘ಈ ಬಗ್ಗೆ ನಾನು ಏನನ್ನೂ ಹೇಳಲು ಬಯಸುವುದಿಲ್ಲ. ಪಕ್ಷ ಇದೆ, ಹೈಕಮಾಂಡ್ ಇದೆ. ಅದೇ ಎಲ್ಲವನ್ನೂ ನೋಡಿಕೊಳ್ಳಲಿದೆ’ ಎಂದು ಪರಮೇಶ್ವರ ಅವರು ಉತ್ತರಿಸಿದರು.

‘ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತದೆ. ಯಾರಿಗೆ ಏನು ಸೂಚನೆ ಕೊಡಬೇಕೋ, ಅದನ್ನು ಕೊಡುತ್ತದೆ. ಶಿವಕುಮಾರ್ ಹೇಳಿದ್ದು ತಪ್ಪು ಎಂದು ಅನಿಸಿದರೆ, ಅದನ್ನು ಸಂಬಂಧಪಟ್ಟವರು ಹೇಳುತ್ತಾರೆ. ಶಿವಕುಮಾರ್ ಅವರು ಯಾವ ಸಂದರ್ಭದಲ್ಲಿ ಅದನ್ನು ಹೇಳಿದರು ಅನ್ನೋದನ್ನೂ ಪರಿಗಣಿಸಬೇಕಲ್ಲವೇ’ ಎಂದರು.

> ಸೌಜನ್ಯಾ ಪ್ರಕರಣದಲ್ಲಿ ಎಸ್‌ಐಟಿ ರಚನೆಗೆ ಬಿಜೆಪಿಯವರು ಹೋರಾಡಿದ್ದರು. ಈಗ ಊಸರವಳ್ಳಿಯಂತೆ ಆಡುತ್ತಿದ್ದಾರೆ
> **ಕೃಷ್ಣ ಬೈರೇಗೌಡ**
> ಹಾಸನ ಜಿಲ್ಲಾ ಉಸ್ತುವಾರಿ ಸಚಿವ

> ಎಸ್‌ಐಟಿ ಶೀಘ್ರ ತನಿಖೆ ನಡೆಸಿ ಅಲ್ಲಿ ಯಾವುದೇ ತಪ್ಪಾಗಿಲ್ಲ ಎಂಬುದನ್ನು ಸರ್ಕಾರವೇ ನಿರೂಪಿಸಿ, ಭಕ್ತರಿಗೆ ನೆಮ್ಮದಿ ನೀಡಬೇಕು. ಸತ್ಯವೇ ಗೆಲ್ಲುತ್ತದೆ
> **ಜಿ.ಟಿ.ದೇವೇಗೌಡ,** ಶಾಸಕ

‘ಎಸ್‌ಐಟಿ: ಕಾಂಗ್ರೆಸ್ ಪಾತ್ರವಿಲ್ಲ’

ಬೆಳಗಾವಿ: ‘ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಪರಾಧ ಪ್ರಕರಣಗಳ ತನಿಖೆಗೆ ಕೋರ್ಟ್ ಆದೇಶದಂತೆ ಎಸ್‌ಐಟಿ ರಚಿಸಲಾಗಿದೆಯೇ ಹೊರತು ಇದರಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರವಿಲ್ಲ’ ಎಂದು ಸಚಿವ ಸತೀಶ ಜಾರಕಿಹೊಳಿ ಮಂಗಳವಾರ ಇಲ್ಲಿ ತಿಳಿಸಿದರು.

‘ಧರ್ಮಸ್ಥಳ ಪ್ರಕರಣದಿಂದ ಕಾಂಗ್ರೆಸ್‌ಗೆ ಲಾಭವೂ ಇಲ್ಲ, ನಷ್ಟವೂ ಇಲ್ಲ. ಎಸ್‌ಐಟಿ ರಚನೆಯನ್ನು ವಿರೋಧಿಸುವವರು ಈ ಬಗ್ಗೆ ನ್ಯಾಯಾಲಯವನ್ನು ಪ್ರಶ್ನಿಸಲಿ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಧರ್ಮಸ್ಥಳ ಪ್ರಕರಣದಲ್ಲಿ ಬಿಜೆಪಿಯು ರಾಜಕೀಯ ಮಾಡುತ್ತಿದೆ. ದೇಶ ಮತ್ತು ರಾಜ್ಯದಲ್ಲಿ ಬಿಜೆಪಿಯವರಿಂದ ಇಂತಹ ಬೆಳವಣಿಗೆ ಹೊಸ ಸಂಗತಿಯೇನಲ್ಲ’ ಎಂದು ಹೇಳಿದರು.

ಕ್ಷಮೆ ಕೇಳಿದ್ದು ಒಳ್ಳೆಯದು: ಆರ್‌ಎಸ್‌ಎಸ್ ಗೀತೆ ಹಾಡಿದ ಕುರಿತು ಡಿ.ಕೆ.ಶಿವಕುಮಾರ್ ಕ್ಷಮೆ ಕೇಳಿದ್ದು ಸರಿ. ಇಲ್ಲದಿದ್ದರೆ ಇದು, ಬೇರೆ ಆಯಾಮ ಪಡೆಯುತ್ತಿತ್ತು. ಅದಕ್ಕೆ ಪೂರ್ಣವಿರಾಮ ಹಾಕಿದ್ದಾರೆ’ ಎಂದರು.

ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಹಾಸ್ಟೆಲ್

ಕೊಟ್ಟಾಯಂ (ಪಿಟಿಐ): ಕೇರಳದಲ್ಲಿ ಇದೇ ಮೊದಲ ಬಾರಿಗೆ ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆಂದೇ ಮಹಾತ್ಮಗಾಂಧಿ ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕವಾಗಿ ಹಾಸ್ಟೆಲ್ ವ್ಯವಸ್ಥೆಯನ್ನು ಮಾಡಲಾಗಿದೆ.

ಸಾಮಾಜಿಕ ನ್ಯಾಯ ಇಲಾಖೆಯ ಸಚಿವೆ ಆರ್. ಬಿಂದು ಅವರು ಇತ್ತೀಚೆಗೆ ಹಾಸ್ಟೆಲ್ ಉದ್ಘಾಟಿಸಿದರು.

ಔಟ್ರೀಚ್ ಅಸೋಸಿಯೇಷನ್ ಆಫ್ ವಾಲಂಟೀಸ್ ಫಾರ್ ರೂರಲ್ ಡೆವಲಪ್‌ಮೆಂಟ್

ಟೆಂಡರ್ ಅಧಿಸೂಚನೆ

ಎರಡು ಹಂತದ ಟೆಂಡರ್ ವ್ಯವಸ್ಥೆ (two-bid system) (ತಾಂತ್ರಿಕ ಮತ್ತು ಆರ್ಥಿಕ) ಮಾದರಿಯಲ್ಲಿ, ಅರ್ಹ ವ್ಯಕ್ತಿಗಳ / ಸಂಸ್ಥೆಗಳಿಂದ ಕರ್ನಾಟಕದ ಬಾಗಲಕೋಟೆ ಮತ್ತು ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ) ಯಲ್ಲಿಯ ಈ ಸಂಸ್ಥೆಯ ಅಚಲ ಆಸ್ತಿಗಳ (ಭೂಮಿ ಮತ್ತು ಕಟ್ಟಡ ಸೇರಿ) ಖರೀದಿಗಾಗಿ ಮುಚ್ಚಿದ ಲಕೋಟೆಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ ವಿವರವಾದ ಟೆಂಡರ್ ಅಧಿಸೂಚನೆ, ಅರ್ಹತಾ ಮಾನದಂಡಗಳು ಮತ್ತು ಟೆಂಡರ್ ಸಲ್ಲಿಕೆ ಮಾರ್ಗ–ಸೂಚಿಗಳಿಗಾಗಿ ದಯವಿಟ್ಟು ನಮ್ಮ website ನೋಡಿ **www.outreachindia.org**. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ **19.09.2025**

ಕಾರ್ಯನಿರ್ವಾಹಕ ನಿರ್ದೇಶಕರು
ದೂರವಾಣಿ: **94490 77530**

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436, ಇ.ಮೇಲ್:gescom.seprojects@gmail.com

ಸಂಖ್ಯೆ:–ಜೆಸ್ಕಾಂ/ಮುಇಂ.(ಕಾ)/ಅಇಂ(ಯೋ)/ಕಾನಿ(ಯೋ)/ಸಕಾನಿ/ಸಇಂ–1/2025–26/39292–98 ದಿನಾಂಕ: 26.08.2025

ಟೆಂಡರ್ ಪ್ರಕಟಣೆ ಕಾಲ್–3 (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ)

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಜೆಸ್ಕಾಂ ವ್ಯಾಪ್ತಿಯಲ್ಲಿನ ಸರ್ಕಾರಿ ಕಟ್ಟಡಗಳ ಮೇಲ್ಛಾವಣಿ ಮೇಲೆ ಗ್ರಿಡ್ ಸಂಪರ್ಕಿತ ಸೌರ ಮೇಲ್ಛಾವಣಿ ಘಟಕಗಳ **(SRTPV)** ಪೂರೈಕೆ, ಸ್ಥಾಪನೆ, ಪರೀಕ್ಷೆ, ಚಾಲನೆ ಮತ್ತು 5 ವರ್ಷಗಳ ಅವಧಿಗೆ ನಿರ್ವಹಿಸುವುದಕ್ಕಾಗಿ **KPPP** ಮೂಲಕ ಅರ್ಹ ಬಿಡ್ಡರ್‌ಗಳಿಂದ ಅಹ್ವಾನಿಸಲಾಗಿದೆ. 5 ಟೆಂಡರ್‌ಗಳ ಜಿಎಸ್‌ಟಿ ಹೊರತುಪಡಿಸಿ ಟೆಂಡರ್ ಮೊತ್ತ ಈ ಕೆಳಗಿನಂತಿದೆ :
(1) ಬೀದರ ವಿಭಾಗ: ರೂ.2.62 ಕೋಟಿ (2) ಕಲಬುರಗಿ ವೃತ್ತ ರೂ.2.96 ಕೋಟಿ (3) ರಾಯಚೂರು & ಗಂಗಾವತಿ ವಿಭಾಗ: ರೂ.1.65ಕೋಟಿ(4) ಕೊಪ್ಪಳ ವಿಭಾಗ: ರೂ.4.85 ಕೋಟಿ (5) ಬಳ್ಳಾರಿ & ಹೊಸಪೇಟ ವಿಭಾಗ: ರೂ.2.68 ಕೋಟಿ.
ಬಿಡ್ದುದಾರರು ಟೆಂಡರ್‌ಗಳಲ್ಲಿ ಭಾಗವಹಿಸಲು ಮತ್ತು ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ದಿನಾಂಕ **29–08–2025** ರಂದು ಅಥವಾ ನಂತರ ಭೇಟಿ ನೀಡಲು ಕೋರಿದೆ.

ಸಹಿ/– ಮುಖ್ಯ ಇಂಜಿನಿಯರ್ (ಕಾರ್ಯಚರಣೆ),
ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/440/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/5054ಮಳೆ.ಪ./ಟೆ.ಪ್ರ/ತಾಸ–1/2025–26/879 ದಿನಾಂಕ: 25.08.2025

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ)(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಗಳ ವಿವರ.: 1. ಸುರಪೂರ ತಾಲೂಕಿನ ಕೋನಾಳ ದಿಂದ ಬಾಚಿಮಟ್ಟಿ ವರೆಗೆ ರಸ್ತೆ ನಿರ್ಮಾಣ RDPR/2025-26/RD/WORK_INDENT18049, 2) ಹುಣಸಗಿ ತಾಲೂಕಿನ ಕಕ್ಕೇರಾ ಯು.ಕೆ.ಪಿ. ದಿಂದ ಜಂಪರದೊಡ್ಡಿವರೆಗೆ ಸಿ.ಡಿ. ಮತ್ತು ರಸ್ತೆ ನಿರ್ಮಾಣ RDPR/2025-26/RD/WORK_INDENT 18050 3. ಸುರಪೂರ ತಾಲೂಕಿನ ದೇವಾಪೂರ – ಹುಣಸಗಿ ರಸ್ತೆ ಯಿಂದ ದೇವತ್ಕಲ್ ವರೆಗೆ ರಸ್ತೆ ಮತ್ತು ಸಿ.ಡಿ.ನಿರ್ವಾಣ RDPR/2025-26/RD/WORK_INDENT18054 **2)ಲೆಕ್ಕ ಶೀರ್ಷಿಕೆ:** 2024–25ನೇ ಸಾಲಿನ 5054 ಮಳೆ ಪರಿಹಾರ ಅನುದಾನ ಯೋಜನೆ, **3) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ಮತ್ತು ಗರಿಷ್ಠ ರೂ. 100.00 ಲಕ್ಷ, 4) ಗುತ್ತಿಗೆದಾರರ ದರ್ಜೆ:** 3ನೇ ಮೇಲ್ಪಟ್ಟು ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 26.08.2025 ರಿಂದ 04.09.2025 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 04.09.2025 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ತಾಂತ್ರೀಕ:** 06.09.2025 ಬೆಳ್ಳಿಗೆ 11:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ:** 11.09.2025 ಬೆಳ್ಳಿಗೆ 11:00 ನಂತರ **10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. **11) ಅಂತರಜಾಲ ತಾಣದ ವಿಳಾಸ:** https://kppp.karnataka.gov.in

ಸೂಚನೆ :– ಟೆಂಡರರಿಗೆಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/–ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.
ವಾ.ಸಾ.ಸಂ.ಇ/ಯಾದಗಿರಿ/220/ಕೆ.ಎಸ್.ಎಂ.ಸಿ.ಎ/2025–26

ಸಂಕ್ಷಿಪ್ತ ಸುದ್ದಿ

ಶಿವಸೇನೆ ರಾಜ್ಯ ಅಧ್ಯಕ್ಷರಾಗಿ ಸಿದ್ಧಲಿಂಗ ಸ್ವಾಮೀಜಿ ನೇಮಕ

ಜೇವರ್ಗಿ (ಕಲಬುರಗಿ ಜಿಲ್ಲೆ): ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಸಾರಥ್ಯದ ಶಿವಸೇನೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ, ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಆಂದೋಲಾ ಕರುಣೇಶ್ವರ ಮಠದ ಪೀಠಾಧಿಪತಿ ಸಿದ್ಧಲಿಂಗ ಸ್ವಾಮೀಜಿ ಅವರನ್ನು ನೇಮಕ ಮಾಡಲಾಗಿದೆ.



ಸಿದ್ಧಲಿಂಗ ಸ್ವಾಮೀಜಿ

ಮುಂಬೈ ನಗರದ ಮಹಾರಾಷ್ಟ್ರ ಸಚಿವಾಲಯದಲ್ಲಿ ಮಂಗಳವಾರ ಏಕನಾಥ ಶಿಂದೆ ಅವರು ಸಿದ್ಧಲಿಂಗ ಸ್ವಾಮೀಜಿ ಅವರಿಗೆ ನೇಮಕಾತಿ ಪತ್ರ ನೀಡಿದರು.

ಶ್ರೀರಾಮ ಸೇನೆ ಸಂಘಟನೆ ಪ್ರಮುಖರಾದ ಗಂಗಾಧರ್ ಕುಲಕರ್ಣಿ, ಆನಂದ್ ಶೆಟ್ಟ ಅಡ್ಯೇರ, ಮಹಾಲಿಂಗಪ್ಪ ಬಾಗಲಕೋಟೆ, ಅಮರ ಬೆಂಗಳೂರು, ಭಾಸ್ಕರ್ ಶಿವಸೇನೆ ಪಕ್ಷಕ್ಕೆ ಸೇರ್ಪಡೆಯಾದರು.

‘ಶೀಘ್ರದಲ್ಲೇ ಕಲಬುರಗಿ ನಗರದಲ್ಲಿ ಅಧಿಕಾರ ಸ್ವೀಕಾರ ಹಾಗೂ ಸಮಾವೇಶ ಆಯೋಜಿಸಲಾಗುವುದು’ ಎಂದು ಸಿದ್ಧಲಿಂಗ ಸ್ವಾಮೀಜಿ ತಿಳಿಸಿದ್ದಾರೆ.

ಹಾಸನಾಂಬ ದೇವಿ ದರ್ಶನ ಅ.9 ರಿಂದ

ಹಾಸನ: ಹಾಸನಾಂಬ ದೇವಿಯ ದರ್ಶನೋತ್ಸವ ಈ ವರ್ಷ ಅಕ್ಟೋಬರ್ 9ರಿಂದ 23ರವರೆಗೆ ನಡೆಯಲಿದೆ. 9ರಂದು ಬಾಗಿಲು ತೆರೆಯಲಿದ್ದು, ಸ್ಥಳೀಯರಿಗೆ ದರ್ಶನ ಇರಲಿದೆ. 10ರಿಂದ 22ರವರೆಗೆ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅಧ್ಯಕ್ಷತೆಯಲ್ಲಿ ಮಂಗಳವಾರ ಸಭೆ ನಡೆಯಿತು.

ಈ ಬಾರಿ ವಿಐಪಿ ಪಾಸ್ ರದ್ದುಪಡಿಸಿದ್ದು, ಗೋಲ್ಡ್ ಕಾರ್ಡ್ ನೀಡಲಾಗುತ್ತಿದೆ.

‘ಗೋಲ್ಡ್ ಕಾರ್ಡ್‌ಗೆ ಒಬ್ಬರಿಗಷ್ಟೇ ಪ್ರವೇಶ ಲಭ್ಯ. ಬೆಳಿಗ್ಗೆ 5 ರಿಂದ 11 ಗಂಟೆಯವರೆಗೆ ದರ್ಶನಕ್ಕೆ ಅವಕಾಶವಿದೆ’ ಎಂದು ಆಡಳಿತಾಧಿಕಾರಿಯೂ ಆದ ಉಪ ವಿಭಾಗಾಧಿಕಾರಿ ಮಾರುತಿ ತಿಳಿಸಿದರು.

ಪ್ರವೀಣ್ ನೆಟ್ಟಾರು ಕೊಲೆ ಆರೋಪಿ ಗ್ರಾ.ಪಂ ಸದಸ್ಯತ್ವ ರದ್ದು

ಸುಳ್ಯ (ದಕ್ಷಿಣ ಕನ್ನಡ): ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದ ಆರೋಪಿ, ಬೆಳ್ಳಾರೆ ಗ್ರಾಮ ಪಂಚಾಯಿತಿ ಒಂದನೇ ವಾರ್ಡ್‌ನ ಸದಸ್ಯ ಕೆ.ಮಹಮ್ಮದ್ ಇಕ್ಬಾಲ್ ಅವರ ಸದಸ್ಯತ್ವ ರದ್ದಾಗಿದೆ.

ಅವರು 2024-25ನೇ ಸಾಲಿನ ಆಸ್ತಿ ಮತ್ತು ಹೊಣೆಗಾರಿಕೆಯ ಘೋಷಣೆಯನ್ನು ನಿಗದಿತ ಅವಧಿಯೊಳಗೆ ದಾಖಲಿಸಿರಲಿಲ್ಲ. ಚುನಾವಣಾ ಆಯೋಗದ ಆದೇಶದಂತೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಬಿ)(4)ರಡಿ ಗ್ರಾ.ಪಂ ಸದಸ್ಯತ್ವದಿಂದ ತೆಗೆದುಹಾಕಿದ್ದು, ಅವರ ಸದಸ್ಯ ಸ್ಥಾನವು ಖಾಲಿ ಎಂದು ಘೋಷಿಸಲಾಗಿದೆ. ನೆಟ್ಟಾರು ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ಕೆ.ಮಹಮ್ಮದ್ ಇಕ್ಬಾಲ್, ಜೈಲಿನಲ್ಲಿದ್ದಾರೆ.

53 ಬೋಧಕೇತರ ಸಿಬ್ಬಂದಿ ವಜಾ

ವಿಜಯಪುರ: ಇಲ್ಲಿನ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಹಿಂದಿನ ಕುಲಪತಿ ಪ್ರೊ.ಬಿ.ಕೆ. ತುಳಸಿಮಾಲಾ ಅವಧಿಯಲ್ಲಿ, ನಿಯಮಬಾಹಿರವಾಗಿ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲಾಗಿದ್ದ 53 ಬೋಧಕೇತರ ಸಿಬ್ಬಂದಿಯನ್ನು ವಜಾ ಮಾಡಲಾಗಿದೆ.



ಪ್ರೊ.ವಿಜಯಾ ಕೋರಿಶೆಟ್ಟಿ

‘ನೇಮಕದಲ್ಲಿ ಅಕ್ರಮ ಕುರಿತ ದೂರುಗಳ ಹಿನ್ನೆಲೆಯಲ್ಲಿ ಪ್ರಾಧ್ಯಾಪಕ ರಾಜಕುಮಾರ ಮಾಲೀಪಾಟೀಲ ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಲಾಗಿತ್ತು. ಸಮಿತಿ ವರದಿ ಆಧರಿಸಿ ಸಿಂಡಿಕೇಟ್ ನಿರ್ಣಯದಂತೆ ವಜಾ ಮಾಡಲಾಗಿದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಜಯಾ ಕೋರಿಶೆಟ್ಟಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ನೇಮಕಾತಿಗೆ ಸರ್ಕಾರ, ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಅನುಮತಿ ಪಡೆದಿರಲಿಲ್ಲ. ಯಾವುದೇ ಪ್ರಕಟಣೆ (ನೋಟಿಫಿಕೇಶನ್) ಹೊರಡಿಸಿರಲಿಲ್ಲ. ಸಿಂಡಿಕೇಟ್ ಸಭೆ ಅನುಮೋದನೆ ಪಡೆದಿರಲಿಲ್ಲ. ಮೀಸಲಾತಿ ನಿಯಮ (ರೋಸ್ಟರ್) ಅನುಸರಿಸಿರಲಿಲ್ಲ’ ಎಂದು ಅವರು ತಿಳಿಸಿದರು.

ಹಣ ಪಡೆದಿರುವ ಆರೋಪ: ‘ಬೋಧಕೇತರ ಸಿಬ್ಬಂದಿ ನೇಮಕದಲ್ಲಿ ಹಣಕಾಸು ವ್ಯವಹಾರವಾಗಿದೆ ಎಂಬ ಆರೋಪಗಳಿವೆ. ಈ ಬಗ್ಗೆ ಖಚಿತ ಮಾಹಿತಿ ಇಲ್ಲ. ತನಿಖೆಯಾಗಲಿ. ತಪ್ಪಿತಸ್ಥರ ವಿರುದ್ಧ ಕ್ರಮವಾಗಲಿ’ ಎಂದು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯೆ ಮಲ್ಲಮ್ಮ ಯಾಳವಾರ ಅವರು ತಿಳಿಸಿದ್ದಾರೆ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_SUPRO_MINI_TRUCK YOM – 2022 Reg No – KA11C3079
2) CB_TATA_MOTORS_LPT_1815_DCR_42_HSD_BSVI YOM – 2023 Reg No – KA13D4750
3) CB_TATA_YODHA_TATA_MOTORS YOM – 2024 Reg No – KA19AE6375
4) CB_SUPRO_MINI_TRUCK YOM – 2023 Reg No – KA09AB0263
5) CB_AMBULANCE YOM – 2021 Reg No – KA06AB2402
6) CB_AL_UE2820_CHASIS_7CUM_SCHWING_TRASNT_MIXER_2820 YOM – - Reg No – KA53AB5620
7) CB_AL_UE2820_CHASIS_7CUM_SCHWING_TRASNT_MIXER_2820 YOM – - Reg No – KA53AB5619
8) CB_BHARATBENZ_4828R_CAB_CHASSIS YOM – - Reg No – KA672279
9) CB_BHARATBENZ_4828R_CAB_CHASSIS YOM – - Reg No – KA672281
10) CB_MAH_JEETO YOM – 2023 Reg No – KA09AA8179
11) CB_AL_BADA_DOST YOM – - Reg No – KA01AP4416
12) CB_RIG COMPRESSOR UNIT 2518 YOM – 2017 Reg No – KA01AH6121
13) CB_AL2818_COWL_CHASSIS YOM – 2019 Reg No – KA01AK9027
14) CB_TIPPER_SIGNA_4830_TATA_MOTORS YOM – 2024 Reg No – KA01AP8770
15) CB_Ashok Leyland Dost GOODS YOM – 2023 Reg No – kA11C4259
16) CB_AL2818_COWL_CHASSIS YOM – 2019 Reg No – KA01AK9018
17) VOLVO EICHER - EICHER 11.10HD G CBC YOM – 2019 Reg No – KA02AH0927
18) CB_Ashok Leyland Dost GOODS YOM – 2024 Reg No – KA11C6160
19) CB_TATA_LPT_1916_FBT YOM – 2024 Reg No – KA28AB0129

UNDER HYPOTHECATION WITH M/S KOTAK MAHINDRA BANK IS UNDER SALE IN ITS “AS IS WHERE IS CONDITION”
INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 27.08.2025
(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact: Prashanthkumar S
Kotak Mahindra Bank Ltd.
Contact / 080 - 61564202

ತಿಮರೋಡಿ ಮನೆಯಲ್ಲಿ ಮಹಜರು

ಒಂದನೇ ಪುಟದಿಂದ...

ಅಧಿಕಾರಿಗಳು ಮನೆಗೆ ಭೇಟಿ ನೀಡಿದಾಗ ಮನೆಯಲ್ಲಿ ಮಹೇಶ್ ಶೆಟ್ಟಿ ಇರಲಿಲ್ಲ. ಆ ಮನೆಯ ಇತರ ಸದಸ್ಯರಿಂದ ಅಧಿಕಾರಿಗಳು ಹೇಳಿಕೆ ಪಡೆದುಕೊಂಡರು ಎಂದು ಮೂಲಗಳು ತಿಳಿಸಿವೆ. ಮನೆಯ ಪ್ರದೇಶದಲ್ಲಿ ಬಿಗಿ ಭದ್ರತೆ ಕಲ್ಪಿಸಲಾಗಿತ್ತು. ಕೆಎಸ್‌ಆರ್‌ಪಿ ತುಕಡಿ ನಿಯೋಜಿಸಲಾಗಿತ್ತು. ಮನೆಯಿಂದ 500 ಮೀಟರ್ ದೂರದಲ್ಲೇ ಮಾಧ್ಯಮದವರನ್ನು ಪೊಲೀಸರು ತಡೆದಿದ್ದರು.

‘ಧರ್ಮಸ್ಥಳ ಠಾಣೆಗೆ ದೂರು ನೀಡಿ, ಅದರ ತನಿಖೆಗೆ ಎಸ್‌ಐಟಿ ರಚನೆ ಆಗುವ ನಡುವಿನ ಅವಧಿಯಲ್ಲಿ ಸಾಕ್ಷಿ ದೂರುದಾರ ಕೆಲವು ಯೂಟ್ಯೂಬ್ ಚಾನೆಲ್‌ಗಳಿಗೆ ಸಂದರ್ಶನ ನೀಡಿದ್ದರು. ಸಾಕ್ಷಿ ದೂರುದಾರನ ಬಂಧನದ ಬಳಿಕ ಕೆಲ ಯೂಟ್ಯೂಬ್ ಚಾನೆಲ್‌ಗಳು ಅವರ ಸಂದರ್ಶನ ಪ್ರಸಾರ ಮಾಡಿದ್ದವು. ಧರ್ಮಸ್ಥಳ ಗ್ರಾಮದಲ್ಲಿ 1994ರಿಂದ 2014ರವರೆಗೆ ವಾಸವಿದ್ದ ಅವಧಿಯಲ್ಲಿ ತನ್ನಿಂದ ಏನೆಲ್ಲ ಕೆಲಸ ಮಾಡಿಸಲಾಗಿತ್ತು, ಗ್ರಾಮದ ಯಾವ ಪ್ರದೇಶಗಳಲ್ಲೆಲ್ಲ ಮೃತದೇಹಗಳನ್ನು ಹೂಳಲಾಗಿತ್ತು ಎಂಬ ವಿವರಗಳನ್ನು ಅವರು ಸಂದರ್ಶನದಲ್ಲಿ ತಿಳಿಸಿದ್ದರು. ಅನಾಥ ಮೃತದೇಹವನ್ನು ಹೂಳಲು ಸೂಚನೆ ನೀಡುತ್ತಿದ್ದವರು ಯಾರು ಎಂಬುದನ್ನೂ ಬಹಿರಂಗಪಡಿಸಿದ್ದರು. ಧರ್ಮಸ್ಥಳ ಗ್ರಾಮವನ್ನು ತೊರೆಯಲು ಕಾರಣವಾದ ಅಂಶಗಳ ಬಗ್ಗೆಯೂ ಮಾಹಿತಿ ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

ಮಟ್ಟೆಣ್ಣವರ ವಿರುದ್ಧ ದೂರು: ‘ಕುಡ್ಲ ರಾಂಪೇಜ್’ ಯೂಟ್ಯೂಬ್ ಚಾನೆಲ್‌ಗೆ ಗಿರೀಶ ಮಟ್ಟೆಣ್ಣವರ 2025ರ ಏಪ್ರಿಲ್‌ನಲ್ಲಿ ನೀಡಿದ್ದ ಸಂದರ್ಶನದಲ್ಲಿ ಜೈನ ಧರ್ಮದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ ಜೈನ ಧರ್ಮೀಯರ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದ ಪ್ರಕರಣ ಸಂಬಂಧ ದೂರುದಾರರು ಬೆಳ್ತಂಗಡಿ ಪೊಲೀಸ್ ಠಾಣೆಗೆ ತೆರಳಿ ಹೇಳಿಕೆ ದಾಖಲಿಸಿದರು.

ಜೈನ ಧರ್ಮದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಬಗ್ಗೆ ಗಿರೀಶ ಮಟ್ಟೆಣ್ಣವರ ವಿರುದ್ಧ ಧಾರವಾಡ ಗ್ರಾಮಾಂತರ ಠಾಣೆಗೆ ವರ್ತಕ ಮಂಜುನಾಥ ಜಕ್ಕಣ್ಣವರ ಅವರು ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಗೆ ನಾಗಪ್ಪ ಬಸಾಪುರ ಅವರು ದೂರು ನೀಡಿದ್ದರು. ಈ ಎರಡೂ ದೂರನ್ನು ಬೆಳ್ತಂಗಡಿ ಠಾಣೆಗೆ ವರ್ಗಾಯಿಸಿ ಎಫ್‌ಐಆರ್ ದಾಖಲಿಸಲಾಗಿತ್ತು.

ಜಿಲ್ಲಾ ತೋಟಗಾರಿಕೆ ಸಂಘ (ರಿ)
ಕರ್ಜನ್ ಪಾರ್ಕ್, ಮೈಸೂರು.

ಸಂಖ್ಯೆ: ಜಿ.ತೋ.ಸಂ/ಮೈ/07/2025–26 ದಿನಾಂಕ: 25.08.2025

ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ನಿಶಾದ್ ಬಾಗ್ (ಕುಪ್ಪಣ್ಣ ಪಾರ್ಕ್) ಆವರಣದಲ್ಲಿ ನಡೆಯುವ ಮೈಸೂರು ದಸರಾ ಫಲಪುಷ್ಪ ಪ್ರದರ್ಶನದ ಪ್ರಯುಕ್ತ Main Theme "Floral Replica of Gandhi Mandapam inside Kuppanna Park Glass House, Mysuru" ನಿರ್ಮಾಣ ಹಾಗೂ ನಿರ್ವಹಣೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿವುಳ್ಳವರು **ದಿನಾಂಕ: 25.08.2025** ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮುಖಾಂತರ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು, ದಿನಾಂಕ **02.09.2025ರ ಬೆಳಿಗ್ಗೆ 11.00 ಗಂಟೆ ಒಳಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿದೆ. ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿವುಳ್ಳವರು **ದಿನಾಂಕ 28.08.2025 ರಂದು ಬೆಳಿಗ್ಗೆ 11.00 ಗಂಟೆಗೆ** ಪ್ರಿ–ಬಿಡ್ಡಿಂಗ್ ಸಭೆಯಲ್ಲಿ ಪಾಲ್ಗೊಳ್ಳಬಹುದು. **ದಿನಾಂಕ 03.09.2025 ರಂದು ಬೆಳಿಗ್ಗೆ 11.00 ಗಂಟೆಗೆ** ತಾಂತ್ರಿಕ ಬಿಡ್ ತೆರೆಯಲಾಗುವುದು. ದಿನಾಂಕ: **04.09.2025 ರಂದು ಬೆಳಿಗ್ಗೆ 11.00 ಗಂಟೆಗೆ** ಅಥವಾ ತಾಂತ್ರಿಕ ಬಿಡ್ದು ಅನುಮೋದನೆಯಾದ ನಂತರ ಆರ್ಥಿಕ ಬಿಡ್ಡ್‌ನ್ನು ತೆರೆಯಲಾಗುವುದು. ಟೆಂಡರ್‌ನಲ್ಲಿ ಭಾಗವಹಿಸುವವರು ಹೆಚ್ಚಿನ ವಿವರಗಳಿಗಾಗಿ ಈ ಕೆಳಕಂಡ ವಿಳಾಸದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– **ಪದನಿಮಿತ್ತ ಕಾರ್ಯದರ್ಶಿಗಳು**
ಜಿಲ್ಲಾ, ತೋಟಗಾರಿಕೆ ಸಂಘ (ರಿ) ಹಾಗೂ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
DIPR/MYS/851/SA/2025-26

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2271200, 2272200, ಫ್ಯಾಕ್ಸ್: 2275106, ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in

ಸಂ:ತುಮಪಾ:ತಾಂಶಾ:ಸಿವಿಲ್ ಶಾಖೆ/ಸಿಆರ್: /2025–26 ದಿನಾಂಕ: 20.08.2025

ಅಲ್ಪಾವಧಿ ಟೆಂಡರ್/ಮರು ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್2000ರ ನಿಯಮದಂತೆಈ ಕೆಳಕಂಡ ವಿವಿಧ ಕಾಮಗಾರಿಗೆ ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಮಾಹಿತಿಯನ್ನು kppp.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪಾಲಿಕೆಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಮ್.ಡಿ ಮೊತ್ತ (ಲಕ್ಷಗಳಲ್ಲಿ)
1	ತುಮಕೂರು ಮಹಾನಗರ ಪಾಲಿಕೆ ವಾರ್ಡ–01 ರಿಂದ 10ರವರೆಗೆ ಉದ್ಯಾನವನಗಳ ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ	25.00	50000/–
2	ತುಮಕೂರು ಮಹಾನಗರ ಪಾಲಿಕೆ ವಾರ್ಡ–11 ರಿಂದ 20ರವರೆಗೆ ಉದ್ಯಾನವನಗಳ ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ	19.00	47,500/–
3	ತುಮಕೂರು ಮಹಾನಗರ ಪಾಲಿಕೆ ವಾರ್ಡ–21 ರಿಂದ 30ರವರೆಗೆ ಉದ್ಯಾನವನಗಳ ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ	23.00	50000/–
4	ತುಮಕೂರು ಮಹಾನಗರ ಪಾಲಿಕೆ ವಾರ್ಡ–31 ರಿಂದ 35ರವರೆಗೆ ಉದ್ಯಾನವನಗಳ ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ	34.00	50000/–
5	ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬಟವಾಡಿ ಸರ್ವೀಸ್ ರಸೆ ಪ್ರಾರಂಭದಿಂದ ಬಾಲಗಂಗಾಧರನಾಥ ಸ್ವಾಮಿ ವೃತ್ತದವರೆಗೆ ವಿಭಜಕಗಳಲ್ಲಿ ಅಲಂಕಾರಿಕಾ /ಹೂ ಗಿಡಗಳನ್ನು ನೆಟ್ಟು ಪೋಷಿಸುವ ಕಾಮಗಾರಿ	50.50	110000/–
6	ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಅಶೋಕ ರಸ್ತೆ, ಜೆ.ಸಿ ರಸ್ತೆ, ಶಿರಾ ಮುಖ್ಯರಸ್ತೆ, ಬಟವಾಡಿ ಸರ್ವೀಸ್ ರಸ್ತೆಗಳ ವಿಭಜಕಗಳಲ್ಲಿ ಅಲಂಕಾರಿಕಾ /ಹೂ ಗಿಡಗಳನ್ನು ನೆಟ್ಟು ಪೋಷಿಸುವ ಕಾಮಗಾರಿ	66.50	133000/–
7	ತುಮಕೂರು ಮಹಾನಗರ ಪಾಲಿಕೆ ಸ್ವಚ್ಛತಾ ಚಟುವಟಿಕೆಗಾಗಿ ಆರೋಗ್ಯ ಶಾಖೆಗೆ ಅವಶ್ಯಕ ಉಪಕರಣಗಳು & ಸಲಕರಣೆಗಳನ್ನು ಸರಬರಾಜು ಪಡೆಯುವ ಕಾಮಗಾರಿ	27.00	54000/–

ಅಲ್ಪಾವಧಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ :
1. ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 21.08.2025 ರಿಂದ 28.08.2025 ರವರೆಗೆ. 2. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: 28.08.2025 ರಂದು ಸಾಯಂಕಾಲ 4.30 ಗಂಟೆವರೆಗೆ. 3. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 29.08.2025 ಸಾಯಂಕಾಲ 4.45 ಗಂಟೆಗೆ.

ಸಹಿ/–ಕಾರ್ಯಪಾಲಕ ಅಭಿಯಂತರರು,
ತುಮಕೂರು ಮಹನಗರ ಪಾಲಿಕೆ, ತುಮಕೂರು.
DIPR/TUM/267/KSMCA/2025-26

₹8 ಕೋಟಿ ಮೌಲ್ಯದ ಆಸ್ತಿ ವಶಕ್ಕೆ

ಪ್ರಜಾವಾಣಿ ವಾರ್ತೆ


ಕಾಡಅಗ್ರಹಾರ ಗ್ರಾಮದಲ್ಲಿರುವ ಗ್ರಾಮಠಾಣಾ ಆಸ್ತಿ

ಕೆ.ಆರ್.ಪುರ: ಕಾಡ ಅಗ್ರಹಾರ ಗ್ರಾಮದಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಬಳಿಸಿದ್ದ ಸುಮಾರು ₹8 ಕೋಟಿ ಮೌಲ್ಯದ ಸರ್ಕಾರಿ ಗ್ರಾಮ ಠಾಣಾ ಆಸ್ತಿಯನ್ನು ಬಿದರಹಳ್ಳಿ ಗ್ರಾಮ ಪಂಚಾಯಿತಿ ವಶಕ್ಕೆ ಪಡೆದುಕೊಂಡಿದೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಡ ಅಗ್ರಹಾರ ಗ್ರಾಮದಲ್ಲಿ ಸರ್ಕಾರಿ ಸ್ವತ್ತಿನ ಸಂಖ್ಯೆ 51/1 ರಲ್ಲಿ 125 × 170 ಅಡಿ ವಿಸ್ತೀರ್ಣದ ಜಾಗವನ್ನು ಸಂರಕ್ಷಣೆ ಮಾಡಿದೆ.

'ಗ್ರಾಮ ಠಾಣಾ ಆಸ್ತಿಯನ್ನು ನಾರಾಯಣರೆಡ್ಡಿ ಹೆಸರಿಗೆ ಖಾತೆ ಮಾಡಿಕೊಡಲು ಹಿಂದಿನ ಇಒ ಮಂಜುನಾಥ್ ಅದೇಶ ನೀಡಿದ್ದು, ಇದನ್ನು ಪ್ರಶ್ನಿಸಿ ಗ್ರಾಮ ಪಂಚಾಯಿತಿ ಹೈಕೋರ್ಟ್ ಮೊರೆಹೋಗಿತ್ತು. ಈ ವಿವಾದವನ್ನು ಗ್ರಾಮ ಪಂಚಾಯಿತಿಯೇ ನಿರ್ಧಾರ ಕೈಗೊಳ್ಳುವಂತೆ ಬಿದರಹಳ್ಳಿ ಗ್ರಾಮ ಪಂಚಾಯಿತಿಗೆ ನ್ಯಾಯಾಲಯ ಆದೇಶ ನೀಡಿತ್ತು. ಹಾಗಾಗಿ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ದಾಖಲೆಗಳನ್ನು ಪರಿಶೀಲಿಸಿದಾಗ, ನಾರಾಯಣರೆಡ್ಡಿ ಅವರು ಸರ್ಕಾರಿ ಆಸ್ತಿಯನ್ನು ಕಬಳಿಸಲು ಪ್ರಯತ್ನಿಸಿರುವುದು ದೃಢಪಟ್ಟಿದೆ' ಎಂದು ಪಂಚಾಯಿತಿ ಸದಸ್ಯ ಮುನಿಯಪ್ಪ ಹೇಳಿದರು.

ನೈಋತ್ಯ ರೈಲ್ವೆ
ಅರ್ಜಿ ಅಧಿಸೂಚನೆ ಸಂ.: 565/STBA/08-02/2025
ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳ ಸಹಿದಾರರು, ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಈ ಕೆಳಗಿನ ರೈಲು ನಿಲ್ದಾಣದಲ್ಲಿ, ಸ್ಟೇಷನ್ ಟಿಕೇಟು ಬುಕ್ಕಿಂಗ್ ಏಜೆಂಟುಗಳಾಗಿ (ಎಸ್‌ಟಿಬಿಎ) ಕಮೀಷನ್ ಆಧಾರದ ಮೇರೆಗೆ ಪ್ರತೀ ನಿಲ್ದಾಣಗಳ ಎದುರು ಸೂಚಿಸಿರುವ ಅವಧಿಯವರೆಗೆ ಕಾಯ್ದಿರಿಸದ / ಸಾಮಾನ್ಯ ಟಿಕೇಟುಗಳನ್ನು ಅನ್‌ರಿಜರ್ವ್ಡ್ ಟಿಕೆಟ್ ಸಿಸ್ಟಮ್ (ಯುಟಿಎಸ್) ಮೂಲಕ ವಿತರಿಸುವ ಸಲುವಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಮೊಹರು ಬಂದ್ ಮಾಡಲಾದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ನಿಲ್ದಾಣದ ಹೆಸರು	ಸ್ಟೇಷನ್ ಕೋಡ್	ಸ್ಟೇಷನ್ ವರ್ಗ	ಗುತ್ತಿಗೆಯ ಅವಧಿ
1.	ಹೀಲಲಿಗೆ	ಹೆಚ್‌ಎಲ್‌ಇ	ಎನ್‌ಎಸ್‌ಜಿ–6	03 ವರ್ಷಗಳು

ಅರ್ಜಿಗಳನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕ:
12.09.2025 ರಂದು 10:00 ಗಂಟೆಯಿಂದ 15:00 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ
PUB/410/AAMO/PRB/SWR/2025-26 ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು/ಬೆಂಗಳೂರು
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

PUBLIC NOTICE
Notice is hereby given that our client intends to purchase the property described in the schedule given below from its Owner, Radha Soami Satsang Beas,a registered Religious Society having its registered office at Dera Baba Jaimal Singh, Tensil-Baba, Bakala, Amritsar District, Punjab and local office at Paradise Valley, 15th Km., Tumkur Road, Bangalore - 560 073.
Any person or persons other than the Owners named above having any claim or interest in or to the said property, or any part thereof in any manner is/are required to forward their claim/s on or to the property, to the undersigned at their office along with the relevant documents thereof, within FIFTEEN (15) days from the date of publication of this notice in this newspaper. In the absence of any claims within the above said period it shall be deemed that there are no such claims or that if there are any claims and they have not been made, it shall be deemed to have been waived and the sale will be executed in my client's favour without any further reference in this regard.
SCHEDULE PROPERTY
Portion of converted land bearing Survey No. 123 measuring about 196017.08 sq. feet (approximately 4 acres 20 guntas) (being a portion of BBMP Khata No. 362 / 333 / 118/1, 118/3, 119, 120, 120/1, 123 and 124) situated in Doddabidarikallu Village, Yeshwanthpur Hobli, Bangalore North Taluk, bounded on the :
East by : Survey No. 8 of Nagasandra Village, **West by :** Remaining Portion of Survey No. 123, **North by :** Bangalore - Tumkur Road, **South by :** Private Property.
G. SRIDHAR, Advocate
206, 2nd Floor, Embassy Square, No. 148, Infantry Road, Bangalore - 560 001. 27-08-2025

TeamLease® Putting India to Work
ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್
CIN: L74140KA2000PLC118395
315 ವರ್ಕ್ ಅವೆನ್ಯೂ ಕ್ಯಾಂಪಸ್, ಅಸೆಂಟ್ ಬಿಲ್ಡಿಂಗ್,
ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ,
ಕೋರಮಂಗಲ, ಬೆಂಗಳೂರು – 560095, ಕರ್ನಾಟಕ, ಭಾರತ.
ದೂರವಾಣಿ: + 91 80 6824 3333 / ಫ್ಯಾಕ್ಸ್: + 91 80 6824 3001
corporateaffairs@teamlease.com | https://group.teamlease.com
ಇಪ್ಪತ್ತೈದನೇ (25ನೇ) ವಾರ್ಷಿಕ ಸರ್ವಸದಸ್ಯರ ಸಭೆ, ರಿಮೋಟ್ ಇ–ವೋಟಿಂಗ್ ಮತ್ತು ಅಂತಿಮ ದಿನಾಂಕದ ವಿವರಗಳು
ಈ ಮೂಲಕ ಸೂಚನೆಯನ್ನು ನೀಡಲಾಗುತ್ತಿರುವುದೇನೆಂದರೆ:
1. ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ (MCA) ಸಚಿವಾಲಯ ಮತ್ತು ಸೆಕ್ಯೂರಿಟೀಸ್ ಎಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಹೊರಡಿಸಿರುವ ಎಂ.ಸಿ.ಎ ಸುತ್ತೋಲೆ ಮತ್ತು ಸೆಬಿ ಸುತ್ತೋಲೆ ಇವುಗಳ ಜೊತೆಯಲ್ಲಿ (ಇನ್ನು ಮುಂದೆ ಒಟ್ಟಾಗಿ 'ಸುತ್ತೋಲೆಗಳು' ಎಂದು ಉಲ್ಲೇಖಿತ) ಓದಿಕೊಂಡ ಪ್ರಕಾರ ಮತ್ತು ಕಂಪನಿಗಳ ಅಧಿನಿಯಮ, 2013 ರಲ್ಲಿನ ಅನ್ವಯವಾಗುವ ಇತರೆ ನಿಬಂಧನೆಗಳ ಪ್ರಕಾರ ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್‌ನ (CIN: L74140KA2000PLC118395) ಷೇರುದಾರರಿಗೆ ತನ್ನ ಜುಲೈ 31, 2025 ರ ಎಜಿಎಮ್ ಸೂಚನೆಯಲ್ಲಿ (ಎಜಿಎಮ್ ಸೂಚನೆ/ನೋಟೀಸು) ತಿಳಿಸಿರುವ ವ್ಯವಹಾರಗಳನ್ನು ನಡೆಸಲು, ತನ್ನ ಇಪ್ಪತ್ತೈದನೇ (25ನೇ) ವಾರ್ಷಿಕ ಸರ್ವಸದಸ್ಯರ ಸಭೆಯನ್ನು (AGM) ಶುಕ್ರವಾರ, ಸೆಪ್ಟೆಂಬರ್ 19, 2025ರಂದು ಭಾ.ಕಾ. ಮಧ್ಯಾಹ್ನ 03.00ಕ್ಕೆ ವಿಡಿಯೊ ಕಾನ್ಫರೆನ್ಸ್ (VC) ಅಥವಾ ಇತರೆ ಶ್ರವಣ–ದೃಶ್ಯ ಮಾಧ್ಯಮಗಳ (OAVM) ಮೂಲಕ ನಡೆಸಲಿದೆ.
2. ಮೇಲೆ ಹೇಳಿರುವ ಎಂಸಿಎ ಮತ್ತು ಸೆಬಿ ಸುತ್ತೋಲೆಗಳ ಪ್ರಕಾರ ಯಾರೆಲ್ಲ ಶೇರುದಾರರು ತಮ್ಮ ಇಮೇಲ್ ಐಡಿಗಳನ್ನು ರಿಜಿಸ್ಟ್ರಾರ್ ಮತ್ತು ಶೇರು ವರ್ಗಾವಣೆ ಮಧ್ಯವರ್ತಿಗಳ/ಕಂಪನಿ/ಡಿಪಾಸಿಟರಿ ಪಾರ್ಟಿಸಿಪೆಂಟರ ಜೊತೆ ನೋಂದಾಯಿಸಿಕೊಂಡಿರುವರೋ ಮತ್ತು ಯಾರೆಲ್ಲರ ಹೆಸರುಗಳು ಆಗಸ್ಟ್ 08, 2025ರಂದು (ಅಂತಿಮ ದಿನಾಂಕ) ಸದಸ್ಯರ ರಿಜಿಸ್ಟರಿನಲ್ಲಿ/ಫಲಾನುಭವಿ ಮಾಲಿಕರ ಪಟ್ಟಿಯಲ್ಲಿ ಕಂಡುಬರುತ್ತವೆಯೋ ಅಂತಹ ಶೇರುದಾರರಿಗೆಲ್ಲ ಎಜಿಎಮ್ ಸೂಚನೆ ಮತ್ತು 2024–25 ವಿತ್ತೀಯ ವರ್ಷದ ವಾರ್ಷಿಕ ವರದಿಗಳ ವಿದ್ಯುನ್ಮಾನ ಪ್ರತಿಗಳನ್ನು ಕಳುಹಿಸಲಾಗಿದೆ. ಕಂಪನಿಯು ಸದರಿ ಎಜಿಎಮ್ ಸೂಚನೆ ಮತ್ತು ವಾರ್ಷಿಕ ವರದಿಗಳ ವಿದ್ಯುನ್ಮಾನ ಪ್ರತಿಗಳನ್ನು ರವಾನಿಸುವ ಕೆಲಸವನ್ನು ಆಗಸ್ಟ್ 26, 2025 ರಂದು ಪೂರ್ಣಗೊಳಿಸಿದೆ.
3. ಕಂಪನಿಗಳ ಅಧಿನಿಯಮ, 2013ರ 108ನೇ ಕಲಮು, ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಗಳು, 2014ರ 20ನೇ ನಿಯಮ, ಇದರ ಬದಲಿಗಿರುವ ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ತಿದ್ದುಪಡಿ, 2015 ಮತ್ತು ಸೆಬಿ (ಲಿಸ್ಟಿಂಗ್ ಹೊಣೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು, 2015ರ ನಿಬಂಧನೆ 44 ಮತ್ತು ಭಾರತೀಯ ಕಂಪನಿ ಸೆಕ್ರೆಟರಿಗಳ ಸಂಸ್ಥೆ ನೀಡಿರುವ ಸೆಕ್ರೆಟೇರಿಯಲ್ ಸ್ಟಾಂಡರ್ಡ್‌ಗಳ ಅನ್ವಯ, ಅಂತಿಮ ದಿನಾಂಕವಾದ ಸೆಪ್ಟೆಂಬರ್ 12, 2025ರಂದು ಭೌತಿಕ ಅಥವಾ ಡೀಮ್ಯಾಟ್ ಸ್ವರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಎಜಿಎಮ್ (ರಿಮೋಟ್ ಇ–ವೋಟಿಂಗ್‌ನ) ಸ್ಥಳವಲ್ಲದ ತಾಣದಿಂದ ಸೂಚನೆಯಲ್ಲಿ ಹೇಳಿರುವಂತಹ ಎಲ್ಲ ನಿರ್ಣಯಗಳ ಮೇಲೆ ತಮ್ಮ ಮತಗಳನ್ನು ಚಲಾಯಿಸಬಹುದು. ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕಂಪನಿಯು ಕೆಫಿನ್ ಟೆಕ್ನಾಲಜಿಸ್ ಲಿಮಿಟೆಡ್ (ಮುಂಚೆ ಕೆಫಿನ್ ಟೆಕ್ನಾಲಜಿಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲ್ಪಡುತ್ತಿತ್ತು) (KFintech) ಸೇವೆಗಳನ್ನು ನಿಯೋಜಿಸಿಕೊಂಡಿದೆ. ಎಲ್ಲ ಷೇರುದಾರರಿಗೂ ಈ ಮೂಲಕ ತಿಳಿಸುವುದೇನೆಂದರೆ:
i) ಈ ಕೆಳಗಿನ ವೋಟಿಂಗ್ ಅವಧಿಯಲ್ಲಿ ಮಾತ್ರವೇ ಇ–ವೋಟಿಂಗ್ ಸೌಲಭ್ಯ ಇರುತ್ತದೆ:

ಇ–ವೋಟಿಂಗ್ ಪ್ರಾರಂಭ	ಇ–ವೋಟಿಂಗ್ ಮುಕ್ತಾಯ
ಸೆಪ್ಟೆಂಬರ್ 16, 2025 ಭಾ.ಕಾ. ಬೆಳಗ್ಗೆ 09.00	ಸೆಪ್ಟೆಂಬರ್ 18, 2025 ಭಾ.ಕಾ. ಸಂಜೆ 05.00

ii) ವಿದ್ಯುನ್ಮಾನ ವಿಧಾನದಲ್ಲಿ ಅಥವಾ ಎಜಿಎಮ್ ಸ್ಥಳದಲ್ಲಿ ಮತದಾನದ ಅರ್ಹತೆಯನ್ನು ನಿರ್ಧರಿಸಲು ಅಂತಿಮ ದಿನಾಂಕ: **ಸೆಪ್ಟೆಂಬರ್ 12, 2025**
iii) **ಸೆಪ್ಟೆಂಬರ್ 18, 2025ರಂದು ಸಂಜೆ 05.00 (ಭಾ.ಕಾ.)** ಗಂಟೆಯ ನಂತರ KFintech, ರಿಮೋಟ್ ಇ–ವೋಟಿಂಗ್ ಮಾಡ್ಯೂಲನ್ನು ತೆಗೆದುಬಿಡುತ್ತದೆ ಮತ್ತು ಒಮ್ಮೆ ಷೇರುದಾರರು ನಿರ್ಣಯವೊಂದರ ಮೇಲೆ ತಮ್ಮ ಮತವನ್ನು ಚಲಾಯಿಸಿದ ನಂತರ ಮತ್ತೆ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
iv) ಎಜಿಎಮ್ ಅವಧಿಯಲ್ಲಿ ಇ–ವೋಟಿಂಗ್‌ಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ ("ಇನ್‌ಸ್ಟಾ ಪೋಲ್").
v) 'ಎಜಿಎಮ್'ಗೂ ಮೊದಲೇ ತಮ್ಮ ಮತವನ್ನು ಚಲಾಯಿಸಿರುವ ಷೇರುದಾರರೂ 'ಎಜಿಎಮ್'ನಲ್ಲಿ ಭಾಗವಹಿಸಬಹುದಾದರೂ ಅವರಿಗೆ ಮತ್ತೊಮ್ಮೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.
vi) ಅಂತಿಮ ದಿನಾಂಕದಂದು ಸದಸ್ಯರ ರಿಜಿಸ್ಟರಿನಲ್ಲಿ ಅಥವಾ ಡಿಪಾಸಟರಿಗಳು ನಿರ್ವಹಿಸುತ್ತಿರುವ ಫಲಾನುಭವಿ ಮಾಲಿಕರ ರಿಜಿಸ್ಟರಿನಲ್ಲಿ ಹೆಸರಿರುವಂತಹ ವ್ಯಕ್ತಿಯು ಮಾತ್ರವೇ ರಿಮೋಟ್ ವೋಟಿಂಗ್ ಮತ್ತು ಎಜಿಎಮ್ ಸ್ಥಳದಲ್ಲಿರುವ ಇ–ವೋಟಿಂಗ್ ಸೌಲಭ್ಯಕ್ಕೆ ಅರ್ಹನಾಗಿರುತ್ತಾನೆ.
vii) ಇಲೆಕ್ಟ್ರಾನಿಕ್ ವೋಟಿಂಗ್ ಪ್ರಕ್ರಿಯೆ ನ್ಯಾಯೋಚಿತವಾಗಿ ಮತ್ತು ಪಾರದರ್ಶಕವಾಗಿ ನಡೆಯುವಂತೆ ನೋಡಿಕೊಳ್ಳಲು ಕಂಪನಿಯು ಶ್ರೀ ಮುಖೇಶ್ ಸಿರೋಯ, ಎಂ ಸಿರೋಯ ಮತ್ತು ಕಂಪನಿ, ಕಂಪನಿ ಸೆಕ್ರೆಟರಿಗಳು, ವೃತ್ತಿಪರ ಕಂಪನಿ ಸೆಕ್ರೆಟರಿಗಳು (FCS: 5682, COP:4157), ಮುಂಬೈ, ಇವರನ್ನು ಸೂಕ್ಷ್ಮ ಪರಿಶೀಲಕರನ್ನಾಗಿ ನೇಮಿಸಿದೆ. ಒಂದು ವೇಳೆ ಶ್ರೀ ಮುಖೇಶ್ ಸಿರೋಯ ಅವರು ಇ–ವೋಟಿಂಗ್ ಪ್ರಕ್ರಿಯೆಯನ್ನು ಪರಿಶೀಲಿಸಲು ವಿಫಲತೆ/ಅಸಾಮರ್ಥ್ಯದ ಸಂದರ್ಭದಲ್ಲಿ ಶೀಮತಿ ಭವ್ಯತಾ ಆಚಾರ್ಯ (ಸದಸ್ಯತ್ವ ಸಂ. A25734, CoP No. 21758), ಪ್ರಾಕ್ಟೀಸ್ ಕಂಪನಿ ಕಾರ್ಯದರ್ಶಿ, ಬದಲಿ ಸೂಕ್ಷ್ಮ ಪರಿಶೀಲಕರಾಗಿ ಕಾರ್ಯನಿರ್ವಹಿಸುತ್ತಾರೆ.
viii) ಒಂದು ವೇಳೆ ಯಾವುದೇ ವ್ಯಕ್ತಿಯು ಎಜಿಎಮ್ ಸೂಚನೆಯನ್ನು ರವಾನಿಸಿದ ಬಳಿಕ ಆದರೆ ಇ–ವೋಟಿಂಗ್‌ನ ಅಂತಿಮ ದಿನಾಂಕದಂದು ಎಂದರೆ ಶುಕ್ರವಾರ, ಸೆಪ್ಟೆಂಬರ್ 12, 2025 ರಂದು, ಅಥವಾ ಅದರ ಒಳಗೆ ಕಂಪನಿಯ ಸದಸ್ಯನಾಗಿದ್ದರೆ ಅಂತಹ ವ್ಯಕ್ತಿಯು ನಿಶುಲ್ಕ ಸಂಖ್ಯೆ 1–800–309–4001 ಮೂಲಕ ಕೆಫಿನ್‌ಟಕಾನ್ ಕಂಪನಿಯನ್ನು ಸಂಪರ್ಕಿಸಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಗಳನ್ನು ಪಡೆದುಕೊಳ್ಳಬಹುದು, ಅಥವಾ ಅಂತಹ ಸದಸ್ಯರು einward.ris@kfintech.com ಗೆ ತಮ್ಮ ಮನವಿಯನ್ನು ಇಮೇಲ್ ಮಾಡಬಹುದು.
4. ಸದರಿ ಸೂಚನೆ ಮತ್ತು ವಾರ್ಷಿಕ ವರದಿ ಜೊತೆಗೆ VC/OAVM ಮೂಲಕ ಎಜಿಎಮ್ ನಲ್ಲಿ ಭಾಗವಹಿಸುವುದಕ್ಕೆ ಸೂಚನೆಗಳು ಮತ್ತು ಇ–ವೋಟಿಂಗ್‌ಗೆ ಸಂಬಂಧಪಟ್ಟ ಸೂಚನೆಗಳು ಕಂಪನಿಯ ವೆಬ್‌ಸೈಟ್ https://group.teamlease.com/ ಮತ್ತು ಕೆಫಿನ್ ವೆಬ್‌ಸೈಟ್ https://evoting.kfintech.com ಗಳಲ್ಲಿ ಲಭ್ಯವಿರುತ್ತವೆ.
5. ಇಲೆಕ್ಟ್ರಾನಿಕ್ ವೋಟಿಂಗ್ ಬಗ್ಗೆ ಏನಾದರೂ ಪ್ರಶ್ನೆಗಳಿದ್ದರೆ ಮತ್ತು/ಯಾ ದೂರುದುಮ್ಮಾನಗಳಿದ್ದರೆ ಶೇರುದಾರರು KFin ವೆಬ್‌ಸೈಟ್ https://evoting.kfintech.com (KFintech Website) ನಲ್ಲಿರುವ 'ಸಹಾಯ ಮತ್ತು ಸಾಮಾನ್ಯ ಪ್ರಶ್ನೆಗಳು' (FAQs) ವಿಭಾಗವನ್ನು ಮತ್ತು ಅಲ್ಲೇ ಡೌನ್‌ಲೋಡ್ ವಿಭಾಗದಲ್ಲಿರುವ ಇ–ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಪರಾಮರ್ಶಿಸಬಹುದು ಅಥವಾ ಕೆಫಿನ್‌ಟೆಕ್, ಸೆಲೆನಿಯಮ್ ಟವರ್ ಬಿ, ಪ್ಲಾಟ್ 31–32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಾಕ್ರಮಗುಡ, ಹೈದರಾಬಾದ್–500 032 ಕಂಪನಿಯ ಶ್ರೀಮತಿ ರಜಿತಾ ಚೊಲ್ಲೇಟಿ / ಶ್ರೀ ಪ್ರೇಮಕುಮಾರ್ ನಾಯರ್ (ಯೂನಿಟ್: ಟೀಂಲೀಸ್ ಸರ್ವೀಸಸ್ ಲಿಮಿಟೆಡ್) ಇವರನ್ನು ಅಥವಾ einward.ris@ kfintech.com ವೆಬ್‌ಸೈಟ್ ಮೂಲಕ ಅಥವಾ ಕೆಫಿನ್‌ಟೆಕ್‌ನ ಶುಲ್ಕರಹಿತ ಸಂಖ್ಯೆ 1– 800–309–4001 ಮೂಲಕ ಸಂಪರ್ಕಿಸಿ ಸ್ಪಷ್ಟೀಕರಣಗಳನ್ನು ಪಡೆದುಕೊಳ್ಳಬಹುದು.
6. VC/OAVM ಸೌಲಭ್ಯದ ಮೂಲಕ ಎಜಿಎಮ್ ನಲ್ಲಿ ಭಾಗವಹಿಸಲು ತಾಂತ್ರಿಕ ನೆರವು ಅಥವಾ ಐಟಿ ನೆರವು ಅಗತ್ಯವಿರುವ ಷೇರುದಾರರು ಸಂಪರ್ಕಿಸಬಹುದು: ಕೆಫಿನ್‌ಟೆಕ್‌ನ ಸಹಾಯವಾಣಿ ಸಂಖ್ಯೆ 1–800–309–4001 ಅನ್ನು ಬರೆಯಬಹುದು.
ಈ ಮೇಲಿನ ಮಾಹಿತಿಯನ್ನು ಕಂಪನಿಯ ಎಲ್ಲಾ ಸದಸ್ಯರ ಅನುಕೂಲಕ್ಕಾಗಿ ಎಂ.ಸಿ.ಎ ಹೊರಡಿಸಿದ ಸಂಬಂಧಿಸಿದ ಸುತ್ತೋಲೆಗಳಿಗೆ ಅನುಗುಣವಾಗಿ ಹೊರಡಿಸಿಲಾಗಿದೆ.
ಈ ಮಾಹಿತಿಯು ಕಂಪನಿಯ ವೆಬ್‌ಸೈಟ್‌ಗಳಾದ https://group.teamlease.com/investors/newspaper-publication/ ಲಭ್ಯವಿದೆ.
ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/–
ಅಲಕಾ ಚಂದ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫಿಸರ್
(M. No. F10911)
ದಿನಾಂಕ : ಆಗಸ್ಟ್ 26, 2025
ಸ್ಥಳ : ಬೆಂಗಳೂರು

₹750 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ 'ವಿಶೇಷ ಮೂಲಸೌಕರ್ಯಕ್ಕೆ ಬಂಡವಾಳ ಬೆಂಬಲ' ಯೋಜನೆಯಡಿ 2025–26ನೇ ಸಾಲಿನ ಎರಡನೇ ಕಂತಿನ ₹750 ಕೋಟಿ ಅನುದಾನವನ್ನು ಬಿಬಿಎಂಪಿಗೆ ನಗರಾಭಿವೃದ್ಧಿ ಇಲಾಖೆ ಆಗಸ್ಟ್ 22ರಂದು ಬಿಡುಗಡೆ ಮಾಡಿದೆ.

ವಿಶೇಷ ಮೂಲಸೌಕರ್ಯ ಯೋಜನೆಯಡಿ ಬೃಹತ್ ರಸ್ತೆಗಳು, ಮೇಲ್ಸೇತುವೆ, ಕಾರಿಡಾರ್ ಮುಂತಾದ ಯೋಜನೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಕಾಮಗಾರಿಗಳ ಬಿಲ್ ಬಾಕಿ ಇದ್ದು, ಅವುಗಳನ್ನು ಪಾವತಿಸ-ದಿದ್ದರೆ ಪ್ರಗತಿ ಕುಂಠಿತವಾಗುವ ಸಂಭವವಿರುತ್ತದೆ. ಆದ್ದರಿಂದ ಅನುದಾನ ಬಿಡುಗಡೆ ಮಾಡಲು ಬಿಬಿಎಂಪಿ ಮುಖ್ಯ ಆಯುಕ್ತರು ಮನವಿ ಮಾಡಿಕೊಂಡಿದರು.

2025–26ನೇ ಸಾಲಿನಲ್ಲಿ ನಿಗದಿಪಡಿಸಲಾಗಿರುವ ₹3 ಸಾವಿರ ಕೋಟಿ ಅನುದಾನದಲ್ಲಿ ₹750 ಕೋಟಿಯನ್ನು ಮೊದಲ ಕಂತಾಗಿ ಮೇ 20ರಂದು ಬಿಡುಗಡೆ ಮಾಡಲಾಗಿತ್ತು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿಯವರಲ್ಲಿ ಬಾಕಿ ಬಿಲ್‌ಗಳನ್ನು ಪಾವತಿ ಮಾಡಲು ಆದಷ್ಟು ಬೇಗ ಅನುದಾನ ಬಿಡುಗಡೆ ಮಾಡಬೇಕು ಎಂದು ವಿನಂತಿಸಲಾಗಿತ್ತು. ನಮ್ಮ ಮನವಿಗೆ ಅವರು ಸ್ಪಂದಿಸಿದ್ದಾರೆ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದರು.

ಹಳದಿ ಮಾರ್ಗ: ಸವಾರರಿಗೆ ನೆಮ್ಮದಿ

ಎಲೆಕ್ಟ್ರಾನಿಕ್ ಸಿಟಿ ಭಾಗದಲ್ಲಿ ತಗ್ಗಿದ ದಟ್ಟಣೆ, ಸಂಚಾರ ನಿರ್ವಹಣಾ ಕೇಂದ್ರದ ವಿಶ್ಲೇಷಣೆ

• ಆದಿತ್ಯ ಕೆ.ಎ.

ಬೆಂಗಳೂರು: 'ನಮ್ಮ ಮೆಟ್ರೊ'ದ ಹಳದಿ ಮಾರ್ಗ ಉದ್ಘಾಟನೆಯಾದ ಬಳಿಕ ನಗರದ ದಕ್ಷಿಣ ಭಾಗದಲ್ಲಿ ವಾಹನ ದಟ್ಟಣೆಯ ಸಮಸ್ಯೆ ಕೊಂಚ ತಗ್ಗಿದೆ.

ಕಳೆದ 15 ದಿನಗಳಲ್ಲಿ ವಿವಿಧ ಜಂಕ್ಷನ್ ಹಾಗೂ ರಸ್ತೆಗಳಲ್ಲಿ ಶೇ 10ರಿಂದ ಶೇ 25ರಷ್ಟು ದಟ್ಟಣೆ ಸಮಸ್ಯೆ ಇಳಿಕೆ ಕಂಡಿದೆ ಎಂದು ನಗರ ಸಂಚಾರ ನಿರ್ವಹಣಾ ಕೇಂದ್ರದ ಅಧಿಕಾರಿಗಳು ವಿಶ್ಲೇಷಿಸಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಭಾಗದಲ್ಲಿ ನಿತ್ಯ ದಟ್ಟಣೆಯಲ್ಲಿ ಸಿಲುಕಿ ಹೈರಾಣಾಗುತ್ತಿದ್ದ ಸವಾರರಿಗೆ ತುಸು ನೆಮ್ಮದಿ ತಂದಿದೆ. ದಟ್ಟಣೆಯ ಅವಧಿಯಲ್ಲಿ ಸಾಲುಗಟ್ಟಿ ನಿಲ್ಲುತ್ತಿದ್ದ ವಾಹನಗಳು ಇದೀಗ ಅದೇ ಜಂಕ್ಷನ್ ಹಾಗೂ ರಸ್ತೆಗಳಲ್ಲಿ ಸುಗಮವಾಗಿ ಚಲಿಸುತ್ತಿವೆ.

ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರದವರೆಗೆ ಹಳದಿ ಮಾರ್ಗದ ಉದ್ಘಾಟನೆ ವಿಳಂಬವಾದ ಕಾರಣ ಈ ಭಾಗದ ಹತ್ತಾರು ಜಂಕ್ಷನ್‌ಗಳಲ್ಲಿ ಸಮಸ್ಯೆ ದುಪ್ಪಟ್ಟಾಗಿತ್ತು. ಹಳದಿ ಮಾರ್ಗದಲ್ಲಿ ಆಗಸ್ಟ್ 11ರಿಂದ ವಾಣಿಜ್ಯ ಸಂಚಾರ ಆರಂಭವಾದ ಮೇಲೆ ವಾಹನ ಸವಾರರಲ್ಲಿ ತುಸು ನಿರಾಳ ತಂದಿದೆ.

ನಿತ್ಯ ಒಂದು ಲಕ್ಷ ಮಂದಿ 'ನಮ್ಮ ಮೆಟ್ರೊ'ದ ಹಳದಿ ಮಾರ್ಗವನ್ನು ಅವಲಂಬಿಸಿದ್ದರಿಂದ ರಸ್ತೆಗೆ ಇಳಿಯುತ್ತಿರುವ ಖಾಸಗಿ ವಾಹನಗಳ ಸಂಖ್ಯೆ ತಗ್ಗಿದೆ.

ರಾಗಿಗುಡ್ಡ, ಜಯದೇವ ಆಸ್ಪತ್ರೆ ಜಂಕ್ಷನ್, ಸೆಂಟ್ರಲ್ ಸಿಲ್ಕ್ ಬೋರ್ಡ್, ಹೊಂಗಸಂದ್ರ, ಕೂಡ್ಲುಗೇಟ್, ಹೊಸರೋಡ್, ಹೆಬ್ಬಗೋಡಿ, ಬೊಮ್ಮಸಂದ್ರ ಭಾಗದಲ್ಲಿ ವಿಪರೀತ ದಟ್ಟಣೆ ಆಗುತ್ತಿತ್ತು. ಅದರಲ್ಲೂ ಎಲೆಕ್ಟ್ರಾನಿಕ್ ಸಿಟಿಯಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿದ್ದವು. ಎಲೆಕ್ಟ್ರಾನಿಕ್ ಸಿಟಿಯಲ್ಲಿ ಸಾಫ್ಟ್‌ವೇರ್ ಕಂಪನಿಗಳಿದ್ದು, ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ತೆರಳುವುದಕ್ಕೂ ಟೆಕಿಗಳಿಗೆ ಸಾಧ್ಯ ಆಗುತ್ತಿರಲಿಲ್ಲ. ಈಗ ಸಮಸ್ಯೆ ತುಸು ತಗ್ಗಿದೆ.

ಬೊಮ್ಮನಹಳ್ಳಿ, ಎಲೆಕ್ಟ್ರಾನಿಕ್ ಸಿಟಿ ಹಾಗೂ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಉಂಟಾಗುತ್ತಿದ್ದ ದಟ್ಟಣೆಯಿಂದ ಪಾರಾಗಿ ಅರ್ಧ ತಾಸಿನನಲ್ಲಿ ಪ್ರಯಾಣಿಕರು ಹಳದಿ ಮಾರ್ಗದ ಒಂದು ತುದಿಯಿಂದ ಮತ್ತೊಂದು ಬದಿಗೆ ತಲುಪುತ್ತಿದ್ದಾರೆ.


ಹಳದಿ ಮಾರ್ಗದ ಆರಂಭದಿಂದ ಮೆಟ್ರೊ ಜಾಲವು 96 ಕಿ.ಮೀ.ಗೆ ವಿಸ್ತರಣೆಯಾಗಿದೆ. ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಐ.ಟಿ ಕಂಪನಿಗಳಿಗೆ ಸಂಪರ್ಕಿಸುವಲ್ಲಿ ಹಳದಿ ಮಾರ್ಗವು ನಿರ್ಣಾಯಕ ಪಾತ್ರ ವಹಿಸುತ್ತಿದೆ.

'ದಟ್ಟಣೆ ಅವಧಿಯಾದ ಬೆಳಿಗ್ಗೆ 7ರಿಂದ 11 ಹಾಗೂ ಸಂಜೆ 4ರಿಂದ ರಾತ್ರಿ 9ರವರೆಗೆ ಹಳದಿ ಮಾರ್ಗ ಸಂಪರ್ಕಿಸುವ ಪ್ರಮುಖ ಜಂಕ್ಷನ್ ಹಾಗೂ ರಸ್ತೆಗಳಲ್ಲಿ ವಾಹನ ದಟ್ಟಣೆ ಇಳಿಕೆ ಕಂಡಿದೆ. ಸೋಮವಾರ ಹಾಗೂ ಮಂಗಳವಾರದ ದಟ್ಟಣೆ ಅವಧಿಯಲ್ಲಿ ವಾಹನಗಳ ಸಂಚಾರವನ್ನು ಆಧರಿಸಿ ಅಸ್ತ್ರಂ ಆ್ಯಪ್ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಆ ಅವಧಿಯಲ್ಲಿ ಸಾಕಷ್ಟು ಸುಧಾರಣೆ ಆಗಿರುವುದು ಕಂಡುಬಂದಿದೆ' ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಅಂದಾಜಿನ ಪ್ರಕಾರ ಹಳದಿ ಮಾರ್ಗದಲ್ಲಿ ಪ್ರತಿನಿತ್ಯ 90 ಸಾವಿರದಿಂದ 1 ಲಕ್ಷದವರೆಗೆ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ. ಮೆಟ್ರೊ ಕೋಚ್‌ಗಳ ಕೊರತೆಯ ಕಾರಣಕ್ಕೆ ಕೆಲವೇ ಮೆಟ್ರೊ ರೈಲುಗಳು ಸಂಚಾರ ನಡೆಸುತ್ತಿವೆ. ಕೋಚ್‌ಗಳ ಸಂಖ್ಯೆ ಹೆಚ್ಚಾದ ಮೇಲೆ ಹಳದಿ ಮಾರ್ಗದಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆ ಆಗಲಿದೆ. ಆಗ ರಸ್ತೆಗೆ ಇಳಿಯುವ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳ ಸಂಖ್ಯೆ ಮತ್ತಷ್ಟು ಕಡಿಮೆ ಆಗಲಿದೆ' ಎಂದು ಪೊಲೀಸರು ತಿಳಿಸಿದರು.

'ಪರಿಹಾರ ಸಿಕ್ಕಿದೆ'

ಸೆಂಟ್ರಲ್ ಸಿಲ್ಕ್ ಬೋರ್ಡ್ ಹಾಗೂ ಎಲೆಕ್ಟ್ರಾನಿಕ್ ಸಿಟಿ ಭಾಗದಲ್ಲಿ ಎರಡು ಜಂಕ್ಷನ್‌ಗಳನ್ನು ದಾಟುವುದಕ್ಕೆ ಹರಸಾಹಸ ಪಡಬೇಕಿತ್ತು. ಹಳದಿ ಮಾರ್ಗ ಆರಂಭವಾದ ಬಳಿಕ ಸಮಸ್ಯೆಗೆ ಸ್ವಲ್ಪಮಟ್ಟಿಗೆ ಪರಿಹಾರ ಸಿಕ್ಕಿದೆ.
ಸುಶಾಂತ್, ಸಾಫ್ಟ್‌ವೇರ್ ಎಂಜಿನಿಯರ್



ಹಳದಿ ಮಾರ್ಗ ಸಂಪರ್ಕಿಸುವ ರಸ್ತೆ–ಜಂಕ್ಷನ್ ಬಳಿ ಇಳಿಕೆಯಾದ ದಟ್ಟಣೆ ಪ್ರಮಾಣ (ಆಗಸ್ಟ್‌ನಲ್ಲಿ)

- **11**ರ ಸಂಜೆ ಶೇ **32** ಇಳಿಕೆ (21 ಕಿ.ಮೀ)
- **12**ರ ಬೆಳಿಗ್ಗೆ ಶೇ **24** ಇಳಿಕೆ (7 ಕಿ.ಮೀ)
- **18**ರ ಬೆಳಿಗ್ಗೆ ಶೇ **22** ಇಳಿಕೆ (7 ಕಿ.ಮೀ)
- **18**ರ ಸಂಜೆ ಶೇ **36** ಇಳಿಕೆ (24 ಕಿ.ಮೀ)
- **19**ರ ಬೆಳಿಗ್ಗೆ ಶೇ **44** ಇಳಿಕೆ (13 ಕಿ.ಮೀ)
- **19**ರ ಸಂಜೆ ಶೇ **47** ಇಳಿಕೆ (22 ಕಿ.ಮೀ)
- **18**ರ ದಟ್ಟಣೆಯಲ್ಲದ ಅವಧಿಯಲ್ಲಿ ಶೇ **31** (7 ಕಿ.ಮೀ)
- **19**ರ ದಟ್ಟಣೆಯಲ್ಲದ ಅವಧಿಯಲ್ಲಿ ಶೇ **47** (10 ಕಿ.ಮೀ)

(ನಗರ ಸಂಚಾರ ನಿರ್ವಹಣಾ ಕೇಂದ್ರದ ಮಾಹಿತಿ)

ಸಾರ್ವಜನಿಕ ಸಾರಿಗೆ ಬಳಸಲು ಮನವಿ

ಹಳದಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭಿಸಿದ ನಂತರ ಸಾಫ್ಟ್‌ವೇರ್ ಕಂಪನಿಗಳು ತಮ್ಮ ಸಂಸ್ಥೆಯ ಉದ್ಯೋಗಿಗಳಿಗೆ 'ನಮ್ಮ ಮೆಟ್ರೊ' ಬಳಸುವಂತೆ ಕೋರಿವೆ.

'ಹಳದಿ ಮಾರ್ಗದ ಮೆಟ್ರೊ ಸಂಚಾರ ದಟ್ಟಣೆ ಇಲ್ಲದ ಪ್ರಯಾಣಕ್ಕೆ ಉತ್ತಮ. ಅದರಲ್ಲೂ ಜನಸಂದಣಿ ಹೆಚ್ಚಿರುವ ಸಮಯದಲ್ಲಿ ಇದು ತುಂಬಾ ಅನುಕೂಲಕರ' ಎಂದು ಇ–ಮೇಲ್ ಮೂಲಕ ಇನ್ಫೊಸಿಸ್ ಸಂಸ್ಥೆಯು ತನ್ನ ಉದ್ಯೋಗಿಗಳಿಗೆ ಸಂದೇಶ ನೀಡಿದೆ. ಸಾರ್ವಜನಿಕ ಸಾರಿಗೆ ಬಳಸಿದರೆ, ದಟ್ಟಣೆ ತಗ್ಗಿಸಬಹುದು. ಮೆಟ್ರೊ ನಿಲ್ದಾಣಗಳಿಂದ ಬಿಎಂಟಿಸಿಯ ಫೀಡರ್ ಬಸ್ ಸೇವೆಯಿದೆ. ಅದನ್ನೂ ಬಳಸಿಕೊಂಡು ಕೆಲಸದ ಸ್ಥಳವನ್ನು ತಲುಪಬಹುದು ಸಂಚಾರ ಪೊಲೀಸರು ಹೇಳಿದರು.

ಹಳದಿ ಮಾರ್ಗದಲ್ಲಿ ಪ್ರಯಾಣಿಕರ ಸಂಚಾರ

ಒಂದು ದಿನದಲ್ಲಿ ಸಂಚರಿಸಿದವರ ಸಂಖ್ಯೆ	
ದಿನಾಂಕ(ಆಗಸ್ಟ್)	ಪ್ರಯಾಣಿಕರು
11	93,120
13	97,297
14	1,09,693
16	1,00,066
18	96,026
ಬೆಳಿಗ್ಗೆ 7ರಿಂದ 11ರ ತನಕ (ದಟ್ಟಣೆ ಅವಧಿ)	
11	25,049
13	27,352
14	26,120
16	18,588
18	32,060
ಸಂಜೆ 4ರಿಂದ ರಾತ್ರಿ 9ರವರೆಗೆ (ದಟ್ಟಣೆ ಅವಧಿ)	
11	39,159
13	40,477
14	48,878
16	40,343
18	34,922

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂ. ಕಾನಿಇಂ(ವಿ)/ಸಕಾನಿಇಂ(ಕ)/ಯೋವಿ/ತು/2025–26/2836–38 ದಿನಾಂಕ : 25.08.2025
ಸಾರ್ವಜನಿಕ ಪ್ರಕಟಣೆ
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಬರಗೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ 1x8ಎಂ.ವಿ.ಎ., 66/11ಕೆ.ವಿ ಉಪಸ್ಥಾವರಕ್ಕೆ ಹಾಲಿ ಇರುವ 66/11ಕೆವಿ ಪಟ್ಟನಾಯಕನಹಳ್ಳಿ ಉಪಸ್ಥಾವರದಿಂದ 7.933 ಕಿಮೀ ಉದ್ದದ ದ್ವಿಮುಖ ಗೋಪುರಗಳ ಮೇಲೆ ಏಕಮುಖ ವಿದ್ಯುತ್ ಮಾರ್ಗ ಮತ್ತು 66/11ಕೆವಿ ಪಟ್ಟನಾಯಕನಹಳ್ಳಿ ಉಪಸ್ಥಾವರದಲ್ಲಿ ಒಂದು ಸಂಖ್ಯೆಯ ಟರ್ಮಿನಲ್ ಬೇ ನಿರ್ಮಾಣ ಕಾಮಗಾರಿಯನ್ನು ದಿನಾಂಕ: **28.08.2025** ರಂದು ಅಥವಾ ತದನಂತರ ವಿದ್ಯುದ್ದೀಕರಣಗೊಳಿಸಲಾಗುವುದು.
ಈ ಪ್ರಸರಣ ಮಾರ್ಗವು ತುಮಕೂರು ಜಿಲ್ಲೆ, ಗೌಡಗೆರೆ ಹೋಬಳಿ, ನಾದೂರು ಮತ್ತು ಹುಲಿಕುಂಟೆ ಹೋಬಳಿ, ಅಗ್ರಹಾರ ಗ್ರಾಮಗಳ ಸರಹದ್ದಿನಲ್ಲಿ ಹಾದು ಹೋಗಿರುತ್ತದೆ.
ಆದ್ದರಿಂದ ಈ ಮೇಲ್ಕಂಡ ಗ್ರಾಮದಲ್ಲಿ ಸಾರ್ವಜನಿಕರು ಗೋಪುರಗಳನ್ನು ಹತ್ತುವುದಾಗಲೀ, ಲೋಹದ ತಂತಿ, ಹಸಿರು ಬಳ್ಳಿ, ಕೊಂಬೆ ಇತ್ಯಾದಿಗಳನ್ನು ವಿದ್ಯುತ್ ಪ್ರವಹಿಸುವ ತಂತಿಗಳಿಗೆ ಎಸೆಯುವುದಾಗಲೀ ಅಥವಾ ದನಕರುಗಳನ್ನು ಗೋಪುರಗಳಿಗೆ ಕಟ್ಟುವುದಾಗಲಿ ಮಾಡಬಾರದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ. ಸದರಿ ದಿನಾಂಕದಂದು ಅಥವಾ ತದನಂತರವೂ ಕೂಡ ಯಾರಾದರೂ ಇಂತಹ ಕೃತ್ಯಗಳನ್ನು ಎಸಗಿದಲ್ಲಿ ಉಂಟಾಗುವ ಅಪಘಾತಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಯಾವುದೇ ರೀತಿಯಲ್ಲೂ ಜವಾಬ್ದಾರಿಯಾಗುವುದಿಲ್ಲ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಯೋಜನೆ ವಿಭಾಗ, ಕವಿಪ್ರನಿನಿ, ತುಮಕೂರು.

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಭಾಗ, ಚಿಕ್ಕಬಳ್ಳಾಪುರ.
ಸಂಖ್ಯೆ:07/2025–26 ದಿನಾಂಕ: 25.08.2025
ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ)
ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಸ್ತೆ ನಿರ್ವಹಣೆ ಕಾಮಗಾರಿಗಳಿಗೆ ಕೆ.ಡಬ್ಲ್ಯೂ–1,2&3 ರಂತೆ ಕಾರ್ಯಪಾಲಕ ಇಂಜಿನಿಯರ್, ಲೋ.ಇ ರವರು ರಾಜ್ಯಪಾಲರ ಪರವಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು https://kppp.karnataka.gov.in ದಿನಾಂಕ: 25.08.2025 ರಿಂದ 01.09.2025 ರವರೆಗೆ ಪಡೆದು ಸಂಜೆ 4:00 ಗಂಟೆಗಳ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ.
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:177/ಕೆಎಸ್‌ಎಂಸಿಎ/2025–26

ಪುರಸಭಾ ಕಾರ್ಯಾಲಯ, ಮಾಗಡಿ
ಕಛೇರಿ ದೂರವಾಣಿ ಸಂಖ್ಯೆ: 77 45221, ಸಹಾಯವಾಣಿ: 77 46748
e-mail: tmc_2007magadi@yahoo.co.in, itstaff1_ulb_magadi@yahoo.co.in
website: http://www.magaditown.mrc.gov.in
ಸಂ: ಪುಕಾಮಾ/ಪ.ಅ/ಟೆಂಡರ್/ಸಿಆರ್/10/2024–25 ದಿನಾಂಕ: 22.08.2025
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಮಾಗಡಿ ಪುರಸಭಾ ವ್ಯಾಪ್ತಿಯ 2025–26ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಯಂತ್ರೋಪಕರಣವನ್ನು ಸರಬರಾಜು ಮಾಡಲು ಮತ್ತು 2022–23ನೇ ಸಾಲಿನ ಪುರಸಭಾ ನಿಧಿಯಡಿ ಸೇವೆಗಳನ್ನು ನೀಡಲು ಕೆಳಕಂಡಂತೆ ಟೆಂಡರ್ ಕರೆಯಲಾಗಿದೆ.
1) DMA/2025-26/IND5187 ರೂ. 37.80 ಲಕ್ಷಗಳು. ಇಎಂಡಿ ರೂ. 74,000/–, ಮೀಸಲಾತಿ ಸಾಮಾನ್ಯ 2) DMA/2024-25/SE4511/ CALL-3 ರೂ. 10.00 ಲಕ್ಷಗಳು. ಇಎಂಡಿ ರೂ. 25,000/–, ಮೀಸಲಾತಿ ಸಾಮಾನ್ಯ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಮತ್ತು ನಿಯಮಗಳು 2000ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಅರ್ಹ ಗುತ್ತಿಗೆದಾರರು/ ಏಜೆನ್ಸಿರವರುಗಳು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ Website: www.kppp.karnataka.gov.in ಪೋರ್ಟಲ್‌ನಲ್ಲಿ Standard Bid Documentನ ನಿಯಮಗಳಂತೆ ಈ ಕೆಳಗೆ ನಿಗದಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸತಕ್ಕದ್ದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಜಿಲ್ಲಾ ಟೆಂಡರ್ ಬುಲೆಟಿನ್, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ದಕ್ಷಿಣ ಜಿಲ್ಲೆ ಹಾಗೂ ಪುರಸಭೆ ಮಾಗಡಿ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್ ಸೈಟ್ www.magaditown.mrc.gov.in ನಲ್ಲಿ ವೀಕ್ಷಿಸಬಹುದು.
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 08.09.2025 ಸಂಜೆ 5.30ಕ್ಕೆ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 10.09.2025 ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.
ಸಹಿ/– ಅಧ್ಯಕ್ಷರು ಪುರಸಭೆ, ಮಾಗಡಿ | ಸಹಿ/– ಉಪಾಧ್ಯಕ್ಷರು ಪುರಸಭೆ, ಮಾಗಡಿ | ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು ಪುರಸಭೆ, ಮಾಗಡಿ | ಸಹಿ/– ಮುಖ್ಯಾಧಿಕಾರಿ ಪುರಸಭೆ, ಮಾಗಡಿ
DIPR/SAD/303/SA/2025-26

ಮುಸ್ಲಿಂ ದಂಪತಿಯಿಂದ 5 ಸಾವಿರ ಹಿಂದೂ ಕುಟುಂಬಗಳಿಗೆ ಬಾಗಿನ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಗೌರಿ-ಗಣೇಶ ಹಬ್ಬದ ಅಂಗವಾಗಿ ಮುಸ್ಲಿಂ ಕುಟುಂಬದ ಜಬೀನಾತಾಜ್ ಮತ್ತು ಕೆ.ಎಸ್. ಪರ್ವೀಜ್ ದಂಪತಿ 5 ಸಾವಿರ ಹಿಂದೂ ಕುಟುಂಬಗಳಿಗೆ ಬಾಗಿನ ನೀಡಿದರು.

ಕಗ್ಗಲೀಪುರ ಮತ್ತು ಕಗ್ಗಲೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಕ್ಕೆ ಭೇಟಿ ನೀಡಿದ ಜಬೀನಾತಾಜ್ ಅವರು, ಕುಂಕುಮ, ಎರಡು ಡಜನ್ ಬಳೆ, ಒಣ ಕೊಬ್ಬರಿ, ಸೀರೆಯನ್ನು ಹೆಣ್ಣು ಮಕ್ಕಳಿಗೆ ನೀಡಿದರು. ಜೊತೆಗೆ ಪುರುಷರಿಗೂ ಶರ್ಟ್, ಪಂಚೆ, ಬನಿಯನ್‌ಗಳನ್ನು ವಿತರಿಸಲಾಯಿತು.

ಜಬೀನಾತಾಜ್ ಮಾತನಾಡಿ, 'ಹದಿನೈದು ವರ್ಷಗಳಿಂದ ಗೌರಿ-ಗಣೇಶನ ಹಬ್ಬಕ್ಕೆ ಬಾಗಿನ ನೀಡಲಾಗುತ್ತಿದೆ. ಇಲ್ಲಿ ಜಾತಿ, ಧರ್ಮ, ಬಡವ, ಶ್ರೀಮಂತ ಬರುವುದಿಲ್ಲ. ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಜೀವನ ಸಾಗಿಸುವುದೇ ಮಾನವ ಧರ್ಮ' ಎಂದು ಹೇಳಿದರು.

ಕೆ. ಎಸ್. ಪರ್ವೀಜ್ ಮಾತನಾಡಿ, 'ಸಹೋದರತ್ವ ಬಾಂಧವ್ಯ ಗಟ್ಟಿಗೊಳಿಸಲು ತಾಯಂದಿರಿಗೆ ಬಾಗಿನ ನೀಡಲಾಗುತ್ತಿದೆ' ಎಂದರು.


ಕಗ್ಗಲೀಪುರದಲ್ಲಿ ಮುಸ್ಲಿಂ ಕುಟುಂಬದ ಜಬೀನಾ ತಾಜ್ ಅವರು ಮಹಿಳೆಯರಿಗೆ ಬಾಗಿನ ನೀಡಿದರು

ವಿದ್ಯುತ್ ತಂತಿ ತಗುಲಿ ಇಬ್ಬರು ಸಾವು

ತೂಬಗೆರೆ (ದೊಡ್ಡಬಳ್ಳಾಪುರ): ತಾಲ್ಲೂಕಿನ ಕಾರನಾಳ ಗ್ರಾಮದಲ್ಲಿ ಮಂಗಳವಾರ ಸಂಜೆ ವಿದ್ಯುತ್ ತಂತಿ ತಗುಲಿ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ರಕ್ಷಿಸಲು ಹೋದ ಮಹಿಳೆ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತರನ್ನು ಸಂಜಯ್(43), ಲಲಿತಮ್ಮ(50) ಎಂದು ಗುರುತಿಸಲಾಗಿದೆ. ಗಾಯಗೊಂಡಿರುವ ಲಕ್ಷ್ಮಮ್ಮ(45) ಅವರನ್ನು ನಗರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಎಸ್‌ಬಿಸಿ–ಜಿಎಸ್‌ಯು–ಇಎನ್‌ಜಿಜಿ–2025–03
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ಕೋಚಿಂಗ್ ಡಿಪೋದಲ್ಲಿ 140ಟಿ ಕ್ರೇನ್ ಶೆಡ್, ಸೇವಾ ಕಟ್ಟಡ ಮತ್ತು ಹೆಚ್‌ಆರ್‌ಡಿ ಜೊತೆಗೆ ರೋಡ್ ಮೊಬೈಲ್ ಎಆರ್‌ಟಿ ಒಳಗೊಂಡಂತೆ ವಿಪತ್ತು ನಿರ್ವಹಣಾ ಸನ್ನದ್ಧತೆಗಾಗಿ ಮೂಲಸೌಕರ್ಯಗಳ ಅಭಿವೃದ್ಧಿ ಮತ್ತು ಎಂ&ಪಿಗಳೊಂದಿಗೆ ಸಂಬಂಧಿತ ಸೌಕರ್ಯಗಳು ಹಾಗೂ ಇತರ ಉಪಕರಣಗಳು (ಸಂಯೋಜಿತ ಟೆಂಡರ್)	ರೂ. 2,44,78,757.38

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11–09–2025 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಯೋಜನಾ ವ್ಯವಸ್ಥಾಪಕರು, ಗತಿ ಶಕ್ತಿ
ಪಿಯುಬಿ/405/ಎಎಂಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26 ಬೆಂಗಳೂರು
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಪ್ರಾಜೆಕ್ಟ್–ಎಸ್‌ಡಬ್ಲ್ಯುಆರ್–ಜಿಆರ್294–ಟಿಎಲ್–ಸಿಎಂವೈ ದಿನಾಂಕ : 19–08–2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
(1) 220/66ಕೆವಿ ಚಿಂತಾಮಣಿ ಸಬ್–ಸ್ಟೇಷನ್‌ನಲ್ಲಿ 1 ಸಂಖ್ಯೆಯ 66ಕೆವಿ ಟರ್ಮಿನಲ್ ಬೇ (2) 66ಕೆವಿ/11ಕೆವಿ ಚಿಂತಾಮಣಿ ಎಸ್/ಎಸ್ ನಿಂದ 220/66ಕೆವಿ ಚಿಂತಾಮಣಿ ಸಬ್–ಸ್ಟೇಷನ್‌ವರೆಗೆ 0.030 ಕಿಮೀ ಮಾರ್ಗ ಉದ್ದಕ್ಕಾಗಿ 66ಕೆವಿ 630 ಚಮಿಮೀ ಸಿಂಗಲ್ ಸರ್ಕ್ಯೂಟ್ ಯುಜಿ ಕೇಬಲ್ (3) 66ಕೆವಿ ಚಿಂತಾಮಣಿ ಎಸ್/ಎಸ್ ನಿಂದ 220ಕೆವಿ ಚಿಂತಾಮಣಿ ಸಬ್–ಸ್ಟೇಷನ್‌ವರೆಗೆ 0.150 ಕಿಮೀ. ಮಾರ್ಗ ಉದ್ದಕ್ಕಾಗಿ 66ಕೆವಿ ಮಾರ್ಗ – ಇವುಗಳ ವಿನ್ಯಾಸ, ಸರಬರಾಜು, ನಿರ್ಮಾಣ, ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.	ರೂ. 2,55,81,090.46

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 17–09–2025 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಪಿ&ಪಿ ಯೋಜನೆ / ಬೆಂಗಳೂರು
ಪಿಯುಬಿ/402/ಎಎಂಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR | SWRRLY | @SWRAILWAYHQ | @sw_railways



ಜಿಆರ್‌ಟಿ ಜ್ಯುವೆಲರ್ಸ್, ತಮಿಳುನಾಡಿನ ಕಿಡ್ನಿ ಸಂಶೋಧನಾ ಪ್ರತಿಷ್ಠಾನಕ್ಕೆ ₹1 ಕೋಟಿ ಕೊಡುಗೆ ನೀಡಿದೆ.

₹1 ಕೋಟಿ ದೇಣಿಗೆ ನೀಡಿದ ಜಿಆರ್‌ಟಿ ಜ್ಯುವೆಲರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಆರ್‌ಟಿ ಜ್ಯುವೆಲರ್ಸ್, ತಮಿಳುನಾಡು ಕಿಡ್ನಿ ಸಂಶೋಧನಾ ಪ್ರತಿಷ್ಠಾನಕ್ಕೆ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಡಿ (ಸಿಎಸ್‌ಆರ್) ₹1 ಕೋಟಿ ನೀಡಿದೆ.

ಈ ದೇಣಿಗೆಯಿಂದ ಉಚಿತ ಅಥವಾ ರಿಯಾಯಿತಿ ದರದಲ್ಲಿ ಸಾರ್ವಜನಿಕರಿಗೆ ವೈದ್ಯಕೀಯ ಸೌಲಭ್ಯ ದೊರೆಯಲಿದೆ ಎಂದು ಜಿಆರ್‌ಟಿ ಜ್ಯುವೆಲರ್ಸ್ ತಿಳಿಸಿದೆ.

'ನಮಗೆ, ವ್ಯವಹಾರ ಮತ್ತು ಸಮುದಾಯ ಎರಡು ಕಣ್ಣುಗಳಿದ್ದಂತೆ. ಸಮಾಜಕ್ಕೆ ಹಿಂತಿರುಗಿಸುವುದು ದಾನದ ಕಾರ್ಯವಲ್ಲ, ಬದಲಾಗಿ ನಾವು ಕೃತಜ್ಞತೆಯಿಂದ ನಿರ್ವಹಿಸುವ ಜವಾಬ್ದಾರಿಯಾಗಿದೆ' ಎಂದು ಜಿಆರ್‌ಟಿ ಜ್ಯುವೆಲ್ಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ರಾಧಾಕೃಷ್ಣನ್ ಹೇಳಿದ್ದಾರೆ.

ಜಿಆರ್‌ಟಿ ಜ್ಯುವೆಲ್ಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂತಪದ್ಮನಾಭನ್ ಮಾತನಾಡಿದರು.


ನಗರದಲ್ಲಿ ಇಂದು

ಗಣೇಶೋತ್ಸವದ ವಿಶೇಷ
ಆಯೋಜನೆ: ಚಂದ್ರಾ ಬಡಾವಣೆ ನಿವಾಸಿಗಳ ಸಂಘ, ಬೆಳಿಗ್ಗೆ 7ಕ್ಕೆ ಮೂಲ ಗಣಪತಿಗೆ ಅಭಿಷೇಕ, 10.30ಕ್ಕೆ ಗಣೇಶ ಮೂರ್ತಿ ಪ್ರತಿಷ್ಠಾಪನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5ಕ್ಕೆ ಭಜನೆ: ಕಾಳಿ ಭಕ್ತ ಮಂಡಳಿ, ಸ್ಥಳ: ಶ್ರೀ ಪ್ರಸನ್ನ ಗಣಪತಿ ದೇವಸ್ಥಾನ, ಚಂದ್ರ ಬಡಾವಣೆ
ಆಯೋಜನೆ ಮತ್ತು ಸ್ಥಳ: ಶಂಕರ್‌ನಾಗ್ ವಿನಾಯಕ ಗೆಳೆಯರ ಬಳಗ, ನಾಗದೇವನಹಳ್ಳಿ, ಬೆಳಿಗ್ಗೆ 8ರಿಂದ ಗಣೇಶನ ಮೂರ್ತಿ ಪ್ರತಿಷ್ಠಾಪನೆ, ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ, ಸಂಜೆ 5.30ಕ್ಕೆ ಮಹಾಮಂಗಳಾರತಿ, ನಾಗದೇವನಹಳ್ಳಿಯ ಜಿ. ತಿಮ್ಮಯ್ಯ ಲೇಔಟ್, ರಾಮನಾಥನಗರದ ಬೀದಿಗಳಲ್ಲಿ ವಿನಾಯಕನ ರಥೋತ್ಸವ
ಆಯೋಜನೆ ಮತ್ತು ಸ್ಥಳ: ಶ್ರೀ ಮುನೇಶ್ವರ ಗೆಳೆಯರ ಬಳಗ, ಮುನೇಶ್ವರ ದೇವಸ್ಥಾನ, ವಿನಾಯಕನಗರ, ವಿಕಾಸನಗರ, ಬೆಳಿಗ್ಗೆ 8.30ಕ್ಕೆ ಗೌರಿ ಗಣೇಶ ಮೂರ್ತಿ ಪ್ರತಿಷ್ಠಾಪನೆ, ಪ್ರಸಾದ ವಿನಿಯೋಗ, ರಂಗೋಲಿ ಸ್ಪರ್ಧೆ, ಮ್ಯೂಸಿಕಲ್ ಚೇರ್, ಮಡಿಕೆ ಹೊಡಿಯುವ ಸ್ಪರ್ಧೆ, ಸಂಜೆ 7.30ಕ್ಕೆ ರಸಮಂಜರಿ
ಆಯೋಜನೆ: ಬೆಂಗಳೂರು ಅಡ್ವೊಕೇಟ್ ಫ್ರೆಂಡ್ಸ್ ಸರ್ಕಲ್, ಬೆಂಗಳೂರು ವಕೀಲರ ಸಂಘ, ಬೆಳಿಗ್ಗೆ 9.30ಕ್ಕೆ ಗಣೇಶ ಮೂರ್ತಿ ಪ್ರತಿಷ್ಠಾಪನೆ, ಸಂಗೀತ ಕಛೇರಿ: ಅನಘ ಚಕ್ರವರ್ತಿ, ಸಹನಾ ಚಕ್ರವರ್ತಿ, ಸ್ಥಳ: ವಕೀಲರ ಸಂಘ, ಹೈಕೋರ್ಟ್ ಯೂನಿಟ್ ಹಾಲ್–1
ಆಯೋಜನೆ ಮತ್ತು ಸ್ಥಳ: ಶ್ರೀ ವಿನಾಯಕ ಮಿತ್ರ ಮಂಡಳಿ, ಹೆಣ್ಣೂರು ಬಡಾವಣೆ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಚಿಕ್ಕಣ್ಣ ಬಡಾವಣೆ, ಹೆಣ್ಣೂರು, ಗಣೇಶ ಮೂರ್ತಿಯ ಪ್ರತಿಷ್ಠಾಪನೆ, ಬೆಳಿಗ್ಗೆ 10.30
ಆಯೋಜನೆ ಮತ್ತು ಸ್ಥಳ: ಶ್ರೀವಿನಾಯಕ ಮಿತ್ರ ಮಂಡಳಿ, ಎಂಟನೇ ಬ್ಲಾಕ್, ಜಯನಗರ, ಬೆಳಿಗ್ಗೆ 10.30ಕ್ಕೆ ಗಣೇಶ ಮೂರ್ತಿ ಪ್ರತಿಷ್ಠಾಪನೆ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಅನುಪಮಾ ಶ್ರೀಮಾಲಿ, ಪಿಟೀಲು: ಪ್ರೇಮಾ ವಿವೇಕ್, ಮೃದಂಗ: ರಂಜನಿ ವೆಂಕಟೇಶ್, ಸಂಜೆ 6.30
ಆಯೋಜನೆ ಮತ್ತು ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಐದನೇ ಮುಖ್ಯರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ ಎರಡನೇ ಹಂತ, ಅತಿಥಿಗಳು: ಚೆನ್ನಣ್ಣ, ಉಪೇಂದ್ರ, ವಿಜಯ್, ಡಾಲಿ ಧನಂಜಯ್, ಯುವ ರಾಜ್‌ಕುಮಾರ್,

ಆಯೋಜನೆ ಮತ್ತು ಸ್ಥಳ: ಬೆಳಿಗ್ಗೆ 8.30ಕ್ಕೆ ಗೌರಿ–ಗಣೇಶ ಪ್ರತಿಷ್ಠಾಪನೆ, ಬೆಳಿಗ್ಗೆ 11ಕ್ಕೆ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ಮ್ಯೂಸಿಕಲ್ ಛೇರ್ ಸ್ಪರ್ಧೆ, ಮಕ್ಕಳಿಗೆ ಆಟೋಟ ಸ್ಪರ್ಧೆ. ರಾತ್ರಿ 7 ಗಂಟೆಗೆ ರಸಮಂಜರಿ ಕಾರ್ಯಕ್ರಮ, ಬಹುಮಾನ ವಿತರಣೆ. ಪ್ರಸಾದ ವಿನಿಯೋಗ- ಶ್ರೀ ಮುನೇಶ್ವರ ಗೆಳೆಯರ ಬಳಗ, ಮುನೇಶ್ವರ ದೇವಸ್ಥಾನ, ವಿನಾಯಕನಗರ, ವಿಕಾಸನಗರ

ಡಾ.ಸಿ.ಎನ್. ಮಂಜುನಾಥ್, ಸಂಜೆ 5ರಿಂದ
ಆಯೋಜನೆ: ಶ್ರೀ ವಿದ್ಯಾರಣ್ಯ ಯುವಕ ಸಂಘ, 63ನೇ ಬೆಂಗಳೂರು ಗಣೇಶೋತ್ಸವದ ಉದ್ಘಾಟನೆ: ಭಕ್ತಿ ಗೀತೆಗಳ ಗಾಯನ: ಎಂ.ಡಿ. ಪಲ್ಲವಿ, ಸ್ಥಳ: ಎಪಿಎಸ್ ಕಾಲೇಜಿನ ಮೈದಾನ, ಬಸವನಗುಡಿ, ಸಂಜೆ 5ರಿಂದ
ಮನುಷ್ಯತ್ವದೆಡೆಗೆ ಸಮುದಾಯ–50 ಜಾಥಾ, ನಾಟಕೋತ್ಸವ: ಸದ್ಭಾವನಾ ಗೀತೆಗಳ ಗಾಯನ: ಜೋಗಿಲ ಸಿದ್ಧರಾಜು, ಸಿ.ಎಂ. ನರಸಿಂಹಮೂರ್ತಿ ತಂಡ, ರಂಗ ಗೌರವ: ಆರ್.ಕೆ. ಹುಡಗಿ, ಸುರೇಂದ್ರರಾವ್ ಟಿ.ಎಸ್., ಲಕ್ಷ್ಮೀನಾರಾಯಣ, ಸುರೇಶ ಆನಗಳ್ಳಿ, ಕೆ. ಷರೀಫಾ, ಬಿ. ಜಯಶ್ರೀ, ಅತಿಥಿ: ಎಸ್. ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಆಯೋಜನೆ: ಸಮುದಾಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ನಗರದಲ್ಲಿ ನಾಳೆ
ಗಣೇಶೋತ್ಸವದ ವಿಶೇಷ
ಆಯೋಜನೆ: ಚಂದ್ರ ಬಡಾವಣೆ ನಿವಾಸಿಗಳ ಸಂಘ, ಬೆಳಿಗ್ಗೆ 9ಕ್ಕೆ ಗಣೇಶ ಮೂರ್ತಿಗೆ ದ್ರಾಕ್ಷಿ, ಗೋಡಂಬಿ, ಹೂವಿನ ಅಲಂಕಾರ, ಪ್ರಸಾದ ವಿನಿಯೋಗ, ಸಂಜೆ 6.30 ಭಸ್ಮಾಸುರ ಮೋಹಿನಿ ಪ್ರಸಂಗ, ಸ್ಥಳ: ಶ್ರೀ ಪ್ರಸನ್ನ ಗಣಪತಿ ದೇವಸ್ಥಾನ, ಚಂದ್ರ ಬಡಾವಣೆ
ಆಯೋಜನೆ: ಬೆಂಗಳೂರು ಅಡ್ವೊಕೇಟ್ ಫ್ರೆಂಡ್ಸ್ ಸರ್ಕಲ್, ಬೆಂಗಳೂರು ವಕೀಲರ ಸಂಘ, ಮಧ್ಯಾಹ್ನ 1.30ಕ್ಕೆ ಹಿಂದೂಸ್ತಾನಿ ಸಂಗೀತ ಕಛೇರಿ: ಕೀರ್ತಿ ಕುಮಾರ್ ಬಿ., ಸ್ಥಳ: ವಕೀಲರ ಸಂಘ, ಹೈಕೋರ್ಟ್ ಯೂನಿಟ್ ಹಾಲ್–1
ಆಯೋಜನೆ ಮತ್ತು ಸ್ಥಳ: ಶ್ರೀ ವಿನಾಯಕ ಮಿತ್ರ ಮಂಡಳಿ, ಹೆಣ್ಣೂರು ಬಡಾವಣೆ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಚಿಕ್ಕಣ್ಣ ಬಡಾವಣೆ, ಹೆಣ್ಣೂರು, ಮಧ್ಯಾಹ್ನ 12ಕ್ಕೆ ಅನ್ನ ಸಂತರ್ಪಣೆ, ಸಂಜೆ 6ಕ್ಕೆ ವಿವಿಧ
ಸಾಂಸ್ಕೃತಿಕ ಕಾರ್ಯಕ್ರಮಗಳು
ಆಯೋಜನೆ ಮತ್ತು ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಐದನೇ ಮುಖ್ಯರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ ಎರಡನೇ ಹಂತ, ಉತ್ತರ ಕರ್ನಾಟಕದ ಜನಪದ ಹಾಗೂ ಚಲನಚಿತ್ರ ಗೀತೆಗಳ ಗಾಯನ: ಕೊಪ್ಪಳದ ಶ್ರೀ ಗುರು ಅಭಿನವ ಮ್ಯೂಸಿಕಲ್ ಇವೆಂಟ್, ಸಂಜೆ 7ರಿಂದ
ಇತರೆ ಕಾರ್ಯಕ್ರಮ:
ಚಕೋರ 'ಕನ್ನಡ ಗೀತೆಗಳು–ಒಂದು ಅನುಸಂಧಾನ' ಉಪನ್ಯಾಸ: ಬಂಡ್ಲಹಳ್ಳಿ ವಿಜಯ್ ಕುಮಾರ್, ಉದ್ಘಾಟನೆ: ಲೋಕೇಶ್‌ಗೌಡ, ಅಧ್ಯಕ್ಷತೆ: ಬೆನಕ್ ಎಲ್. ಗೌಡ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ನ್ಯೂ ಬಾಲ್ಡ್‌ವಿನ್ ಇನ್‌ಸ್ಟಿಟ್ಯೂಷನ್ಸ್, ಲಕ್ಷ್ಮಣನಗರ, ಬೆಳಿಗ್ಗೆ 10
ರವಿವರ್ಮ ಕುಮಾರ್‌ಗೆ ಸನ್ಮಾನ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಅನು ಶಿವರಾಮನ್, ಎಚ್.ಟಿ. ನರೇಂದ್ರ ಪ್ರಸಾದ್, ಬಾನು ಮುಷ್ತಾಕ್, ಕೆ. ಶಶಿಕಿರಣ್ ಶೆಟ್ಟಿ, ಎ.ಎಸ್. ಪೊನ್ನಣ್ಣ, ಉದಯ್ ಹೊಳ್ಳ, ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ಬೆಂಗಳೂರು ವಕೀಲರ ಸಂಘ, ರವಿವರ್ಮ ಕುಮಾರ್ ಅಸೋಸಿಯೇಟ್ಸ್, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 5.30


ರವಿವರ್ಮ ಕುಮಾರ್

'ಜಪಾನಿಯರಂತೆ ಅಭಿವೃದ್ಧಿಯಾಗುವಲ್ಲಿ ನಾವು ವಿಫಲವಾಗಿರುವುದೆಲ್ಲಿ' ಉಪನ್ಯಾಸ: ರಮೇಶ್ ಕೆ.ಎನ್. ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30
'ಎಚ್ಚಮ ನಾಯಕ' ನಾಟಕ ಪ್ರದರ್ಶನ: ಆಯೋಜನೆ: ಕಾವೇರಿ ಕಲಾ ಸಂಘ, ಪಾಪು ಕಲಾವಿದರ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6.30

***

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in


Ganesha Habba Sale
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ನಿಶ್ಚಿತ ಕಡಿಮೆ ಬೆಲೆಯಲ್ಲಿ ಅಥವಾ 3 ಪಟ್ಟು ವ್ಯತ್ಯಾಸ ಪಡೆಯಿರಿ*
ಮಳಿಗೆಗಳು: 10AM - 10PM ತೆರೆದಿರುತ್ತದೆ
ಫೈನಾನ್ಸ್ ಬೊನಾಂಜಾ
1 ಇ.ಎಮ್.ಐ ಉಚಿತ*
UPTO ₹10,000 ಕ್ಯಾಶ್ ಬ್ಯಾಕ್*
ಕ್ಯಾಶ್‌ಬ್ಯಾಕ್ ಬೊನಾಂಜಾ
Upto 20% ಕ್ಯಾಶ್ ಬ್ಯಾಕ್*
ಎಕ್ಸ್‌ಚೇಂಜ್ ಬೊನಾಂಜಾ
UPTO ₹25,000
ವರೆಗೂ ಅಧಿಕ ಹಳೆಯ ಎಲೆಕ್ಟ್ರಾನಿಕ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು.
ಎಕ್ಸ್‌ಚೇಂಜ್ ಮೇಲೆ*
HDFC BANK We understand your world
10% OFF
INSTANT CASH BACK ON CC & DC EMI*
MIN TXN ₹17,000
MAX CAP ₹3,000
* T&C
ASSURED GIFTS ON ALL LG PRODUCTS*
BT SPEAKER INDUCTION COOKER STEAM IRON KETTLE DRY IRON
STORE LOCATOR
NEW LAUNCH ONLY @ GIRIAS
SAMSUNG 100 NEO Qಎಲ್.ಇ.ಡಿ 4K SMART TV 100QN80F
ಇ.ಎಮ್.ಐ ₹70,833
ಉಚಿತ: ₹124900 ಮೌಲ್ಯದ Q-SERIES SOUNDBAR 756W 11.1.4 CH. Q-SYMPHONY WITH WIRELESS DOLBY ATMOS
LG 77 OLED EVO TV A9 AI PROCESSOR 4K GEN8, VRR 144HZ REFRESH RATE, DOLBY VISION & ATMOS OLED77C5ELA
ಇ.ಎಮ್.ಐ ₹6,999
SONY 65 BRAVIA SERIES 4K ULTRA HD SMART Oಎಲ್.ಇ.ಡಿ GOOGLE TV K-65XR80M2
ಇ.ಎಮ್.ಐ ₹6,500
Panasonic 43 4K ULTRA HD LED SMART GOOGLE ಎಲ್.ಇ.ಡಿ
ಇ.ಎಮ್.ಐ ₹3,083
NVY LOWEST PRICE CHALLENGE 4K ಎಲ್.ಇ.ಡಿ 52% OFF*
Model | Price | EMI
43 SMART | ₹13,999 | ₹1,166
55 4K SMART | ₹29,490 | ₹2,457
vivo V60 UPTO 10% CASH BACK ಇ.ಎಮ್.ಐ ₹1,565 Onwards
ಉಚಿತ: ₹1649 ಮೌಲ್ಯದ BT NECKBAND
oppo F29 Pro UPTO 10% CASH BACK ಇ.ಎಮ್.ಐ ₹1,362 Onwards
ಉಚಿತ: ₹1649 ಮೌಲ್ಯದ BT NECKBAND
BIGGEST OPEN BOX SALE
LIMITED STOCKS. HURRY !!!
SAMSUNG 55 NEO QLED 4K SMART ಎಲ್.ಇ.ಡಿ 55QN90D BEST PRICE ₹89,900 ನಿಗದಿತ ವೆಚ್ಚಗಳು ಇಲ್ಲ
LG 55 OLED evo 4K SMART ಎಲ್.ಇ.ಡಿ OLED55C46LA BEST PRICE ₹99,900 ನಿಗದಿತ ವೆಚ್ಚಗಳು ಇಲ್ಲ
Haier 598 LTR, INOX STEEL FINISH, 3 DOOR ಸೈಡ್ ಬೈ ಸೈಡ್ ರೆಫ್ರಿಜರೇಟರ್ BEST PRICE ₹74,990 ನಿಗದಿತ ವೆಚ್ಚಗಳು ಇಲ್ಲ
BOSCH 10 ಕೆಜಿ FULLY AUTOMATIC ಫ್ರಂಟ್ ಲೋಡಿಂಗ್ ವಾಷಿಂಗ್ ಮೆಷಿನ್ BEST PRICE ₹39,900 ನಿಗದಿತ ವೆಚ್ಚಗಳು ಇಲ್ಲ
SAMSUNG FOLD 7 UPTO ₹12,000* CASH BACK ಇ.ಎಮ್.ಐ ₹7,291 Onwards
ಉಚಿತ: ₹3999 @ ₹99 ಮೌಲ್ಯದ MAG SAFE POWER BANK
iPhone 16 / 16Pro ಇ.ಎಮ್.ಐ ₹3,145 Onwards
ಉಚಿತ: ₹3999 ಮೌಲ್ಯದ MAG SAFE POWER BANK
Lenovo SLIM 3I UPTO 10% CASH BACK • 13TH GEN I7 • 16GB RAM • 512GB SSD • 15.6 WXGA • WIN 11 MSO 24 OFFER PRICE ₹65,990
ಉಚಿತ: ₹3990 ಮೌಲ್ಯದ BAG + 64GB PEN W/L MOUSE + QUICKHEAL INTERNET SECURITY
DELL 3530 UPTO 10% CASH BACK • 13TH GEN I5 • 16GB RAM • 512GB SSD • 15.6 FHD • WIN 11 MSO 24 OFFER PRICE ₹50,990
ಉಚಿತ: ₹3990 ಮೌಲ್ಯದ BAG + 64GB PEN W/L MOUSE + QUICKHEAL INTERNET SECURITY
hp VICTUS UPTO 10% CASH BACK • RYZEN 5 5600H • 16GB, 512GB SSD • 4GB GFX • 15.6 FHD, • WIN 11 OFFER PRICE ₹54,990
ಉಚಿತ: ₹4990 ಮೌಲ್ಯದ BAG + 64GB PENDRIVE + W/L COMBO KEYBOARD MOUSE + QUICKHEAL INTERNET SECURITY
xiaomi Redmi NOTE 14 5G ₹1,750* CASH BACK ಇ.ಎಮ್.ಐ ₹1,417 Onwards
ಉಚಿತ: ₹1649 ಮೌಲ್ಯದ BT NECKBAND
LG 650ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್, WI-FI CONVERTIBLE, DOORCOOLING+™ B257DBM3 ಇ.ಎಮ್.ಐ ₹4,999
SAMSUNG 653 ಲೀ CONVERTIBLE 5-IN-1 DIGITAL INVERTER, ಸೈಡ್ ಬೈ ಸೈಡ್ AI ENABLED SMART REFRIGERATOR RS76CB81A333HL ಇ.ಎಮ್.ಐ ₹4,990
Electrolux 600 ಲೀ ULTIMATETASTE FRENCH DOOR REFRIGERATOR ಇ.ಎಮ್.ಐ ₹9,274
Godrej 600 ಲೀ SMART CONVERTIBLE ZONES | TOUGHENED GLASS DOOR SIDE BY SIDE REFRIGERATOR ಇ.ಎಮ್.ಐ ₹4,111
IFB DEEPCLEAN® 9ಕೆಜಿ ಫ್ರಂಟ್ ಲೋಡಿಂಗ್ ವಾಷಿಂಗ್ ಮೆಷಿನ್ WITH STEAM REFRESH ಇ.ಎಮ್.ಐ ₹3,874
Whirlpool XPERT CARE 8ಕೆಜಿ ಫ್ರಂಟ್ ಲೋಡಿಂಗ್ ವಾಷಿಂಗ್ ಮೆಷಿನ್ WITH OZONE AIR REFRESH TECHNOLOGY & HEATER (INVERTER) ಇ.ಎಮ್.ಐ ₹2,991
BOSCH FREE-STANDING DISHWASHER 60 CM BRUSHED STEEL ANTI-FINGERPRINT ಇ.ಎಮ್.ಐ ₹5,833
NEW LAUNCH ONLY @ GIRIAS Haier 305 ಲೀ, SINGLE DOOR VISI COOLER ಇ.ಎಮ್.ಐ ₹2,299
Preethi ಮಿಕ್ಸರ್ ಗ್ರೈಂಡರ್ ZODIAC BEST PRICE ₹9,599
ಉಚಿತ: ₹999 ಮೌಲ್ಯದ PHILIPS COOK & SERVE
Racold ಗೀಸರ್:CDR/DLX SP 25V BEST PRICE ₹8,790
ಉಚಿತ: ₹1525 ಮೌಲ್ಯದ MILTON 3PC PEARL CASSEROLE
VL ವೆಟ್ ಗ್ರೈಂಡರ್:PYRAMIDA BEST PRICE ₹4,890
ಉಚಿತ: ₹2699 ಮೌಲ್ಯದ PREETHI P/C NEO 5L ALUMINIUM
EUREKA FORBES ವಾಟರ್ ಪ್ಯೂರಿಫೈಯರ್:AQUAGUARD ENHANCE NXT 2X LIFE RO+UV+TA BEST PRICE ₹15,990
ಉಚಿತ: ₹1099 ಮೌಲ್ಯದ PREETHI MILTON ESSENZA GIFT SET
LG 28 ಲೀ ಕನ್‌ವೆಕ್ಷನ್ ಮೈಕ್ರೋವೇವ್ MC2846BR ಇ.ಎಮ್.ಐ ₹1,358
LG ಸೌಂಡ್‌ಬಾರ್ 5.1 CHANNEL 600W, AI SOUND PRO, DOLBY DIGITAL S65TR ₹1,500* CASH BACK ಇ.ಎಮ್.ಐ ₹1,791
LG SAMSUNG SONY Panasonic Haier NVY IFB Godrej LLOYD Whirlpool BOSCH PHILIPS hp acer DELL Lenovo ASUS vivo oppo ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬಿಡದಿ 8792565415 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಬೊಮ್ಮನಹಳ್ಳಿ 9035499022 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಳವಳ್ಳಿ 8792553793 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸರ್ಜಾಪುರ 95911 03536 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರ್ಯಾಂಡ್‌ಗಳು ಮತ್ತು ಮಾದರಿಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 EMI ರಿಯಾಯಿತಿ. 3 EMI ಅನ್ನು ಕ್ಲಿಯರ್ ಮಾಡಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / BFL ವ್ಯಾಲೆಟ್‌ಗೆ ಜಮಾ ಮಾಡಲಾಗುತ್ತದೆ. ರೂ.10000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ REF ಮತ್ತು AC ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಉತ್ತಮ ಕೆಲಸದ ಸ್ಥಿತಿಯಲ್ಲಿರಲು MRP ಮತ್ತು ಉತ್ಪನ್ನದ ಮೇಲೆ ವಿನಿಮಯ ಕೊಡುಗೆ ಮಾನ್ಯವಾಗಿರುತ್ತದೆ.
178 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA www.roundtableindia.org www.ladiescircleindia.org

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ದುಃಖವನ್ನು ದೂರ ಸರಿಸುವುದಕ್ಕೆ ಯತ್ನ ಮಾಡಿದಷ್ಟೂ ಅದು ಹೆಗಲನ್ನೇರುವುದು.

–ರವೀಂದ್ರನಾಥ ಟ್ಯಾಗೋರ್

ಸಂಪಾದಕೀಯ

ಅಪಘಾತ ಮತ್ತು ಸಾವುಗಳ ಹೆಚ್ಚಳ ಬಿಎಂಟಿಸಿಗೆ ಅವಲೋಕನದ ಕಾಲ

ಗುಣಮಟ್ಟ ಹಾಗೂ ಸೇವೆಯಲ್ಲಿನ ದಕ್ಷತೆಯ ಕಾರಣದಿಂದಾಗಿ ದೇಶದಲ್ಲೇ ಹೆಸರು ಮಾಡಿರುವ 'ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ' (ಬಿಎಂಟಿಸಿ) ಬಸ್‌ಗಳು, ಈಗ ಅಪಘಾತ ಮತ್ತು ಜೀವಹಾನಿ ಕಾರಣದಿಂದಾಗಿ ಸುದ್ದಿಯಲ್ಲಿವೆ. 2024ರಿಂದ ಇಲ್ಲಿಯವರೆಗೆ ಬಿಎಂಟಿಸಿ ಬಸ್ ಅಪಘಾತಗಳಲ್ಲಿ 80 ಜನ ಮೃತಪಟ್ಟಿದ್ದಾರೆ ಎನ್ನುವ ಬೆಂಗಳೂರು ಸಂಚಾರ ಪೊಲೀಸ್ ಅಂಕಿಅಂಶಗಳು ಆತಂಕ ಹುಟ್ಟಿಸುವಂತಿವೆ. 2024ರಲ್ಲಿ ಬಿಎಂಟಿಸಿ ಬಸ್‌ಗಳು ಒಳಗೊಂಡ 190 ರಸ್ತೆ ಅಪಘಾತಗಳು ವರದಿಯಾಗಿದ್ದು, ಆ ಘಟನೆಗಳಲ್ಲಿ 42 ಜನ ಸಾವಿಗೀಡಾಗಿದ್ದರು. ಈ ವರ್ಷ ಇಲ್ಲಿಯವರೆಗೆ 121 ಅಪಘಾತ ಪ್ರಕರಣಗಳು ದಾಖಲಾಗಿದ್ದು, 38 ಜನರು ಮೃತಪಟ್ಟಿದ್ದಾರೆ. ಪ್ರಸ್ತುತ, ಆಗಸ್ಟ್ ತಿಂಗಳೊಂದರಲ್ಲಿಯೇ ಇಬ್ಬರು ಮಕ್ಕಳು ಸೇರಿ ಐದು ಮಂದಿ ಮೃತಪಟ್ಟಿದ್ದಾರೆ. ಹನ್ನೊಂದು ವರ್ಷದ ಬಾಲಕನೊಬ್ಬ ಬಸ್ ಚಕ್ರಕ್ಕೆ ಸಿಲುಕಿ ಮೃತಪಟ್ಟಿರುವ ಘಟನೆ ಇತ್ತೀಚೆಗಷ್ಟೇ ನಡೆದಿದೆ. ರಸ್ತೆ ಬದಿಯಲ್ಲಿ ನಿಂತಿದ್ದವರ ಮೇಲೆ ಬಸ್ ಹರಿದಿದ್ದರಿಂದಾಗಿ ಮಗು ಸೇರಿದಂತೆ ಐವರು ಗಾಯಗೊಂಡು, ಮಹಿಳೆಯೊಬ್ಬರು ಸಾವಿಗೀಡಾದ ಘಟನೆ ಕಳೆದ ವಾರ [illegible] ನಡೆದಿದೆ. ಈ ಘಟನೆಗಳು ಸಾರ್ವಜನಿಕರಲ್ಲಿ ಭಯಹುಟ್ಟಿಸುವಂತಿವೆ ಹಾಗೂ ಬಿಎಂಟಿಸಿ ಬಸ್‌ಗಳ ಸಂಚಾರ ಸುರಕ್ಷಿತ ಎನ್ನುವುದರ ಬಗ್ಗೆ ಅನುಮಾನ ಮೂಡಿಸುವಂತಿವೆ. ಅಪಘಾತಗಳಿಗೆ ಸಂಬಂಧಿಸಿದ ಘಟನೆಗಳು ಹಾಗೂ ಅಂಕಿಅಂಶಗಳು ಬಿಎಂಟಿಸಿ ಬಸ್ ಕಾರ್ಯಾಚರಣೆಯಲ್ಲಿ ಇರಬಹುದಾದ ಸಮಸ್ಯೆ ಮತ್ತು ಲೋಪಗಳ ಕುರಿತು ಅವಲೋಕನಕ್ಕೆ ಒತ್ತಾಯಿಸುವಂತಿವೆ.

ಅಪಘಾತಕ್ಕೆ ಸಾಮಾನ್ಯ ಕಾರಣಗಳಾದ ವೇಗದ ಚಾಲನೆ ಹಾಗೂ ಅಜಾಗರೂಕತೆಯನ್ನು ಬಿಎಂಟಿಸಿ ಬಸ್‌ಗಳಿಂದ ಉಂಟಾಗುವ ಅಪಘಾತಗಳಲ್ಲೂ ಕಾಣಬಹುದು. ಕೆಲವು ಚಾಲಕರು ಮೊಬೈಲ್ ಫೋನ್‌ನಲ್ಲಿ ಮಾತನಾಡಿಕೊಂಡು ಚಾಲನೆ ಮಾಡುವುದರ ಬಗ್ಗೆ ದೂರುಗಳಿವೆ. ಇವೆಲ್ಲದರ ಜೊತೆಗೆ ಬಿಎಂಟಿಸಿ ಚಾಲಕರ ಮೇಲೆ ಅತೀವ ಒತ್ತಡ ಇದೆ ಎನ್ನಲಾಗುತ್ತಿದೆ. ನಿಗದಿತ ಸಮಯದೊಳಗೆ ಟ್ರಿಪ್ ಪೂರೈಸಬೇಕೆನ್ನುವ ಕೆಲಸದ ಒತ್ತಡ ಹಾಗೂ ಡಿಪೊಗೆ ತಡವಾಗಿ ಹೋದರೆ ವೇತನ ಕಡಿತವಾಗುತ್ತದೆ ಎನ್ನುವ ಆತಂಕ ಚಾಲಕರು ಅತಿವೇಗದ ಚಾಲನೆ ಮಾಡಲು ಕಾರಣವಾಗುತ್ತದೆ. ಬೆಂಗಳೂರಿನ ಸಂಚಾರ ದಟ್ಟಣೆಯಲ್ಲಿ ಸುರಕ್ಷಿತವಾಗಿ ಚಾಲನೆ ಮಾಡುವುದು ಯಾವುದೇ ಚಾಲಕನಿಗೂ ಸವಾಲಿನ ವಿಷಯ. ಅದರಲ್ಲೂ, ಬಸ್‌ಗಳಂಥ ದೊಡ್ಡ ವಾಹನಗಳ ಚಾಲನೆ ಹೆಚ್ಚಿನ ಕೌಶಲ ಹಾಗೂ ಸಾವಧಾನವನ್ನು ಅಪೇಕ್ಷಿಸುತ್ತದೆ. ಅಗತ್ಯಬಿದ್ದಲ್ಲಿ ಚಾಲಕನ ಕೆಲಸವನ್ನೂ ನಿರ್ವಾಹಕ ಮಾಡುವ ಸವ್ಯಸಾಚಿ ಕೌಶಲದಿಂದ ಸಂಸ್ಥೆಗೆ ಅನುಕೂಲ ಇದೆಯಾದರೂ, ಸಾರ್ವಜನಿಕ ಹಿತದ ದೃಷ್ಟಿಯಿಂದ ಅದು ಅಪಾಯಕಾರಿ.



ಬಿಎಂಟಿಸಿ ಬಸ್‌ಗಳಿಂದ ಅಪಘಾತ ಮತ್ತು ಸಾವು–ನೋವು ಹೆಚ್ಚುತ್ತಿರುವುದು ಕಳವಳಕಾರಿ. ಸಾರ್ವಜನಿಕ ಸಾರಿಗೆ ಸಂಸ್ಥೆ, ನಾಗರಿಕರಲ್ಲಿ ಸುರಕ್ಷಿತ ಭಾವ ಹುಟ್ಟಿಸಬೇಕೇ ಹೊರತು ಭಯವನ್ನಲ್ಲ.

ಅಪಘಾತಗಳನ್ನು ತಪ್ಪಿಸುವ ಉದ್ದೇಶದಿಂದ ಬಿಎಂಟಿಸಿ ಹಲವು ಕ್ರಮಗಳನ್ನು ಕೈಗೊಂಡಿದೆ. ಚಾಲಕರ ಜೊತೆಗೆ ಸಾರ್ವಜನಿಕರಲ್ಲೂ ರಸ್ತೆ ಸುರಕ್ಷತಾ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಟ್ರಿಪ್‌ಗಳ ಸಮಯ ಪರಿಷ್ಕರಣೆಯ ಮೂಲಕ ಚಾಲಕರ ಮೇಲಿನ ಒತ್ತಡ ಕಡಿಮೆ ಮಾಡುವ ಪ್ರಯತ್ನಗಳೂ ನಡೆದಿವೆ. ಅಪಘಾತರಹಿತ ಚಾಲನೆ ಮಾಡಿದವರಿಗೆ ಚಿನ್ನ, ಬೆಳ್ಳಿ ಪದಕ ನೀಡಿ ಗೌರವಿಸುವುದರೊಂದಿಗೆ, ಅಪಘಾತ ಎಸಗುವ ಚಾಲಕರ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ. 'ಎಲ್ಲ ಅಪಘಾತಗಳು ಬಿಎಂಟಿಸಿ ಚಾಲಕರ ತಪ್ಪಿನಿಂದಲೇ ನಡೆಯುತ್ತಿವೆ ಎಂಬ ತಪ್ಪು ಕಲ್ಪನೆ ಜನರಲ್ಲಿದೆ. ಶೇ 60ರಷ್ಟು ಅಪಘಾತಕ್ಕೆ ಚಾಲಕರು ಕಾರಣರಾಗಿರುವುದಿಲ್ಲ. ನಮ್ಮ ಚಾಲಕರು ಉತ್ತಮ ತರಬೇತಿ ಪಡೆದವರು ಮತ್ತು ವೃತ್ತಿಪರರು' ಎಂದು ಸಾರಿಗೆ ಸಚಿವರು ಹೇಳಿದ್ದಾರೆ. ಸಚಿವರ ಮಾತಿನ ತರ್ಕವನ್ನೇ ಅನುಸರಿಸಿದರೂ, ಶೇ 40ರಷ್ಟು ಅಪಘಾತಗಳಿಗೆ ಚಾಲಕರು ಕಾರಣ ಎನ್ನುವುದು ಬಿಎಂಟಿಸಿಗೆ ಗೌರವ ತರುವಂತಹ ಸಂಗತಿಯಲ್ಲ. ಅಪಘಾತ ಆಗದೆ ಇರುವುದರಲ್ಲಿ ಚಾಲಕನ ಜವಾಬ್ದಾರಿಯಷ್ಟೇ ಇರದೆ, ಸಾರಿಗೆ ಸಂಸ್ಥೆಯ ಹೊಣೆಗಾರಿಕೆಯೂ ಇರುತ್ತದೆ. ಚಾಲಕನ ಕೌಶಲಗಳನ್ನು ಹೆಚ್ಚಿಸುವುದರ ಜೊತೆಗೆ, ಆದಷ್ಟೂ ಒತ್ತಡರಹಿತವಾಗಿ ಕೆಲಸ ಮಾಡುವ ಪರಿಸರವನ್ನು ಸೃಷ್ಟಿಸುವುದು ಸಂಸ್ಥೆಯ ಹೊಣೆಗಾರಿಕೆಯೇ ಆಗಿದೆ. ಒತ್ತಡ ನಿರ್ವಹಣೆಗೆ ಸಂಬಂಧಿಸಿದಂತೆ ಚಾಲಕರಿಗೆ ಮಾನಸಿಕ ತಜ್ಞರ ಸಲಹೆ ದೊರಕಿಸಿಕೊಡುವ ನಿಟ್ಟಿನಲ್ಲಿ ಬಿಎಂಟಿಸಿ ಪ್ರಯತ್ನಿಸಬಹುದು. ಕೊರೊನಾ ನಂತರವಂತೂ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಮೊದಲಿನಷ್ಟು ಪರಿಣಾಮಕಾರಿ ಆಗಿ ಉಳಿದಿಲ್ಲ. ನಗರದ ಬೆಳವಣಿಗೆಯ ವೇಗಕ್ಕೆ ತಕ್ಕಂತೆ ಬಿಎಂಟಿಸಿ ಕಾರ್ಯ ವ್ಯಾಪ್ತಿ ಹಿಗ್ಗುತ್ತಿಲ್ಲ. ನೌಕರರೊಂದಿಗೆ ಸಾರ್ವಜನಿಕರ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವ ಬಹುದೊಡ್ಡ ಸವಾಲನ್ನು ಬಿಎಂಟಿಸಿ ಎದುರಿಸುತ್ತಿದೆ. ಅಪಘಾತಗಳ ಸಂಖ್ಯೆಯನ್ನು ನಿಯಂತ್ರಿಸದೆ ಹೋದರೆ, ಸಂಸ್ಥೆಯ ವರ್ಚಸ್ಸು ಮತ್ತಷ್ಟು ಮಸುಕಾಗಲಿದೆ.

ಚಾಟಿ

ಧರ್ಮ ಮತ್ತು ಸಂಸ್ಕೃತಿ



ಧರ್ಮ ಮತ್ತು ಸಂಸ್ಕೃತಿ ಒಂದರ ಎದುರು ಮತ್ತೊಂದನ್ನು ಇಟ್ಟು ನೋಡುವ ವಿಷಯಗಳಲ್ಲ. ನಮ್ಮ ಎಲ್ಲಾ ಹಬ್ಬಗಳಲ್ಲೂ ಮನೆಯ ಒಳಗೆ ನಡೆಯುವ ಧಾರ್ಮಿಕ ಆಚರಣೆ ಎಂದು ಕರೆಯಬಹುದಾದ ಅಂಶ ಮತ್ತು ಅದಕ್ಕೆ ಬೆರೆತುಕೊಂಡಂತೆ ಸಮುದಾಯ ಒಟ್ಟಿಗೆ ಸೇರಿ ನಡೆಸುವ ಸಾಂಸ್ಕೃತಿಕ ಎನ್ನಬಹುದಾದ ಆಚರಣೆಗಳು ಇರುತ್ತವೆ.

ಶಶಾಂಕ ಪರಾಶರ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಜನರ ನಂಬಿಕೆಯನ್ನು ಕಳೆದುಕೊಂಡಿದೆ. ಹಾಗಾಗಿ, ದೇಶದಾದ್ಯಂತ ಮತ ಕಳ್ಳತನಕ್ಕೆ ಸಂಚು ರೂಪಿಸುತ್ತಿದೆ.

ಪ್ರಿಯಾಂಕಾ ಗಾಂಧಿ, ಕಾಂಗ್ರೆಸ್ ಸಂಸದೆ

25 ವರ್ಷಗಳ ಹಿಂದೆ

ಭಾನುವಾರ, 27-8-2000

- **ಅಬ್ಬರದ ಮಳೆ: ಜಲಾಶಯ ಭರ್ತಿ**

ಬೆಂಗಳೂರು, ಆಗಸ್ಟ್ 26– ಕಳೆದ ಕೆಲವು ದಿನಗಳಿಂದ ರಾಜ್ಯದ ಪ್ರಮುಖ ನದಿಗಳ ಜಲಾನಯನ ಪ್ರದೇಶದಲ್ಲಿ ಬೀಳುತ್ತಿರುವ ಸತತ ಮಳೆಯಿಂದ ಕೃಷ್ಣರಾಜಸಾಗರ, ಹಾರಂಗಿ, ಹೇಮಾವತಿ ಸೇರಿದಂತೆ ಬಹುತೇಕ ಜಲಾಶಯಗಳು ಭರ್ತಿ ಹಂತ ತಲುಪಿದ್ದು, ರೈತರಲ್ಲಿ ಹರ್ಷ ಚಿಮ್ಮಿದೆ.

ಕೆ.ಆರ್. ಸಾಗರ ಜಲಾಶಯ ತನ್ನ ಗರಿಷ್ಠ ಮಟ್ಟಕ್ಕೆ ಭರ್ತಿಯಾಗಲು ಇನ್ನು ಕೇವಲ ಮೂರೂವರೆ ಅಡಿ ಮಾತ್ರ ನೀರು ಬರಬೇಕಿದ್ದರೆ, ಹಾರಂಗಿ ಗರಿಷ್ಠ ಮಟ್ಟ ಮುಟ್ಟಲು ಕೇವಲ ಎರಡು ಅಡಿ ಮಾತ್ರ ನೀರು ಬರಬೇಕು.

- **ಶೀಘ್ರ ಕರ್ನಾಟಕ ಜೀವ ಪರಿಸರ ವೈವಿಧ್ಯ ಮಂಡಳಿ**

ಬೆಂಗಳೂರು, ಆಗಸ್ಟ್ 26– ರಾಜ್ಯದಲ್ಲಿನ ಜೀವ ಪರಿಸರ ವೈವಿಧ್ಯದ ಸೂಕ್ತ ರಕ್ಷಣೆ, ಬಳಕೆ ಮತ್ತು ನಿರ್ವಹಣೆಗಾಗಿ ಶೀಘ್ರದಲ್ಲಿಯೇ 'ಕರ್ನಾಟಕ ಜೀವ ಪರಿಸರ ವೈವಿಧ್ಯ ಮಂಡಳಿ'ಯನ್ನು ರಚಿಸಲಾಗುವುದು.

ಈ ವಿಚಾರವನ್ನು ಅರಣ್ಯ ಸಚಿವ ಕೆ.ಎಚ್. ರಂಗನಾಥ್ ಇಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿ, ಮಂಡಳಿಯಲ್ಲಿ ಈ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡಿದ ತಜ್ಞರು ಇರುತ್ತಾರೆ ಎಂದರು.

75 ವರ್ಷಗಳ ಹಿಂದೆ

ಭಾನುವಾರ, 27-8-1950

- **ಕಾಶಿ ನಗರದಲ್ಲಿ ಶ್ವಾನ ವಿವಾಹ**

ಕಾಶಿ, ಆಗಸ್ಟ್ 26– ನಾಯಿಗಳ ಮದುವೆಗಾಗಿ ಇಲ್ಲಿಯ ದರ್ಜಿಯೊಬ್ಬನು ಕಳೆದ ಸಂಜೆ 2,000 ರೂಪಾಯಿಗಳನ್ನು ವೆಚ್ಚ ಮಾಡಿದ. ಒಂದು ವರ್ಷದ ತನ್ನ ಮುದ್ದು ನಾಯಿಯನ್ನು ಮೆರವಣಿಗೆಯಲ್ಲಿ ಬ್ಯಾಂಡ್ ಸಮೇತ (ಹಿಂದೆ ಮದುವೆ ಮನೆಯ ಜನರಿದ್ದರು) ಗಡಿಯಾರದವನ ಮನೆಗೆ ಕರೆದೊಯ್ದನು. ಈತನ, ಅದೇ ಜಾತಿಯ ಹೆಣ್ಣು ನಾಯಿಯೇ ವಧು.

ದರ್ಜಿಯೂ, ಗಡಿಯಾರದವನೂ ತಮ್ಮ ಮುದ್ದು ನಾಯಿಮರಿಗಳ ವಿವಾಹೋತ್ಸವದ ಸಂದರ್ಭದಲ್ಲಿ ನೆರೆದಿದ್ದ ಜನರನ್ನು ಮನರಂಜನೆಯಿಂದ ಆನಂದಗೊಳಿಸಿದರು.

- **ಉತ್ತರ ಪ್ರದೇಶದಲ್ಲಿ ಎಂಟು ನದಿಗಳಲ್ಲಿ ಹುಚ್ಚು ಪ್ರವಾಹ**

ಲಕ್ನೋ, ಆಗಸ್ಟ್ 26– ಗಂಗಾ ಮತ್ತು ಸರಯೂ ನದಿಗಳನ್ನೂ ಸೇರಿಸಿಕೊಂಡು 8 ನದಿಗಳಲ್ಲಿ ಹುಚ್ಚು ಪ್ರವಾಹ ಬಂದುದರ ಪರಿಣಾಮವಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ.

ವೃತ್ತಿರಂಗಭೂಮಿಯ ಸಂಕ್ರಮಣ



ವಿಶ್ಲೇಷಣೆ

ಮಲ್ಲಿಕಾರ್ಜುನ ಕಡಕೋಳ

> ಆಧುನಿಕ ಮಾಧ್ಯಮಗಳ ಭರಾಟೆಯ ನಡುವೆಯೂ ವೃತ್ತಿರಂಗಭೂಮಿಯ ಚಟುವಟಿಕೆಗಳು ತಮ್ಮಷ್ಟಕ್ಕೆ ತಾವು ನಡೆಯುತ್ತಿವೆ. ಬೆಂಗಳೂರಿನಾಚೆಗೆ ಹೆಚ್ಚು ಸಕ್ರಿಯವಾಗಿರುವ ಈ ರಂಗಪ್ರಯೋಗಗಳು ರಂಗಭೂಮಿಯ ಮಾತೃ ಮಾದರಿಗಳನ್ನು ವರ್ತಮಾನದಲ್ಲಿ ಜೀವಂತಗೊಳಿಸುವ ವಿಶಿಷ್ಟ ಪ್ರಯತ್ನಗಳಾಗಿವೆ.

ಕನ್ನಡ ರಂಗಭೂಮಿಯದು ನೂರೈವತ್ತಕ್ಕೂ ಹೆಚ್ಚು ವರ್ಷಗಳ ಇತಿಹಾಸ. ಆ ಒಂದೂವರೆ ಶತಮಾನ ದುದ್ದಕ್ಕೂ ವೃತ್ತಿರಂಗಭೂಮಿಯ ಸುದೀರ್ಘ ಪಯಣದ ಚರಿತ್ರೆಯೂ ಇದೆ. 'ಪ್ರೊಸಿನಿಯಂ' ಮಾದರಿಯ ವೃತ್ತಿರಂಗಭೂಮಿ, ಪಾರ್ಸಿ ಮತ್ತಿತರೆ ಪ್ರಭಾವಗಳಿಂದ ಬೃಹದಾಕಾರವಾಗಿ ಬೆಳೆಯಿತು. ಪುರಾಣೇತಿಹಾಸ, ಸ್ವಾತಂತ್ರ್ಯ ಚಳವಳಿ, ಖಾದಿ ಚಳವಳಿ, ದೇಶಭಕ್ತಿ, ಸಮಾಜೋಧಾರ್ಮಿಕ ನೀತಿ, ಅವಿಭಜಿತ ಕುಟುಂಬ ಪ್ರೀತಿ, ಮುಂತಾದ ಗುಣಾತ್ಮಕ ದೇಸಿ ಸಂವೇದನೆಗಳ 'ರಂಗಸಂಸ್ಕೃತಿ'ಯನ್ನು ನಿರೂಪಿಸಿದ್ದು ವೃತ್ತಿರಂಗಭೂಮಿಯ ಹೆಗ್ಗಳಿಕೆ.

ಮಹಾತ್ಮ ಗಾಂಧೀಜಿಯವರು 'ಸತ್ಯಹರಿಶ್ಚಂದ್ರ' ಎಂಬ ವೃತ್ತಿರಂಗನಾಟಕ ನೋಡಿ ಪ್ರಭಾವಿತರಾದುದು ಅವರ ಬಾಲ್ಯದ ಬದುಕಿನ ಮಹತ್ತರ ಘಟ್ಟಗಳಲ್ಲೊಂದು. ವರನಟ ರಾಜ್‌ಕುಮಾರ್ ಮತ್ತು ಅವರ ಸಮಕಾಲೀನ ಅನೇಕರು, ವೃತ್ತಿರಂಗಭೂಮಿ ನಾಟಕಗಳ ದಿವಿನಾದ ಪರಂಪರೆ ಪೊರೆದ ಪ್ರಾತಃಸ್ಮರಣೀಯರು. ಹಾಗೆಯೇ ಅಂದು ನಾಟಕ ಕಂಪನಿಗಳು ಅವರನ್ನು ಸಾಕಿ ಸಲಹಿದ್ದೂ ಐತಿಹಾಸಿಕ ಸಂಗತಿಯೇ ಆಗಿದೆ. ಹಲವು ಮಹತ್ತರ ಕಾರಣಗಳಿಂದಾಗಿ ವೃತ್ತಿರಂಗಭೂಮಿಯ ಅಸ್ಮಿತೆಯು ಲೋಕಪ್ರೀತಿ ಮತ್ತು ಜನಪ್ರಿಯತೆಯ ಮಹತ್ವದ ಪಾರಮ್ಯ ಮೆರೆದಿದೆ.

ಅಂದಿನ ವಸಾಹತುಶಾಹಿ ಕಂಪನಿ ಸರ್ಕಾರಗಳ ಸನ್ನಿವೇಶದಲ್ಲಿ ಜನ್ಮತಾಳಿದ ನಾಟಕ ಕಂಪನಿಗಳು ಇವತ್ತಿಗೂ ವೃತ್ತಿರಂಗಭೂಮಿಯ ನಾಟಕ ಕಂಪನಿಗಳೆಂದೇ ಪ್ರತೀತಿ ಉಳಿಸಿಕೊಂಡಿವೆ. ವೃತ್ತಿ ರಂಗಭೂಮಿಯ ನಾಟಕ ಪತ್ಯಗಳಿಗೆ 'ಅರ್ಥಾತ್' ಎಂಬ ಪರ್ಯಾಯದ ಸರಳ ಹೆಸರುಗಳಿರುವುದು ವಾಡಿಕೆ. ಅದೇ ರಿವಾಜಿನಲ್ಲಿ 'ಕಂಪನಿ ನಾಟಕ' ಅರ್ಥಾತ್ 'ವೃತ್ತಿರಂಗಭೂಮಿ' ಎಂತಲೂ ಕೆಲವರು ಅರ್ಥೈಸಿದ್ದಾರೆ. ಸರಿಯಾಗಿ ಒಂದು ಶತಮಾನದಷ್ಟು ಹಿಂದೆ ವೃತ್ತಿರಂಗಭೂಮಿಯ ನೂರಾ ಮೂವತ್ತಾರು ನಾಟಕ ಕಂಪನಿಗಳು ಕನ್ನಡ ನಾಡಿನ ತುಂಬಾ ಅಗಾಧವಾದ ರಂಗಬೆರಗು ಬಿತ್ತಿ ಬೆಳೆದಿವೆ. ಅದೊಂದು ಸುದೀಪ್ತ ರಂಗವೈಭವದ ಸುವರ್ಣ ಕಾಲ.

ಇಂದು ನಾಟಕ ಕಂಪನಿಗಳ ಸಂಖ್ಯೆ ಮತ್ತು ಗುಣಮಟ್ಟ ಎರಡೂ ಗಣನೀಯವಾಗಿ ಇಳಿಮುಖಗೊಂಡಿದೆ. ಕಂಪನಿಗಳ ಸಂಖ್ಯೆ ಕೇವಲ ಇಪ್ಪತ್ತಾರಕ್ಕೆ ಇಳಿದಿದೆ. ಈ ಇಪ್ಪತ್ತಾರು ನಾಟಕ ಕಂಪನಿಗಳು ಈಗ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದಲ್ಲಿ ಮಾತ್ರ ಇವೆ. ಅವುಗಳಲ್ಲಿ ಕೆಲವು ಅರೆಕಾಲಿಕ, ಮತ್ತೆ ಕೆಲವು ಮುಚ್ಚಿಹೋಗುವ ಸ್ಥಿತಿಯಲ್ಲಿವೆ. ಈ ಅಂಕಿಅಂಶಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ ಅನುದಾನದ ಕಾಯಕಲ್ಪ ಯೋಜನೆಯ ಮಾಹಿತಿ.

ಸರ್ಕಾರದ ಅನುದಾನ ಬಹುಪಾಲು ನಾಟಕ ಕಂಪನಿಗಳ ಉಸಿರಾಟಕ್ಕೆ ಪ್ರಾಣವಾಯು ಒದಗಿಸಿದೆ. ಆದರೆ, ದಕ್ಷಿಣ ಕರ್ನಾಟಕದ ಕಡೆ ಅನುದಾನ ಪಡೆಯುವ ಒಂದೇ ಒಂದು ನಾಟಕ ಕಂಪನಿ ಈಗ ಇಲ್ಲ. ಅದಕ್ಕೆ ಬದಲು ದಕ್ಷಿಣದ ಬಹುತೇಕ ಜಿಲ್ಲೆಗಳಲ್ಲಿ ಸಾವಿರಾರು ಮಂದಿ ಕಲಾವಿದರು, ನೂರಾರು ಹವ್ಯಾಸಿ ತಂಡಗಳು ವರ್ಷಕ್ಕೆ ಸಹಸ್ರಾರು ವೃತ್ತಿರಂಗಭೂಮಿ ನಾಟಕಗಳ ಉತ್ಕೃಷ್ಟ ಪ್ರದರ್ಶನ ನೀಡುತ್ತವೆ. ತನ್ಮೂಲಕ ಲೋಕಮನ್ನಣೆ ಗಳಿಸುತ್ತಿರುವ ಹೆಗ್ಗಳಿಕೆಯ ಪರಂಪರೆಯಾಗಿ ಬೆಳೆದಿದೆ. ಈ ರಂಗ ಸಂಭ್ರಮವನ್ನು ಇಲ್ಲಿನ ಕೆಲವರು ಹರಕೆಯಂತೆ ಆಚರಿಸುತ್ತಾರೆ. ಮಾಹಿತಿಯೊಂದರ ಪ್ರಕಾರ ಒಂದು ವರ್ಷಕ್ಕೆ ಕರ್ನಾಟಕದಾದ್ಯಂತ ಹವ್ಯಾಸಿ ಕಲಾವಿದರಿಂದ ಹದಿನೈದರಿಂದ ಹದಿನೆಂಟು ಸಾವಿರ ವೃತ್ತಿರಂಗಭೂಮಿ ನಾಟಕಗಳು ಪ್ರದರ್ಶನ ಕಾಣುತ್ತವೆ. ಈ ಪ್ರದರ್ಶನಗಳಿಗಾಗಿ ಸರ್ಕಾರದ ಅನುದಾನಕ್ಕೆ ಅರ್ಜಿ ಹಾಕಿ ಕಾಯದೇ, ರಂಗ ತಂಡಗಳೇ ಸುಮಾರು ₹100 ಕೋಟಿಯಷ್ಟು ಹಣವನ್ನು ವರ್ಷವೊಂದಕ್ಕೆ ಖರ್ಚು ಮಾಡುತ್ತಾರೆ. ಇದು ಅಕ್ಷರಶಃ ಜನಸಂಸ್ಕೃತಿ ಬೆಳವಣಿಗೆಗೆ ನೆರವಾಗುತ್ತಿರುವ 'ಜನಸಾಮಾನ್ಯರ ರಂಗಭೂಮಿ' ಎಂಬುದನ್ನು ಈ ಮೂಲಕ ಸಾಕ್ಷೀಕರಿಸುತ್ತದೆ. ವೃತ್ತಿ ರಂಗಭೂಮಿಯು ಜವಾರಿ ಕನ್ನಡದ ಲೋಕಶಕ್ತಿಯಾಗಿದೆ. ಬಹುತ್ವ ಭಾರತದ ಪ್ರಾದೇಶಿಕ ಭಾಷೆ ಹಾಗೂ ಪರಿಸರದ ರಂಗವಾಂಛೆ ವೃತ್ತಿರಂಗಭೂಮಿಯಲ್ಲಿ ಸಮೃದ್ಧಿಯಾಗಿ ಹೊರಹೊಮ್ಮಿರುವುದನ್ನು ಗುರುತಿಸಬಹುದಾಗಿದೆ.

ಹಳೆಯ ಮೈಸೂರು ಪ್ರಾಂತ್ಯದ ಹದಿಮೂರು ಜಿಲ್ಲೆಗಳಲ್ಲಿ ವರ್ಷಕ್ಕೆ ಹತ್ತು ಸಾವಿರಕ್ಕೂ ಹೆಚ್ಚು ವೃತ್ತಿ ರಂಗಭೂಮಿಯ ಪೌರಾಣಿಕ ನಾಟಕಗಳು ಪ್ರಯೋಗಗೊಳ್ಳುತ್ತವೆ. ವರ್ತಮಾನದ ಯಾವುದೇ ವೃತ್ತಿಪರ ನಾಟಕ ಕಂಪನಿಗಳಲ್ಲಿ ಕಾಣಸಿಗದ ಕಂದ, ವೃತ್ತ ಮತ್ತು ಸೀಸ ಪದ್ಯಗಳೆಂಬ ರಂಗಗೀತೆಗಳ ಸಿರಿಘಮಲು ಇವರ ಈ ರಂಗ ಪ್ರಯೋಗಗಳಲ್ಲಿ ಪರಿಮಳಿಸುತ್ತವೆ. ಹೀಗೆ ಹವ್ಯಾಸಕ್ಕಾಗಿ ಗ್ರಾಮೀಣ ಮತ್ತು ಶಹರವಾಸಿ ಕಲಾವಿದರು ಆಡುವ ವೃತ್ತಿರಂಗಭೂಮಿಯ ಈ ನಾಟಕಗಳು ಕಂಪನಿ ನಾಟಕಗಳ ಪ್ರಭಾವ ಪ್ರೇರಿತ ಪ್ರದರ್ಶನಗಳೇ ಆಗಿರುತ್ತವೆ. ಅಲ್ಲಲ್ಲಿ ಕೆಲವು ಅಪದ್ಧಗಳು ಇಲ್ಲದಿಲ್ಲ. ತಮ್ಮೂರಿನ ದೈವದ ಪರಿಷೆಗೋ, ಗ್ರಾಮದೇವತೆಗಳ ಜಾತ್ರೆಗೋ ಆಡುವ ಇವುಗಳಿಗೂ ನಾಟಕ ಕಂಪನಿಗಳ ಮಾದರಿಯ ನಾಟ್ಯಸಂಘದ ಪರಂಪರಾಗತ ಹೆಸರುಗಳೇ ಆಪ್ಯಾಯಮಾನ. ಇವು ನಾಟಕ ಕಂಪನಿಗಳ ವಿಸ್ತೃತ ರೂಪಗಳಾಗಿವೆ.

ಹಾಗೆ ನೋಡಿದರೆ ನಾಟಕ ಕಂಪನಿಗಳ ಹೆಸರಿನಲ್ಲೇ ನಾಟ್ಯ ಮತ್ತು ಸಾಹಿತ್ಯ, ಸಂಗೀತದ ಜೀವಸತ್ವವಿದೆ. ಉದಾಹರಣೆಗೆ, ಹಲಗೇರಿಯ ಕುಡುಗೋಲು ಜೆಟ್ಟೆಪ್ಪನವರ ಕಂಪನಿ ಹೆಸರು 'ಶ್ರೀ ಹಾಲಸಿದ್ದೇಶ್ವರ ಸಂಗೀತ ನಾಟ್ಯ ಮಂಡಳಿ'. ಇತ್ತ ಹಳೆಯ ಮೈಸೂರು ಪ್ರಾಂತ್ಯದ ಸುಬ್ಬಯ್ಯ ನಾಯ್ಡು ಅವರ ಕಂಪನಿ ಹೆಸರು 'ಕರ್ನಾಟಕ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ' ಎಂದಿತ್ತು. ಹೀಗೆ ಎಲ್ಲಾ ನಾಟಕ ಸಂಘಗಳ ಹೆಸರು ತಮ್ಮ ಇಷ್ಟದ ದೈವದ ಅನುಸಂಧಾನದೊಂದಿಗೆ ನಾಟ್ಯ ಮತ್ತು ಸಂಗೀತದ ಸಾಹಚರ್ಯ ಹೊಂದಿರುತ್ತದೆ. ಅದೊಂದು ಅನುಷಂಗಿಕ ಫಲಶ್ರುತಿ. ಗ್ರಾಮೀಣ ಹವ್ಯಾಸಿಗಳು ಆಡುವ ವೃತ್ತಿರಂಗಭೂಮಿ ನಾಟಕಗಳಿಗೆ ವೃತ್ತಿ ಕಂಪನಿ ನಾಟಕಗಳೇ ರೋಲ್ ಮಾಡೆಲ್. ಕಂಪನಿಯ ನಟ, ನಟಿಯರ ಅಭಿನಯ ಮಾದರಿ ಅನುಕರಣೀಯ. ಅಲ್ಲೊಂದು ಆ್ಯಕ್ಟರ್ ಓರಿಯೆಂಟೇಷನ್ ಇರುತ್ತದೆ. ವೃತ್ತಿರಂಗಭೂಮಿಯಲ್ಲಿ ಮೂರು ಮುಖ್ಯ ಪರಂಪರೆಗಳು. ಮೊದಲನೆಯದು, ನಟ ನಟಿಯರ ಅಭಿನಯ ಪರಂಪರೆ. ಮಾನವಿ ಅದೃಶ್ಯಪ್ಪನವರ ಭೀಮನ ಪಾತ್ರ, ಗಂಗಾಧರರಾಯರ ದುರ್ಯೋಧನನ ಪಾತ್ರ, ನಮ್ಮ ಕಾಲದ ಮನಸೂರ ಸುಭದ್ರಮ್ಮನ ಮಲ್ಲಮ್ಮ ಇಲ್ಲವೇ ದ್ರೌಪದಿ ಪಾತ್ರ ನೋಡಲೆಂದೇ ಬರುವ ಪ್ರೇಕ್ಷಕ ಗಣವೇ ಇತ್ತು. ಹಾಗೆಯೇ ರಂಗ ಸಂಗೀತ ಪರಂಪರೆ ಎನ್ನುವುದಿದೆ. ಜುಬೇದಾಬಾನು ಸವಣೂರು ಅವರ ರಂಗಗೀತೆಗಳನ್ನು ಕೇಳಲೆಂದೇ ಬರುವ ಜನಸ್ತೋಮ ಇರುತ್ತಿತ್ತು. ಈಗಲೂ ಹಳೇ ಮೈಸೂರು ಪ್ರಾಂತ್ಯದ ಕಿರಗಸೂರು ರಾಜಪ್ಪ ಸೇರಿದಂತೆ ಅನೇಕರ ರಂಗಗೀತೆಗಳಿಗೆ ಅಪಾರ ಬೇಡಿಕೆ ಇದೆ.

ರಂಗಸಜ್ಜಿಕೆ ಪರಂಪರೆ ಮೂರನೆಯದು. ಗುಬ್ಬಿ ವೀರಣ್ಣನವರ ನಾಟಕ ಕಂಪನಿ ದಾವಣಗೆರೆಗೆ ಬರುತ್ತದೆಂದರೆ, ಒಂದೆರಡು ರೈಲ್ವೆ ವ್ಯಾಗನ್‌ಗಳ ತುಂಬಾ ಅವರ ಕಂಪನಿಯ ರಂಗಸಂಪತ್ತು ಬರುತ್ತಿತ್ತು. ಮೊಲ, ಜಿಂಕೆ, ಕುದುರೆ, ಪಾರಿವಾಳ ಸೇರಿದಂತೆ ಪ್ರಾಣಿ–ಪಕ್ಷಿಗಳ ಪುಟ್ಟ ಪ್ರಾಣಿ ಸಂಗ್ರಹಾಲಯ ಬರುತ್ತಿತ್ತು. ಉತ್ತರ ಕರ್ನಾಟಕದ ದೇಸಾಯಿಯವರ ಕಂಪನಿ ರಂಗಸಜ್ಜಿಕೆಗೆ ಫೇಮಸ್. ಈಗಲೂ ಖಾಸಗಿಯಾಗಿ ಹೆಸರಾಂತ ರಂಗಸಜ್ಜಿಕೆಗಳ ಖ್ಯಾತಿ ಮತ್ತು ಝುಗಮಗಿಸುವಿಕೆಗೆ ಬರವಿಲ್ಲ. ಹೀಗೆ ಎಲ್ಲಾ ನಾಟಕ ಕಂಪನಿಗಳು ಈ ಮೂರು ಪರಂಪರೆಗಳ ಆಡುಂಬೊಲವೇ ಆಗಿದ್ದವು. ಗೋಕಾಕ ಬಸವಣ್ಣೆಪ್ಪನವರ 'ಶಾರದಾ ಸಂಗೀತ ನಾಟಕ ಮಂಡಳಿ' ಈಗಿನ ರೆಪರ್ಟರಿಗಳಿಗಿಂತ ಮಿಗಿಲಾಗಿ ವೃತ್ತಿರಂಗಭೂಮಿಯ ವಿಶ್ವವಿದ್ಯಾಲಯ ಎಂದೇ ಪ್ರಸಿದ್ಧವಾಗಿತ್ತು.

ಚರಿತ್ರೆಕಾರರು ಜನಸಾಮಾನ್ಯರ ವೃತ್ತಿ ರಂಗಭೂಮಿಯನ್ನು ಪ್ರಧಾನ ಸಂಸ್ಕೃತಿಧಾರೆ ನೆಲೆಯಲ್ಲಿ ಪರಿಗಣಿಸಿ ಚರಿತ್ರೆ ಬರೆಯಲಿಲ್ಲ. ಕೆಲವರಂತೂ ಅದನ್ನು ಅಧೀನ ಸಂಸ್ಕೃತಿ ಆಗಿಯೂ ನೋಡದೇ 'ವೃತ್ತಿರಂಗದ ಪಡದೆ ಅದಿನ್ನೂ ಸುಡದೇ' ಎಂದಿರುವುದುಂಟು. ಆಧುನಿಕ ರಂಗಭೂಮಿಯ ಶ್ರೀರಂಗರ ಕುರಿತು 'ಶ್ರೀರಂಗ ಸಾರಸ್ವತ' ಎಂಬ ಹೆಬ್ಬೊತ್ತಿಗೆಗಳ ಮೀಮಾಂಸಾ ಸಂಪುಟಗಳನ್ನೇ ಸಂಸ್ಕೃತಿ ಇಲಾಖೆ ಪ್ರಕಟಿಸಿದೆ. ಅದೇ ವೃತ್ತಿ ರಂಗಭೂಮಿಯ ದಿಗ್ಗಜ ಮತ್ತು ಕನ್ನಡದ ಷೇಕ್ಸ್‌ಪಿಯರ್ ಎಂದೇ ಕನ್ನಡಿಗರ ಮನೆಮಾತಾದ ಕಂದಗಲ್ ಹಣಮಂತರಾಯರ ಬಗೆಗಿನ ಒಂದೂ ಗ್ರಂಥ ಪ್ರಕಟಿಸಿಲ್ಲ. ಮೊನ್ನೆ ಮೊನ್ನೆಯಷ್ಟೇ ಸರ್ಕಾರ ಕಂದಗಲ್ ಹಣಮಂತರಾಯರ ಹೆಸರಿನ ಪ್ರತಿಷ್ಠಾನ ಸ್ಥಾಪಿಸಿರುವುದು ಸ್ವಾಗತಾರ್ಹ.

ವೃತ್ತಿರಂಗಭೂಮಿಯನ್ನು ವಿದ್ವತ್ ಜಗತ್ತು ಕಡೆಗಣಿಸಿರಬಹುದು. ಆದರೆ, ಜನಮಾನಸದ ಲೋಕ ಮೀಮಾಂಸೆಯಲ್ಲಿ ವೃತ್ತಿರಂಗಭೂಮಿಗೆ ಅಪೂರ್ವ ಜಾಗವಿದೆ. ಕಾಲಾನುಕ್ರಮದಲ್ಲಿ ಸ್ಥಿತ್ಯಂತರ ಕಂಡರೂ, ಅದರ ಮೂಲ ಮನೋಧರ್ಮದ ರೀತಿ ರಿವಾಜುಗಳು ಬದಲಾಗಿಲ್ಲ; ಪ್ರೇಕ್ಷಕರ ನಿರೀಕ್ಷೆಗಳನ್ನು ಹುಸಿ ಮಾಡಿಲ್ಲ. ವೃತ್ತಿರಂಗಭೂಮಿಗೆ ಒಳ್ಳೆಯದನ್ನು ಮಾಡಬೇಕೆಂಬ ಸದಿಚ್ಛೆಯೇನೋ ಸರ್ಕಾರಕ್ಕಿದೆ. ಆದರೆ, ಏನು ಮಾಡಬೇಕೆಂಬ ಸ್ಪಷ್ಟತೆ ಇರಬೇಕಿದೆ. ಅದಕ್ಕಾಗಿ ಸಮಗ್ರ ಅಧ್ಯಯನದ ಮತ್ತು ವಿಸ್ತೃತವಾದ ಕಾರ್ಯಯೋಜನೆ ರೂಪಿಸಬೇಕಿದೆ.

ವೃತ್ತಿರಂಗಭೂಮಿ ಕನ್ನಡ ಸಂಸ್ಕೃತಿಗೆ ಹಾಗೂ ಕನ್ನಡ ವಿವೇಕಕ್ಕೆ ನೀಡಿದ ಕೊಡುಗೆ ಅಪೂರ್ವವಾದುದು. ಆ ಕಾರಣದಿಂದಲೇ, ವೃತ್ತಿ ರಂಗಭೂಮಿಗೆ ಸಂಬಂಧಿಸಿದ ಚಟುವಟಿಕೆಗಳು ಕನ್ನಡ ಸಂಸ್ಕೃತಿಗೆ ಸಂಬಂಧಿಸಿದ ಚಟುವಟಿಕೆಗಳೂ ಹೌದು. ವೃತ್ತಿರಂಗಭೂಮಿಯ ಸಂಗೋಪನೆ ಕನ್ನಡದ ರಂಗಭೂಮಿಯ ಬೇರುಗಳನ್ನು ಬಲಪಡಿಸುವ ಕೆಲಸವೂ ಹೌದು.



ವಾಚಕರ ವಾಣಿ

ದಸರಾ ಮತ್ತು ನಾಡಹಬ್ಬದ ಔಚಿತ್ಯ

ಸ್ವಾತಂತ್ರ್ಯಪೂರ್ವದ ಅರಸೊತ್ತಿಗೆ, ಮತ ಧಾರ್ಮಿಕತೆಗಳ ಬದಲು ದೇಶವು ಮತಧರ್ಮ ನಿರಪೇಕ್ಷ ಪ್ರಜಾಪ್ರಭುತ್ವವನ್ನು ಆಯ್ದುಕೊಂಡಿದೆ. ಅದಕ್ಕೆ ಅನುಗುಣವಾಗಿ ರಾಜ್ಯ, ರಾಜ್ಯೋತ್ಸವ, ನಾಡಹಬ್ಬದ ಪರಿಕಲ್ಪನೆಗಳೂ ಬದಲಾಗಬೇಕಿದೆ. ಸಂಸ್ಥಾನದ ರಾಜರೊಬ್ಬರು ರಾಜ್ಯಪಾಲರಾಗಿ ಮುಂದುವರಿದುದರಿಂದ ಮತಧರ್ಮ ನಿರಪೇಕ್ಷ ರಾಜ್ಯ ವ್ಯವಸ್ಥೆಯಲ್ಲಿ 'ರಾಜತ್ವ'ದ ಆಚರಣೆಗಳಾದ ನಾಡಹಬ್ಬ, ದಸರಾ ಪಳೆಯುಳಿಕೆಗಳಾಗಿ ಮುಂದುವರಿದಿವೆ. ಈಗ ದಸರಾವನ್ನು ನಾಡಹಬ್ಬವಾಗಿ ಆಚರಿಸುವುದರಲ್ಲಿ ಔಚಿತ್ಯವಿಲ್ಲ. ರಾಜ್ಯೋತ್ಸವವನ್ನು ರಾಜ್ಯದಾದ್ಯಂತ ನಾಡಹಬ್ಬವಾಗಿ ಮತಧರ್ಮ ನಿರಪೇಕ್ಷವಾಗಿ ಎಂದರೆ, ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಗಳಂತೆಯೇ ಆಚರಿಸಬೇಕಿದೆ. ಆಗ ನಾಡಹಬ್ಬದ ಉದ್ಘಾಟನೆಯೂ ಮತಧರ್ಮ ನಿರಪೇಕ್ಷವಾಗಿ ನಡೆಯುವಂತಾಗುತ್ತದೆ. ನಾಗರಿಕರು ಮತಧರ್ಮ ರಾಜತ್ವಗಳ ಮುಜುಗರವಿಲ್ಲದೆ ಭಾಗವಹಿಸಲು ಸಾಧ್ಯವಾಗುತ್ತದೆ. ರಾಜವಂಶಸ್ಥರು ಖಾಸಗಿ ಸಿಂಹಾಸನದಲ್ಲಿ ಕೂರಬಹುದಾದರೆ, ಅಂಬಾರಿಯಲ್ಲೂ ಕುಳಿತು ಖಾಸಗಿ ಜಂಬೂ ಸವಾರಿ ಆಚರಿಸಿಕೊಳ್ಳಬಹುದು.

ಪಂಡಿತಾರಾಧ್ಯ, ಮೈಸೂರು

ಹೆತ್ತಕರುಳು ಪದವೇ ಸುಳ್ಳಾಯಿತೆ?

ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಜನ್ಮ ನೀಡಿದ ತಾಯಿಯೇ ಒಂದು ದಿನದ ಹಸುಳೆಯನ್ನು ಸಿಸೇರಿಯನ್ ಬ್ಲೇಡಿನಿಂದ ಕತ್ತು ಸೀಳಿ ಸಾಯಿಸಿದ ಸುದ್ದಿ (ಪ್ರ.ವಾ., ಆಗಸ್ಟ್ 25) ಓದಿ ಆಘಾತವಾಯಿತು. ಹೆತ್ತಕರುಳು ಎನ್ನುವ ಪದವೇ ಸುಳ್ಳಾಯಿತೆ? ಮನುಜಕುಲವೇ ತಲೆ ತಗ್ಗಿಸುವಂತಹ ಈ ಹೇಯಕೃತ್ಯಕ್ಕೆ ಯಾವ ಶಿಕ್ಷೆಯೂ ಸಮನಾಗಲಾರದು.

ಶ್ರೀಧರ್ ಈಳಿ, ಸಾಗರ

ತಂತ್ರಜ್ಞಾನ ಮತ್ತು ಭಸ್ಮಾಸುರ ಸಂತತಿ

ಪ್ರೇಯಸಿಯ ಬಾಯಲ್ಲಿ ಮೊಬೈಲ್ ಫೋನ್ ಇಟ್ಟು ವೈರ್‌ಗಳ ನೆರವಿನಿಂದ ಅದನ್ನು ಸ್ಫೋಟಿಸಿ ಆಕೆಯನ್ನು ಕೊಲೆ ಮಾಡಿದ ಸುದ್ದಿ ಓದಿ ದಿಗ್ಭ್ರಮೆ ಆಯಿತು (ಪ್ರ.ವಾ., ಆಗಸ್ಟ್ 26). ನಾವು ಭಸ್ಮಾಸುರರಾಗುತ್ತಿದ್ದೇವೆಯೇ ಎಂದು ಒಂದು ಕ್ಷಣ ಅನ್ನಿಸಿತು. ತಂತ್ರಜ್ಞಾನ ಮುಂದುವರಿದಂತೆ ನಾವು ಮನುಷ್ಯತ್ವ ಕಳೆದುಕೊಳ್ಳುತ್ತಿರುವುದು ದುರದೃಷ್ಟಕರ.

ಪಾಂಡುರಂಗ, ಬೆಂಗಳೂರು

'ಎಚ್‌ಡಿಎಂಸಿ' ವಿಭಜನೆ ಯಾವಾಗ?

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಿಭಜಿಸಿ ಐದು ನಗರ ಪಾಲಿಕೆ ರಚಿಸಲಾಗಿದೆ. ಹಾಗೆಯೇ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯನ್ನು (ಎಚ್‌ಡಿಎಂಸಿ) ವಿಭಜಿಸಿ, ಹುಬ್ಬಳ್ಳಿ ಮತ್ತು ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚಿಸಲು ಸಾಮಾನ್ಯ ಸಭೆಯಲ್ಲಿ ಒಮ್ಮತದ ತೀರ್ಮಾನವಾಗಿದೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಹುಬ್ಬಳ್ಳಿ ಮತ್ತು ಧಾರವಾಡದ ಪ್ರತ್ಯೇಕ ಪಾಲಿಕೆಗಳ ರಚನೆಗೆ ಸಂಪುಟ ಸಭೆಯಲ್ಲಿ ಅನುಮೋದನೆಯೂ ಸಿಕ್ಕಿದೆ. ಈ ವರ್ಷದ ಜನವರಿಯಲ್ಲಿ ಕರಡು ಅಧಿಸೂಚನೆ ಹೊರಡಿಸಲಾಗಿದ್ದರೂ ಈವರೆಗೆ ಅಂತಿಮ ಅಧಿಸೂಚನೆ ಪ್ರಕಟಿಸಿಲ್ಲ. ಇದಕ್ಕಾಗಿ ಸರ್ಕಾರದಿಂದ ರಾಜ್ಯಪಾಲರ ಅನುಮೋದನೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಅವರಿಂದ ಈವರೆಗೆ ಅಂತಿಮ ಅಧಿಸೂಚನೆ ಅನುಮೋದನೆಗೊಂಡಿಲ್ಲ. ಇದಕ್ಕೆ ಸರ್ಕಾರ ಮತ್ತು ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಯೂ ಕಾರಣವಾಗಿದೆ.

ವೆಂಕಟೇಶ ಮಾಚಕನೂರ, ಧಾರವಾಡ

ಎಲ್ಲ ಪಕ್ಷಗಳದ್ದು ಒಂದೇ 'ಗುಣಧರ್ಮ'

'ಹಿಂದಿನ ಸರ್ಕಾರಕ್ಕಿಂತ ಈಗಿನ ಸರ್ಕಾರದಲ್ಲೇ ಕಮಿಷನ್ ಪ್ರಮಾಣ ಹೆಚ್ಚಾಗಿದೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಹೇಳಿದ್ದಾರೆ. ಸಂಘದ ಹಿಂದಿನ ಅಧ್ಯಕ್ಷರಾಗಿದ್ದ ಕೆಂಪಣ್ಣ, ಬಿಜೆಪಿ ಸರ್ಕಾರದ ಮೇಲೆ ಶೇ 40ರಷ್ಟು ಕಮಿಷನ್ ಆರೋಪ ಹೊರಿಸಿದ್ದರು. ಆಗ ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ತನ್ನ ರಾಜಕೀಯ ಲಾಭಕ್ಕೆ ಈ ಆರೋಪವನ್ನು ಚತುರತೆಯಿಂದ ಬಳಸಿಕೊಂಡಿತ್ತು.

ಆಡಳಿತ ನಡೆಸುವ ಪಕ್ಷ ಯಾವುದೇ ಇರಲಿ 'ಗುತ್ತಿಗೆಗೆ ಕಮಿಷನ್' ನೀಡುವುದು ಇದ್ದೇ ಇರುತ್ತದೆ. ಆಡಳಿತ ನಡೆಸುವವರ 'ಗುಣಧರ್ಮ' ಒಂದೇ, ಅಂತಹ ವ್ಯತ್ಯಾಸವೇನೂ ಇಲ್ಲವೆಂಬುದು ಇದರಿಂದ ವೇದ್ಯವಾಗುತ್ತದೆ. ಸರ್ಕಾರ ನಡೆಸುವವರಿಗೆ ದೊಡ್ಡ ಮೊತ್ತದ ಕಮಿಷನ್ ನೀಡಬೇಕಾದ ಗುತ್ತಿಗೆದಾರರಿಂದ ಗುಣಮಟ್ಟದ ಕೆಲಸ ನಿರೀಕ್ಷಿಸುವುದು ಮೂರ್ಖತನ. ಗುಂಡಿಗಳಿಂದ ಎಂದೂ ಮುಕ್ತಿ ಹೊಂದದ ರಾಜಧಾನಿಯ ರಸ್ತೆಗಳೇ ಇದಕ್ಕೆ ಜ್ವಲಂತ ನಿದರ್ಶನ!

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಸಾಂವಿಧಾನಿಕ ಮಾರ್ಗದಲ್ಲಿ ಹೋರಾಟ

ರಾಜ್ಯದಲ್ಲಿ ಅಧಿಕಾರಿಗಳ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವ 'ಕರ್ನಾಟಕ ರಾಷ್ಟ್ರ ಸಮಿತಿ' ಪಕ್ಷದ ನಡೆಯು ಸಾಂವಿಧಾನಿಕ ಮಾರ್ಗದಲ್ಲಿಲ್ಲ ಎಂಬುದು ಕೆಲವರ ಆಕ್ಷೇಪ. ಆದರೆ, ಪಕ್ಷವು ಸಾಂವಿಧಾನಿಕ ಮಾರ್ಗದಲ್ಲಿಯೇ ಭ್ರಷ್ಟ ಅಧಿಕಾರಿಗಳ ಬಣ್ಣವನ್ನು ಬಯಲುಗೊಳಿಸುತ್ತಿದೆ. ಯಾವ ಕಾನೂನಿನಲ್ಲಿಯೂ ಅಕ್ರಮ, ಅನ್ಯಾಯ, ಭ್ರಷ್ಟಾಚಾರ ಪ್ರಶ್ನಿಸಬಾರದು ಹಾಗೂ ಪ್ರಶ್ನಿಸುವುದನ್ನು ವಿಡಿಯೊ ಪ್ರಸಾರ ಮಾಡಬಾರದು ಎಂದು ಹೇಳಿಲ್ಲ. ಕಾನೂನಿನಲ್ಲಿ ಪ್ರಶ್ನಿಸುವುದಕ್ಕೆ ಅವಕಾಶ ಇರುವಾಗ ಅದು ಸಂವಿಧಾನ ಬದ್ಧವೇ ಆಗಿದೆ. ಪಕ್ಷದಿಂದ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತಕ್ಕೆ 500ಕ್ಕಿಂತಲೂ ಹೆಚ್ಚು ದೂರು ಸಲ್ಲಿಸಲಾಗಿದೆ. ಆದರೆ, ಒಂದು ಪ್ರಕರಣದಲ್ಲೂ ಅಕ್ರಮ ಎಸಗಿದವರಿಗೆ ಶಿಕ್ಷೆಯಾದ ಉದಾಹರಣೆ ಇಲ್ಲ. ನಾಗರಿಕರು ಲಂಚ ನೀಡದೆ ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡಿಸಿಕೊಳ್ಳಬಹುದು ಎಂಬುದನ್ನು ತಿಳಿಸುವುದೇ ನಮ್ಮ ಉದ್ದೇಶ. ಲಂಚ ಪಡೆಯುವವರಿಗೆ ತಮ್ಮ ತಪ್ಪಿನ ಅರಿವು ಮೂಡಿಸುವ ಗುರಿಯನ್ನೂ ಪಕ್ಷ ಹೊಂದಿದೆ.

ಎಲ್. ಜೀವನ್, ಮಾಧ್ಯಮ ಸಂಯೋಜಕ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ

ಚುರುಮುರಿ



ಅಬ್ಬಬ್ಬಾ... ಹಬ್ಬ!

• ಮಣ್ಣೆ ರಾಜು

'ನಮ್ಮ 'ಅಬ್ಬಬ್ಬಾ... ಹಬ್ಬ!' ಕಾರ್ಯಕ್ರಮದಲ್ಲಿ ನಿಮ್ಮ ಮನೆಯ ಹಬ್ಬದ ಆಚರಣೆಯನ್ನು ಅರ್ಧ ಗಂಟೆ ಎಪಿಸೋಡ್ ಮಾಡಿ ಜಗತ್ತಿಗೆ ತೋರಿಸ್ತೀವಿ, ಅದ್ದೂರಿ ಸಿದ್ಧತೆ ಮಾಡಿಕೊಳ್ಳಿ' ಎಂದು ಚಾನೆಲ್‌ನವರು ಫೋನ್ ಮಾಡಿದ್ದರು. ಸುಮಿ ಹಿಗ್ಗಿ ಹೋಗಿದ್ದಳು.

ಟೀವಿಯವರ ಪ್ರಶ್ನೆಗಳಿಗೆ ವೈರಲ್ ಆಗೋ ಉತ್ತರ ಕೊಡಬೇಕು ಎಂದು ಗಂಡ, ಮಕ್ಕಳಿಗೆ ಹೇಳಿದ್ದಳು. ಗಂಡನ ಮೀಸೆ, ತಲೆಗೂದಲಿಗೆ ಹೇರ್ ಡೈ ಹಚ್ಚಿ ತನ್ನ ಏಜಿಗೆ ಮ್ಯಾಚ್ ಮಾಡಿಕೊಂಡಿದ್ದಳು.

ರೂಮಿನಿಂದ ಇಲಿಯೊಂದು ಓಡಿಬಂತು.

'ಗಣೇಶನ ವಾಹನ ಇಲಿ ಹಬ್ಬಕ್ಕೆ ಬಂದಿದೆ, ಅದನ್ನು ಹೊಡೆಯೋದಾಗಲಿ, ಓಡಿಸೋದಾಗಲಿ ಮಾಡಬೇಡಿ' ಅಂದಳು ಸುಮಿ.

'ಡ್ಯಾಡಿ, ಇಲಿ ನನ್ನ ಟೆಕ್ಸ್ಟ್ ಬುಕ್ ಕಚ್ಚಿ ತಿಂದಿದೆ' ಎಂದು ಮಗಳು ಗಾಬರಿಯಾದಳು.

'ಹಸಿವಾಗಿತ್ತೇನೋ ಪಾಪ! ಹೊಸದು ಕೊಡಿಸ್ತೀನಿ ಬಿಡು' ಅಂದ ಶಂಕ್ರಿ.

'ರೀ, ಈ ಇಲಿ ಗಂಡೋ ಹೆಣ್ಣೋ?'

'ಗಂಡೇ ಇರಬೇಕು, ಹೆಣ್ಣಾಗಿದ್ದರೆ ನಿನ್ನ ರೇಷ್ಮೆ ಸೀರೆಗೆ ಬಾಯಿ ಹಾಕ್ತಿತ್ತು'.

ಆಗ ಚಾನೆಲ್ ಮೇಡಂ ಫೋನ್ ಮಾಡಿ, 'ನಮ್ಮ ಟೀಮ್ ಬರ್ತಿದೆ, ಭರ್ಜರಿ ಸಿದ್ಧತೆ ಮಾಡಿಕೊಂಡಿದ್ದೀರಾ? ನೆರೆಹೊರೆ ಹೆಂಗಸರನ್ನೂ ಕರೆಯಿರಿ, ಎಲ್ಲರೂ ಹಬ್ಬದ ಅಲಂಕಾರದಲ್ಲಿ ಇರಬೇಕು' ಎಂದರು.

'ಮೇಡಂ, ನಮ್ಮ ಮನೆಗೆ ಇಲಿ ಬಂದಿದೆ. ಹಬ್ಬದ ದಿನ ಇಲಿ ಬಂದರೆ ಶುಭಾ ಅಲ್ವಾ?' ಸುಮಿ ಹೇಳಿದಳು.

'ಹೌದೂರೀ, ಗಣೇಶನ ವಾಹನ ಜೀವಂತವಾಗಿ ಬಂದಿದೆಯೆಂದರೆ ವಿಶೇಷವೇ. ಇಲಿ ಕೈಗೆ ಸಿಕ್ಕಿದರೆ ಹಿಡಿದು ಸ್ನಾನ ಮಾಡಿಸಿ ಮೇಕಪ್ ಮಾಡಿ, ಅದನ್ನೂ ಶೂಟ್ ಮಾಡ್ತೀವಿ' ಎಂದಳು.

ಸುಮಿ ಖುಷಿಯಾದಳು. 'ರೀ, ಇಲಿ ಆಚೆ ಹೋಗದಂತೆ ನೋಡಿಕೊಳ್ಳಿ. ಬೆಕ್ಕು, ನಾಯಿಗಳು ಮನೆಗೆ ನುಗ್ಗಿ ಇಲಿಗೆ ಬಾಯಿ ಹಾಕದಂತೆ ಕಾವಲಾಗಿರಿ...' ಎಂದು ಎಲ್ಲರಿಗೂ ಕರ್ತವ್ಯಗಳನ್ನು ಹಂಚಿ ಮೊಬೈಲ್‌ನಲ್ಲಿ ಇಲಿಯ ಫೋಟೊ ಕ್ಲಿಕ್ಕಿಸಿಕೊಂಡಳು.

ಸಂಗತ

ನ್ಯಾಯಾಂಗ ವ್ಯವಸ್ಥೆ ಮತ್ತು ಬಸವನಹುಳು

ನ್ಯಾಯಾಂಗದ ಮೇಲಿನ ಒತ್ತಡ ಕಕ್ಷಿದಾರರನ್ನು ಸಮಸ್ಯೆಗೆ ಸಿಲುಕಿಸುತ್ತಿದೆ. ಮೂಲ ಸೌಕರ್ಯ ಹೆಚ್ಚಳದ ಮೂಲಕ, ನ್ಯಾಯಾಂಗ ವ್ಯವಸ್ಥೆಯನ್ನು ಬಲಪಡಿಸಬೇಕಾಗಿದೆ.

• ಟಿ. ತಿಮ್ಮೇಗೌಡ

ನಮ್ಮ ನ್ಯಾಯಾಂಗ ವ್ಯವಸ್ಥೆಯು ಸಂವಿಧಾನದ ಆಶಯದಂತೆ ಕಾರ್ಯ ನಿರ್ವಹಿಸುತ್ತಿದೆ. ನಾನು ಬಾಲ್ಯದಲ್ಲಿ ಕಂಡಂತೆ ನಮ್ಮೂರಿನ ತಂಟೆ–ತಕರಾರು (ವ್ಯಾಜ್ಯಗಳು), ಕುಟುಂಬ ಕಲಹ, ಜಮೀನಿನ ಒತ್ತುವರಿ ಮತ್ತು ಆಸ್ತಿ ವಿಂಗಡಣೆ ಮುಂತಾದ ವಿಚಾರಗಳನ್ನು ಊರಿನ ಪ್ರಮುಖ ಪಂಗಡಗಳ ಮುಖ್ಯಸ್ಥರು ಸೇರಿ ನ್ಯಾಯ ಪಂಚಾಯಿತಿ ಮೂಲಕ ಇತ್ಯರ್ಥಪಡಿಸುತ್ತಿದ್ದರು. ಕಾಲ ಬದಲಾದಂತೆ, ನ್ಯಾಯಾಂಗ ವ್ಯವಸ್ಥೆಯಲ್ಲೂ ಬದಲಾವಣೆ ಆಗಿದೆ.

ಹಿಂದೆಲ್ಲ, ಗ್ರಾಮದ ಆಂತರಿಕ ಸಮಸ್ಯೆಗಳು ಮತ್ತು ಸಣ್ಣಪುಟ್ಟ ವ್ಯಾಜ್ಯಗಳು ಪೊಲೀಸ್ ಠಾಣೆ ಮತ್ತು ಕೋರ್ಟ್ ಮೆಟ್ಟಿಲು ಹತ್ತುತ್ತಿರಲಿಲ್ಲ. ಗ್ರಾಮದ ನ್ಯಾಯ ಪಂಚಾಯಿತಿ ನೀಡುತ್ತಿದ್ದ ತೀರ್ಪುಗಳನ್ನು ಊರಿನ ಜನರು ಸಾಮಾನ್ಯವಾಗಿ ಪಾಲಿಸುತ್ತಿದ್ದರು. ಆದರೆ, ಈಗಿನ ವ್ಯವಸ್ಥೆಯಲ್ಲಿ ಸಂವಿಧಾನದ ಅನುಸಾರ ನ್ಯಾಯಾಂಗ ವ್ಯವಸ್ಥೆಯಲ್ಲಿ ವಿವಿಧ ಹಂತಗಳ ನ್ಯಾಯಾಲಯಗಳು ರಚನೆಗೊಂಡು ಕಾರ್ಯ ನಿರ್ವಹಿಸುತ್ತಿವೆ. ಈ ನ್ಯಾಯಾಲಯಗಳಲ್ಲಿ ಭಾರತೀಯ ನ್ಯಾಯಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ ಮುಂತಾದ ನ್ಯಾಯ ಸಂಹಿತೆಗಳ ಮೂಲಕ ನ್ಯಾಯಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

ಭಾರತದ ಜನಸಂಖ್ಯೆ ಹೆಚ್ಚಿದಂತೆಲ್ಲ ನ್ಯಾಯಾಲಯದ ಪ್ರಕರಣಗಳು ಎಲ್ಲಾ ಹಂತದಲ್ಲೂ ಹೆಚ್ಚಾಗುತ್ತಿವೆ. ಸಾರ್ವಜನಿಕರು ತಮ್ಮ ವ್ಯಾಜ್ಯಗಳ ಇತ್ಯರ್ಥಕ್ಕಾಗಿ ನ್ಯಾಯಾಲಯಗಳ ಮೊರೆ ಹೋಗುವುದು ಹೆಚ್ಚಾಗಿದೆ. ಹಾಗಾಗಿ, ಎಲ್ಲಾ ಹಂತದ ನ್ಯಾಯಾಲಯಗಳಲ್ಲಿ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಭಾರತದ ಸುಪ್ರೀಂ ಕೋರ್ಟ್ ಮತ್ತು ರಾಜ್ಯಗಳ ಹೈಕೋರ್ಟ್‌ಗಳು ಸೇರಿದಂತೆ ಎಲ್ಲಾ ಹಂತದ ನ್ಯಾಯಾಲಯಗಳಲ್ಲಿ ತ್ವರಿತವಾಗಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಆದ್ಯತೆ ನೀಡಲಾಗುತ್ತಿದೆ; ಆ ನಿಟ್ಟಿನಲ್ಲಿ, ವಿಶೇಷ ನ್ಯಾಯಾಲಯ, ಜನತಾ ನ್ಯಾಯಾಲಯ, ಮುಂತಾದವುಗಳನ್ನು ರಚಿಸಲಾಗಿದೆ. ಆದರೂ ಅನೇಕ ನ್ಯಾಯಾಲಯಗಳಲ್ಲಿ ಪ್ರಕರಣಗಳು ಅನೇಕ ವರ್ಷಗಳವರೆಗೆ ಬಾಕಿ ಇರುವುದು ಕಂಡುಬರುತ್ತಿದೆ.



ಪ್ರಕರಣವೊಂದರಲ್ಲಿ ಸಾಕ್ಷಿಯಾಗಿ ಬೆಂಗಳೂರು ನಗರದ ಸಿವಿಲ್ ಕೋರ್ಟ್ ಸಂಕೀರ್ಣದ ಒಂದು ನ್ಯಾಯಾಲಯದಲ್ಲಿ ಇತ್ತೀಚೆಗೆ ನಾನು ಹಾಜರಿದ್ದೆ. ಅಲ್ಲಿ ಕಂಡುಬಂದ ದೃಶ್ಯಗಳು ನಮ್ಮ ನ್ಯಾಯಾಲಯಗಳ ಸಂಕೀರ್ಣ ಸಮಸ್ಯೆಗಳಿಗೆ ಉದಾಹರಣೆಯಂತೆ ಕಾಣಿಸಿದವು. ಕಕ್ಷಿದಾರರು ಮತ್ತು ವಕೀಲರಿಂದ ಕಿಕ್ಕಿರಿದ ಕೋರ್ಟ್ ಸಂಕೀರ್ಣ, ನ್ಯಾಯದಾನ ಪ್ರಕ್ರಿಯೆ ಏಕೆ ನಿಧಾನವಾಗುತ್ತಿದೆ ಎನ್ನುವುದನ್ನು ಮನವರಿಕೆ ಮಾಡುವಂತಿತ್ತು.

ಬಹುತೇಕ ಎಲ್ಲಾ ನ್ಯಾಯಾಲಯಗಳಲ್ಲಿ ಪ್ರಕರಣಗಳ ಸಂಖ್ಯೆ ಸಾಕಷ್ಟಿರುತ್ತದೆ ಹಾಗೂ ಪ್ರತಿದಿನ ಪ್ರಕರಣಗಳ ವಿಚಾರಣೆಗಳ ಸಂಖ್ಯೆಯೂ ಅಧಿಕವಾಗಿರುತ್ತದೆ. ಇದರಿಂದ ನ್ಯಾಯಾಲಯದ ಆವರಣದಲ್ಲಿ ವಕೀಲರು ಮತ್ತು ಕಕ್ಷಿದಾರರ ಸಂಖ್ಯೆಯು ಸಹ ಅಧಿಕವಾಗಿದೆ. ನ್ಯಾಯಾಲಯದ ಸಭಾಂಗಣದಲ್ಲಿ ವಕೀಲರ ಸಂಖ್ಯೆ ಹೆಚ್ಚುತ್ತಿದ್ದು, ಅವರಿಗೆ ಕುಳಿತುಕೊಳ್ಳಲು ಸಹ ಆಸನದ ವ್ಯವಸ್ಥೆ ಸಾಕಷ್ಟಿಲ್ಲ. ಅನೇಕ ಪ್ರಕರಣಗಳು ವಿಚಾರಣೆಗೆ ಬರುತ್ತಿರುವುದರಿಂದ, ವಾದಿ–ಪ್ರತಿವಾದಿಗಳ ವಕೀಲರು ಮತ್ತು ಅವರ ಕಿರಿಯ ಸಹೋದ್ಯೋಗಿಗಳು ಸೇರಿದಂತೆ ಕೋರ್ಟ್ ಸಭಾಂಗಣ ಜನಜಂಗುಳಿಯಿಂದ ತುಂಬಿರುತ್ತಿದೆ.

ಪ್ರತಿದಿನದ ವಿಚಾರಣಾ ಪ್ರಕರಣಗಳ ಸಂಖ್ಯೆ ಹೆಚ್ಚಿರುವುದರಿಂದ, ಬಹುತೇಕ ಪ್ರಕರಣಗಳಲ್ಲಿ ವಾದಿ ಅಥವಾ ಪ್ರತಿವಾದಿ ವಕೀಲರು ಸಮಯ ಕೇಳುವುದಿದೆ. ದಾಖಲೆಗಳ ಹಾಜರಾತಿ ಮುಂತಾದ ವಿಚಾರಗಳಿಂದಲೂ ಹೆಚ್ಚಿನ ಪ್ರಕರಣಗಳು ಮುಂದಕ್ಕೆ ಹೋಗುತ್ತಿರುತ್ತವೆ. ಇದರಿಂದ ವಕೀಲರು ಸಹ ತಮ್ಮ ಪ್ರಕರಣ ವಿಚಾರಣೆಗೆ ಬರುವವರೆಗೆ ಕಾಯ್ದು, ನ್ಯಾಯಾಧೀಶರ ಮುಂದೆ ತಮ್ಮ ಮನವಿ/ಪ್ರತಿಪಾದನೆಯನ್ನು ಮಂಡಿಸುತ್ತಾರೆ. ನ್ಯಾಯಾಧೀಶರು ಅವರ ಮನವಿಯನ್ನು ಕೇಳಿ ಮುಂದಿನ ವಿಚಾರಣೆಯ ಬಗ್ಗೆ ತೀರ್ಮಾನಿಸುತ್ತಾರೆ.

ನ್ಯಾಯಾಧೀಶರು ವಕೀಲರ ವಾದ ಮತ್ತು ಪ್ರತಿವಾದಗಳನ್ನು ಸಾವಧಾನದಿಂದ ಕೇಳಿ ಸೂಕ್ತ ದಿನಾಂಕ ಮತ್ತು ವಿಚಾರಣೆಯನ್ನು ನಿಗದಿಪಡಿಸುತ್ತಾರೆ. ಈ ರೀತಿ ನ್ಯಾಯಾಲಯಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಪ್ರತಿಯೊಂದು ಪ್ರಕರಣದ ವಿಚಾರಣೆ ತಾರ್ಕಿಕ ಹಂತ ಮುಟ್ಟಿ, ತೀರ್ಪು ಕೊಡಲು ಅನೇಕ ತಿಂಗಳು ಅಥವಾ ವರ್ಷಗಳೇ ಬೇಕಾಗುತ್ತದೆ.

ಸಮಯದ ಜೊತೆಗೆ ವಿಚಾರಣೆಗಳು ಪದೇ ಪದೇ ಮುಂದಕ್ಕೆ ಹೋಗುವುದು ಆರ್ಥಿಕ ನಷ್ಟವೂ ಹೌದು. ವಿಚಾರಣಾ ಸಂದರ್ಭದಲ್ಲಿ ಕಕ್ಷಿದಾರರರು ತಮ್ಮ ವಕೀಲರ ಜೊತೆ ಹಾಜರಾಗಲು ಹಣ ಖರ್ಚು ಮಾಡಬೇಕಾಗುತ್ತದೆ. ಅನಿಯಮಿತ ಕಾಲದವರೆಗೆ ನಡೆಯುವ ವಿಚಾರಣೆ ಕಕ್ಷಿದಾರರಿಗೆ ಆರ್ಥಿಕ ಹೊರೆಯನ್ನು ಉಂಟು ಮಾಡುತ್ತದೆ.

ನ್ಯಾಯಾಂಗದ ಮೇಲೆ ಹಾಗೂ ಕಕ್ಷಿದಾರರ ಮೇಲೆ ಒತ್ತಡ ಹೆಚ್ಚುತ್ತಿರುವ ಸಂದರ್ಭವಿದು. ಈ ಒತ್ತಡವನ್ನು ಕಡಿಮೆ ಮಾಡುವುದಕ್ಕಾಗಿ, ಹೆಚ್ಚುವರಿ ನ್ಯಾಯಾಲಯಗಳನ್ನು ಸ್ಥಾಪಿಸಿ ನ್ಯಾಯದಾನ ವಿಧಾನಕ್ಕೆ ವೇಗ ನೀಡುವುದು ಅಗತ್ಯ. ಇದರಿಂದ ಕಕ್ಷಿದಾರರಿಗೆ ಸಮಯ ಮತ್ತು ಹಣದ ಉಳಿತಾಯವಾಗುತ್ತದೆ ಹಾಗೂ ನ್ಯಾಯಾಲಯಗಳಿಗೆ ಒತ್ತಡ ಕಡಿಮೆಯಾಗುತ್ತದೆ.

ನಮ್ಮ ನ್ಯಾಯಾಲಯಗಳಲ್ಲಿ ಇರುವ ಪ್ರಕರಣಗಳು ಶೀಘ್ರವಾಗಿ ಇತ್ಯರ್ಥಗೊಳ್ಳಲು ನ್ಯಾಯಾಂಗ ವ್ಯವಸ್ಥೆಯ ಸುಧಾರಣೆ ತುರ್ತು ಅಗತ್ಯವಾಗಿದೆ. ಕೆಲವು ಸಂದರ್ಭಗಳಲ್ಲಿ ವಿಳಂಬ ನ್ಯಾಯ ಎನ್ನುವುದು ನ್ಯಾಯದ ನಿರಾಕರಣೆಯೇ ಆಗಿರುತ್ತದೆ. ಆದುದರಿಂದ, ಆದಷ್ಟು ಅನಗತ್ಯ ವಿಳಂಬವಿಲ್ಲದೆ ತೀರ್ಪು ದೊರೆಯುವಂತಹ ನ್ಯಾಯಾಂಗ ವ್ಯವಸ್ಥೆ ರೂಪುಗೊಳ್ಳಬೇಕಾಗಿದೆ.

(ಲೇಖಕ: ನಿವೃತ್ತ ಐಎಎಸ್ ಅಧಿಕಾರಿ)

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಭಾರತದ ಕೀರ್ತಿಯನ್ನು ಬಾನೆತ್ತರದಲ್ಲಿ ಹಾರಿಸಿದ, ಸೀಮಿತ ತಂತ್ರಜ್ಞಾನ ಲಭ್ಯತೆಯ ಸಂದರ್ಭದಲ್ಲೂ ದೇಶದ ವಾಯುಸೇನೆಯ ಸಾಮರ್ಥ್ಯವನ್ನು ಜಗತ್ತಿಗೆ ಸಾರಿದ ಮಿಗ್–21 ಯುದ್ಧವಿಮಾನ ಇತಿಹಾಸದ ಪುಟ ಸೇರಿದೆ. ಇದರ ಬಗ್ಗೆ ಅತೀವ ಹೆಮ್ಮೆ ಹೊಂದಿರುವ ಭಾರತೀಯ ವಾಯುಸೇನೆಯು ಚಂಡೀಗಢದಲ್ಲಿ ಸೆ.26ರಂದು ಈ ಯುದ್ಧವಿಮಾನಕ್ಕೆ ಬೀಳ್ಕೊಡುಗೆ ಸಮಾರಂಭವನ್ನೂ ಆಯೋಜಿಸಿದೆ. ಈ ವಿಮಾನವು 1965 ಮತ್ತು 1971ರ ಭಾರತ–ಪಾಕಿಸ್ತಾನ ಯುದ್ಧಗಳು, 1999ರ ಕಾರ್ಗಿಲ್ ಯುದ್ಧ ಹಾಗೂ 2019ರ ಬಾಲಾಕೋಟ್ ನಿರ್ದಿಷ್ಟ ದಾಳಿಯಲ್ಲಿ ಮುಖ್ಯ ಪಾತ್ರ ವಹಿಸಿತ್ತು. ರಷ್ಯಾದಿಂದ ಖರೀದಿ ಮಾಡಲಾಗಿದ್ದ ಮಿಗ್–21, ಭಾರತದ ವಾಯುಸೇನೆಯ ಮುಖ್ಯ ಭಾಗವಾಗಿ, ಪೈಲಟ್‌ಗಳ ನೆಚ್ಚಿನ ವಿಮಾನವಾಗಿ, ವಾಯುಸೇನೆಯಲ್ಲಿ 62 ವರ್ಷಗಳ ಅವಿಸ್ಮರಣೀಯ ಅಧ್ಯಾಯವನ್ನೇ ಬರೆದಿದೆ

ಮಿಗ್–21 ಅವಿಸ್ಮರಣೀಯ ಅಧ್ಯಾಯಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಆರು ದಶಕ ದೇಶದ ಪರ ಸೆಣಸಿದ 'ಸೈನಿಕ'

ಆಗಸ್ಟ್ 25ರಂದು ಬಿಕಾನೇರ್‌ನ ನಾಲ್ ವಾಯು ನೆಲೆಯಲ್ಲಿ ಮಿಗ್–21 ಗರ್ಜಿಸುತ್ತಾ ಆಗಸಕ್ಕೇರಿತು. ಈ ಯುದ್ಧವಿಮಾನದ ಕೊನೆಯ ಹಾರಾಟ ಅದು. 'ಲವ್ ಆ್ಯಂಡ್ ವಾರ್' ಹಿಂದಿ ಚಿತ್ರದ ಚಿತ್ರೀಕರಣದ ಭಾಗವಾಗಿ ಆಗಸದಲ್ಲಿ ಹಾರಿದ ಮಿಗ್–21, ಚಿತ್ರದ ಕಥೆಯಲ್ಲಿ ಮುಖ್ಯ ಭಾಗವೂ ಹೌದು. ಆದರೆ, ವಾಸ್ತವದಲ್ಲಿ, ಮಿಗ್–21 ಇನ್ನು ನೆನಪು ಮಾತ್ರ. ಆರು ದಶಕ ಭಾರತೀಯ ವಾಯುಸೇನೆಯ ಮುಖ್ಯ ಅಸ್ತ್ರವಾಗಿದ್ದ, ಬಾನಿನಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿ ದೇಶದ ಹೆಮ್ಮೆಗೆ ಕಾರಣವಾದ ದೇಶದ ಮೊದಲ ಸೂಪರ್‌ಸಾನಿಕ್ ಯುದ್ಧ ವಿಮಾನ ಇದು; ಅಪ್ರಸ್ತುತವಾಗಿರುವ ತಂತ್ರಜ್ಞಾನ, ಹೆಚ್ಚುತ್ತಿರುವ ನಿರ್ವಹಣಾ ವೆಚ್ಚ ಹಾಗೂ ರಫೇಲ್, ತೇಜಸ್‌ನಂಥ ಅತ್ಯಾಧುನಿಕ ಯುದ್ಧವಿಮಾನಗಳ ಭರಾಟೆಯಲ್ಲಿ ಮರೆಗೆ ಸರಿದಿದೆ.

ಮಿಕೊಯಾನ್ ಗುರೊವಿಚ್–21 ಅಲಿಯಾಸ್ ಮಿಗ್–21 ರಷ್ಯಾ ನಿರ್ಮಿತ ಮೊದಲ ಆಧುನಿಕ, ಎರಡನೇ ತಲೆಮಾರಿನ ಆಕರ್ಷಕ ವಿನ್ಯಾಸದ ಯುದ್ಧವಿಮಾನ. ಇದರ ಮೊದಲ ಆವೃತ್ತಿ ಮೊದಲ ಬಾರಿಗೆ ಕಾರ್ಯಾಚರಣೆ ಆರಂಭಿಸಿದ್ದು 1960ರಲ್ಲಿ. 1963ರಲ್ಲಿ ಭಾರತೀಯ ವಾಯುಪಡೆ ಸೇರಿ, ಅದರ ಪ್ರಮುಖ ಅಸ್ತ್ರವಾಯಿತು. ಭಾರತವು ನಡೆಸಿದ ಪ್ರತಿ ಯುದ್ಧದಲ್ಲಿಯೂ ಇದರದ್ದು ಪ್ರಮುಖ ಪಾತ್ರವಾಗಿತ್ತು.

1971ರ ಡಿ.14ರಂದು ಢಾಕಾದಲ್ಲಿ ರಾಜ್ಯಪಾಲರ ಮನೆಯ ಮೇಲೆ ನಡೆಸಿದ ದಾಳಿ ನಿರ್ಣಾಯಕವಾಗಿತ್ತು. ಅದರಿಂದ ಯುದ್ಧವು ತಿರುವು ಪಡೆದು, ಪಾಕ್ ವಿರುದ್ಧ ಭಾರತ ಗೆಲುವು ಸಾಧಿಸಿತ್ತು. 2019ರ ಬಾಲಾಕೋಟ್ ವಾಯುದಾಳಿಯ ಸಂದರ್ಭದಲ್ಲಿ ವಿಂಗ್ ಕಮಾಂಡರ್ ಅಭಿನಂದನ್ ವರ್ಧಮಾನ್ ಇದ್ದ ಮಿಗ್–21 ವಿಮಾನ ಪತನ ಹೊಂದುವುದಕ್ಕೂ ಮುನ್ನ ಪಾಕ್‌ನ ಅತ್ಯಂತ ಶಕ್ತಿಶಾಲಿ ಯುದ್ಧವಿಮಾನ, ಅಮೆರಿಕ ನಿರ್ಮಿತ ಎಫ್–16 ಅನ್ನು ಹೊಡೆದುರುಳಿಸಿತ್ತು.

ಅತ್ಯಂತ ದೀರ್ಘಾವಧಿಗೆ ವಾಯುಪಡೆಯ ಭಾಗವಾಗಿದ್ದ ಈ ವಿಮಾನ ಪೈಲಟ್‌ಗಳ ತರಬೇತಿಗೂ ಬಳಕೆಯಾಗುತ್ತಿತ್ತು. ತನ್ನ ವೇಗ, ಸರಳತೆ, ಲವಲವಿಕೆಯಿಂದ 'ವರ್ಕ್‌ಹಾರ್ಸ್' ಎಂದು ಹೆಸರು ಪಡೆದಿದ್ದ ಈ ವಿಮಾನವು ಅಪಘಾತಗಳಿಗೆ, ದುರಸ್ತಿಗೆ, ಪೈಲಟ್‌ಗಳು, ನಾಗರಿಕರ ಸಾವಿಗೆ ಕಾರಣವಾಗಿ 'ಹಾರಾಡುವ ಶವಪೆಟ್ಟಿಗೆ' ಎನ್ನುವ ಅಪಖ್ಯಾತಿಗೂ ಗುರಿಯಾಗಿತ್ತು. ಹಾರಾಟ ನಿಲ್ಲಿಸಿದರೂ ಮಿಗ್–21 ತನ್ನ ಸಾಮರ್ಥ್ಯ, ಸಾಧನೆಯ ಮೂಲಕ ಸೇನಾ ಸಿಬ್ಬಂದಿಯೂ ಸೇರಿದಂತೆ ದೇಶದ ಜನರ ಮನಸ್ಸಿನಲ್ಲಿ ಚಿರಂತನವಾಗಿ ಉಳಿಯಲಿದೆ.

ಸೆ.26ರಂದು ಚಂಡೀಗಢದಲ್ಲಿ ಅಧಿಕೃತ ವಿದಾಯ



ಭಾರತೀಯ ವಾಯುಪಡೆಯ (ಐಎಎಫ್) ಮೊದಲ ಸೂಪರ್‌ಸಾನಿಕ್ (ಶಬ್ದದ ವೇಗಕ್ಕಿಂತಲೂ ಹೆಚ್ಚು ವೇಗದಲ್ಲಿ ಸಾಗುವ) ಯುದ್ಧ ವಿಮಾನ

1963 ಭಾರತೀಯ ವಾಯುಪಡೆಗೆ ಸೇರ್ಪಡೆಯಾದ ವರ್ಷ

874 ವಾಯುಪಡೆ ಖರೀದಿಸಿರುವ ಮಿಗ್–21 ವಿಮಾನಗಳು

579 ಎಚ್‌ಎಎಲ್ ತಯಾರಿಸಿದ್ದ ವಿಮಾನಗಳು

2,175 ಕಿ.ಮೀ/ಗಂಟೆ ಮಿಗ್–21 ವಿಮಾನದ ಗರಿಷ್ಠ ವೇಗ

58 ಸಾವಿರ ಅಡಿ ಹಾರಾಟದ ಗರಿಷ್ಠ ಎತ್ತರ

370 ಕಿ.ಮೀ ವಿಮಾನ ಹಾರಬಹುದಾದ ಗರಿಷ್ಠ ದೂರ

ಒಂದು ಎಂಜಿನ್ ಸಾಮರ್ಥ್ಯದ, ಟುಮಾನ್‌ಸ್ಕೀ ಆರ್ 25–300 ಟರ್ಬೋಜೆಟ್ ಎಂಜಿನ್ ಹೊಂದಿರುವ ಮಿಗ್–21 ಯುದ್ಧವಿಮಾನವನ್ನು ಹಲವು ಬಾರಿ ಮೇಲ್ದರ್ಜೆಗೆ ಏರಿಸಲಾಗಿದೆ

1 ಅಥವಾ **2** ಆಸನ (ಪೈಲಟ್) ಸಾಮರ್ಥ್ಯ (ಮಾದರಿಯನ್ನು ಅವಲಂಬಿಸಿ)

14.7 ಮೀಟರ್ ಉದ್ದ

ಎರಡು ಸ್ಕ್ವಾಡ್ರನ್
ಸದ್ಯ ವಾಯುಪಡೆಯ ಬಳಿ ಎರಡು ಸ್ಕ್ವಾಡ್ರನ್‌ಗಳಿವೆ. 'ನಂ.23 ಪ್ಯಾಂಥರ್ಸ್' ಮತ್ತು ನಂ.3 'ಕೋಬ್ರಾಸ್' (ಒಂದು ಸ್ಕ್ವಾಡ್ರನ್‌ನಲ್ಲಿ 16 ಇಲ್ಲವೇ 18 ಯುದ್ಧವಿಮಾನಗಳು ಇರುತ್ತವೆ).

7.15 ಮೀಟರ್ ಅಗಲ (ಎರಡೂ ರೆಕ್ಕೆಗಳ ನಡುವಿನ ಅಂತರ)

4.1 ಮೀಟರ್ ಎತ್ತರ

10,400 ಕೆ.ಜಿ ಹೊರುವ ಗರಿಷ್ಠ ಭಾರ

ಪ್ರಮುಖ ಪಾತ್ರ
- 1965ರ ಭಾರತ–ಪಾಕಿಸ್ತಾನ ಯುದ್ಧ
- 1971ರ ಭಾರತ–ಪಾಕಿಸ್ತಾನ ಯುದ್ಧ
- 1999ರ ಕಾರ್ಗಿಲ್ ಯುದ್ಧ
- 2019ರ ಬಾಲಾಕೋಟ್ ವಾಯುದಾಳಿ

ಮಿಗ್–21 ನಿವೃತ್ತಿಯಿಂದ ತೆರವಾಗುವ ಜಾಗವನ್ನು ದೇಶಿ ನಿರ್ಮಿತ ತೇಜಸ್ ಎಲ್‌ಸಿಎ ಎಂಕೆ–1ಎ ತುಂಬಲಿವೆ

ಸಾಮರ್ಥ್ಯ • ಶತ್ರುಗಳ ಯುದ್ಧವಿಮಾನಗಳ ಧ್ವಂಸ • ಆಗಸದಿಂದ ಆಗಸಕ್ಕೆ ಕ್ಷಿಪಣಿ ದಾಳಿ • ಆಗಸದಿಂದ ನೆಲಕ್ಕೆ ಕ್ಷಿಪಣಿ ದಾಳಿ • ಗುಂಡಿನ ಮಳೆಗರೆಯುವ ಸಾಮರ್ಥ್ಯ

ಹಾರಾಡುವ ಶವಪೆಟ್ಟಿಗೆ

ಮಿಗ್–21 ವಿಮಾನವು 'ಹಾರಾಡುವ ಶವಪೆಟ್ಟಿಗೆ' ಎಂಬ ಅಪಖ್ಯಾತಿಯನ್ನೂ ಹೊಂದಿದೆ. ವಿಮಾನವು ಪದೇ ಪದೇ ಪತನಗೊಂಡು ಪೈಲಟ್‌ಗಳು ಹಾಗೂ ನಾಗರಿಕರು ಸಾವಿಗೀಡಾಗುತ್ತಿದ್ದುದು ಇದಕ್ಕೆ ಕಾರಣ. ಈವರೆಗೆ 400ಕ್ಕೂ ಹೆಚ್ಚು ವಿಮಾನಗಳು ಅಪಘಾತಕ್ಕೀಡಾಗಿದ್ದು, 200 ಪೈಲಟ್‌ಗಳು ಮತ್ತು 60 ನಾಗರಿಕರು ಮೃತಪಟ್ಟಿದ್ದಾರೆ.



ರಾಜಸ್ಥಾನದ ಬಿಕಾನೇರ್‌ನ ನಾಲ್ ವಾಯುನೆಲೆಯಲ್ಲಿ ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತಿ ಸಿಂಗ್ ಅವರು ಆಗಸ್ಟ್ 19ರಂದು ಮಿಗ್21 ವಿಮಾನವನ್ನು ಕೊನೆಯ ಬಾರಿಗೆ ಹಾರಿಸಿದ್ದರು –ಪಿಟಿಐ ಚಿತ್ರ

'ಮರೆಯಲಾಗದ ಆತ್ಮೀಯತೆ'

ಹಲವು ವಾಯುಸೇನಾ ಅಧಿಕಾರಿಗಳು ಮಿಗ್–21 ಹಾರಿಸಿದ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಂಡು, ಅದರ ಸಾಮರ್ಥ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಇಂದು ಪೈಲಟ್‌ಗಳು ಹೆಚ್ಚು ಸುರಕ್ಷಿತವಾದ, ನಾಜೂಕಾದ ಮತ್ತು ಮುಂದುವರಿದ ತಂತ್ರಜ್ಞಾನದ ಯುದ್ಧವಿಮಾನಗಳನ್ನು ಹಾರಿಸುತ್ತಿದ್ದಾರೆ. ಆದರೆ ಒರಟು ಎಂದು ಕರೆಯಬಹುದಾಗಿದ್ದ, ಸಣ್ಣ ಲೋಪಕ್ಕೂ ಅವಕಾಶ ಇಲ್ಲದ ವಿಮಾನದೊಂದಿಗೆ ನಾವು ಹೊಂದಿದ್ದ ಆತ್ಮೀಯತೆ ಎಂತಹದ್ದು ಎನ್ನುವುದನ್ನು ಇಂದಿನವರು ಎಂದಿಗೂ ಅರಿಯಲಾರರು' ಎಂದು ನಿವೃತ್ತ ಗ್ರೂಪ್ ಕ್ಯಾಪ್ಟನ್ ಅನುಪಮ್ ಬ್ಯಾನರ್ಜಿ ತಮ್ಮ ಅನುಭವ ದಾಖಲಿಸಿದ್ದಾರೆ.

ಐಎಎಫ್ ಸಾಮರ್ಥ್ಯ ಕುಂಠಿತ

ಮಿಗ್–21 ವಿಮಾನಗಳ ನಿವೃತ್ತಿಯಿಂದಾಗಿ ವಾಯುಪಡೆಯ ಸಾಮರ್ಥ್ಯ ಕುಂಠಿತಗೊಂಡಿದೆ. ಸದ್ಯ ವಾಯುಪಡೆಯ ಬಳಿ ಇರುವ ಜಾಗ್ವಾರ್, ಮಿರಾಜ್–2000 ಮತ್ತು ಮಿಗ್–29 ಯುದ್ಧವಿಮಾನಗಳು ಕೂಡ ಹಳೆಯದಾಗುತ್ತಾ ಬಂದಿದ್ದು, ಈ ದಶಕದ ಕೊನೆಯ ಹೊತ್ತಿಗೆ ಸೇವೆಯಿಂದ ಒಂದೊಂದೇ ನಿವೃತ್ತಿ ಹೊಂದಲಿವೆ. ವಾಯುಪಡೆಯು ಹೊಸ ವಿಮಾನಗಳನ್ನು ಖರೀದಿಸದೇ ಇದ್ದರೆ ಸಾಮರ್ಥ್ಯ ಇನ್ನಷ್ಟು ಕುಗ್ಗಲಿದೆ.

ರಕ್ಷಣಾ ಸಚಿವಾಲಯವು 83 ತೇಜಸ್ ಎಂಕೆ1ಎ ಯುದ್ಧವಿಮಾನ ಖರೀದಿಗಾಗಿ ಎಚ್‌ಎಎಲ್ ಜೊತೆ ₹48 ಸಾವಿರ ಕೋಟಿಯ ಒಪ್ಪಂದ ಮಾಡಿಕೊಂಡಿತ್ತು. 2024ರ ಮಾರ್ಚ್‌ನಿಂದಲೇ ತೇಜಸ್ ವಿಮಾನಗಳನ್ನು ವಾಯುಪಡೆಗೆ ಹಸ್ತಾಂತರಿಸಲು ಆರಂಭಿಸಬೇಕಿತ್ತು. ಆದರೆ, ಎಚ್‌ಎಎಲ್ ಈವರೆಗೆ ಒಂದು ವಿಮಾನವನ್ನೂ ಹಸ್ತಾಂತರಿಸಿಲ್ಲ. 2021ರ ಆಗಸ್ಟ್‌ನಲ್ಲಿ ಎಚ್‌ಎಎಲ್ 99 ಎಫ್–404 ಎಂಜಿನ್‌ಗಳ ಖರೀದಿಗಾಗಿ ಜಿಇ ಏರೋಸ್ಪೇಸ್ ಕಂಪನಿಯೊಂದಿಗೆ ₹5,375 ಕೋಟಿ ಒಪ್ಪಂದ ಮಾಡಿಕೊಂಡಿತ್ತು. ಆದರೆ, ಒಂದೂವರೆ ವರ್ಷ ಎಂಜಿನ್ ಪೂರೈಕೆ ಆಗಿರಲಿಲ್ಲ. ಮೊದಲ ಎಂಜಿನ್ ಈ ವರ್ಷದ ಏಪ್ರಿಲ್‌ನಲ್ಲಿ ಬಂದಿದೆ.

ಭಾರತೀಯ ವಾಯುಪಡೆಯ ಸದ್ಯದ ಸ್ಥಿತಿಗತಿ

42 ಮಂಜೂರಾಗಿರುವ ಯುದ್ಧ ವಿಮಾನಗಳ ಸ್ಕ್ವಾಡ್ರನ್‌ಗಳು

31 ಈವರೆಗೆ ಇದ್ದ ಸ್ಕ್ವಾಡ್ರನ್‌ಗಳು

29 ಮಿಗ್–21 ನಿವೃತ್ತಿ ನಂತರ ಉಳಿಯುವ ಸ್ಕ್ವಾಡ್ರನ್‌ಗಳು

ಯಾವ ವಿಮಾನ, ಎಷ್ಟು ಸ್ಕ್ವಾಡ್ರನ್?



ಸುಖೋಯ್–30ಎಂಕೆಐ	ಜಾಗ್ವಾರ್	ಮಿರಾಜ್ 2000	ಮಿಗ್–29	ತೇಜಸ್ ಎಂಕೆ–1ಎ	ರಫೇಲ್
13	6	3	3	2	2

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರಾಹುಲ್ ಗಾಂಧಿ ಅವರ ಚಿತ್ರದೊಂದಿಗೆ ಅವರದ್ದು ಎನ್ನಲಾದ ಹೇಳಿಕೆಯ ಸ್ಕ್ರೀನ್‌ಶಾಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಆರು–ಏಳು ಬಾಲಕರು ನನ್ನ ಬಳಿ ಬಂದು, 'ವೋಟ್ ಚೋರ್, ಗಡ್ಡಿ ಚೋಡ್' ಎಂದು ಕಿವಿಯಲ್ಲಿ ಉಸುರಿದರು. ಏಕೆಂದರೆ, ಬಿಹಾರದಲ್ಲಿ ಮತದಾರರ ಪಟ್ಟಿಯಿಂದ ಅವರ ಹೆಸರುಗಳನ್ನು ಕೈಬಿಡಲಾಗಿದೆ' ಎಂದು ರಾಹುಲ್ ಹೇಳಿದ್ದಾರೆ ಎಂಬುದಾಗಿ ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ರಾಹುಲ್ ಗಾಂಧಿ ಅವರು ಬಿಹಾರದ ಅರಾರಿಯಾದಲ್ಲಿ ಆಗಸ್ಟ್ 24ರಂದು ಪತ್ರಿಕಾಗೋಷ್ಠಿಯಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ಬಗ್ಗೆ ಮಾತನಾಡಿದ್ದರು. ಈ ಹಿಂದೆ ಐದು–ಆರು ಬಾರಿ ಮತದಾನ ಮಾಡಿದವರ ಹೆಸರುಗಳನ್ನೂ ಈ ಬಾರಿ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಹೇಳಿದ್ದರು. ಮಾತು ಮುಂದುವರಿಸಿದ್ದ ಅವರು, 'ಈಗ ಮಕ್ಕಳೂ ನನ್ನ ಬಳಿ ಬರುತ್ತಿದ್ದಾರೆ. ವೋಟ್ ಚೋರ್, ಗಡ್ಡಿ ಚೋಡ್ ಎಂದು ಕಿವಿಯಲ್ಲಿ ಹೇಳುತ್ತಿದ್ದಾರೆ. ಹೀಗೆ ಹೇಳುತ್ತಿರುವುದು ವಯಸ್ಕರಲ್ಲ, ಮಕ್ಕಳು..' ಎಂದಿದ್ದರು. ಈ ಎರಡು ಭಿನ್ನ ಹೇಳಿಕೆಗಳನ್ನು ಬೆಸೆದು, ಅದರ ಮೂಲಕ ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಹಿಡಿ ಮತ್ತು ಬಿಡುಗಳ ಮಥನ



ನುಡಿ ಬೆಳಗು

ವಾಸುದೇವ ನಾಡಿಗ್

ಕಳೆದ ವರ್ಷವಷ್ಟೇ ಸಿಬಿಎಸ್‌ಇ ಹತ್ತನೇ ತರಗತಿ ಓದುವಾಗಲೇ ಹೊಂದಾಣಿಕೆ ಸಮಸ್ಯೆಯೋ, ಇನ್ನಾವುದೋ ಅಂತರಂಗದ ಆತಂಕವೋ ನೋವೋ ಓದಿನ ಒತ್ತಡವೋ ಖಿನ್ನತೆಗೆ ಜಾರಿದ ಹುಡುಗಿ. ಪಾದರಸದ ಹಾಗೆ ಪುಟಿದೇಳುತ್ತಿದ್ದವಳು ಏಕ್‌ದಂ ನಿಸ್ತೇಜ ಮತ್ತು ಮೌನಿ. ನಕ್ಕರೆ ಹತ್ತು ಮನೆಗೆ ಕೇಳುವ ಹಾಗೆ 'ವಿಶಿಷ್ಟ'ವಾಗಿ ನಗುತ್ತಿದ್ದವಳು ಈಗ ಗಾಢ ಮೌನದಿಂದ ಎಲ್ಲರೂ ಕೇಳುವ ಹಾಗಾದಳು. ಏನಾಯಿತು, ಯಾಕಾಯಿತು ಮನಸ್ಸು ಯಾಕೆ ಹೀಗೆ ದೇಹವನ್ನು ಅಲ್ಲಾಡದ ಹಾಗೆ ಅಣತಿಕೊಟ್ಟಿತೋ ಗೊತ್ತಿಲ್ಲ. ಅಂತೂ ಇಂತೂ ತುಸು ಮಟ್ಟಿಗೆ ಹೊರಗೆ ಬಂದು ಸಿಬಿಎಸ್‌ಇ ಬೋರ್ಡಿನ ಸವಾಲಿನ ಪರೀಕ್ಷೆ ಮುಗಿಸಿ ಎಂಭತ್ತೈದು ಪ್ರತಿಶತ ಅಂಕವನ್ನೂ ಪಡೆದಳು. ನೀಟ್ ಇಂಟಗ್ರೇಟೆಡ್ ಕಾಲೇಜಿಗೆ ಎರಡು ತಿಂಗಳೂ ಆಗಿಲ್ಲ, ಧುತ್ತನೆ ತಂದೆಯ ಅಕಾಲಿಕ ಸಾವು. ಮೊನ್ನೆ ತಾನೆ ಖಿನ್ನತೆಯಿಂದ ಹೊರಬಂದ ಜೀವ ಅಪ್ಪನನ್ನು ಕಳೆದು ಕೊಳ್ಳೋದು. ಆ ಅನೂಹ್ಯ ನೋವು ಅವಳಿಗೇ ಗೊತ್ತು. ತಂದೆ ಹೋಗಿ ಐದನೇ ದಿನಕ್ಕೇ ಕಾಲೇಜು ಸೇರಿ ನೀಟ್ ಸೈಕಲ್ ಟೆಸ್ಟು ಬರೆದು ತರಗತಿಗೇ ಮೊದಲು ಮತ್ತು ಕನ್ನಡ ಪಿರಿಯಾಡಿಕಲ್ ಪರೀಕ್ಷೆಯಲ್ಲಿ ನಲವತ್ತಕ್ಕೆ ನಲವತ್ತು ಅಂಕ. ಅಪ್ಪ ಹೋದ ನಾಲ್ಕೇ ದಿನಕ್ಕೆ ಮತ್ತೆ ಎದ್ದು ಬಂದ ಅದೇ ಲವಲವಿಕೆ ಪುಟಿದೇಳುವ ಜೀವಕಾರಂಜಿ.

ಮನಸ್ಸು ಎಷ್ಟು ವಿಸ್ಮಯ ನೋಡಿ. ಯಾವ ಸಮಯದಲ್ಲಿ ಅದು ದೇಹದ ಕೆಲವು ಅಂಗಗಳನ್ನು ನಿಸ್ತೇಜ ಮಾಡಿಬಿಡುತ್ತದೆ. ಯಾವುದೋ ಒಂದು ಸಂಬಂಧಿತ ನರ ಕೈ ಕಾಲು ಕಣ್ಣು ಗಂಟಲು ಕಿವಿ ಹೊಟ್ಟೆ ಕೊರಳಿಗೆ 'ನೀನು ಏನೂ ಮಾಡಬೇಡ' ಅಂತ ಸಂದೇಶವನ್ನು ಕಳಿಸಿದರೆ ಮುಗೀತು. ಈಗ ಇವಳ ವಿಷಯದಲ್ಲಿ ಹಾಗಲ್ಲ; ಮನಸ್ಸಿನ ಅಸಮತೋಲನ ಮತ್ತು ಅದು ಹೂಡಿಸುವ ಮುಷ್ಕರಕ್ಕೆ ಅವಕಾಶವನ್ನೇ ಕೊಡಲಿಲ್ಲ. ಯಾವುದನ್ನು ಮರೆಯಬೇಕು ಯಾವುದನ್ನು ನೆನಪಿಡಬೇಕು ಎಂಬ ಮಥನದಲ್ಲಿ ಹುಟ್ಟಿದ ಅಮೃತವನ್ನು ಬೊಗಸೆಯಲ್ಲಿ ಹಿಡಿದಳು.

ನಮಗೆ ಹೊಂದಾಣಿಕೆಯಾಗದ, ರುಚಿಸದ, ಒಗ್ಗದ ಸಂಗತಿಗಳನ್ನು ನಿರ್ಲಕ್ಷಿಸುವುದೂ ಬಹುದೊಡ್ಡ ಆತ್ಮಸಾಕ್ಷಾತ್ಕಾರವೇ ಸರಿ. ಅನಗತ್ಯಗಳನ್ನು ಬಿಡುವ ಕಲೆಯೇ ಬಹುದೊಡ್ಡ ಜೀವನ ಕಲೆ ಅನಿಸುತ್ತದೆ. ಪ್ರೌಢತೆಯೆಂದರೆ ಕೇವಲ ಹಿಡಿಯುವುದಲ್ಲ ಬಿಡುವುದೂ ಕೂಡ. ಯಾವುದನ್ನು ಮಾಡಬೇಕು, ಯಾವುದನ್ನು ಕೇಳಿಸಿಕೊಳ್ಳಬೇಕು, ಯಾವುದಕ್ಕೆ ಪ್ರತಿಕ್ರಿಯಿಸಬೇಕು ಎಂಬ ಅರಿವು ಇಲ್ಲಿ ಕೆಲಸ ಮಾಡುತ್ತದೆ. ಅನೇಕ ಸಂದರ್ಭಗಳಲ್ಲಿ ನಮ್ಮ ಪ್ರತಿಕ್ರಿಯೆಗಳ ಅಗತ್ಯವೇ ಇರುವುದಿಲ್ಲ. ವೃಥಾ ಕಸವನ್ನು ಮನಸ್ಸಿನೊಳಗೆ ಸುರಿದುಕೊಳ್ಳುವ ಬದಲು ಖಾಲಿಯಾಗಿ ಅಮೃತಕ್ಕೆ ಕಾಯುವುದೇ ಸೊಗಸು. ಸವಾಲು ಇರುವುದು ಅಪ್ಪನ ಅನುಪಸ್ಥಿತಿಯನ್ನು ಯಾವುದರಿಂದ ತುಂಬಿಸಿಕೊಳ್ಳಬೇಕು ಎಂಬುದು. ಈ ಅರಿವು ಇವಳಿಗೆ ಸಾಧ್ಯ ಕೂಡ. ಅದು ಅವಳನ್ನು ಎತ್ತರಕ್ಕೆ ಬೆಳೆಸಬಲ್ಲದು ಕೂಡ.


ತಿದ್ದುಪಡಿ: ಮಂಗಳವಾರದ ಸಂಚಿಕೆಯ ನುಡಿ ಬೆಳಗು ಅಂಕಣದ 'ಅನಾಮಿಕ ತ್ಯಾಗಿಗಳು' ಬರಹದಲ್ಲಿ ಮುಂಬೈನಲ್ಲಿ ನಡೆದ ಅಖಿಲ ಭಾರತ ಸಮಿತಿಯ ಸಭೆಯನ್ನು ನಾ.ದಿವಾಕರರು ರಾತ್ರಿ ಹನ್ನೆರಡು ಗಂಟೆಗೆ ಕನ್ನಡಿಗರೊಬ್ಬರ ಮನೆಯಲ್ಲಿ ನಡೆಸಿದ್ದರು ಎಂಬಲ್ಲಿ ಹೆಸರು ತಪ್ಪಾಗಿದ್ದು, ಅದು ರಂಗನಾಥ ದಿವಾಕರರು ಎಂದಾಗಬೇಕಿತ್ತು.

ಪದಬಂಧ 6147

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈಕೆ ಮಾವನ ಹೆಂಡತಿ (2)
3.ಮಾವನ ಮರ್ಯಾದೆ (2)
5.ಇದು ಉಪಯೋಗವಿಲ್ಲದ್ದು (5)
6.ಮಿತಿ ಮೀರಿದ ಕೋಪವಿದು (3)
7.ಮಾನಿನಿಯ ಮೇಲೆ ಬಂದಿರುವ ಸಂಶಯ (3)
8.ಸಂಸ್ಥೆಗಳ ಹಕ್ಕಿನ ಮೇಲೆ ಸರ್ಕಾರದ ಸ್ವಾಮ್ಯ (5)
9.ಒಳ್ಳೆಯ ಅವಕಾಶ (3)
10.ಅರ್ಧ ಚಂದ್ರಾಕೃತಿಯ ರಚನೆ (3)
13.ಮಾನವನ್ನು ಹೊಂದಿದ ಒಣ ಹೆಮ್ಮೆ (5)
14.ತರಲೆಯ ಶಿರ (2)
15.ಧಾನ್ಯದ ಸಿಪ್ಪೆ (2)

ಮೇಲಿಂದ ಕೆಳಕ್ಕೆ
1.ಅನುಭವವನ್ನು ಉಳ್ಳವನು (4)
2.ಆ ಹೊತ್ತು ಒದಗಿದ ತೊಂದರೆ (3)
4.ತಿರುಗಿ ನಿಂತು ಎವೆಯನ್ನು ಮುಚ್ಚುವುದು (4)
5.ಈತ ಅಪರಾಧವನ್ನು ಮಾಡದಿರುವವನು (5)
7.ಗುಣವನ್ನು ಹೊಗಳುವುದು (5)
9.ಒಳ್ಳೆಯ ಮಾತು (4)
11.ಗಡಿಯ ಬಳಿ ಗಟ್ಟಿಯಾಗಿ ಹೇಳಿದ ಗಾದೆ (4)
12.ಸಭೆಯಲ್ಲಿ ಕುಳಿತಿರುವವನು (3)



6146ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಂಧಾಮ 3.ಪರಿಕರ
5.ನೀರವ 6.ಪರಕಾಯ
8.ಶನಿವಾರ 10.ನಾಗರೀಕ
12.ದರಂಕಮ 13.ಲಶುನ
16.ಪರಾಭವ 17.ಹಿಯ್ಯಾಳಿಕೆ

ಮೇಲಿಂದ ಕೆಳಕ್ಕೆ:
1.ಪವಿ 2.ಮಹನೀಯ
3.ಪರವಶ 4.ರಫ್ತು
7.ರಟಾಗ 9.ವಾಹಕ
11.ಕಲರವ 12.ದನಗಾಹಿ
14.ಶಾಪ 15.ನೌಕೆ

ಸುಡೊಕು 6531

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	1		3		8		2	
8		6				5		3
	5		4		6		7	
5			1		2		4	9
	2	9						
6			8		9	2		5
	8		6		1		9	
7		2		8		3		1
	6		2		3		5	

6530 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

27 ಆಗಸ್ಟ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಚತುರ್ಥಿ ಗಂ. 15-45 **ನಕ್ಷತ್ರ:** ಹಸ್ತ ಗಂ. 6-05 **ಯೋಗ:** ಶುಭ ಗಂ. 12-35 **ಕರಣ:** ವಿಷ್ಟಿ ಗಂ. 15-45 ಸಿಂಹ ಮಾಸದ 10 ನೇ ದಿನ. **ಮಳೆ ನಕ್ಷತ್ರ :** ಮಘಾ 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 01-30 , **ಸೂರ್ಯೋದಯ :** 06-22 **ಸೂರ್ಯಾಸ್ತ :** 06-42, **ಮುಸ್ಲಿಂ ದಿನಾಂಕ :** 03 ರಬಿಉಲ್ಲಾವಲ್, **ದಿನ ವಿಶೇಷ :** ಗಣೇಶ ಚತುರ್ಥಿ, **ಅದೃಷ್ಟ ಸಂಖ್ಯೆ :** 6, 8

ಮೇಷ: ಕೆಲಸಗಳ ಬಗ್ಗೆ ಪುನರಾವಲೋಕನ ಮಾಡಿ, ಸಲಹೆಯನ್ನು ಸ್ವೀಕರಿಸುವುದು ಒಳ್ಳೆಯದು. ವೃತ್ತಿಯಲ್ಲಿ ಪ್ರತಿಸ್ಪರ್ಧಿಗಳ ಆಪಾದನೆಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡುವಿರಿ. ರಫ್ತು ವ್ಯವಹಾರ ಲಾಭ ನೀಡುವುದು.

ವೃಷಭ: ಆಗಾಗ ಮನಸ್ಸಿನಲ್ಲಿ ಕಾಡುವ ಭಯಕ್ಕೆ ಹೆದರುವ ಅವಶ್ಯಕತೆ ಇಲ್ಲ. ಕಷ್ಟಗಳು ಏನೇ ಬಂದರೂ ಎದುರಿಸುತ್ತೇನೆ ಎಂಬ ಆತ್ಮಸ್ಥೈರ್ಯ ತಂದುಕೊಳ್ಳಿ. ಅನಾಯಾಸದ ಗಳಿಕೆಯಿಂದ ಸಂತೋಷ ಉಂಟಾಗುವುದು.

ಮಿಥುನ: ಇತರರ ವೈಯಕ್ತಿಕ ವಿಚಾರದಲ್ಲಿ ಅನವಶ್ಯಕವಾಗಿ ಸಲಹೆಯನ್ನು ಕೊಡದಿರಿ. ದುರಾಸೆಯಿಂದಾಗಿ ಅಕ್ಕಪಕ್ಕದವರಿಂದ, ಸಂಬಂಧಿಗಳಿಂದ ನಿಂದನೆಗೆ ಒಳಗಾಗುವಿರಿ.

ಕರ್ಕಾಟಕ: ಆಲೋಚನೆಯಂತೆ ನೂತನ ಮನೆ ಕೊಳ್ಳಲು ಹಣದ ವ್ಯವಸ್ಥೆಯಾಗಲಿದೆ. ಶ್ರೀಸಿದ್ಧಿವಿನಾಯಕನನ್ನು ಸ್ತುತಿಸುವುದರಿಂದ ಮಂಗಳವಾಗುವುದು. ಮಧುರ ಘಟನೆ ಸಂಭವಿಸಲಿದೆ.

ಸಿಂಹ: ನೂತನ ವಾಹನ ಖರೀದಿಯ ಯೋಜನೆಗೆ ತಂದೆಯಿಂದ ಒಪ್ಪಿಗೆ ಮತ್ತು ಸಹಾಯ ಸಿಗಲಿದೆ. ಉನ್ನತ ಶಿಕ್ಷಣ ಪಡೆಯುವ ಗುರಿಗೆ ಇನ್ನೂ ಹೆಚ್ಚಿನ ಪರಿಶ್ರಮ ಅಗತ್ಯ. ಮಕ್ಕಳೊಡನೆ ಸಂತಸದಲ್ಲಿ ಪಾಲ್ಗೊಳ್ಳುವಿರಿ.

ಕನ್ಯಾ: ವಿಮರ್ಶಾತ್ಮಕ ಆಲೋಚನೆಗೆ ಹಾಗೂ ಸಂದರ್ಭೋಚಿತ ಮಾತುಗಳಿಗೆ ಎಲ್ಲರೂ ಪ್ರಶಂಸಿಸುವರು. ನಿರಂತರ ಪ್ರಯತ್ನದಿಂದ ಕಾರ್ಯಸಿದ್ಧಿ. ಸ್ವತ್ತು ವಿವಾದಗಳ ಇತ್ಯರ್ಥಕ್ಕೆ ಸೂಕ್ತ ವಾತಾವರಣ ಸೃಷ್ಟಿಯಾಗಲಿದೆ.

ತುಲಾ: ವಯಸ್ಸು ಹಾಗೂ ಉತ್ಸಾಹ ಇರುವಾಗ ಮಾತ್ರ ಸಮಾಜ ಸೇವೆ ಮಾಡಬಹುದೆನ್ನುವುದನ್ನು ಗಮನದಲ್ಲಿಟ್ಟು ಸೇವೆ ಸಲ್ಲಿಸಿ. ತಂದೆ ತಾಯಿಯರ ಸಂತೋಷವು ಸಂತಸಕ್ಕೆ ಕಾರಣವಾಗಲಿದೆ.

ವೃಶ್ಚಿಕ: ಹೊಸ ಉದ್ಯೋಗವನ್ನು ಹುಡುಕುತ್ತಿರುವವರಿಗೆ ಪ್ರಯತ್ನದ ಅವಶ್ಯಕತೆಯ ಮನವರಿಕೆ ಆಗುತ್ತದೆ. ಸಿದ್ಧಿಸಿದ ಕಲೆಯನ್ನು ಹಣದ ಮುಖ ನೋಡಿ ಅನರ್ಥಕಾರಿಯನ್ನಾಗಿ ಮಾಡಿಕೊಳ್ಳಬೇಡಿ.


ಧನು: ವರಾನ್ವೇಷಣೆಯ ಹಂತದಲ್ಲಿರುವ ಕನ್ಯೆಗೆ ಬಂದ ಸಂಬಂಧದ ಬಗ್ಗೆ ಕೂಲಂಕಷವಾಗಿ ಯೋಚಿಸದೆಯೆ ಮದುವೆಯ ಮಾತುಕತೆ ಮಾಡದಿರಿ. ದುರ್ಲಭವಾದಂಥ ವಸ್ತುಗಳ ಸಂಪಾದನೆಯಲ್ಲಿ ಸಮಯ ಸವೆಸದಿರಿ.

ಮಕರ: ದೂರದ ಪ್ರಯಾಣದ ಆಯಾಸವನ್ನು ಆರಾಮವಾಗಿ ಇರುವುದರಿಂದ ನೀಗಿಸಿಕೊಳ್ಳುವಿರಿ. ವಿಚಾರಗಳು ನೀವೆಷ್ಟೇ ತಲೆಕೆಡಿಸಿಕೊಂಡು ಮಾಡಿದರೂ ಅದು ಸರಿಯಾಗಿ ಆಗುವುದಿಲ್ಲ.

ಕುಂಭ: ಸಜ್ಜನರ ಹಾಗೂ ದುರ್ಜನರ ಸಹವಾಸಗಳು ಅವವೇ ಫಲಗಳನ್ನು ಕೊಡುವುದು ಅನುಭವಕ್ಕೆ ಸರಿಯಾಗಿ ಬರುತ್ತವೆ. ಹೂವು ಹಣ್ಣುಗಳ ಬೆಳೆಗಾರರಿಗೆ ಲಾಭ ನಷ್ಟಗಳೆರೆಡರ ಅನುಭವವೂ ಆಗಬಹುದು.

ಮೀನ: ಖರ್ಚುವೆಚ್ಚಗಳು ನಿಯಂತ್ರಣದಲ್ಲಿ ಇರಲಿಕ್ಕಾಗಿ ಹರಸಾಹಸ ಪಡಬೇಕಾಗುವುದು. ದುಃಖಕರ ವಿಚಾರವನ್ನು ಆತ್ಮೀಯರೊಂದಿಗೆ ಹಂಚಿಕೊಳ್ಳುವುದರಿಂದ ಮನಸ್ಸು ಹಗುರವಾಗಲಿದೆ.

ಗುಂಡಣ್ಣ



© 2025 by King Features Syndicate, Inc. World Rights reserved

ಬುಧವಾರ ● ಆಗಸ್ಟ್ 27, 2025
ಪ್ರಜಾವಾಣಿ



ಜಮ್ಮು–ಕಾಶ್ಮೀರದ ಉಧಮ್‌ಪುರದಲ್ಲಿ ಪ್ರವಾಹದಿಂದಾಗಿ ತಗ್ಗು ಪ್ರದೇಶಗಳ ಮನೆಗಳು ಜಲಾವೃತವಾಗಿದ್ದವು

ಭೂಕುಸಿತ, ಮೇಘಸ್ಫೋಟ 10 ಮಂದಿ ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ನಿರಂತರ ಮಳೆ ಮತ್ತು ಪ್ರವಾಹ ಪರಿಸ್ಥಿತಿ ಮುಂದುವರಿದಿದ್ದು, ಮಂಗಳವಾರ ಸಂಭವಿಸಿದ ಭೂಕುಸಿತ ಮತ್ತು ಮೇಘ ಸ್ಫೋಟ ಅವಘಡಗಳಲ್ಲಿ ಕನಿಷ್ಠ 10 ಮಂದಿ ಸಾವಿಗೀಡಾಗಿ, ಹಲವರು ಗಾಯಗೊಂಡಿದ್ದಾರೆ.

ಮಾತಾ ವೈಷ್ಣೋದೇವಿ ಯಾತ್ರೆ ಸಾಗುವ ರಿಯಾಸಿ ಜಿಲ್ಲೆಯ ಮಾರ್ಗದಲ್ಲಿ ಮಂಗಳವಾರ ಮಧ್ಯಾಹ್ನ ಭೂ ಕುಸಿತ ಸಂಭವಿಸಿದ್ದರಿಂದ ಕನಿಷ್ಠ ಆರು ಮಂದಿ ಸಾವಿಗೀಡಾಗಿದ್ದು, 14 ಮಂದಿ ಗಾಯಗೊಂಡಿದ್ದಾರೆ. ಹಲವರು ಅವಶೇಷದಡಿ ಸಿಲುಕಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಂದೆಡೆ ದೋಡಾ ಜಿಲ್ಲೆಯಲ್ಲಿ ಸಂಭವಿಸಿದ ಮೇಘಸ್ಫೋಟದಿಂದಾಗಿ ಕನಿಷ್ಠ ನಾಲ್ವರು ಸಾವಿಗೀಡಾಗಿದ್ದಾರೆ. ಪ್ರವಾಹದ ಅಬ್ಬರಕ್ಕೆ ಹಲವು ಮನೆಗಳಿಗೆ ಹಾನಿಯಾಗಿದೆ.

ಆಗಸ್ಟ್ 27ರವರೆಗೆ ಜಮ್ಮು ವಿಭಾಗದ ಎತ್ತರದ ಪ್ರದೇಶಗಳಲ್ಲಿ ಮೇಘಸ್ಫೋಟ, ಪ್ರವಾಹ ಸೃಷ್ಟಿ ಮತ್ತು ಭೂ ಕುಸಿತ ಸಂಭವಿಸಲಿವೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಯಾತ್ರೆ ತಾತ್ಕಾಲಿಕ ರದ್ದು: ತ್ರಿಕೂಟದಲ್ಲಿರುವ ಮಾತಾ ವೈಷ್ಣೋದೇವಿ ಸನ್ನಿಧಿಗೆ ಯಾತ್ರಾರ್ಥಿಗಳು ತೆರಳುವ ಹಾತ್ರಾ ಮಾರ್ಗದಲ್ಲಿ ಭೂ ಕುಸಿತ ಉಂಟಾದ ಕಾರಣ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ರಿಯಾಸಿ ಜಿಲ್ಲೆಯ ಪರ್ವತ ಪ್ರದೇಶದ ಅರ್ಧಕ್ವಾರಿಯ ಇಂದ್ರಪ್ರಸ್ಥ ಭೋಜನಾಲಯ ಬಳಿ ಮಧ್ಯಾಹ್ನ 3 ಗಂಟೆ ಸುಮಾರಿಗೆ ಭೂ ಕುಸಿತ ಸಂಭವಿಸಿದೆ.

ಪ್ರವಾಹದ ಎಚ್ಚರಿಕೆ: ನವದೆಹಲಿಯಲ್ಲಿ ಯಮುನಾ ನದಿ ಬುಧವಾರ ಅಪಾಯದ ಮಟ್ಟ ಮೀರುವ ಸಾಧ್ಯತೆ ಇದ್ದು, ಕೇಂದ್ರ ಜಲ ಆಯೋಗವು ಪ್ರವಾಹದ ಎಚ್ಚರಿಕೆ ನೀಡಿದೆ.

‘ಕೋರ್ಟ್ ಅಂಕಿತ ಹಾಕುವಂತಿಲ್ಲ’

ಮಸೂದೆಗಳಿಗೆ ಅಂಕಿತ– ಗಡುವು: ರಾಷ್ಟ್ರಪತಿ ಕೇಳಿರುವ ಸಲಹೆ ಕುರಿತ ವಿಚಾರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಆಗಸ್ಟ್ 28ಕ್ಕೆ ತಮಿಳುನಾಡು, ಕೇರಳ ತಮ್ಮ ನಿವೇದನೆ ಸಲ್ಲಿಸಲಿವೆ
- ಬಿಜೆಪಿ ಆಡಳಿತವಿರುವ ರಾಜ್ಯಗಳಿಂದ ರಾಜ್ಯಪಾಲರು, ರಾಷ್ಟ್ರಪತಿಗಳ ಅಧಿಕಾರ ಸಮರ್ಥನೆ

ನವದೆಹಲಿ: ‘ವಿಧಾನಸಭೆಯಲ್ಲಿ ಅಂಗೀಕಾರಗೊಂಡಿರುವ ಯಾವುದೇ ಮಸೂದೆಯನ್ನು ರಾಜ್ಯಪಾಲರು ತಡೆ ಹಿಡಿಯಬಹುದು. ರಾಜ್ಯಪಾಲರಿಗೆ ಇರುವ ಮಸೂದೆಗಳನ್ನು ತಡೆಹಿಡಿಯುವ ಅಧಿಕಾರವನ್ನು ಮರುಪರಿಶೀಲನೆಗೆ ಒಳಪಡಿಸುವುದು ನ್ಯಾಯಾಂಗದ ವ್ಯಾಪ್ತಿಗೆ ಬರುವುದಿಲ್ಲ’ ಎಂದು ಹಿರಿಯ ವಕೀಲ ಹರೀಶ್ ಸಾಳ್ವೆ ಮಂಗಳವಾರ ಪ್ರತಿಪಾದಿಸಿದರು.

‘ಅಲ್ಲದೇ, ನ್ಯಾಯಾಲಯವು ಯಾವುದೇ ಒಂದು ಶಾಸನಕ್ಕೆ ಅಂಕಿತ ಹಾಕುವಂತಿಲ್ಲ’ ಎಂದೂ ಹೇಳಿದ್ದಾರೆ.



ಮಹಾರಾಷ್ಟ್ರ ಸರ್ಕಾರದ ಪರ ಹಾಜರಿದ್ದ ಸಾಳ್ವೆ, ರಾಷ್ಟ್ರಪತಿ ಮತ್ತು ರಾಜ್ಯಪಾಲರ ಅಧಿಕಾರಗಳ ಕುರಿತು ದೀರ್ಘ ವಾದ ಮಂಡಿಸಿದರು.

ಬಿಜೆಪಿ ಆಡಳಿತವಿರುವ ರಾಜ್ಯಗಳ ಪರ ವಾದ ಮಂಡಿಸಿದ ವಕೀಲರು ಪ್ರತಿಪಾದನೆಯೂ ಇದೇ ಆಗಿತ್ತು. ‘ನ್ಯಾಯಾಂಗವು ಪ್ರತಿಯೊಂದು ಸಮಸ್ಯೆಗೂ ಪರಿಹಾರ ಒದಗಿಸುವ ಔಷಧ ಆಗಲು ಸಾಧ್ಯವಿಲ್ಲ’ ಎಂದೂ ಈ ರಾಜ್ಯಗಳ ಪರ ವಕೀಲರು ಹೇಳಿದರು.

ವಿಧಾನಸಭೆಗಳಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಸಂಬಂಧಿಸಿ ರಾಜ್ಯಪಾಲರು ಮತ್ತು ರಾಷ್ಟ್ರಪತಿಗೆ ನ್ಯಾಯಾಲಯ ಗಡುವು ನಿಗದಿ ಮಾಡಬಹುದೇ ಎಂಬ ಬಗ್ಗೆ ರಾಷ್ಟ್ರಪತಿ ಸಲಹೆ ಕೇಳಿರುವ ಕುರಿತ ವಿಚಾರಣೆ ವೇಳೆ, ಸಾಳ್ವೆ ಈ ಮಾತು ಹೇಳಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ನ್ಯಾಯಮೂರ್ತಿಗಳಾದ ಸೂರ್ಯಕಾಂತ, ವಿಕ್ರಮನಾಥ್, ಪಿ.ಎಸ್. ನರಸಿಂಹ ಮತ್ತು ಎ.ಎಸ್. ಚಂದೂರ್ಕರ್ ಅವರು ಇದ್ದ ನ್ಯಾಯಪೀಠ ವಿಚಾರಣೆ ನಡೆಸಿತು.

‘ಮಸೂದೆಯೊಂದನ್ನು ತಡೆಹಿಡಿಯಲು ರಾಜ್ಯಪಾಲರಿಗೆ ಅಧಿಕಾರ ಇದೆ ಎಂಬುದನ್ನು ಒಪ್ಪಿಕೊಂಡ ಮೇಲೆ, ಸಾಂವಿಧಾನಿಕ ಹುದ್ದೆಯಲ್ಲಿರುವ ಅವರು ಹಣಕಾಸು ಮಸೂದೆಯನ್ನು ಕೂಡ ತಡೆಹಿಡಿಯಬಹುದಲ್ಲವೇ’ ಎಂಬ ಪ್ರಶ್ನೆ ಮುಂದಿಟ್ಟ ಪೀಠಕ್ಕೆ, ಸಾಳ್ವೆ ಈ ಉತ್ತರ ನೀಡಿದ್ದಾರೆ.

ಉತ್ತರ ಪ್ರದೇಶ ಹಾಗೂ ಒಡಿಶಾ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್, ಗೋವಾದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ವಿಕ್ರಮಜಿತ್ ಬ್ಯಾನರ್ಜಿ, ಛತ್ತೀಸಗಡ ಸರ್ಕಾರದ ಪರ ಹಿರಿಯ ವಕೀಲ ಮಹೇಶ್ ಜೇಠ್ಮಲಾನಿ, ಮಧ್ಯಪ್ರದೇಶದ ಪರ ನೀರಜ್‌ಕಿಶನ್ ಕೌಲ್ ಹಾಜರಿದ್ದರು.

ಹರೀಶ್ ಸಾಳ್ವೆ ವಾದ

- ರಾಜ್ಯಪಾಲರು ಮಸೂದೆಯೊಂದನ್ನು ಯಾವಾಗ ತಡೆಹಿಡಿಯಬೇಕು, ಯಾವಾಗ ಅಂಕಿತ ಹಾಕಬೇಕು, ಅದರ ಬಗ್ಗೆ ರಾಷ್ಟ್ರಪತಿಗಳ ನಿರ್ಧಾರ ಕೈಗೊಳ್ಳುವುದಕ್ಕೆ ಯಾವಾಗ ಕಾಯ್ದಿರಿಸಬೇಕು ಅಥವಾ ಯಾವಾಗ ಅದನ್ನು ರಾಜ್ಯ ಸರ್ಕಾರಕ್ಕೆ ವಾಪಸು ಕಳಿಸಬೇಕು ಎಂಬ ಬಗ್ಗೆ ಸಂವಿಧಾನದ 200ನೇ ವಿಧಿಯು ಹೇಳುವುದಿಲ್ಲ
- ಮಸೂದೆ ಕುರಿತು ನಿರ್ಧಾರ ಕೈಗೊಳ್ಳುವ ಅಧಿಕಾರ ಸಾಂವಿಧಾನಿಕವಾದ ಉನ್ನತ ಹುದ್ದೆಯಲ್ಲಿ ಇರುವವರಿಗೆ ಇದೆ ಎಂಬುದನ್ನು ಒಪ್ಪಿಕೊಂಡ ಮೇಲೆ, ಅವರ ಅಧಿಕಾರ ಕುರಿತು ಮರುಪರಿಶೀಲನೆ ನಡೆಸಲು ನ್ಯಾಯಾಂಗಕ್ಕೆ ಅವಕಾಶ ಇರುತ್ತದೆಯೇ?
- ಮಸೂದೆಯೊಂದಕ್ಕೆ ರಾಷ್ಟ್ರಪತಿ ಇಲ್ಲವೇ ರಾಜ್ಯಪಾಲರು ಅಂಕಿತ ಹಾಕಬೇಕು. ಅವರು ಕೈಗೊಂಡ ನಿರ್ಧಾರ ಪ್ರಸ್ತುತ ಜಾರಿಯಲ್ಲಿರುವ ಕಾನೂನಿಗೆ ಅನುಗುಣವಾಗಿ ಇದೆಯೇ ಎಂಬುದನ್ನು ನಿಷ್ಕರ್ಷೆ ಮಾಡುವ ಅಧಿಕಾರವನ್ನಷ್ಟೆ ಸಂವಿಧಾನದ 142 ವಿಧಿಯು ನ್ಯಾಯಾಲಯಕ್ಕೆ ಇದೆ. ಮಸೂದೆಗೆ ಅಂಕಿತ ಹಾಕುವುದಕ್ಕಾಗಿ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿ ವಿಸ್ತರಿಸಿಕೊಳ್ಳುವುದಕ್ಕೆ ಈ ವಿಧಿ ಅವಕಾಶ ನೀಡುವುದಿಲ್ಲ
- ಮಸೂದೆ ಕುರಿತು ರಾಜ್ಯಪಾಲರು/ರಾಷ್ಟ್ರಪತಿ ಯಾವ ನಿರ್ಧಾರ ಕೈಗೊಂಡಿದ್ದಾರೆ ಎಂದಷ್ಟೆ ನ್ಯಾಯಾಲಯ ಪ್ರಶ್ನಿಸಬಹುದು. ಇಂತಹ ನಿರ್ಧಾರ ಏಕೆ ಕೈಗೊಂಡಿರಿ? ಎಂದು ಕೇಳುವಂತಿಲ್ಲ
- ತಮಗಿರುವ ಅಧಿಕಾರಗಳನ್ನು ಚಲಾಯಿಸುವ ಮತ್ತು ಕರ್ತವ್ಯಗಳನ್ನು ನಿಭಾಯಿಸುವ ಕುರಿತು ರಾಜ್ಯಪಾಲರು ಹಾಗೂ ರಾಷ್ಟ್ರಪತಿ ಯಾವುದೇ ನ್ಯಾಯಾಲಯಕ್ಕೆ ಉತ್ತರ ನೀಡಬೇಕಿಲ್ಲ, ಇದನ್ನು ಸಂವಿಧಾನದ 361ನೇ ವಿಧಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ

ಬ್ಯಾನರ್ಜಿ ವಾದ

- ಶಾಸನ ರಚನೆಗೆ ಸಂಬಂಧಿಸಿದ ಸಾಂವಿಧಾನಿಕ ಪ್ರಕ್ರಿಯೆಯಂತೆ, ಮಸೂದೆಗೆ ರಾಜ್ಯಪಾಲರ ಅಂಕಿತ ಅಗತ್ಯ. ರಾಜ್ಯಪಾಲರು ಮಸೂದೆಗೆ ಅಂಕಿತ ಹಾಕಿದ್ದಾರೆ ಎಂಬುದಾಗಿ ಪರಿಭಾವಿಸುವುದಕ್ಕೆ ಅವಕಾಶ ಇಲ್ಲ
- ‘ಪರಿಭಾವಿತ ಅಂಕಿತ’ ಎಂಬ ಪರಿಕಲ್ಪನೆ ಸಂವಿಧಾನದಲ್ಲಿ ಇಲ್ಲ. ಹಾಗಾಗಿ, ವಿಧಾನಸಭೆಗಳಲ್ಲಿ ಅಂಗೀಕಾರಗೊಂಡಿರುವ ಮಸೂದೆಗಳಿಗೆ ‘ಪರಿಭಾವಿತ ಅಂಕಿತ’ ನೀಡುವ ಅಧಿಕಾರ ನ್ಯಾಯಾಲಯಗಳಿಗೆ ಇಲ್ಲ

ನಟರಾಜ್ ವಾದ

- ರಾಷ್ಟ್ರಪತಿ ಮತ್ತು ರಾಜ್ಯಪಾಲರು ತಮ್ಮ ಕಾರ್ಯನಿರ್ವಹಣೆಗೆ ಸಂಬಂಧಿಸಿ ಸಂಪೂರ್ಣ ಸ್ವಾಯತ್ತತೆ ಹೊಂದಿದ್ದಾರೆ
- ಯಾವುದೇ ಮಸೂದೆಗೆ ಅಂಕಿತ ಹಾಕುವುದಕ್ಕೆ ಸಂಬಂಧಿಸಿ ಅವರು ತಮ್ಮ ಸಂಪೂರ್ಣ ವಿವೇಚನಾ ಅಧಿಕಾರ ಚಲಾಯಿಸುವ ಅಧಿಕಾರ ಹೊಂದಿದ್ದಾರೆ
- ವಿಧಾನಸಭೆಗಳಲ್ಲಿ ಅಂಗೀಕಾರಗೊಂಡ ಮಸೂದೆಗಳಿಗೆ ಅಂಕಿತ ಹಾಕುವುದಕ್ಕಾಗಿ ರಾಜ್ಯಪಾಲರು ಹಾಗೂ ರಾಷ್ಟ್ರಪತಿಗೆ ನ್ಯಾಯಾಲಯಗಳು ಕಾಲಮಿತಿ ವಿಧಿಸುವಂತಿಲ್ಲ

ಜೇಠ್ಮಲಾನಿ ವಾದ

- ಈ ವಿಚಾರ ಕುರಿತು ಏಪ್ರಿಲ್ 8ರಂದು ಸುಪ್ರೀಂ ಕೋರ್ಟ್ ನೀಡಿದ ಆದೇಶದಲ್ಲಿ , ಸಂವಿಧಾನದ 200ನೇ ವಿಧಿಯಲ್ಲಿ ಉಲ್ಲೇಖವಿರದ ಅಂಶವನ್ನು ಸೇರಿಸಲಾಗಿದೆ

ಕದನ ವಿರಾಮ ಘೋಷಿಸಿ: ಇಸ್ರೇಲ್‌ನಲ್ಲಿ ತೀವ್ರ ಪ್ರತಿಭಟನೆ

ಲಾಡ್ (ಎಪಿ): ‘ಒಂದು ವರ್ಷದ ಹಿಂದೆಯೇ ನಾವು ಯುದ್ಧವನ್ನು ನಿಲ್ಲಿಸಬಹುದಿತ್ತು. ಒತ್ತೆಯಾಳುಗಳನ್ನು ವಾಪಸು ಕರೆಸಿಕೊಳ್ಳಬಹುದಿತ್ತು. ಆದರೆ, ನಮ್ಮ ಪ್ರಧಾನಿಯು ಮತ್ತೆ ಮತ್ತೆ ಯುದ್ಧವನ್ನು ಇಚ್ಛಿಸಿದರು. ತನ್ನದೇ ನಾಗರಿಕರ ಜೀವದಾನವನ್ನು ಬಯಸಿದರು. ತಮ್ಮ ಅಧಿಕಾರ ಉಳಿಸಿಕೊಳ್ಳಲು ಇಷ್ಟೆಲ್ಲ ಮಾಡಿದರು...’

–ಹಮಾಸ್ ಬಂಡುಕೋರರ ಬಳಿ ಒತ್ತೆಯಾಳು ಆಗಿರುವ 25 ವರ್ಷ ಮತನ್ ಎಂಬ ಯುವಕನ ತಂದೆಯ ಮಾತುಗಳಿವು. ಒತ್ತೆಯಾಳುಗಳನ್ನು ವಾಪಸು ಕರೆಸಿಕೊಳ್ಳಲು ಆಗ್ರಹಿಸಿ ಇಸ್ರೇಲ್ ನಾದ್ಯಂತ ತೀವ್ರ ಪ್ರತಿಭಟನೆಗಳು ನಡೆಯುತ್ತಿವೆ. ಇಸ್ರೇಲ್‌ನ ಒತ್ತೆಯಾಳುಗಳು ಮತ್ತು ಕಾಣೆಯಾದವರ ಕುಟುಂಬಗಳ ವೇದಿಕೆ ವತಿಯಿಂದ ಮಂಗಳವಾರ ವನ್ನು ‘ಸಂಘರ್ಷದ ರಾಷ್ಟ್ರೀಯ ದಿನ’ವನ್ನಾಗಿ ಆಚರಿಸಿ, ತೀವ್ರ ಪ್ರತಿಭಟನೆ ನಡೆಸಲಾಯಿತು.

ಟೈರ್ ಸುಟ್ಟು, ಹೆದ್ದಾರಿಗಳ ತಡೆ ನಡೆಸಿ ಪ್ರತಿಭಟನಕಾರರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ‘ತಕ್ಷಣವೇ ಕದನವಿರಾಮ ಘೋಷಿಸಿ’ ಎಂದು ಆಗ್ರಹಿಸಿದರು. ಆದರೆ, ಇನ್ನೊಂದೆಡೆ ಗಾಜಾದ ಮೇಲೆ ತನ್ನ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸಲು ಸರ್ಕಾರ ನಿರ್ಧರಿಸಿದೆ. ‘ಯುದ್ಧದಿಂದಷ್ಟೇ ಹಮಾಸ್ ಅನ್ನು ತೊಡೆದು ಹಾಕಬಹುದು’ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದರು. ಗಾಜಾದ ನಾಸೆರ್ ಆಸ್ಪತ್ರೆ ಮೇಲಿನ ದಾಳಿ ಕುರಿತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಆಕ್ಷೇಪ ವ್ಯಕ್ತವಾಗುತ್ತಿದೆ.

ನಿರಾಣಿ ಪುತ್ರನ ವಿರುದ್ಧ ತನಿಖೆ: ‘ಸುಪ್ರೀಂ’ ಸಮ್ಮತಿ

ಒಂದನೇ ಪುಟದಿಂದ...

ಕರ್ನಾಟಕ ಸರ್ಕಾರದ ಪರವಾಗಿ ವಕೀಲ ಡಿ.ಎಲ್. ಚಿದಾನಂದ ಸಲ್ಲಿಸಿದ ಮನವಿಯ ಆಧಾರದಲ್ಲಿ ಪ್ರಕರಣದ ವಿಚಾರಣೆ ನಡೆಸಿದ ಪೀಠವು, ವಿಚಾರಣೆ ನಡೆಸಲು ಅನುಮತಿ ಅಗತ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದೆ.

ಮುಂದಿನ ವಿಚಾರಣೆಗಾಗಿ ಈ ವಿಷಯವನ್ನು ವಿಚಾರಣಾ ನ್ಯಾಯಾಲಯಕ್ಕೆ ಹಿಂತಿರುಗಿಸಿತು. ಕಂಪನಿಯ ನಿರ್ದೇಶಕ ವಿಜಯ್ ನಿರಾಣಿ ಮತ್ತು ಇತರರ ವಿರುದ್ಧ ಇನ್‌ಸ್ಪೆಕ್ಟರ್ 2019 ರಲ್ಲಿ ಪ್ರಕರಣ ದಾಖಲಿಸಿದ್ದರು.

ಕ್ಷಮೆ ಕೋರುವೆ: ಶಿವಕುಮಾರ್

ಒಂದನೇ ಪುಟದಿಂದ...

ನನ್ನ ಪಕ್ಷ ನಿಷ್ಠೆ ಪ್ರಶ್ನಿಸುವವರು ಮೂರ್ಖರು: ‘ನಾನು ಹುಟ್ಟು ಕಾಂಗ್ರೆಸಿಗ ಎಂಬ ಹೇಳಿಕೆಗೆ ಬದ್ಧ. ಪಕ್ಷ ಹಾಗೂ ಗಾಂಧಿ ಕುಟುಂಬಕ್ಕೆ ಇರುವ ನನ್ನ ನಿಷ್ಠೆಯನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ. ಪ್ರಶ್ನೆ ಮಾಡುವವರು ಮೂರ್ಖರು. ರಾಜ್ಯದ ರಾಜಕೀಯ ಇತಿಹಾಸದಲ್ಲಿ ನಾನು ಮಾಡಿರುವ ಹೋರಾಟವನ್ನು ಬೇರೆ ಯಾರೂ ಮಾಡಿಲ್ಲ. ಹೋರಾಟದಲ್ಲಿ ನನ್ನ ಸಮೀಪಕ್ಕೂ ಬರಲು ಸಾಧ್ಯವಿಲ್ಲ. ನನ್ನ ಸಮಕಾಲೀನರನ್ನು ಉದ್ದೇಶಿಸಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಹಿರಿಯ ನಾಯಕರ ಜೊತೆ ಹೋಲಿಕೆ ಮಾಡಿಕೊಳ್ಳುತ್ತಿಲ್ಲ’ ಎಂದು ಹೇಳಿದರು.

‘ಪಕ್ಷದ ಆಂತರಿಕ ರಾಜಕೀಯದ ಕಾರಣಕ್ಕೆ ನನಗೆ ಟಿಕೆಟ್ ಸಿಗದಿದ್ದಾಗಲೂ ಇಂದಿರಾ ಗಾಂಧಿ, ರಾಜೀವ್ ಗಾಂಧಿ ಭಾವಚಿತ್ರ ಹಾಕಿಕೊಂಡೇ ಚುನಾವಣೆ ಗೆದ್ದೆ. ಆಗ ನನ್ನ ಮನೆ ಬಾಗಿಲಿಗೆ ಎಷ್ಟೋ ಜನ ಬಂದರೂ ನಾನು ಹುಟ್ಟು ಕಾಂಗ್ರೆಸಿಗ, ಕಾಂಗ್ರೆಸಿಗನಾಗಿಯೇ ಸಾಯುತ್ತೇನೆ ಎಂದು ನಾಲ್ಕೇ ತಿಂಗಳಲ್ಲಿ ಮತ್ತೆ ಕಾಂಗ್ರೆಸ್ ಪಕ್ಷದ ಭಾಗವಾದೆ. ಈ ರೀತಿ ರಾಜಕಾರಣ ಮಾಡಿಕೊಂಡು ಬಂದಿರುವನು ನಾನು’ ಎಂದು ವಿವರಿಸಿದರು.

‘ನನ್ನ ಹೇಳಿಕೆಯನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡಬಹುದು, ಕೆಸರೆರಚಾಟ ಮಾಡಬಹುದು ಎಂದು ಭಾವಿಸಿದ್ದರೆ ಅದು ಸುಳ್ಳು’ ಎಂದರು.

‘ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆ ಉಲ್ಲೇಖಿಸಿದ ವಿಚಾರವಾಗಿ ರಾಹುಲ್ ಗಾಂಧಿ ಅವರು ಸ್ಪಷ್ಟನೆ ಕೇಳಿದ್ದಾರೆಯೇ’ ಎಂಬ ಪ್ರಶ್ನೆಗೆ, ‘ಈ ವಿಚಾರವಾಗಿ ಯಾರೂ ನನ್ನನ್ನು ಪ್ರಶ್ನಿಸಿಲ್ಲ. ಹೈಕಮಾಂಡಿನ ಯಾವುದೇ ನಾಯಕರು ಈ ವಿಚಾರವಾಗಿ ನನ್ನ ಜೊತೆ ಮಾತನಾಡಿಲ್ಲ. ಅವರು ಚರ್ಚೆ ಮಾಡಿರಬಹುದು, ಬೇರೆಯವರಿಂದ ಮಾಹಿತಿ ಪಡೆದಿರಬಹುದು. ಎಲ್ಲರಿಗೂ ನನ್ನ ಮೇಲೆ ನಂಬಿಕೆ ಇದೆ. ಎಲ್ಲಿ ಹುಟ್ಟಿದ್ದೇನೆ, ಎಲ್ಲಿ ಸಾಯುತ್ತೇನೆ ಎಂದು ಎಲ್ಲರಿಗೂ ಗೊತ್ತಿದೆ. ನಮ್ಮ ಪಕ್ಷದ ಹೈಕಮಾಂಡ್ ನಾನು ಮಾತ್ರವಲ್ಲ, ನನ್ನ ಅಕ್ಕಪಕ್ಕದಲ್ಲಿ ಏನೇನಾಗುತ್ತಿದೆ ಎಂಬುದರ ಬಗ್ಗೆಯೂ ಅಧ್ಯಯನ ಮಾಡಿರುತ್ತದೆ’ ಎಂದು ಉತ್ತರಿಸಿದರು.

‘ಕಾಂಗ್ರೆಸ್ ಸಿದ್ಧಾಂತದಲ್ಲಿ ರಾಜಿ ಇಲ್ಲ’

ಡಿ.ಕೆ. ಶಿವಕುಮಾರ್ ಅವರು ಕ್ಷಮೆ ಯಾಚಿಸಿರುವುದನ್ನು ಸ್ವಾಗತಿಸಿರುವ ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್, ‘ಕಾಂಗ್ರೆಸ್ ಪಕ್ಷದ ಸಿದ್ಧಾಂತದಲ್ಲಿ ರಾಜಿ ಇಲ್ಲ’ ಎಂದರು.

ಸುದ್ದಿಗಾರರ ಜೊತೆ ಮಾತನಾಡಿ, ‘ಶಿವಕುಮಾರ್ ಅವರೊಂದಿಗೆ ವೈಯಕ್ತಿಕವಾಗಿ ಯಾವುದೇ ಸಮಸ್ಯೆ ಇಲ್ಲ. ಬದಲಾಗಿ ಗಾಂಧಿಯನ್ನು ಕೊಂದ ಸಂಘಟನೆಯ ಹಾಡು ಹಾಡಿದ್ದಕ್ಕೆ ಮಾತ್ರ ವಿರೋಧ ವ್ಯಕ್ತಪಡಿಸಿದ್ದೆ’ ಎಂದರು.

‘ಉಪ ಮುಖ್ಯಮಂತ್ರಿಯಾಗಿ ಅವರು (ಶಿವಕುಮಾರ್) ಅದನ್ನು ಪಠಿಸಿದರೆ ನನಗೆ ಯಾವುದೇ ಆಕ್ಷೇಪವಿಲ್ಲ. ಕಾಂಗ್ರೆಸ್ ಅಧ್ಯಕ್ಷರಾಗಿ, ಕಾಂಗ್ರೆಸ್, ಸಂವಿಧಾನ ಮತ್ತು ತ್ರಿವರ್ಣ ಧ್ವಜವನ್ನು ವಿರೋಧಿಸುವ ಆರ್‌ಎಸ್‌ಎಸ್‌ನ ಪ್ರಾರ್ಥನೆಯ ಹಾಡನ್ನು ಹಾಡುವ ಅಗತ್ಯ ಇಲ್ಲ’ ಎಂದು ಹೇಳಿದರು.

‘ಇಟಲಿ ಮಾತೆಗೆ ವಂದಿಸಬೇಕಿತ್ತಾ’

‘ಡಿ.ಕೆ.ಶಿವಕುಮಾರ್ ಅವರು ಭಾರತ ಮಾತೆಗೆ ನಮಸ್ಕರಿಸಿದ್ದಕ್ಕೆ ಕ್ಷಮೆ ಕೇಳುವಂತಾಗಿದೆ. ಕಾಂಗ್ರೆಸ್ ಪಕ್ಷದ ಪ್ರಕಾರ ಭಾರತೀಯರು ಯಾರಿಗೆ ಜಯಕಾರ ಹಾಕಬೇಕು? ಇಟಲಿ ಮಾತೆಗಾ ಅಥವಾ ಇಟಲಿಯಿಂದ ಬಂದ ಮೇಡಮ್‌ಗಾ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದ್ದಾರೆ.

ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಜನ್ಮ ಕೊಟ್ಟ ಮಾತೃಭೂಮಿ ಬಗ್ಗೆ ಈ ಭಾವನೆ ಇಟ್ಟುಕೊಳ್ಳುವುದು ತಪ್ಪೇ? ತಾಯಿ ನೆಲಕ್ಕೆ ನಮಸ್ಕಾರ ಮಾಡುವುದೇ ತಪ್ಪೇ? ಒಂದು ಕಡೆ ವಿಧಾನಸೌಧದಲ್ಲಿ ‘ಪಾಕಿಸ್ತಾನ ಜಿಂದಾಬಾದ್’ ಎಂದು ಘೋಷಣೆ ಕೂಗಿದವರನ್ನು ಸಮರ್ಥಿಸಿಕೊಳ್ಳುವ ಕಾಂಗ್ರೆಸ್, ಮತ್ತೊಂದೆಡೆ ಭಾರತಾಂಬೆಗೆ ನಮಸ್ಕರಿಸುವವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ. ಇದನ್ನು ದೇಶದ್ರೋಹಿ ಮನಸ್ಥಿತಿ ಅನ್ನದೇ ಇನ್ನೇನು ಹೇಳಲು ಸಾಧ್ಯ’ ಎಂದು ಪ್ರಶ್ನಿಸಿದ್ದಾರೆ.

‘ಶಿವಕುಮಾರ್ ಅವರು ಕ್ಷಮೆ ಕೇಳಬೇಕು ಎಂದು ಆದೇಶ ನೀಡಿದ್ದು ಯಾರು? ಸೋನಿಯಾ ಗಾಂಧಿ ಅವರಾ? ರಾಹುಲ್ ಗಾಂಧಿ ಅವರಾ? ಕೆ.ಸಿ. ವೇಣುಗೋಪಾಲ್ ಅವರಾ? ಸುರ್ಜೇವಾಲಾ ಅವರಾ? ಅಥವಾ ಹರಿಪ್ರಸಾದ್ ಅವರಾ? ಅವರಿಗೆ ಕಿಂಚಿತ್ತಾದರೂ ಸ್ವಾಭಿಮಾನ ಮತ್ತು ಧೈರ್ಯ ಇದ್ದಿದ್ದರೆ, ಕಾಂಗ್ರೆಸ್‌ನ ಸ್ಥಾನಗಳಿಗೆ ರಾಜೀನಾಮೆ ನೀಡಬೇಕಿತ್ತು’ ಎಂದು ಆಗ್ರಹಿಸಿದರು.

ಸಂಕ್ಷಿಪ್ತ ಸುದ್ದಿ

ಇರಾನ್ ರಾಯಭಾರಿ ಹೊರಹಾಕಿದ ಆಸ್ಟ್ರೇಲಿಯಾ

ಮೆಲ್ಬರ್ನ್ (ಎಪಿ): ಇರಾನ್‌ನ ರಾಯಭಾರಿಯನ್ನು ದೇಶದಿಂದ ಹೊರ-ಹಾಕಲಾಗುವುದು ಎಂದು ಆಸ್ಟ್ರೇಲಿಯಾ ಪ್ರಧಾನಿ ಆಂಥೊನಿ ಅಲ್ಬನೀಸ್ ಮಂಗಳವಾರ ಹೇಳಿದ್ದಾರೆ.

ಆಸ್ಟ್ರೇಲಿಯಾದಲ್ಲಿ ಯಹೂದಿಗಳ ಮೇಲೆ ನಡೆದಿರುವ ಕನಿಷ್ಠ ಎರಡು ದಾಳಿಗಳ ಹಿಂದೆ ಇರಾನ್ ಸರ್ಕಾರವಿದೆ ಎಂದು ಗುಪ್ತಚರ ಇಲಾಖೆಯು ಬಹಿರಂಗಪಡಿಸಿದ ನಂತರ ಈ ಕ್ರಮ ತೆಗೆದುಕೊಂಡಿದ್ದಾರೆ.

ಹಿಂದಿನ ವರ್ಷದ ಅಕ್ಟೋಬರ್‌ನಲ್ಲಿ ಸಿಡ್ನಿಯಲ್ಲಿರುವ ಕೋಷರ್ ಫುಡ್ ಕಂಪನಿಯ ಲೆವಿಸ್ ಕಾಂಟಿನೆಂಟಲ್ ಕಿಚನ್ ಹಾಗೂ ಡಿಸೆಂಬರ್‌ನಲ್ಲಿ ಮೆಲ್ಬರ್ನ್‌ನಲ್ಲಿರುವ ಅಡ್ಡಾಸ್ ಇಸ್ರೇಲ್ ಸಿನಗಾಗ್ ಮೇಲೆ ನಡೆದ ದಾಳಿಯಲ್ಲಿ ಇರಾನ್ ಸರ್ಕಾರದ ಪಾತ್ರವಿದೆ ಎಂದು ಆಸ್ಟ್ರೇಲಿಯಾದ ಭದ್ರತಾ ಗುಪ್ತಚರ ಸಂಸ್ಥೆಯು ತಿಳಿಸಿದೆ ಎಂದು ಅಲ್ಬನೀಸ್ ಮಾಹಿತಿ ನೀಡಿದ್ದಾರೆ.

ರಾನಿಲ್‌ಗೆ ಜಾಮೀನು

ಕೊಲಂಬೊ (ಪಿಟಿಐ): ಭ್ರಷ್ಟಾಚಾರ ಆರೋಪದಡಿ ಬಂಧನದಲ್ಲಿದ್ದ ಶ್ರೀಲಂಕಾದ ಮಾಜಿ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರಿಗೆ ಕೊಲಂಬೊ ಫೋರ್ಟ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಮಂಗಳವಾರ ಜಾಮೀನು ಮಂಜೂರು ಮಾಡಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ರಸ್ತೆ ಮೂಲ ಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್–1, ನೆಲ ಮಹಡಿ,
ಅನೆಕ್ಸ್ ಕಟ್ಟಡ–3, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು–560002.
ಸಂಖ್ಯೆ: ಕಾಅ/ರಮೂಸೌ–ಟಿಇಸಿ–1/ಪಿಆರ್/262/2025–26 ದಿನಾಂಕ: 26–08–2025

ತಿದ್ದುಪಡಿ–1

ವಿಷಯ: ಟೆಂಡರ್ ಅಧಿಸೂಚನೆಯ ಟೆಂಡರ್ ವೇಳಾಪಟ್ಟಿ ವಿಸ್ತರಣೆ ಬಗ್ಗೆ.
ಉಲ್ಲೇಖ: ಈ ಕಛೇರಿ ಟೆಂಡರ್ ಅಧಿಸೂಚನೆ ಸಂಖ್ಯೆ: ಕಾಅ/ರಮೂಸೌ/ಟಿಇಸಿ–1/ಟೆಂಡರ್/01/2025–26, ದಿನಾಂಕ: 21–08–2025.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **ತಾಂತ್ರಿಕ ಕಾರಣಗಳಿಂದಾಗಿ ಮೇಲಿನ ಅಧಿಸೂಚನೆಯ ಟೆಂಡರ್ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.**
ಪರಿಷ್ಕೃತ ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ದಿನಾಂಕ: **29–08–2025** ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **02–09–2025 ರಂದು 16.30 ಗಂಟೆಗೆ.** 3) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **09–09–2025 ರಂದು 16.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **10–09–2025 ರಂದು 16.30 ಗಂಟೆಯ ನಂತರ.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **ಅರ್ಹ ಟೆಂಡರ್‌ದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳಿಗಾಗಿ ಜಿಓಕೆ ಕೆ.ಪಿ.ಪಿ. ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಗೆ ಭೇಟಿ ನೀಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಸ್ತೆ ಮೂಲ ಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್–1, ಬಿಬಿಎಂಪಿ.

ನಗರಸಭಾ ಕಾರ್ಯಾಲಯ, ಅರಸೀಕೆರೆ.
ದೂ ಸಂ:08174–232201 ಫ್ಯಾಕ್ಸ್ ನಂ:08174–233274
ಈ ಮೇಲ್ ವಿಳಾಸ: itstaff_ulb_arasikere@yahoo.com
ವೆಬ್‌ಸೈಟ್ ವಿಳಾಸ: www.arasikeretown.mrc.gov.in
ನಂ:ನ.ಸ.ಅ/ಘ.ವ.ನಿ/Skid&ABC/ನ.ನಿಧಿ&15ನೇ.ಹ.ಕಾಸು/02/2025–26
ದಿನಾಂಕ : 25–08–2025.

–: ಮರು ಟೆಂಡರ್ ಪ್ರಕಟಣೆ:–

(ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ) ಅರಸೀಕೆರೆ ನಗರಸಭೆ ವ್ಯಾಪ್ತಿಯಲ್ಲಿ 2021–22 ಮತ್ತು 2022–23 ನೇ ಸಾಲಿನ 15ನೇ ಹಣಕಾಸು ಹಾಗೂ 2025–26 ನೇ ಸಾಲಿನ ನಗರಸಭಾ ನಿಧಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದ್ದೇಶ 1999–2000 ಪ್ರಕಾರ ಆಕ್ಟ್ 2000 ನಿಯಮದಂತೆ Karnataka Standard Tender Document –KG-2 & KC-5 ರ ಪ್ರಕಾರ ಎರಡು ಲೋಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಪೋರ್ಟಲ್:– http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಕ್ರ.ಸಂ.1)ವಿವರ DMA/2025-26/IND4998/CALL-2 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)30.00 2)DMA/2025-26/SE5588/CALL-2 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)10.00 ಹೆಚ್ಚಿನ ವಿವರಗಳನ್ನು www.kppp.karnataka. gov.in ವೆಬ್‌ಸೈಟ್‌ನಲ್ಲಿ ಮತ್ತು ಪೌರಾಯುಕ್ತರು, ನಗರಸಭೆ ಅರಸೀಕೆರೆ/ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ), ನಗರಸಭೆ ಅರಸೀಕೆರೆ ಈ ಕಛೇರಿಯಲ್ಲಿ ಪಡೆಯಬಹುದು.

ಸಹಿ/– ಅಧ್ಯಕ್ಷರು, ನಗರಸಭೆ, ಅರಸೀಕೆರೆ.
ಸಹಿ/– ಪೌರಾಯುಕ್ತರು, ನಗರಸಭೆ, ಅರಸೀಕೆರೆ.
ವಾಸಾಸಂಇ/ಹಿಸನಿ/ಹಾಸನ/491/ಕೆಎಸ್‌ಎಂಸಿಎ/2025–26

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
KSIIDC
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ.49, 4ನೇ ಮಹಡಿ, ಪೂರ್ವ ಭಾಗ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001, ದೂರವಾಣಿ: 080–22258131–32–33,
ವೆಬ್‌ಸೈಟ್:www.ksiidc.karnataka.gov.in ಇ–ಮೇಲ್:info@ksiidc.com

ವಿಜಯಪುರ ವಿಮಾನ ನಿಲ್ದಾಣಕ್ಕೆ ‘ವಿಮಾನ ನಿಲ್ದಾಣ ನಿರ್ದೇಶಕರು’ ಹುದ್ದೆಗೆ (ಗುತ್ತಿಗೆ ಆಧಾರದ ಮೇಲೆ) ನೇಮಕಾತಿ ಅಧಿಸೂಚನೆ

(1) ಹುದ್ದೆಯ ಹೆಸರು: ವಿಮಾನ ನಿಲ್ದಾಣ ನಿರ್ದೇಶಕರು (ಒಂದು ಹುದ್ದೆ):
• ಅಭ್ಯರ್ಥಿಯು ಯಾವುದೇ ವಿಭಾಗದಲ್ಲಿ ಪದವಿ ಪಡೆದಿರಬೇಕು ಮುಖ್ಯವಾಗಿ ಬಿಸಿನೆಸ್, ಏವಿಯೇಷನ್ ಅಡ್ಮಿನಿಸ್ಟ್ರೇಷನ್/ಇಂಜಿನಿಯರಿಂಗ್‌ನಲ್ಲಿ ಪದವಿ ಅಥವಾ ತತ್ಸಂಬಂಧಿತ ಕ್ಷೇತ್ರದಲ್ಲಿ ಪದವಿ ಪಡೆದಿರಬೇಕು. • ಕಾರ್ಯನಿರ್ವಾಹಕ, ವೃತ್ತಿಪರ ಮಟ್ಟದಲ್ಲಿ ವಿಮಾನ ನಿಲ್ದಾಣ ನಿರ್ವಹಣೆಯಲ್ಲಿ 10 ವರ್ಷಗಳ ಅನುಭವ ಹೊಂದಿರಬೇಕು. • ಸ್ವೀಕಾರಾರ್ಹ ಚಾಲನಾ ದಾಖಲೆಯೊಂದಿಗೆ ಎಲ್‌ಎಂವಿ/ ಹೆಚ್‌ಎಂವಿ ಚಾಲನಾ ಪರವಾನಗಿ ಹೊಂದಿರಬೇಕು. • ಪೈಲೆಟ್ ಪರವಾನಗಿ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. • ಈ ಕೆಳಕಂಡ ವಿಷಯಗಳಲ್ಲಿ ಪರಿಣಿತಿ ಹೊಂದಿರಬೇಕು:
(1) ಡಿಜಿಸಿಎ ಅನ್ವಯ ವಿಮಾನ ಸುರಕ್ಷತಾ ದಾಖಲಾತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವುದು ಮತ್ತು ನಿರ್ವಹಣೆ ಮಾಡುವುದು. (2) ಕಾನ್ಸೆಪ್ಟ್ ಡಿಸೈನ್ ಏರ್‌ಸೈಡ್ ಇನ್‌ಫ್ರಾಸ್ಟ್ರಕ್ಚರ್, ಟರ್ಮಿನಲ್ ಸಿಸ್ಟಮ್ಸ್, ಲ್ಯಾಂಡ್ ಸೈಡ್ ಫೆಸಿಲಿಟಿಗಳಲ್ಲಿ ತಿಳುವಳಿಕೆ ಮತ್ತು (3) ಗ್ರೌಂಡ್ ಟ್ರಾನ್ಸ್‌ಪೋರ್ಟೇಷನ್ ಟರ್ಮಿನಲ್ ಮತ್ತು ಏರ್‌ಸೈಡ್ ಆಪರೇಷನ್‌ಗಳ ಸಮೀಕರಣ (4) ಏರೋಸ್ಪೇಸ್ ಡೊಮೈನ್‌ನಲ್ಲಿ ಸಿಸ್ಟಮ್ಸ್ ಸೇಫ್ಟಿ ರಿಕ್ವೈರ್‌ಮೆಂಟ್‌ನ ಪರಿಶೀಲನೆ ಮತ್ತು ಅಭಿವೃದ್ಧಿ (5) ಏರ್‌ಟ್ರಾಫಿಕ್ ಕಂಟ್ರೋಲ್ ಕಾರ್ಯವಿಧಾನದ ಕಾರ್ಯನಿರ್ವಹಣೆ (6) ಡಿಜಿಸಿಎ ಒಪ್ಪಿಗೆ ಪಡೆದ ನಂತರ ವಿಮಾನ ಮತ್ತು ವಿಮಾನ ನಿಲ್ದಾಣ ಕಾರ್ಯಾಚರಣೆ ಕೈಪಿಡಿಗಳು, ಪರಿಷ್ಕರಣೆ ತಿದ್ದುಪಡಿಗಳನ್ನು ಏಕೀಕರಣಗೊಳಿಸುವುದು. ಕ್ರೋಢೀಕೃತ ವೇತನ ಪ್ರತೀ ತಿಂಗಳು: **ರೂ.1,25,000/– ವಯೋಮಿತಿ:ಕನಿಷ್ಠ: 35 ವರ್ಷಗಳು ಗರಿಷ್ಠ: 55 ವರ್ಷಗಳು.**
(1) ಆಸಕ್ತ ಅಭ್ಯರ್ಥಿಗಳು ತಮ್ಮ ಘೋಷ್ವಾರೆಯನ್ನು (ರೆಸ್ಯೂಮ್)ವಿದ್ಯಾರ್ಹತೆ ಮತ್ತು ಅನುಭವದ ಪ್ರಮಾಣಪತ್ರಗಳೊಂದಿಗೆ ಶೀಘ್ರ ಅಂಚೆ/ ಖುದ್ದಾಗಿ ಈ ಪ್ರಕಟಣೆ ಪ್ರಕಟಗೊಂಡ **10 ದಿನಗಳೊಳಗಾಗಿ** ಮೇಲ್ಕಂಡ ವಿಳಾಸಕ್ಕೆ ಕಳುಹಿಸಬೇಕು. (2) ಸಂದರ್ಶನದ ದಿನಾಂಕ ಮತ್ತು ಸಮಯವನ್ನು ನಂತರ ತಿಳಿಸಲಾಗುವುದು. (3) ಆಯ್ಕೆಯಾದ ಅಭ್ಯರ್ಥಿಯನ್ನು ವಿಜಯಪುರ ವಿಮಾನ ನಿಲ್ದಾಣದಲ್ಲಿ ನೇಮಿಸಲಾಗುವುದು. (4) ಯಾವುದೇ ಸ್ಪಷ್ಟೀಕರಣಕ್ಕೆ, ದಯವಿಟ್ಟು ಸಂಪರ್ಕಿಸಿ ಮೊಬೈಲ್ ನಂ: 98458 33566.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಬಾಗಲಕೋಟೆ ವಿಭಾಗ
ಸಂ/ವಾಕರಸಾ/ಬಾವಿ/ಸಂ/ವಾಣಿಜ್ಯ/1712/25 ದಿನಾಂಕ:26–08–2025.

ಇ–ಟೆಂಡರ್ ಪ್ರಕಟಣೆ ಸಂ: 02/2025
(Karnataka Public Procurement Portal ಮೂಲಕ ಮಾತ್ರ)

ವಾ.ಕ.ರ.ಸಾ.ಸಂಸ್ಥೆ, ಬಾಗಲಕೋಟೆ ವಿಭಾಗದ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗಳಿಗೆ, ತೆರೆದ ಸ್ಥಳದ ಮಳಿಗೆಗಳಿಗೆ, ಖಾಲಿ ನಿವೇಶನಗಳಿಗೆ ಹಾಗೂ ನವನಗರ ಬಸ್ ನಿಲ್ದಾಣದಲ್ಲಿ ಅಪೂರ್ಣವಾಗಿ ನಿರ್ಮಾಣಗೊಂಡ ವಾಣಿಜ್ಯ ಕಟ್ಟಡಕ್ಕೆ ಮತ್ತು ಬಸ್ ನಿಲ್ದಾಣಗಳ, ಶೌಚಾಲಯ/ಮೂತ್ರಾಲಯಗಳ ಸ್ವಚ್ಚತಾ ಗುತ್ತಿಗೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು https://www.kppp.karnataka.gov.in ಮೂಲಕ ಪೋರ್ಟಲ್‌ನಲ್ಲಿ ಸೂಚಿಸಿದ ನಿಗದಿತ ಸಮಯಕ್ಕನುಗುಣವಾಗಿ ಆನ್–ಲೈನ್ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸುವ ದೂರವಾಣಿ ಸಂಖ್ಯೆ: 7760991762 ಹಾಗೂ 7760991752.

Last Date & Time for submission of tenders:16-09-2025 at 05:30 PM, Date & Time for Opening of Financial Bid:18-09-2025 at 11:00 AM

ಸಹಿ/–ವಿಭಾಗೀಯ ನಿಯಂತ್ರಣಾಧಿಕಾರಿ,
ವಾ.ಕ.ರ.ಸಾ.ಸಂಸ್ಥೆ, ಬಾಗಲಕೋಟೆ ವಿಭಾಗ
DIPR/BGK/RO-NO-243/KSMCA/2025-26

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ)
(ಕರ್ನಾಟಕ ಸರ್ಕಾರದ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯಡಿ ಸ್ಥಾಪಿಸಲ್ಪಟ್ಟು, ಸರ್ಕಾರದ ಸೊಸೈಟಿಗಳ ನೋಂದಣಿ ಕಾಯ್ದೆಯಡಿ ನೋಂದಾಯಿಸಲ್ಪಟ್ಟ ಒಂದು ಸಂಸ್ಥೆ)
ಹಸಿರು ಭವನ, ದೊರೆಸಾನಿಪಾಳ್ಯ ಫಾರೆಸ್ಟ್ ಕ್ಯಾಂಪಸ್, ವಿನಾಯಕನಗರ ವೃತ್ತ, ಜೆ.ಪಿ. ನಗರ 5ನೇ ಹಂತ, ಬೆಂಗಳೂರು – 560078. ದೂರವಾಣಿ ಸಂಖ್ಯೆ: 080–26490747
ಸಂ: ಎಂಪ್ರಿ/ಸಿಆರ್–02/ಇಐಎ/ಬಿಎಂಆರ್‌ಸಿಎಲ್–ಟಿಎಎನ್/2025–26 ದಿ: 26.08.2025

ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ (ಪನಿನೀಸಂ) ಸಂಸ್ಥೆಯು ಕರ್ನಾಟಕ ಸೊಸೈಟಿಗಳ ನೋಂದಣಿ ಕಾಯ್ದೆ, 1960ರಡಿ ನೋಂದಣಿಯಾದ ಒಂದು ಸಂಸ್ಥೆಯಾಗಿದ್ದು, ಸಂಸ್ಥೆಯ ಒಂದು ಸಂಶೋಧನ ಯೋಜನೆಗೆ **ದಿನಾಂಕ: 8ನೇ ಸೆಪ್ಟೆಂಬರ್, 2025ರಿಂದ** ಎರಡು ವರ್ಷದ ಅವಧಿಗೆ ಅಗತ್ಯವಿರುವ ವಾಯು ಮತ್ತು ಶಬ್ಧ ಮೇಲ್ವಿಚಾರಣೆ ಸೇವೆ ಒದಗಿಸಲು ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡಿರುವ ಅರ್ಹ ಸೇವಾ ಪೂರೈಕೆದಾರರಿಂದ ಅಲ್ಪಾವಧಿ ಇ–ಟೆಂಡರುಗಳನ್ನು ಕರೆಯಲಾಗಿದೆ (Reference Number- EMPRI/2025-26/SE0004). ಇ–ಟೆಂಡರಿನ ವಿವರಗಳನ್ನು ಮತ್ತು ಷರತ್ತುಗಳನ್ನೊಳಗೊಂಡ ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಅಂತರ್ಜಾಲ ತಾಣದಿಂದ (https://kppp.karnataka. gov.in/#/portal/portal-home) ಡೌನ್‌ಲೋಡ್ ಮಾಡಿಕೊಳ್ಳಬಹುದು. ಸರಿಯಾಗಿ ಭರ್ತಿ ಮಾಡಿದ/ಪೂರ್ಣ ವಿವರಗಳನ್ನೊಳಗೊಂಡ ಟೆಂಡರುಗಳನ್ನು **ದಿನಾಂಕ: 03.09.2025ರಂದು ಮಧ್ಯಾಹ್ನ 3.00 ಗಂಟೆಯವರೆಗೆ** ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು.
ಯಾವುದೇ ತಿದ್ದುಪಡಿಗಳು ಅಥವಾ ಹೆಚ್ಚುವರಿ ನಿಭಂದನೆಗಳಿದ್ದಲ್ಲಿ ಅದನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಹಾಕಲಾಗುವುದು.

ಸಹಿ/–ಟೆಂಡರ್ ಆಹ್ವಾನಿಸುವ ಅಧಿಕಾರಿ,
ಪರಿಸರ ನಿರ್ವಹಣೆ ಮತ್ತು ನೀತಿ, ಸಂಶೋಧನಾ ಸಂಸ್ಥೆ.

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2271200, 2272200, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂ:ತುಮಪಾ:ತಾಂಶಾ:ಸಿವಿಲ್ ಶಾಖೆ/ಸಿಆರ್:11/2025–26
ದಿನಾಂಕ: 22.08.2025

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಮಹಾನಗರ ಪಾಲಿಕೆ ನಿಧಿ ಹಾಗೂ 2025–26ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿಯ ಶೇ.17.15%, 6.95%, ಶೇ.7.25ರ ಅನುಧಾನದಲ್ಲಿ ಕ್ರಮ ಸಂಖ್ಯೆ 1,5,8,9ರ ಕಾಮಗಾರಿಗಳಿಗೆ 15 ದಿನಗಳು ಹಾಗೂ ಕ್ರಮ ಸಂಖಿಯೆ 2,3,4,6 ಮತ್ತು 7ರ ಕಾಮಗಾರಿಗಳಿಗೆ 30 ದಿನಗಳಾಗಿದ್ದು, ಕೆಪಿಪಿಪಿ ಪೋರ್ಟಲ್ ಮುಖಾಂತರ ಹೊಸದಾಗಿ ಮತ್ತು ಮರು ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್ https://kppp.karnataka.gov.in ಮುಖಾಂತರ ಭಾಗವಹಿಸಲು ಹೊಸದಾಗಿ ಮತ್ತು ಮರು ಟೆಂಡರ್ ಆಹ್ವಾನಿಸಲಾಗಿದ್ದು,
ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
1. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: ದಿನಾಂಕ: 22–08–2025 ರಿಂದ ದಿನಾಂಕ: 24–09–2025 ರವರೆಗೆ
2. ಪ್ರೀ ಬಿಡ್ ಮೀಟಿಂಗ್ ದಿನಾಂಕ : 05–09–2025 ಬೆಳಗ್ಗೆ 11.30ಗಂಟೆಗೆ.
3. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:24–09–2025 ರಂದು ಸಾಯಂಕಾಲ 4.30 ಗಂಟೆವರೆಗೆ. 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25–09–2025ರ ಸಾಯಂಕಾಲ 4.40 ಗಂಟೆಗೆ. 5. ಆರ್ಥಿಕ ಬಿಡ್ ತೆರೆಯುವ ದಿನಾಂಕ: 26–09–2025ರ ಸಾಯಂಕಾಲ 4.45 ಗಂಟೆಗೆ. ಗಂಟೆ ನಂತರ. ದಿನಾಂಕಗಳು ಮುಂದೂಡಿಕೆ /ಯಾವುದೇ ತಿದ್ದುಪಡಿಗಳು ಇದ್ದಲ್ಲಿ ಕೇವಲ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ತುಮಕೂರು ಮಹನಗರ ಪಾಲಿಕೆ, ತುಮಕೂರು.
DIPR/TUM/269/KSMCA/2025-26

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
NATIONAL HEALTH MISSION
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ) ಧಾರವಾಡ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಧಾರವಾಡ
Email: dhodharwad@gmail.com / rchodharwad@gmail.com
Tel No: 0836-2951501
ಸಂಖ್ಯೆ: ಎನ್.ಸಿ/ಡಿ.ಹೆಚ್.ಎಸ್/ಧಾ/144/2025–26 ದಿನಾಂಕ: 26.08.2025

SHORT TERM, GEM PORTAL TENDER NOTIFICATION, GEM/2025/B/6599368

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ, ಕಾರ್ಯಾಲಯ ಧಾರವಾಡದಿಂದ ಪಿ.ಎಂ ಅಭಿಮ್ ಯೋಜನೆಯಡಿಯಲ್ಲಿ ಧಾರವಾಡ ಜಿಲ್ಲೆಯಲ್ಲಿನ ನಮ್ಮ ಕ್ಲಿನಿಕ್‌ಗಳಿಗೆ ಅವಶ್ಯಕವಾಗಿ ಬೇಕಾಗಿರುವ ಜನರಿಕ್ ಔಷಧಿಗಳನ್ನು ಖರೀದಿಸಲು GEM PORTAL ಮೂಲಕ TENDER ಪ್ರಕಟಣೆ
1. ಟೆಂಡರ್‌ದಾರರು **https://gem.gov.in** ಮೂಲಕ ಟೆಂಡರ್ ಸಲ್ಲಿಸುವುದು. 2. ಇ.ಎಂ.ಡಿ ಮೊತ್ತವನ್ನು **ರೂ.50,000/–** ತಪ್ಪದೇ GEM PORTAL ಮುಖಾಂತರ ಸಲ್ಲಿಸ ತಕ್ಕದ್ದು. 3. ಟೆಂಡರ್ ದಾಖಲಾತಿಗಳನ್ನು GEM PORTAL ಮುಖಾಂತರ ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ: **25.08.2025 ರಿಂದ ಕೊನೆಯ ದಿನಾಂಕ: 09.09.2025 ವರೆಗೂ. 4.** ಟೆಂಡರ್ ಬಗ್ಗೆ ಹೆಚ್ಚಿನ ಮಾತಿಯನ್ನು GEM PORTAL ಮೂಲಕ ಪಡೆಯ ಬಹುದಾಗಿದೆ.

ಜಿಲ್ಲಾ ಆರ್.ಸಿ.ಹೆಚ್.ಅಧಿಕಾರಿಗಳು, ಧಾರವಾಡ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಧಾರವಾಡ.
ವಾಸಾಸಂಇ/ಧಾ/ದಿಶಾ/595/2025–26

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ನಗರ ಜಿಲ್ಲೆ, ಕೆ. ಜಿ. ರಸ್ತೆ, ಬೆಂಗಳೂರು.
ಸಂಖ್ಯೆ: ಎಂ.ಎ.ಜಿ(4)ಮಿಸ್/ಸಿಆರ್/123/23-24 ದಿನಾಂಕ: 22.08.2025

ಬೆಂಗಳೂರು ನಗರ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ನಾಗರಿಕ ಸಮಾಜದಿಂದ ಸದಸ್ಯರ ಹುದ್ದೆಗೆ ನೇಮಕಾತಿ ಕುರಿತು ಪ್ರಕಟಣೆ

ಉಪ ಪೊಲೀಸ್ ಅಧೀಕ್ಷಕರು ಮತ್ತು ಕೆಳ ಹಂತದ ಪೊಲೀಸ್ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ದೂರು ಸಲ್ಲಿಸಲು ಅನುಕೂಲವಾಗುವಂತೆ ಕರ್ನಾಟಕ ಪೊಲೀಸ್ (ತಿದ್ದುಪಡಿ) ಕಾಯ್ದೆ, 2012 ರ ಕಲಂ 20 ಡಿ ರ ಅಡಿ ಕಲ್ಪಿಸಿರುವ ಅವಕಾಶಗಳ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ. ಸದರಿ ಪ್ರಾಧಿಕಾರಕ್ಕೆ ಇತರೆ ಸದಸ್ಯರನ್ನೊಳಗೊಂಡಂತೆ **ನಾಗರಿಕ ಸಮಾಜದಿಂದ ಒಬ್ಬ ಸದಸ್ಯರನ್ನು ಆಯ್ಕೆಮಾಡಲು ಕಲಂ 20 ಡಿ (ii) ರಡಿ ಅವಕಾಶ ಕಲ್ಪಿಸಲಾಗಿರುತ್ತದೆ.**
ಆದ್ದರಿಂದ ನೇಮಕಗೊಳ್ಳಲು ಬಯಸುವ ಸದಸ್ಯರು ಶೈಕ್ಷಣಿಕ, ಆರೋಗ್ಯ, ಬಡತನ ನಿರ್ಮೂಲನೆಯಂತಹ ಜನೋಪಕಾರಿ ಸಾಮಾಜಿಕ ಸೇವೆಗಳನ್ನು ಮಾಡಿರುವವರಾಗಿರಬೇಕು ಹಾಗೂ ಯಾವುದೇ ರಾಜಕೀಯ ಪಕ್ಷ ಅಥವಾ ಸೈದ್ಧಾಂತಿಕ ಗುಂಪಿನೊಂದಿಗೆ ಗುರುತಿಸಿಕೊಂಡಿರಬಾರದು.
ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ನಾಗರಿಕ ಸಮಾಜದಿಂದ 1 ಸದಸ್ಯರನ್ನು ನೇಮಕ ಮಾಡಲು ಈ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಸಾರ್ವಜನಿಕರು **ಪ್ರಕಟಣೆಗೊಂಡ ದಿನಾಂಕದಿಂದ 15 ದಿನಗಳ ಒಳಗಾಗಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕೆ.ಜಿ ರಸ್ತೆ, ಬೆಂಗಳೂರು ಇಲ್ಲಿ ವೈಯಕ್ತಿಕ ವಿವರಗಳೊಂದಿಗೆ (ಬಯೋಡೇಟಾ) ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.**

ಸಹಿ/– ಜಗದೀಶ. ಜಿ, ಭಾ.ಆ.ಸೇ., ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ.
DIPR/CP/RO2491/AAPL/2025-26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ: ಬೆಂಗಳೂರು
ಸಂ: ಕರಾಸಾ:ವಿನಿ:ಕೆಂಬನಿ:ವಾ:488:2025–26 ದಿನಾಂಕ: 23.08.2025

ಇ–ಟೆಂಡರ್/ಸಂಧಾನ ಪ್ರಕಟಣೆ ಸಂ: 05:2025–26
(ಕೆಪಿಪಿ ಪೋರ್ಟಲ್ ಮೂಲಕ ಮೂಲಕ)

ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು ಟರ್ಮಿನಲ್–3 ರಲ್ಲಿ ಖಾಲಿ ಇರುವ /ಖಾಲಿಯಾಗಲಿರುವ ಮಳಿಗೆ ಸಂಖ್ಯೆ 07 (ನೂತನ ಮಳಿಗೆ), 48, 60, 02, 11, 05 (ನೂತನ ಮಳಿಗೆ) ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದ ಮಳಿಗೆ ಸಂಖ್ಯೆ 23 ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಕೆಪಿಸಿ ಪೋರ್ಟಲ್ ಮೂಲಕ ಮತ್ತು ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ 46, 114, ಕಾರು & ದ್ವಿಚಕ್ರ ವಾಹನ ನಿಲುಗಡೆ (ಟರ್ಮಿನಲ್–3 ರ ಮುಖ್ಯದ್ವಾರದ ಎಡಭಾಗ & ಬಲಭಾಗದಲ್ಲಿರುವ ಖಾಲಿ ಜಾಗ & ಇಂದಿರಾ ಕ್ಯಾಂಟಿನ್‌ನ ಹಿಂಭಾಗ ಹಾಗೂ ಪಕ್ಕದಲ್ಲಿರುವ ಖಾಲಿ ಜಾಗ), ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ ಮಳಿಗೆ ಸಂಖ್ಯೆ 03 (ನೂತನ ಮಳಿಗೆ, ತೆರೆದ ಸ್ಥಳ), 06, 11, 12, 11&12, 13, 30 & 31 ಹಾಗೂ ಶ್ರೀ ಬಸವೇಶ್ವರ ಬಸ್ ನಿಲ್ದಾಣದ (ಪೀಣ್ಯ) ಕೆಳಮಹಡಿ, ನೆಲಮಹಡಿ, ಎರಡನೇ ಮಹಡಿ ಮತ್ತು ಒಟ್ಟಾರೆ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ (ಮಾತುಕತೆ) ಮೂಲಕ **ದಿನಾಂಕ: 28.08.2025 ರಿಂದ 19.09.2025 ರವರೆಗೆ** ಇ–ಟೆಂಡರ್ / ಸಂಧಾನದ ಮೂಲಕ ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಕ.ರಾ.ರ.ಸಾ.ನಿಗಮದ ವೆಬ್‌ಸೈಟ್ **ksrtc.karnataka.gov.in** ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760990554, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ 09240214000 / 09240214001.

ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂಬನಿ ವಿಭಾಗ, ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/2496/2025–26

‘ಸಿನಿಮಾ ಜೊತೆಗೆ ಕಿರುತೆರೆಯಲ್ಲೂ ಸಕ್ರಿಯ’


ನಿಶಾ

• ಅಭಿಲಾಷ್ ಪಿ.ಎಸ್.

ಕಿರುತೆರೆಯಿಂದ ಚಂದನವನಕ್ಕೆ ಹೆಜ್ಜೆ ಇಟ್ಟ ನಟಿಯರು ಹಲವರು. ಈ ಪೈಕಿ ‘ಗಟ್ಟಿಮೇಳ’ ಧಾರವಾಹಿಯಲ್ಲಿ ‘ರೌಡಿ ಬೇಬಿ ಅಮೂಲ್ಯ’ ಎಂಬ ಪಾತ್ರದ ಮೂಲಕ ಗುರುತಿಸಿಕೊಂಡ ನಿಶಾ ರವಿಕೃಷ್ಣನ್ ಅವರೂ ಒಬ್ಬರು. ಸದ್ಯ ‘ಅಣ್ಣಯ್ಯ’ ಎಂಬ ಧಾರಾವಾಹಿ ಮೂಲಕ ಮನೆಮಾತಾಗಿರುವ ಇವರು ನಟಿಸಿರುವ ‘ಅಂದೊಂದಿತ್ತು ಕಾಲ’ ಸಿನಿಮಾ ಆ.29ರಂದು ತೆರೆಕಾಣುತ್ತಿದೆ. ವಿನಯ್ ರಾಜ್‌ಕುಮಾರ್ ನಾಯಕರಾಗಿ ನಟಿಸಿರುವ ಈ ಸಿನಿಮಾದಲ್ಲಿ ನಿಶಾ ವಿದ್ಯಾರ್ಥಿನಿಯಾಗಿ ಅವರಿಗೆ ಜೋಡಿಯಾಗಿದ್ದಾರೆ. ಸಿನಿಮಾ ಬಿಡುಗಡೆ ಹೊಸ್ತಿಲಲ್ಲಿ ಅವರೊಂದಿಗೆ ಒಂದು ಮಾತುಕತೆ...

‘ಈ ಸಿನಿಮಾ ಸೆಟ್ಟೇರಿದ್ದು 2021ರಲ್ಲಿ. ಪುನೀತ್ ರಾಜ್‌ಕುಮಾರ್ ಅವರು ಈ ಸಿನಿಮಾಗೆ ಕ್ಲ್ಯಾಪ್ ಮಾಡಿದ್ದರು. ಹಲವು ಸವಾಲುಗಳ ನಡುವೆ ಈ ಸಿನಿಮಾ ಶೂಟಿಂಗ್ ಮಾಡಿದ್ದೆವು. ನಾನಾ ಕಾರಣಗಳಿಂದ ಈ ಸಿನಿಮಾ ವಿಳಂಬವಾಯಿತು. ಆದರೂ ಇದು ಸದಾ ಫ್ರೆಶ್ ಆಗಿರುವ ಸಿನಿಮಾ ಹಾಗೂ ವಿಷಯ. ಈ ಸಿನಿಮಾದ ಕಥೆ ಸರಳವಾಗಿದ್ದು, ಚಿತ್ರದ ಮೇಲೆ ಇಡೀ ತಂಡಕ್ಕೆ ನಂಬಿಕೆ ಇದೆ. ಇದು 1990ರಿಂದ 2005ರವರೆಗೆ ನಡೆಯುವ ಕಥೆಯಾಗಿದ್ದು, ಇದರಲ್ಲಿ ನಿರ್ದೇಶಕನ ಪಾತ್ರದಲ್ಲಿ ವಿನಯ್ ರಾಜ್‌ಕುಮಾರ್ ನಟಿಸಿದ್ದಾರೆ. ನಾನು ಎರಡು ಲುಕ್‌ಗಳಲ್ಲಿ ಇಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಆ ಕಾಲಘಟ್ಟಕ್ಕೆ ಪ್ರೇಕ್ಷಕರನ್ನು ಕರೆದೊಯ್ಯುವ ಸಾಮರ್ಥ್ಯವನ್ನು ಈ ಸಿನಿಮಾ ಹೊಂದಿದೆ. 80–90ರ ದಶಕದಲ್ಲಿ ಹುಟ್ಟಿದವರಿಗೆ ಈ ಸಿನಿಮಾ ತುಂಬಾ ಕನೆಕ್ಟ್ ಆಗಲಿದೆ’ ಎನ್ನುತ್ತಾರೆ ನಿಶಾ.

‘ನಾನು ಅಪ್ಪು ಅವರ ಅಪ್ಪಟ ಅಭಿಮಾನಿ. ಮುಹೂರ್ತದ ಸಂದರ್ಭದಲ್ಲಿ ಪುನೀತ್ ಅವರನ್ನು ಭೇಟಿಯಾಗಿದ್ದೆ. ಅದೇ ಮೊದಲು ಅದೇ ಕೊನೆ. ಅವರೊಂದಿಗೆ ಅಂದು ಮಾತನಾಡಿದ ಕ್ಷಣಗಳು ಸದಾ ನನ್ನ ನೆನಪಿನಲ್ಲಿರಲಿದೆ. ಜೊತೆಗೆ ವಿನಯ್ ರಾಜ್‌ಕುಮಾರ್ ಅವರ ತಾಯಿ ನನ್ನನ್ನು ಧಾರಾವಾಹಿಯಲ್ಲಿ ನೋಡಿದ್ದರು. ‘ಇವಳು ನನ್ನ ಫೇವರೇಟ್ ಹೀರೊಯಿನ್’ ಎಂದು ನನ್ನನ್ನು ರಾಘವೇಂದ್ರ ರಾಜ್‌ಕುಮಾರ್ ಅವರಿಗೆ ಪರಿಚಯ ಮಾಡಿಕೊಟ್ಟಾಗ ಆಶ್ಚರ್ಯಪಟ್ಟಿದ್ದೆ’ ಎಂದು ನೆನಪಿಸಿಕೊಂಡರು ನಿಶಾ.

‘ಕಳೆದ ವರ್ಷ ‘ಅಂಶು’ ಎನ್ನುವ ಸಿನಿಮಾದಲ್ಲಿ ನಟಿಸಿದೆ. ಇದೊಂದು ಪ್ರಯೋಗಾತ್ಮಕ ಸಿನಿಮಾ. ಇದು ನನ್ನ ವೃತ್ತಿ ಬದುಕಿಗೆ ತಿರುವು ನೀಡಿದೆ. ಈ ಸಿನಿಮಾ ಎಲ್ಲರಿಗೂ ತಲುಪದೇ ಇದ್ದರೂ, ನೋಡಿದವರೆಲ್ಲರೂ ಮೆಚ್ಚಿಕೊಂಡಿದ್ದಾರೆ. ಸದ್ಯಕ್ಕೆ ಯಾವ ಸಿನಿಮಾಗಳನ್ನೂ ಒಪ್ಪಿಕೊಂಡಿಲ್ಲ. ನಟನೆಯನ್ನು ವೃತ್ತಿಯಾಗಿಯೇ ತೆಗೆದುಕೊಂಡಿರುವ ನಾನು ಸಿನಿಮಾಗಾಗಿಯೇ ಕಾಯದೆ ಬಂದಂತಹ ಒಳ್ಳೆಯ ಅವಕಾಶಗಳನ್ನು ಸ್ವೀಕರಿಸಿದೆ’ ಎಂದರು.

‘ಸಿನಿಮಾ ಕಥೆಗಳು ಬರುತ್ತಿವೆ, ಕೇಳುತ್ತಿದ್ದೇನೆ. ಯಾವುದನ್ನೂ ಸದ್ಯಕ್ಕೆ ಒಪ್ಪಿಕೊಂಡಿಲ್ಲ. ಧಾರಾವಾಹಿಯಲ್ಲಿ ತೊಡಗಿಸಿಕೊಂಡಿರುವ ಕಾರಣ ಸಿನಿಮಾಗೆ ಸಮಯ ನೀಡಲಾಗುತ್ತಿಲ್ಲ. ಜೊತೆಗೆ ನನ್ನಲ್ಲಿ ಕುತೂಹಲ ಹುಟ್ಟಿಸಿದ ಪಾತ್ರವುಳ್ಳ ಕಥೆಗಳು ಬಂದಿಲ್ಲ’ ಎಂದು ಮಾತಿಗೆ ವಿರಾಮವಿತ್ತರು.

ಮೊದಲ ಹಂತಮುಕ್ತಾಯ


ಶಿವರಾಜ್‌ಕುಮಾರ್

ಶಿವರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ ‘ಡ್ಯಾಡ್’ ಚಿತ್ರದ ಮೊದಲ ಹಂತದ ಚಿತ್ರೀಕರಣ ಇತ್ತೀಚೆಗಷ್ಟೇ ಮೈಸೂರಿನಲ್ಲಿ ಮುಕ್ತಾಯಗೊಂಡಿದೆ. ತೆಲುಗಿನ ಖ್ಯಾತ ನಿರ್ದೇಶಕ ಅನಿಲ್ ಕನ್ನೆಗಂಟಿ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಹರೀಶ್ ಪೆದ್ದಿ ಅವರು ಮೈರಾ ಕ್ರಿಯೇಷನ್ಸ್ ಲಾಂಛನದಡಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

‘ಶಿವರಾಜ್‌ಕುಮಾರ್ ಅವರು ಅನೇಕ ವರ್ಷಗಳ ನಂತರ ಈ ಚಿತ್ರದಲ್ಲಿ ವೈದ್ಯನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಶರ್ಮಿಳಾ ಮಾಂಡ್ರೆ, ಬೇಬಿ ನಕ್ಷತ್ರ, ಬಾಬು, ಮಲಯಾಳ ನಟ ಸೂರಜ್ ವೆಂಜರಮೂಡು ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

‘ತಂದೆ ಮತ್ತು ಮಗಳ ಕಥೆ ಹೊಂದಿರುವ ಚಿತ್ರ. ಅಪ್ಪನ ಪಾತ್ರದಲ್ಲಿ ಶಿವರಾಜ್ ಕುಮಾರ್ ನಟಿಸುತ್ತಿದ್ದಾರೆ. ನಕ್ಷತ್ರ ಹೆಸರಿನ ಬಾಲ ನಟಿ ಮಗಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮೈಸೂರು ಮತ್ತು ಬೆಂಗಳೂರು ಸುತ್ತಮುತ್ತ ಬಹುಭಾಗ ಚಿತ್ರೀಕರಣಗೊಳ್ಳಲಿದ್ದು, ಶೀಘ್ರದಲ್ಲಿಯೇ ಎರಡನೇ ಹಂತದ ಚಿತ್ರೀಕರಣ ಪ್ರಾರಂಭಗೊಳ್ಳಲಿದೆ’ ಎಂದಿದೆ ಚಿತ್ರತಂಡ.

ಕನ್ನಡ, ತೆಲುಗು ಮತ್ತು ಮಲಯಾಳದಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಹಾಗೂ ಬಿ.ರಾಜಶೇಖರ್ ಅವರ ಛಾಯಾಚಿತ್ರಗ್ರಹಣವಿದೆ.

ಹೊರಬಂತು ‘ಗಂಗೆ ಗೌರಿ’ ಟ್ರೇಲರ್


ನಿಖಿತಾ ಸ್ವಾಮಿ

ಶಿವ ಪುರಾಣದ ಕಥೆಯನ್ನು ಹೊಂದಿರುವ ‘ಗಂಗೆ ಗೌರಿ’ ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಇತ್ತೀಚೆಗೆ ಬಿಡುಗಡೆಗೊಂಡಿವೆ. ಹಿರಿಯ ನಟ ಗಣೇಶ್‌ರಾವ್ ಕೇಸರ್‌ಕರ್ ಶಿವನಾಗಿ ಕಾಣಿಸಿಕೊಂಡಿದ್ದು, ಇದು ಅವರ 350ನೇ ಚಿತ್ರ. ಬಿ.ಎ.ಪುರುಷೋತ್ತಮ್ ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

‘ಶಿವ ಪುರಾಣದಲ್ಲಿ ಗಂಗೆ ಮತ್ತು ಗೌರಿಯ ಸಂಬಂಧವೇನು? ಗಂಗೆ ಯಾಕೆ ಶಿವನ ತಲೆ ಮೇಲೆ ಇರುತ್ತಾಳೆ? ಗೌರಿ ಯಾಕೆ ಶಿವನ ತೊಡೆ ಮೇಲೆ ಕೂತಿರುತ್ತಾಳೆ? ಇದಕ್ಕೆ ಕಾರಣವೇನು? ಇಬ್ಬರನ್ನು ಶಿವನು ಯಾವ ರೀತಿ ಸಂಭಾಳಿಸುತ್ತಾನೆ ಎಂಬುದೇ ಚಿತ್ರಕಥೆ. ಜಗತ್ತಿನ ರಕ್ಷಕನಾದ ಪರಮೇಶ್ವರನಿಗೂ ವಿಧಿಯ ಕಾಟ ತಪ್ಪಿಲ್ಲ. ಶನಿದೇವನಿಂದ ಮೂವರು ಕಷ್ಟ ಅನುಭವಿಸುತ್ತಾರೆ. ಈ ಎಲ್ಲ ಅಂಶಗಳನ್ನು ಚಿತ್ರದಲ್ಲಿ ತೋರಿಸಲಾಗುತ್ತಿದೆ’ ಎಂದರು ನಿರ್ದೇಶಕರು.

ಜಿ.ಆರ್.ಫಿಲ್ಮ್ಸ್ ಅಡಿಯಲ್ಲಿ ಕೇಸರ್‌ಕರ್ ಅವರೇ ಬಂಡವಾಳ ಹೂಡುತ್ತಿದ್ದಾರೆ. ರೂಪಾಲಿ ಗೌರಿ, ಪಾರ್ವತಿ, ದಾಕ್ಷಾಯಿಣಿ ಅವತಾರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಗಂಗೆಯಾಗಿ ನಿಖಿತಾಸ್ವಾಮಿ ನಟಿಸಿದ್ದಾರೆ. ಜಯಸಿಂಹ ಮುಸೂರಿ, ಎಸ್ಕಾರ್ಟ್ ಶ್ರೀನಿವಾಸ್, ಜಿಮ್ ಶಿವು, ಬಸವರಾಜ ದೇಸಾಯಿ ಮುಂತಾದವರು ಚಿತ್ರದಲ್ಲಿದ್ದಾರೆ.

ರಾಜ್‌ಭಾಸ್ಕರ್ ಸಂಗೀತ, ಗೌರಿವೆಂಕಟೇಶ್ ಛಾಯಾಚಿತ್ರಗ್ರಹಣ, ಅನಿಲ್ ಸಂಕಲನವಿದೆ. ಬೆಂಗಳೂರು, ಶ್ರೀರಂಗಪಟ್ಟಣ, ಮೈಸೂರು ಚಿತ್ರೀಕರಣ ನಡೆಸಲಾಗಿದೆ. ಚಿತ್ರೀಕರಣ ಪೂರ್ಣಗೊಂಡಿದ್ದು, ಶೀಘ್ರದಲ್ಲಿ ತೆರೆಗೆ ಬರಲಿದೆ ಎಂದಿದೆ ಚಿತ್ರತಂಡ.

ನ್ಯಾ. ಪಂಚೋಲಿ ನೇಮಕಕ್ಕೆ ನ್ಯಾ. ನಾಗರತ್ನ ವಿರೋಧ

ನ್ಯಾಯಾಂಗ ಮತ್ತು ಕೊಲಿಜಿಯಂ ವ್ಯವಸ್ಥೆಯ ವಿಶ್ವಾಸಾರ್ಹತೆಗೆ ಧಕ್ಕೆ ಉಂಟು ಮಾಡುತ್ತದೆ ಎಂದ ನ್ಯಾಯಮೂರ್ತಿ

ನವದೆಹಲಿ (ಪಿಟಿಐ): ಪಟ್ನಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಪುಲ್ ಮನುಭಾಯ್ ಪಂಚೋಲಿ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕ ಮಾಡುವುದಕ್ಕೆ ಶಿಫಾರಸು ಮಾಡಿರುವ ಕೊಲಿಜಿಯಂ ನಿರ್ಧಾರಕ್ಕೆ ನ್ಯಾಯಮೂರ್ತಿ ಬಿ.ವಿ. ನಾಗರತ್ನ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಇವರ ನೇಮಕವು ನ್ಯಾಯಾಂಗಕ್ಕೆ ಮತ್ತು ಕೊಲಿಜಿಯಂನ ವಿಶ್ವಾಸಾರ್ಹತೆಗೆ ಧಕ್ಕೆ ಉಂಟು ಮಾಡುತ್ತದೆ’ ಎಂದು ನ್ಯಾಯಮೂರ್ತಿ ನಾಗರತ್ನ ಅವರು ಅಭಿಪ್ರಾಯಪಟ್ಟಿದ್ದಾರೆ. 2031ರ ವೇಳೆ ನ್ಯಾಯಮೂರ್ತಿ ಪಂಚೋಲಿ ಅವರು ಮುಖ್ಯ ನ್ಯಾಯಮೂರ್ತಿಯಾಗುವ ಸರತಿಯಲ್ಲಿದ್ದಾರೆ.

ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅಲೋಕ್ ಅರಾಧೆ ಮತ್ತು ನ್ಯಾಯಮೂರ್ತಿ ಪಂಚೋಲಿ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾಗಿ ನೇಮಕ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ವಿಕ್ರಂ ನಾಥ್, ಜೆ.ಕೆ. ಮಾಹೇಶ್ವರಿ ಮತ್ತು ನಾಗರತ್ನ ಅವರ ಕೊಲಿಜಿಯಂ ಸೋಮವಾರ ಶಿಫಾರಸು ಮಾಡಿತ್ತು.

ಹಿಂದೆಯೂ ವಿರೋಧ

‘ಮೇ ತಿಂಗಳಲ್ಲಿಯೇ ನ್ಯಾಯಮೂರ್ತಿ ಪಂಚೋಲಿ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕ ಮಾಡಲು ಕೊಲಿಜಿಯಂ ಶಿಫಾರಸು ಮಾಡಲು ಮುಂದಾಗಿತ್ತು. ಆಗಲೂ ನ್ಯಾಯಮೂರ್ತಿ ನಾಗರತ್ನ ಅವರು ಇದನ್ನು ವಿರೋಧಿಸಿದ್ದರು. ಬಳಿಕ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಯಿತು’ ಎಂದು ಮೂಲಗಳು ಹೇಳಿವೆ.

‘ಮೂರು ತಿಂಗಳ ಬಳಿಕ ಮತ್ತೊಮ್ಮೆ ನ್ಯಾಯಮೂರ್ತಿ ಪಂಚೋಲಿ ಅವರ ಹೆಸರು ಮುನ್ನೆಲೆಗೆ ಬಂದಾಗ ನ್ಯಾಯಮೂರ್ತಿ ನಾಗರತ್ನ ಅವರ ತಮ್ಮ ಆಕ್ಷೇಪವನ್ನು ವ್ಯಕ್ತಪಡಿಸಿ ಪತ್ರ ಬರೆದಿದ್ದಾರೆ. ನ್ಯಾಯಮೂರ್ತಿ ನಾಗರತ್ನ ಅವರ ಪತ್ರವನ್ನು ಬಹಿರಂಗಪಡಿಸಲಾಗಿಲ್ಲ.

ವಿರೋಧಕ್ಕೆ ಕಾರಣವೇನು?


ಬಿ.ವಿ.ನಾಗರತ್ನ

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಲು ಅಗತ್ಯವಿರುವ ಜ್ಯೇಷ್ಠತೆಯೂ ನ್ಯಾಯಮೂರ್ತಿ ಪಂಚೋಲಿ ಅವರಿಗೆ ಇಲ್ಲ. ಜೊತೆಗೆ, ಅವರು ಈ ಹಿಂದೆ ಗುಜರಾತ್ ಹೈಕೋರ್ಟ್‌ನಿಂದ ಪಟ್ನಾ ಹೈಕೋರ್ಟ್‌ಗೆ ವರ್ಗಾವಣೆ ಆದಾಗಿನ ಸಂದರ್ಭದ ಕುರಿತೂ ನ್ಯಾಯಮೂರ್ತಿ ನಾಗರತ್ನ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ನ್ಯಾಯಮೂರ್ತಿ ಪಂಚೋಲಿ ಅವರನ್ನು 2023ರಲ್ಲಿ ಗುಜರಾತ್ ಹೈಕೋರ್ಟ್‌ನಿಂದ ಪಟ್ನಾ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿತ್ತು. ಆದರೆ, ಇದು ನಿಯಮದಂತೆ ನಡೆದ ವರ್ಗಾವಣೆಯಾಗಿರಲಿಲ್ಲ. ಬಹಳ ಯೋಜನಾಬದ್ಧವಾಗಿ ವರ್ಗಾವಣೆ ಮಾಡಲಾಗಿತ್ತು. ಇದರ ಬಗ್ಗೆ ಹಲವು ಹಿರಿಯ ನ್ಯಾಯಾಧೀಶರನ್ನು ವಿಚಾರಿಸಿ, ಅಭಿಪ್ರಾಯ ಸಂಗ್ರಹಿಸಿ ನಡೆಸಿದ್ದ ವರ್ಗಾವಣೆಯಾಗಿತ್ತು ಎನ್ನುವುದು ನ್ಯಾಯಮೂರ್ತಿ ನಾಗರತ್ನ ಅವರ ತೀವ್ರ ಆಕ್ಷೇಪ’ ಎಂದು ಮೂಲಗಳು ಹೇಳಿವೆ. ‘ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳನ್ನಾಗಿ ನೇಮಿಸುವಲ್ಲಿ ಪ್ರಾದೇಶಿಕ ಪ್ರಾತಿನಿಧಿತ್ವ ಕೂಡ ಇಲ್ಲ’ ಎಂದು ನ್ಯಾಯಮೂರ್ತಿ ನಾಗರತ್ನ ಹೇಳಿದ್ದಾರೆ ಎನ್ನಲಾಗಿದೆ.

ಗುಜರಾತ್‌ನಿಂದ ನಾಲ್ಕನೇ ನ್ಯಾಯಮೂರ್ತಿ

ಹೈಕೋರ್ಟ್ ನ್ಯಾಯಾಧೀಶರ ಜ್ಯೇಷ್ಠತಾ ಪಟ್ಟಿಯಲ್ಲಿ ನ್ಯಾಯಮೂರ್ತಿ ಪಂಚೋಲಿ ಅವರು 57ನೇ ಸ್ಥಾನದಲ್ಲಿ ಇದ್ದಾರೆ. ಇಷ್ಟು ಕೆಳಗಿನ ಸ್ಥಾನದಲ್ಲಿ ಇದ್ದವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕ ಮಾಡಲು ಶಿಫಾರಸು ಮಾಡಲಾಗಿದೆ. ಜೊತೆಗೆ, ನಾಲ್ವರು ನ್ಯಾಯಮೂರ್ತಿಗಳನ್ನು ಸುಪ್ರೀಂ ಕೋರ್ಟ್‌ಗೆ ನೇಮಕ ಮಾಡುವಷ್ಟು ದೊಡ್ಡ ಹೈಕೋರ್ಟ್ ಗುಜರಾತ್‌ನದ್ದು ಅಲ್ಲ. ಜೊತೆಗೆ, ದೇಶದ ಬೇರೆ ಬೇರೆ ದೊಡ್ಡ ಹೈಕೋರ್ಟ್‌ಗಳ ಪ್ರಾತಿನಿಧ್ಯವನ್ನು ಕೈಬಿಟ್ಟು ಗುಜರಾತ್‌ಗೆ ಮಾತ್ರವೇ ಪ್ರಾಮುಖ್ಯ ನೀಡಲಾಗುತ್ತಿದೆ

ಕ್ಯಾಂಪೇನ್ ಫಾರ್ ಜುಡಿಷಿಯೆಲ್ ಅಕೌಂಟೆಬಿಲಿಟಿ ಆ್ಯಂಡ್ ರಿಫಾರ್ಮ್ಸ್, ಎನ್‌ಜಿಒ

‘ನ್ಯಾಯಾಂಗದ ಸ್ವಾತಂತ್ರ್ಯದ ಹೆಸರಲ್ಲಿ ರಾಜಕೀಯ ಪಕ್ಷಪಾತದ ಹೇಳಿಕೆ ಸಲ್ಲದು’

ನವದೆಹಲಿ (ಪಿಟಿಐ): ‘ಇಂಡಿಯಾ’ ಒಕ್ಕೂಟದ ಉಪ ರಾಷ್ಟ್ರಪತಿ ಅಭ್ಯರ್ಥಿ ಬಿ. ಸುದರ್ಶನ್ ರೆಡ್ಡಿ ವಿರುದ್ಧ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಿದ್ದನ್ನು ಖಂಡಿಸಿದ 18 ನ್ಯಾಯಮೂರ್ತಿಗಳ ನಡೆಯ ವಿರುದ್ಧ 56 ಮಂದಿ ನಿವೃತ್ತ ನ್ಯಾಯಮೂರ್ತಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.


ಸುದರ್ಶನ್ ರೆಡ್ಡಿ

‘ನ್ಯಾಯಾಂಗದ ಸ್ವಾತಂತ್ರ್ಯದ ಹೆಸರಿನಲ್ಲಿ ರಾಜಕೀಯ ಪಕ್ಷಪಾತದ ಹೇಳಿಕೆ ಸಲ್ಲದು. ಇಂತಹ ಹೇಳಿಕೆ ನೀಡುವ ಪ್ರವೃತ್ತಿಯಿಂದ ಈ ಹಿಂದೆ ನಾವು ಸೇವೆ ಸಲ್ಲಿಸಿದ್ದ ಸಂಸ್ಥೆಗಳಿಗೆ ಅಪಚಾರ ಬಗೆದಂತೆ ಆಗುತ್ತದೆ. ನ್ಯಾಯಮೂರ್ತಿಗಳನ್ನು ರಾಜಕೀಯ ದಾಳಗಳಂತೆ ಚಿತ್ರಿಸಲಾಗುತ್ತದೆ’ ಎಂದು ಸುಪ್ರೀಂಕೋರ್ಟ್‌ನ ಐವರು ನ್ಯಾಯಮೂರ್ತಿಗಳು ಸೇರಿದಂತೆ 56 ನಿವೃತ್ತ ನ್ಯಾಯಮೂರ್ತಿಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ರಾಜಕೀಯದ ಹಾದಿ ಹಿಡಿದವರು ತಮ್ಮನ್ನು ತಾವೇ ಸಮರ್ಥಿಸಿಕೊಳ್ಳಬೇಕು. ನ್ಯಾಯಾಂಗ ಸಂಸ್ಥೆಯನ್ನು ಇದರಿಂದ ಹೊರಗಿಡಬೇಕು’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ‘ಅಮಿತ್ ಶಾ ಅವರ ಹೇಳಿಕೆ ಖಂಡಿಸಿ 18 ನ್ಯಾಯಮೂರ್ತಿಗಳು ಪ್ರತಿಕ್ರಿಯಿಸಿರುವುದು ದುರದೃಷ್ಟಕರ’ ಎಂದು ಹೇಳಿದ್ದಾರೆ.

ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಪಿ. ಸದಾಶಿವಂ, ರಂಜನ್ ಗೊಗೊಯಿ, ನಿವೃತ್ತ ನ್ಯಾಯಮೂರ್ತಿಗಳಾದ ಎ.ಕೆ. ಸಿಕ್ರಿ ಹಾಗೂ ಮುಕೇಶ್ ಕುಮಾರ್. ಆರ್. ಶಾಹ, ಮಧ್ಯಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕೇರಳ, ರಾಜಸ್ಥಾನ, ಪಟ್ನಾ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಸುರೇಶ್ ಕೈತ್, ಅಲಿ ಮೊಹಮ್ಮದ್ ಮಾಗ್ರೆ, ನವನೀತಿ ಪ್ರಸಾದ್ ಸಿಂಗ್, ಎಸ್.ಕೆ.ಮಿತ್ತಲ್, ಎಲ್. ನರಸಿಂಹ ರೆಡ್ಡಿ ಪತ್ರಕ್ಕೆ ಸಹಿಹಾಕಿದ ಪ್ರಮುಖರಾಗಿದ್ದಾರೆ.

ಪಿ. ಸದಾಶಿವಂ ಅವರು ನಿವೃತ್ತಿ ನಂತರ 2014ರಿಂದ 2019ರವರೆಗೆ ಕೇರಳದ ರಾಜ್ಯಪಾಲರಾಗಿದ್ದರು. ರಂಜನ್ ಗೊಗೊಯಿ ಪ್ರಸ್ತುತ ರಾಜ್ಯಸಭೆಯ ನಾಮನಿರ್ದೇಶಿತ ಸದಸ್ಯರಾಗಿದ್ದಾರೆ.

ರಹಸ್ಯವಾಗಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ

ನೌಕಾಪಡೆ ಸೇರಿದ ‘ಹಿಮಗಿರಿ’, ‘ಉದಯಗಿರಿ’

ವಿಶಾಖಪಟ್ಟಣ (ಆಂಧ್ರಪ್ರದೇಶ) (ಪಿಟಿಐ): ರಹಸ್ಯವಾಗಿ ಕಾರ್ಯಾಚರಣೆ ಮಾಡುವ ಸಾಮರ್ಥ್ಯ ಹೊಂದಿರುವ, ‘ಐಎನ್‌ಎಸ್ ಉದಯಗಿರಿ’ ಹಾಗೂ ‘ಐಎನ್‌ಎಸ್ ಹಿಮಗಿರಿ’ ಯುದ್ಧನೌಕೆಗಳನ್ನು ಮಂಗಳವಾರ ನೌಕಾಪಡೆಗೆ ಸೇರ್ಪಡೆ ಮಾಡಲಾಯಿತು.


ರಾಜನಾಥ್

ನೌಕಾಪಡೆಯ ಈಸ್ಟರ್ನ್ ಕಮಾಂಡ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಈ ಅತ್ಯಾಧುನಿಕ ಯುದ್ಧನೌಕೆಗಳನ್ನು ನೌಕಾಪಡೆಗೆ ಸೇರ್ಪಡೆ ಮಾಡಿದರು.

ವಿನ್ಯಾಸ ಹಾಗೂ ಶಸ್ತ್ರಾಸ್ತ್ರಗಳ ಬಳಕೆ ಸಾಮರ್ಥ್ಯದ ದೃಷ್ಟಿಯಿಂದ ಈ ಯುದ್ಧನೌಕೆಗಳಲ್ಲಿ ಮಹತ್ವದ ಸುಧಾರಣೆ ತರಲಾಗಿದ್ದು, ಕಡಲಗಡಿ ಭದ್ರತೆಯಲ್ಲಿ ಇವುಗಳು ಮಹತ್ತರ ಪಾತ್ರವಹಿಸಲಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

‘ಪ್ರಾಜೆಕ್ಟ್ 17ಎ’ ಶ್ರೇಣಿಯ ಎರಡನೇ ಯುದ್ಧನೌಕೆಯಾದ ‘ಉದಯಗಿರಿ’ಯನ್ನು ಮಜಗಾಂವ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ (ಎಂಡಿಎಲ್) ನಿರ್ಮಿಸಿದ್ದರೆ, ಮತ್ತೊಂದು ಯುದ್ಧನೌಕೆ ‘ಹಿಮಗಿರಿ’ಯನ್ನು ಕೋಲ್ಕತ್ತ ಮೂಲದ ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಅಂಡ್ ಎಂಜಿನಿಯರ್ಸ್ (ಜಿಆರ್‌ಎಸ್‌ಇ) ಕಂಪನಿಯು ನಿರ್ಮಿಸಿದೆ.


ವಿಶಾಖಪಟ್ಟಣದಲ್ಲಿ ‘ಐಎನ್‌ಎಸ್ ಹಿಮಗಿರಿ’ ಯುದ್ಧನೌಕೆಯನ್ನು ಮಂಗಳವಾರ ನೌಕಾಪಡೆಗೆ ಸೇರ್ಪಡೆ ಮಾಡಲಾಯಿತು. ಪಿಟಿಐ ಚಿತ್ರ

ವೈಶಿಷ್ಟ್ಯಗಳು

- ‘ಉದಯಗಿರಿ’ಯು ನೌಕಾಪಡೆಯ ‘ವಾರ್‌ಶಿಪ್ ಡಿಸೈನ್ ಬ್ಯುರೊ’ ವಿನ್ಯಾಸ ಮಾಡಿರುವ 100ನೇ ಯುದ್ಧನೌಕೆಯಾಗಿದೆ
- ಈ ಮೊದಲಿನ ಯುದ್ಧನೌಕೆಗಳಿಗಿಂತ (ಶಿವಾಲಿಕ್ ಶ್ರೇಣಿಯ ಯುದ್ಧನೌಕೆಗಳು) ಈ ನೂತನ ಯುದ್ಧನೌಕೆಗಳು ಶೇ 5ರಷ್ಟು ದೊಡ್ಡದಾಗಿವೆ
- ನೆಲದಿಂದ ನೆಲಕ್ಕೆ, ನೆಲದಿಂದ ಆಗಸಕ್ಕೆ ಚಿಮ್ಮುವ ಸೂಪರ್‌ಸಾನಿಕ್ ಕ್ಷಿಪಣಿ, ಜಲಾಂತರ್ಗಾಮಿ ನಿರೋಧಕ ವ್ಯವಸ್ಥೆಗಳನ್ನು ಈ ಯುದ್ಧನೌಕೆಗಳಲ್ಲಿ ಅಳವಡಿಸಬಹುದು
- ದೇಶೀಯವಾಗಿಯೇ ತಯಾರಿಸಲಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಸೆನ್ಸರ್‌ಗಳನ್ನು ಅಳವಡಿಸಲಾಗಿದೆ

‘ಸುದರ್ಶನ ಚಕ್ರ: ಖಡ್ಗ–ಗುರಾಣಿ ಇದ್ದಂತೆ’

ಮಹೂ (ಮಧ್ಯಪ್ರದೇಶ) (ಪಿಟಿಐ): ‘ಭಾರತ ಅಭಿವೃದ್ಧಿ ಪಡಿಸಲಿರುವ ವಾಯುಪ್ರದೇಶ ರಕ್ಷಣಾ ವ್ಯವಸ್ಥೆ ‘ಸುದರ್ಶನ ಚಕ್ರ’ವು ಸೆನ್ಸರ್‌ಗಳು, ಕ್ಷಿಪಣಿಗಳು, ಕಣ್ಗಾವಲು ಉಪಕರಣಗಳು, ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸಾಧನಗಳನ್ನು ಒಳಗೊಂಡಿರಲಿದೆ’ ಎಂದು ಸಿಡಿಎಸ್ ಜನರಲ್ ಅನಿಲ್ ಚೌಹಾಣ್ ಹೇಳಿದ್ದಾರೆ.


ಅನಿಲ್ ಚೌಹಾಣ್

‘ಈ ರಕ್ಷಣಾ ವ್ಯವಸ್ಥೆಯು ‘ಖಡ್ಗ ಮತ್ತು ಗುರಾಣಿ’ಯ ರೀತಿ ಕಾರ್ಯನಿರ್ವಹಿಸಲಿದೆ. ಇಸ್ರೇಲ್‌ನ ಐರನ್ ಡೋಮ್ ಅನ್ನು ಹೋಲುವ ಈ ವ್ಯವಸ್ಥೆಯು, ಎಲ್ಲ ಋತುಮಾನಗಳಲ್ಲಿಯೂ ದೇಶದ ವಾಯುಪ್ರದೇಶ ರಕ್ಷಣೆಗೆ ಸನ್ನದ್ಧವಾಗಿರಲಿದೆ’ ಎಂದು ಮಂಗಳವಾರ ಹೇಳಿದ್ದಾರೆ.

ಯುದ್ಧ ಮತ್ತು ತಂತ್ರಗಾರಿಕೆ ಕುರಿತು ಮೂರೂ ಸಶಸ್ತ್ರಗಳ ಪಡೆಗಳಿಗಾಗಿ ಇಲ್ಲಿ ಆರಂಭವಾದ ‘ರಣ ಸಂವಾದ’ದಲ್ಲಿ ಅವರು ಮಾತನಾಡಿದರು.

‘ಸುದರ್ಶನ ಚಕ್ರ’ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯೋತ್ಸವ ದಿನದಂದು ಘೋಷಣೆ ಮಾಡಿದ್ದರು. ಈ ವ್ಯವಸ್ಥೆಯನ್ನು 2035ರಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ‘ದೇಶದ ನಾಗರಿಕರು, ರಾಷ್ಟ್ರೀಯ ಮಹತ್ವದ ತಾಣಗಳು ಹಾಗೂ ಕಾರ್ಯ ತಂತ್ರದ ದೃಷ್ಟಿಯಿಂದ ಮುಖ್ಯ ವಾದ ಸ್ಥಳಗಳನ್ನು ರಕ್ಷಿಸುವ ಉದ್ದೇಶದಿಂದ ಈ ವಾಯುಪ್ರದೇಶ ರಕ್ಷಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ವ್ಯವಸ್ಥೆಯು ಖಡ್ಗದಂತೆ ಹಾಗೂ ಗುರಾಣಿಯಂತೆಯೂ ಕಾರ್ಯನಿರ್ವಹಿಸಲಿದೆ’ ಎಂದು ಚೌಹಾಣ್ ವಿವರಿಸಿದರು.

‘ನಮ್ಮ ಮೇಲೆ ಎರಗಲಿರುವ ಶತ್ರು ದೇಶಗಳ ಶಸ್ತ್ರಾಸ್ತ್ರಗಳನ್ನು ಕ್ಷಿಪ್ರವಾಗಿ ಪತ್ತೆ ಮಾಡಿ, ಅವುಗಳನ್ನು ನಾಶಪಡಿಸುವ ಸಾಮರ್ಥ್ಯ ಹಾಗೂ ಅದಕ್ಕೆ ಬೇಕಾದ ಮೂಲಸೌಕರ್ಯಗಳನ್ನು ಈ ವ್ಯವಸ್ಥೆ ಹೊಂದಿರಲಿದೆ’ ಎಂದಿದ್ದಾರೆ.

ಪ್ರಮುಖ ಅಂಶಗಳು

- ಭವಿಷ್ಯದ ಯುದ್ಧಗಳು ಗಡಿಗಳನ್ನು ಮೀರಿ ನಡೆಯಲಿವೆ. ಎಲ್ಲ ರೀತಿಯ ದಾಳಿಗಳಿಗೆ ಕ್ಷಿಪ್ರ ಮತ್ತು ನಿಖರವಾದ ಪ್ರತ್ಯುತ್ತರ ನೀಡುವುದು ಅಗತ್ಯ
- ಯುದ್ಧತಂತ್ರ ಮತ್ತು ರಕ್ಷಣಾ ವ್ಯವಸ್ಥೆ ಅಭಿವೃದ್ಧಿಪಡಿಸುವಲ್ಲಿ ಮೂರು ಪಡೆಗಳು ಜಂಟಿಯಾಗಿ ಕಾರ್ಯನಿರ್ವಹಿಸುವುದು ಮುಖ್ಯ
- ಕೃತಕಬುದ್ಧಿಮತ್ತೆ, ಸೈಬರ್, ಕ್ವಾಂಟಮ್ ನಂತರ ಆಧುನಿಕ ತಂತ್ರಜ್ಞಾನಗಳ ಅಳವಡಿಕೆ ಅವಶ್ಯಕ
- ಭಾರತ ನಡೆಸಿದ ಯುದ್ಧಗಳು ಅಥವಾ ನಮ್ಮ ತಂತ್ರಗಾರಿಕೆ ಕುರಿತಂತೆ ವಿದ್ವತ್‌ಪೂರ್ಣ ವಿಶ್ಲೇಷಣೆ ಹಾಗೂ ಈ ಕುರಿತ ಸಾಹಿತ್ಯ ನಮ್ಮಲ್ಲಿ ಕಡಿಮೆ
- ಯುದ್ಧ, ನಾಯಕತ್ವ, ಪ್ರೇರಣೆ, ನೈತಿಕತೆ ಸೇರಿ ಹಲವು ವಿಚಾರಗಳ ಕುರಿತು ಗಂಭೀರವಾದ ಸಂಶೋಧನೆ ಅಗತ್ಯ ಇದೆ

‘ನೆಲದ ಮೇಲಿಂದ, ವಾಯು ಪ್ರದೇಶ, ಕಡಲು ಹಾಗೂ ಆಳ ಸಮುದ್ರದ ಮೂಲಕ, ಬಾಹ್ಯಾಕಾಶದಿಂದ ದಾಳಿ ಎದುರಿಸಲು ಸಿದ್ಧರಿರಬೇಕು. ಗುಪ್ತಚರ–ಕಣ್ಗಾವಲು–ಪತ್ತೆ ಕಾರ್ಯ (ಐಎಸ್‌ಆರ್) ನಿರಂತರವಾಗಿ ನಡೆಯುತ್ತಿರಬೇಕು. ಸುದರ್ಶನ ಚಕ್ರದಂತಹ ಸಮಗ್ರ ರಕ್ಷಣಾ ವ್ಯವಸ್ಥೆಯೇ ಇದಕ್ಕೆ ಉತ್ತರವಾಗಬಲ್ಲದು’ ಎಂದು ಹೇಳಿದ್ದಾರೆ.

> **‘ಆಪರೇಷನ್ ಸಿಂಧೂರ’ವು ಆಧುನಿಕ ಸಂಘರ್ಷವಾಗಿದೆ. ಕಾರ್ಯಾಚರಣೆ ವೇಳೆ ನಾವು ಹಲವು ಪಾಠಗಳನ್ನು ಕಲಿತಿದ್ದು, ಅವುಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ**
> **ಜನರಲ್ ಅನಿಲ್ ಚೌಹಾಣ್** ಸಿಡಿಎಸ್

ಉದ್ಯೋಗ ವಾಣಿ

Ready to Make an Impact in Advanced Cancer Care? Lead the Change at GCRI – Join Us.

Gujarat Cancer and Research Institute (GCRI), an autonomous body, has been a center for advanced cancer treatment and a key part of India's cancer research for over five decades. With top-tier infrastructure and a team of over 1000 caregivers, GCRI combines patient care with comprehensive cancer research.



Position: Deputy Director

Criteria:

- Must have a postgraduate degree in Oncology (Medical, Surgical, Radiation, or Palliative). Postgraduates in allied specialties such as Radiology, Pathology, Anaesthesia, etc., may also apply provided they have experience working in an oncology specialty hospital.
- A minimum of 15 years of professional experience is required, including at least 3 years in a Head of Department (HoD) role.
- While the age limit would be 45 years, candidates from Government, Semi-Government, PSU, or Grant-in-aid institutions as well as women, high-qualified or experienced or differently-abled professionals would be given relaxation
- Salary – Negotiable

Key Responsibilities (include but are not limited to):

- Contribute to the formulation and execution of short- and long term strategic goals.
- Support the Director in the efficient management of daily hospital operations.
- Propose and oversee annual budgets, including capital and operational expenditures.
- Lead efforts to attain and maintain hospital accreditations (NABH, NABL, ISO, JCI, or equivalent).
- Develop and implement resource strategies to enhance profitability and ensure cost-effectiveness.
- Streamline systems and procedures to promptly and effectively address patient needs.
- Supervise the management of medical records and pharmacy operations.
- Oversee academic functions of pre-clinical and para-clinical departments.
- Coordinate and monitor facility renovation and infrastructure improvements.
- Manage the procurement and installation of medical equipment in compliance with standards.

THE GUJARAT CANCER & RESEARCH INSTITUTE • 1972 •

For more details about the organization visit www.gcriindia.org
Interested candidates can apply on **cmdoffice@zyduslife.com** with profile and a short note of how you would like to make a difference.

ಟ್ರಂಪ್ ಸುಂಕ: ಸೆನ್ಸೆಕ್ಸ್ 849 ಅಂಶ ಕುಸಿತ

ಏಷ್ಯಾದ ಮಾರುಕಟ್ಟೆಗಳಲ್ಲೂ ನಕಾರಾತ್ಮಕ ವಹಿವಾಟು
₹5.41 ಲಕ್ಷ ಕೋಟಿ ಕರಗಿದ ಹೂಡಿಕೆದಾರರ ಸಂಪತ್ತು

ಮುಂಬೈ (ಪಿಟಿಐ): ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕ ಶೇ 50ರಷ್ಟು ಸುಂಕ ವಿಧಿಸುವ ನಿರ್ಧಾರವು ಬುಧವಾರದಿಂದ ಜಾರಿಗೆ ಬರಲಿದೆ. ಹೀಗಾಗಿ, ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರದ ವಹಿವಾಟಿನಲ್ಲಿ ಕುಸಿತ ಕಂಡಿವೆ.

ವಿದೇಶಿ ಬಂಡವಾಳವು ನಿರಂತರ ಹೊರಹರಿವಾಗುತ್ತಿದೆ. ಅಲ್ಲದೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಫೆಡರಲ್ ರಿಸರ್ವ್ ಗವರ್ನರ್ ಲೀಸಾ ಕುಕ್ ಅವರನ್ನು ಕೆಲಸದಿಂದ ವಜಾಗೊಳಿಸಿದ್ದಾರೆ. ಇದು ಹೂಡಿಕೆದಾರರ ಭಾವನೆ ಮೇಲೆ ಪರಿಣಾಮ ಬೀರಿದ್ದರಿಂದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡವು ಎಂದು ಮಾರುಕಟ್ಟೆ ವಿಶ್ಲೇಷಕರು ತಿಳಿಸಿದ್ದಾರೆ.

ಷೇರು ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹5.41 ಲಕ್ಷ ಕೋಟಿ ಕರಗಿದೆ.



ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 849 ಅಂಶ (ಶೇ 1.04) ಇಳಿಕೆಯಾಗಿ, 80,786ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ವೇಳೆ 949 ಅಂಶ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 255 ಅಂಶ (ಶೇ 1.11) ಕಡಿಮೆಯಾಗಿ, 24,712ಕ್ಕೆ ಕೊನೆಗೊಂಡಿದೆ.

'ಅಮೆರಿಕದ ಹೆಚ್ಚುವರಿ ಸುಂಕವು ಆಗಸ್ಟ್ 27ರಿಂದ ಜಾರಿಗೆ ಬರಲಿದೆ. ಹೀಗಾಗಿ ಹೂಡಿಕೆದಾರರು ಎಚ್ಚರಿಕೆ ನಡೆ ಅನುಸರಿಸಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸನ್ ಫಾರ್ಮಾಸ್ಯುಟಿಕಲ್, ಟಾಟಾ ಸ್ಟೀಲ್, ಟ್ರೆಂಟ್, ಬಜಾಜ್ ಫೈನಾನ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಬಜಾಜ್ ಫಿನ್‌ಸರ್ವ್, ರಿಲಯನ್ಸ್ ಇಂಡಸ್ಟ್ರೀಸ್, ಎಕ್ಸಿಸ್ ಬ್ಯಾಂಕ್, ಟೆಕ್ ಮಹೀಂದ್ರ, ಅದಾನಿ ಪೋರ್ಟ್ಸ್, ಟೈಟನ್, ಬಿಇಎಲ್, ಲಾರ್ಸೆನ್ ಆ್ಯಂಡ್ ಟೊಬ್ರೊ ಷೇರಿನ ಮೌಲ್ಯ ಇಳಿಕೆಯಾಗಿದೆ. ಹಿಂದೂಸ್ತಾನ್ ಯೂನಿಲಿವರ್, ಮಾರುತಿ ಸುಜುಕಿ, ಐಟಿಸಿ, ಟಿಸಿಎಸ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ಹಾಂಗ್‌ಕಾಂಗ್, ಜಪಾನ್, ದಕ್ಷಿಣ ಕೊರಿಯಾ ಮತ್ತು ಶಾಂಘೈ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.48ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರೆಲ್ ದರವು 67.78 ಡಾಲರ್ ಆಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಸೋಮವಾರದ ವಹಿವಾಟಿನಲ್ಲಿ ₹2,466 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬೆಳ್ಳಿ ದರ ಕೆ.ಜಿಗೆ ₹3 ಸಾವಿರ ಜಿಗಿತ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹3 ಸಾವಿರ ಹೆಚ್ಚಳವಾಗಿ, ₹1.18 ಲಕ್ಷದಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹600 ಹೆಚ್ಚಳವಾಗಿ, ₹1,00,770 ಆಗಿದೆ. ಆಭರಣ ಚಿನ್ನದ ಬೆಲೆ (ಶೇ 99.5 ಪರಿಶುದ್ಧತೆ) ₹500 ಏರಿಕೆಯಾಗಿ, ₹1,00,400 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು ಇಳಿಕೆಯಾಗಿರುವುದು ಮತ್ತು ಅಮೆರಿಕದ ಸುಂಕ ಹೆಚ್ಚಳದ ನಿರ್ಧಾರವು ಚಿನ್ನದ ದರ ಏರಿಕೆಗೆ ಕಾರಣವಾಗಿದೆ ಎಂದು ತಿಳಿಸಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಆದಿತ್ಯ ಆರ್, ಕೆ.ಆರ್.ಪುರ, ಬೆಂಗಳೂರು

• **ಪ್ರಶ್ನೆ: ನಾನು ಸುಮಾರು ಹತ್ತು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಒಂದು ಫ್ಲ್ಯಾಟ್ ಖರೀದಿಸಿದ್ದೆ. ಈಗ ಅದರ ಮೌಲ್ಯ ದ್ವಿಗುಣಗೊಂಡಿದೆ. ನಾನು ಅದನ್ನು ಮಾರಾಟ ಮಾಡಿ ಬರುವ ಹಣದಲ್ಲಿ ಅರ್ಧದಷ್ಟನ್ನು ಸ್ವಂತ ಉದ್ಯೋಗಕ್ಕೆ ಬಳಕೆ ಮಾಡಬೇಕೆಂದಿದ್ದೇನೆ. ಇನ್ನುಳಿದ ಮೊತ್ತವನ್ನು ಸ್ವಂತ ಖರ್ಚು–ವೆಚ್ಚ, ಹೂಡಿಕೆಗೆ ಬಳಸಬೇಕೆಂದಿದ್ದೇನೆ. ನನ್ನ ಸ್ವಂತ ಉದ್ಯೋಗ ವೃದ್ಧಿ ಆಗುವವರೆಗೂ ನಾನು ಬಾಡಿಗೆ ಮನೆಯಲ್ಲಿ ಇರಬೇಕೆಂದಿದ್ದೇನೆ. ನನ್ನ ಪ್ರಶ್ನೆ ಏನೆಂದರೆ, ಈ ಫ್ಲ್ಯಾಟ್ ಮಾರಾಟದಿಂದ ನನಗೆ ತೆರಿಗೆ ಎಷ್ಟು ಬರಬಹುದು? ತೆರಿಗೆ ಉಳಿತಾಯ ಅವಕಾಶ ಇದೆಯೇ?**

ಉತ್ತರ: ನೀವು ಹತ್ತು ವರ್ಷಗಳ ಹಿಂದೆ ಖರೀದಿಸಿದ ಫ್ಲ್ಯಾಟ್ ಅನ್ನು ಈಗ ಮಾರಾಟ ಮಾಡಿದರೆ ಅದನ್ನು ದೀರ್ಘಾವಧಿ ಹೂಡಿಕೆಯಾಗಿ ಪರಿಗಣಿಸಲಾಗುತ್ತದೆ. 2024ರ ಜುಲೈ 23ರ ನಂತರದ ಹೊಸ ನಿಯಮದ ಪ್ರಕಾರ ಇಂತಹ ಸ್ಥಿರ ಆಸ್ತಿಗಳ ಮಾರಾಟದಿಂದ ಬರುವ ಲಾಭಕ್ಕೆ ಎರಡು ವಿಧಾನಗಳಲ್ಲಿ ತೆರಿಗೆ ನಿರ್ಣಯಿಸಬಹುದು, ನಮಗೆ ಲಾಭದಾಯಕ ವಿಧಾನವನ್ನು ಆಯ್ಕೆ ಮಾಡಬಹುದು. ಒಂದೆಡೆ, ಶೇ 12.5ರ ನಿಗದಿತ ದರದಲ್ಲಿ ಇಂಡೆಕ್ಸೇಷನ್ ಲಾಭವಿಲ್ಲದೆ ಮಾರಾಟ ಮೌಲ್ಯ ಹಾಗೂ ಖರೀದಿ ಮೌಲ್ಯದ ಅಂತರದ (ಲಾಭ) ಮೇಲೆ ತೆರಿಗೆ ಕಟ್ಟುವುದು. ಮತ್ತೊಂದು, ಹಳೆಯ ನಿಯಮವನ್ನು ಅನುಸರಿಸಿ ಶೇ 20ರ ದರದಲ್ಲಿ ಇಂಡೆಕ್ಸೇಷನ್ ಲಾಭ ಪರಿಗಣಿಸಿ ತೆರಿಗೆ ಕಟ್ಟುವುದು. ಯಾವ ವಿಧಾನದಲ್ಲಿ ತೆರಿಗೆ ಕಡಿಮೆ ಬರುತ್ತದೋ ಅದನ್ನು ಆಯ್ಕೆ ಮಾಡುವ ಅವಕಾಶ ಇದೆ. ನಿಮ್ಮ ಹೂಡಿಕೆ ಹತ್ತು ವರ್ಷಗಳ ಹಿಂದಿನದಾದ್ದರಿಂದ ಇಂಡೆಕ್ಸೇಷನ್ ಪ್ರಯೋಜನ ಪಡೆಯುವುದು ಲಾಭದಾಯಕ ಆಗಬಹುದು. ಇದಕ್ಕಾಗಿ ಲೆಕ್ಕ ಹಾಕಿ ನೋಡಿದ ಮೇಲೆ ಕಡಿಮೆ ತೆರಿಗೆ ನೀಡುವ ವಿಧಾನವನ್ನು ಆಯ್ಕೆ ಮಾಡುವುದು ಸೂಕ್ತ.

ತೆರಿಗೆ ಉಳಿತಾಯಕ್ಕೂ ಅವಕಾಶಗಳಿವೆ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 54ರ ಪ್ರಕಾರ ಫ್ಲ್ಯಾಟ್ ಮಾರಾಟದಿಂದ ಬಂದ ಲಾಭವನ್ನು ಮತ್ತೆ ಇನ್ನೊಂದು ಮನೆ ಖರೀದಿಸಲು ಅಥವಾ ಕಟ್ಟಿಸಲು ಬಳಸಿದರೆ ಲಾಭದ ಅಷ್ಟೂ ತೆರಿಗೆ ವಿನಾಯಿತಿ ದೊರೆಯುತ್ತದೆ. ಅದೇ ರೀತಿ ಸೆಕ್ಷನ್ 54ಇಸಿ ಅಡಿಯಲ್ಲಿ ಅಧಿಕೃತ ಬಾಂಡ್‌ಗಳಲ್ಲಿ ಹೂಡಿಕೆ ಮಾಡಿದರೂ ದೀರ್ಘಾವಧಿ ಲಾಭದ ಮೇಲಿನ ತೆರಿಗೆ ತಗ್ಗಿಸಬಹುದು. ಹೀಗಾಗಿ ಸ್ವಂತ ಉದ್ಯೋಗಕ್ಕಾಗಿ ಅರ್ಧ ಮೊತ್ತ ಬಳಸಿಕೊಂಡು ಉಳಿದ ಅರ್ಧ ಮೊತ್ತವನ್ನು ಹೊಸ ಮನೆ ಅಥವಾ ಬಾಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ತೆರಿಗೆ ಹೊರೆ ಕಡಿಮೆ ಮಾಡಬಹುದು. ನಿಖರ ಲೆಕ್ಕಾಚಾರಕ್ಕಾಗಿ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಮಂಜುನಾಥ, ಮಾಗನೂರು

• **ಪ್ರಶ್ನೆ: ನಾನು ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನ ವೇತನದಿಂದ ತೆರಿಗೆ ಕಡಿತ ಮಾಡಲಾಗಿತ್ತು. ಆದರೆ ಕಂಪನಿಯು ಆ ಮೊತ್ತವನ್ನು ಆದಾಯ ತೆರಿಗೆ ಇಲಾಖೆಗೆ ಪಾವತಿಸುವ ಮೊದಲು ನಾನು 2012-13ರಲ್ಲಿ ₹32,622 ಹೊಣೆಗಾರಿಕೆಯೊಂದಿಗೆ ಆದಾಯ ತೆರಿಗೆ ವಿವರ ಸಲ್ಲಿಸಿದ್ದೆ. ನಂತರ, ಕಂಪನಿಯು ಟಿಡಿಎಸ್ ಮೊತ್ತ ಪಾವತಿಸಿಲ್ಲ ಮತ್ತು ಪ್ರಸ್ತುತ ಆ ಕಂಪನಿಯು ಅಸ್ತಿತ್ವದಲ್ಲಿಲ್ಲ. 2022ರ ಡಿಸೆಂಬರ್‌ನಲ್ಲಿ ಆದಾಯ ತೆರಿಗೆ ಇಲಾಖೆಯಿಂದ ₹48,170 ಪಾವತಿಸಲು ಸೂಚನೆಯು ನನಗೆ ಬಂತು. ನಾನು ಲೆಕ್ಕಪರಿಶೋಧಕರೊಂದಿಗೆ ಪರಿಶೀಲಿಸಿದಾಗ, ಅದು ಮೊದಲ ಸೂಚನೆಯಾಗಿರುವುದರಿಂದ ಅವರು ಅದನ್ನು ನಿರ್ಲಕ್ಷಿಸಲು ಹೇಳಿದರು. ಆದರೆ, ಆದಾಯ ತೆರಿಗೆ ಪೋರ್ಟಲ್‌ನಲ್ಲಿ, ಇದನ್ನು 2016ರಲ್ಲಿ ನೀಡಲಾದ ಟಿಪ್ಪಣಿ ಎಂದು ಉಲ್ಲೇಖಿಸಲಾಗಿದೆ. ಬಡ್ಡಿ ಸಹಿತ ಪ್ರಸ್ತುತ ಬೇಡಿಕೆಯು ₹99 ಸಾವಿರ ಆಗಿದೆ. ಏನು ಮಾಡಬಹುದು ಎಂಬುದನ್ನು ಸೂಚಿಸಬಹುದೇ? ಕಂಪನಿಯು ಈಗ ಅಸ್ತಿತ್ವದಲ್ಲಿಲ್ಲದ ಕಾರಣ ನಾನು ₹32,622 ತೆರಿಗೆ ಮೊತ್ತವನ್ನು ಪಾವತಿಸಲು ಸಿದ್ಧನಿದ್ದೇನೆ.**

ಉತ್ತರ: ನಿಮ್ಮ ಸಮಸ್ಯೆಯನ್ನು ವಿವಿಧ ಆಯಾಮಗಳಲ್ಲಿ ನೋಡಬೇಕಾಗುತ್ತದೆ. ಇಲ್ಲಿ ನಿಮ್ಮ ಹಿಂದಿನ ಕಂಪನಿಯ ಆರ್ಥಿಕ ಸಮಸ್ಯೆ, ಬಂದಿದ್ದ ನೋಟಿಸ್‌ಗೆ ತಕ್ಷಣ ಉತ್ತರಿಸದೆ ಇದ್ದಿದ್ದು, ಸರಿಯಾದ ತೆರಿಗೆ ನಿರ್ಣಯ ಎಷ್ಟೆಂದು ತಿಳಿಯಬೇಕಾದ ವಿಚಾರಗಳ ಸುತ್ತ ಸಮಸ್ಯೆ ಇದೆ. ತೆರಿಗೆ ಒಂದು ಬಾರಿ ಪಾವತಿಯಾದರೆ ಅದೇ ವರ್ಷಕ್ಕೆ ಸಂಬಂಧಿಸಿ ಮತ್ತೆ ತೆರಿಗೆ ಪಾವತಿಸುವ ಅಗತ್ಯ ಇಲ್ಲ. ನಿಮ್ಮ ವಿಚಾರದಲ್ಲಿ ಹಿಂದಿನ ವರ್ಷದಲ್ಲಿ ವಿವರ ಸಲ್ಲಿಕೆಯಾಗಿದೆ. ಆದರೆ ನೀವೇ ತಿಳಿಸಿರುವಂತೆ, ತೆರಿಗೆ ಪಾವತಿ ಆಗಿಲ್ಲ. ಹೀಗಾಗಿ ನಿಮ್ಮ ವಿವರ ಸಲ್ಲಿಕೆ ಆಗಿದ್ದರೂ, ತೆರಿಗೆ ಸಂಪೂರ್ಣ ಪಾವತಿ ಆಗದ ಹೊರತು, ಮೇಲ್ನೋಟಕ್ಕೆ ಅದು ಸಮರ್ಪಕ ಎಂದು ಪರಿಗಣಿಸಲು ಅವಕಾಶ ಇಲ್ಲ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 139(9)ರ ವಿವರಣೆಯಂತೆ, ತೆರಿಗೆ ಬಾಕಿ ಉಳಿಸಿ ವಿವರ ಸಲ್ಲಿಸಿದಾಗ ಅದು 15 ದಿನದೊಳಗೆ ಅಥವಾ ಸಂಬಂಧಿತ ತೆರಿಗೆ ಅಧಿಕಾರಿಗಳು ನೀಡುವ ಸಮಯಾವಕಾಶದೊಳಗೆ ಲೋಪಗಳನ್ನು ಸರಿಮಾಡದಿದ್ದಾಗಲೂ ಸಲ್ಲಿಕೆಯಾದ ವಿವರ ಅಮಾನ್ಯವಾಗುತ್ತದೆ. ನಿಮಗೂ ಇಂತಹ ನೋಟಿಸ್ ಬಂದಿರಬಹುದಾದ ಸಾಧ್ಯತೆ ಇದೆ. ಆದರೆ ಇದು ನಿಮ್ಮ ಗಮನಕ್ಕೆ ಬಂದಿರದೆ, ಸಮಸ್ಯೆ ಮುಂದುವರಿದಂತಿದೆ.

ಈ ವಿಚಾರವಾಗಿ ನಿಮ್ಮ ಆದಾಯ ತೆರಿಗೆ ಪ್ಯಾನ್ ಖಾತೆಯ ವಿವರದೊಂದಿಗೆ, ನುರಿತ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ. ಆದಾಯ ತೆರಿಗೆಯ ಪೋರ್ಟಲ್‌ನಲ್ಲಿ ನಿಮ್ಮ ಹೆಸರಲ್ಲಿ ಈಗಾಗಲೇ ಇರುವ ನೋಟಿಸ್ ಹಾಗೂ ಅವು ಯಾವ ಸೆಕ್ಷನ್ ಅಡಿ, ಯಾವ ಕಾರಣಕ್ಕಾಗಿ ಜಾರಿ ಮಾಡಲಾಗಿದೆ ಎನ್ನುವುದನ್ನು ಮೊದಲ ಹಂತದಲ್ಲಿ ವಿಶ್ಲೇಷಿಸಬೇಕು. ಆನ್‌ಲೈನ್ ಮೂಲಕ ಸಾಧ್ಯವಾಗದಿದ್ದ ಸಂದರ್ಭದಲ್ಲಿ, ಸೂಕ್ತ ಸಲಹೆ ಪಡೆದು, ನಿಮ್ಮ ಪೂರ್ವ ಮಾಹಿತಿಯನ್ನು ಸಂಬಂಧಿತ ಇಲಾಖಾ ವಿಭಾಗಕ್ಕೆ ಲಿಖಿತ ರೂಪದಲ್ಲಿ ಸಲ್ಲಿಸಬೇಕಾಗುತ್ತದೆ. ಇದರ ವಿಲೇವಾರಿಗೆ ನಂತರದ ಹಂತದಲ್ಲಿ ಅವರ ಸಲಹೆ ಸೂಚನೆಗಳೂ ಮುಖ್ಯ. ಇನ್ನು ಬಡ್ಡಿಯ ವಿಚಾರವಾಗಿ ಹೇಳುವುದಾದರೆ, ಯಾವುದೇ ತೆರಿಗೆ ಕಡಿತ, ಸಕಾಲಿಕ ಮುಂಗಡ ತೆರಿಗೆ ಪಾವತಿಸದೇ ತೆರಿಗೆ ಉಳಿದಾಗ, ಬಡ್ಡಿಯೂ ಅನ್ವಯಿಸುತ್ತದೆ. ಇದರ ಪಾವತಿಗೆ ಅಧಿಕ ಕಾಲಾವಕಾಶ ಪಡೆದಂತೆ ಬಡ್ಡಿ ಸೇರುತ್ತಾ ಹೋಗುತ್ತದೆ.

ತೆರಿಗೆ ಪಾವತಿಸದೆ ಯಾವುದೇ ಕಂಪನಿಯನ್ನು ಮುಚ್ಚುವ ಸಂದರ್ಭ ಬಂದಾಗ ಕೆಲವೆಲ್ಲ ಪಾವತಿಗಳನ್ನು ಸಂಬಂಧಿತ ಲಿಕ್ವಿಡೇಟರ್‌ಗಳು ಕಾನೂನಿನ ಪ್ರಕಾರ ಆದ್ಯತೆಯ ಮೇರೆಗೆ ವಿಲೇವಾರಿ ಮಾಡಬೇಕಾಗಿರುತ್ತದೆ. ಉದಾಹರಣೆಗೆ, ಕಾರ್ಮಿಕರ ವೇತನ, ಭದ್ರತೆಯುಳ್ಳ ಬ್ಯಾಂಕ್ ಸಾಲ, ಇತರ ವರ್ಗದ ವೇತನ, ಕಂಪನಿಯ ಇತರೆ ಸಾಲಗಾರರ ಪಾವತಿ, ತದನಂತರ ಸರ್ಕಾರಕ್ಕೆ ಪಾವತಿಸಬೇಕಾದ ಹಣ, ಕೊನೆಗೆ ಹಣ ಉಳಿದರೆ ಷೇರುದಾರರಿಗೆ, ಹೀಗೆ ಅದರ ಆದ್ಯತೆ ಇರುತ್ತದೆ. ಹೀಗಾಗಿ ನಿಮ್ಮ ತೆರಿಗೆ ಮೊತ್ತ ಕಂಪನಿ ಕಡೆಯಿಂದ ಪಾವತಿ ಆಗದಿರುವ ಸಾಧ್ಯತೆಯೇ ಹೆಚ್ಚು ಹಾಗೂ ಪ್ರಸ್ತುತ ಆ ಸಂಸ್ಥೆ ಮುಚ್ಚಿರುವ ಕಾರಣ ಏನನ್ನೂ ಮಾಡಲಾಗದು. ಹೀಗಾಗಿ, ಪೂರ್ಣ ಮಾಹಿತಿಯೊಡನೆ, ಆದ್ಯತೆಯ ಮೇರೆಗೆ ಹೆಚ್ಚುವರಿ ಸಲಹೆ ಪಡೆದುಕೊಳ್ಳಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in


ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೂರನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಂ.ಎಂ. ನಾಯ್ಕ
ಕರ್ನಾಟಕ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಹಾಗೂ ಮಾಜಿ KPSC ಸದಸ್ಯರು
ಜನನ: 5.6.1932 ಮರಣ: 27.8.2022
ನಿಮ್ಮ ನೆನಪು ಸದಾ ಜೀವಂತ
ದುಃಖತಪ್ತ: ಕುಟುಂಬದವರು

SAD DEMISE

Smt. M P Chethana
W/o Arun Bharathi R
Partner - Omega Engineers and Manufacturers
Former Lecturer - KLE Law College
We regret the untimely demise of Smt. M P Chethana, her strength, unconditional love, everlasting smile and timeless grace. She will forever remain a guiding light for all of us.
Deeply mourned by
FAMILY AND FRIENDS

ಹುಟ್ಟು ಹಬ್ಬದ ಸವಿನೆನಪು

ಬಿ.ನಾರಾಯಣ ರೆಡ್ಡಿ (ಬಿ.ಎನ್.ಬಿ)
ಸೀತಾರಾಮಪಾಳ್ಯ
98 ನೇ ವರ್ಷದ ಹುಟ್ಟು ಹಬ್ಬದ ಪ್ರೀತಿಯ ಶುಭಾಶಯಗಳು
"ನಿಮ್ಮ ಆದರ್ಶ ಜೀವನವು ಎಲ್ಲರ ಪ್ರೀತ್ಯಾದರಕ್ಕೆ ಪಾತ್ರವಾಗಿದ್ದು ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿರುವುದು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುವ."
–ಬಿ.ಎನ್.ಬಿ. ಎನ್ ವಿಜಯ ರಾಘವ ರೆಡ್ಡಿ,
ಎನ್ ರವೀಂದ್ರ, ಕುಟುಂಬದವರು ಮತ್ತು ಸ್ನೇಹಿತರು

34 ನೇ ವರ್ಷದ ಪುಣ್ಯತಿಥಿ

ಶ್ರೀಮತಿ ಮೀನಮ್ಮ
ಶ್ರೀ ಬಿ. ನಾರಾಯಣರೆಡ್ಡಿಯವರ ಧರ್ಮಪತ್ನಿ
ಸೀತಾರಾಮಪಾಳ್ಯ
ನಿಧನ: 28–8–1991
"ನಿಮ್ಮ ಆದರ್ಶ ಜೀವನವು ಎಲ್ಲರ ಪ್ರೀತ್ಯಾದರಕ್ಕೆ ಪಾತ್ರವಾಗಿದ್ದು ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿರುವುದು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುವ."
–ಬಿ.ಎನ್.ಬಿ. ಎನ್ ವಿಜಯ ರಾಘವ ರೆಡ್ಡಿ,
ಎನ್ ರವೀಂದ್ರ, ಕುಟುಂಬದವರು ಮತ್ತು ಸ್ನೇಹಿತರು

5ನೇ ವರ್ಷದ ಪುಣ್ಯಸ್ಮರಣೆ

1936 – 2020
ಶ್ರೀಯುತ ಎನ್. ಗಂಗಯ್ಯನವರು
ಶ್ರೀ ಗೋಪಿವೆಂಕಟೇಶ್ವರ ಕಲ್ಯಾಣ ಮಂಟಪದ ಮಾಲೀಕರು, ನೆಲಮಂಗಲ.
ಇವರ ಸ್ಮರಣಾರ್ಥವಾಗಿ ದಿ: 28-08-2025, ಗುರುವಾರದಂದು ಪೂಜೆಯನ್ನು ನೆಡೆಸಲಾಗುವುದು
ಸದಾ ನಿಮ್ಮ ನೆನಪಿನಲ್ಲಿ: ಶ್ರೀಮತಿ ಕೆ.ಜಿ. ಜಯಲಕ್ಷ್ಮಮ್ಮನವರು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು, ಮತ್ತು ಜಿ. ಗೋಪಿನಾಥ್
ಮೊ: 9945236300

‘ಸ್ವದೇಶಿ: ಜೀವನದ ಮಂತ್ರವಾಗಲಿ’

ಇ.ವಿ ಕಾರು ಅನಾವರಣ ಮಾಡಿದ ಪ್ರಧಾನಿ ಮೋದಿ

ಅಹಮದಾಬಾದ್ (ಪಿಟಿಐ): 'ಸ್ವದೇಶಿ ಎಂಬುದು ಪ್ರತಿಯೊಬ್ಬರ ಜೀವನದ ಮಂತ್ರವಾಗಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದರು.

ಮಾರುತಿ ಸುಜುಕಿಯ ಹಂಸಲಪುರ ಘಟಕದಲ್ಲಿ ಮೊದಲ ವಿದ್ಯುತ್ ಚಾಲಿತ (ಇ.ವಿ) ಕಾರು 'ಇ-ವಿಟಾರಾ'ವನ್ನು ಮಂಗಳವಾರ ಅನಾವರಣಗೊಳಿಸಿ ಅವರು ಮಾತನಾಡಿದರು.

'ಜನರು ಸ್ವದೇಶಿ ವಸ್ತುಗಳನ್ನು ಖರೀದಿಸುವ ಮೂಲಕ ದೇಶದ ಉತ್ಪಾದಕರಿಗೆ ನೆರವಾಗಬೇಕು. ಸ್ವದೇಶಿ ತತ್ವವನ್ನು ಹೆಮ್ಮೆಯಿಂದ ಅಪ್ಪಿಕೊಳ್ಳಬೇಕು. ಈ ನೆಲದಲ್ಲಿ ತಯಾರಾದ ಜಪಾನ್‌ನ ವಸ್ತುಗಳು ಸಹ ಸ್ವದೇಶದವೇ ಆಗಿವೆ' ಎಂದು ತಿಳಿಸಿದರು.

'ಸ್ವದೇಶಿ ಕುರಿತ ನನ್ನ ವ್ಯಾಖ್ಯಾನ ತೀರಾ ಸರಳ. ಹೂಡಿಕೆಯಾದ ಹಣವು ಯಾರಿಗೆ ಸೇರಿದ್ದು? ಅದು ಡಾಲರ್, ಪೌಂಡ್ ಎಂಬುದರ ಬಗ್ಗೆ ನನಗೆ ಕಾಳಜಿ ಇಲ್ಲ. ಆದರೆ, ಆ ಹಣದಿಂದ ಯಾವುದೇ ವಸ್ತು ತಯಾರಾದರೂ ಬೆವರು ನನ್ನ ದೇಶವಾಸಿಗಳದ್ದಾಗಿರಬೇಕು. ಆ ವಸ್ತುಗಳಿಗೆ ಇಲ್ಲಿನ ಮಣ್ಣಿನ ಪರಿಮಳ ಇರುತ್ತದೆ' ಎಂದು ಹೇಳಿದರು.



ಗುಜರಾತ್‌ನ ಅಹಮದಾಬಾದ್ ಸಮೀಪವಿರುವ ಮಾರುತಿ ಸುಜುಕಿಯ ಹಂಸಲಪುರ ಘಟಕದಲ್ಲಿ ಮೊದಲ ವಿದ್ಯುತ್ ಚಾಲಿತ ಕಾರು 'ಇ–ವಿಟಾರಾ'ವನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಸುಜುಕಿ ಮೋಟರ್ಸ್ ಅಧ್ಯಕ್ಷ ತೋಶಿಹಿರೊ ಸುಜುಕಿ ಮಂಗಳವಾರ ಅನಾವರಣಗೊಳಿಸಿದರು –ಪಿಟಿಐ ಚಿತ್ರ

₹70 ಸಾವಿರ ಕೋಟಿ ಹೂಡಿಕೆ: ಸುಜುಕಿ

ದೇಶದಲ್ಲಿ ಕಂಪನಿಯ ಕಾರ್ಯಾಚರಣೆ ಸದೃಢಗೊಳಿಸಲು ಮುಂದಿನ ಐದರಿಂದ ಆರು ವರ್ಷದಲ್ಲಿ ₹70 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ವಾಹನ ತಯಾರಕ ಕಂಪನಿ ಸುಜುಕಿ ಮೋಟರ್ ಕಾರ್ಪೊರೇಷನ್ ತಿಳಿಸಿದೆ.

ಮಾರುತಿ ಸುಜುಕಿ ಇಂಡಿಯಾದ ಇ-ವಿಟಾರಾ ಜಪಾನ್ ಸೇರಿದಂತೆ 100 ರಾಷ್ಟ್ರಗಳಿಗೆ ರಫ್ತಾಗಲಿದೆ. ಈಗಾಗಲೇ ಕಂಪನಿಯು ಭಾರತದಲ್ಲಿ ₹1 ಲಕ್ಷ ಕೋಟಿ ಹೂಡಿಕೆ ಮಾಡಿದೆ. ಈ ಹೂಡಿಕೆಯು 11 ಲಕ್ಷಕ್ಕೂ ಹೆಚ್ಚು ನೇರ ಉದ್ಯೋಗಗಳ ಸೃಷ್ಟಿಗೆ ಕಾರಣವಾಗಿದೆ ಎಂದು ಕಂಪನಿಯ ಅಧ್ಯಕ್ಷ ತೋಶಿಹಿರೊ ಸುಜುಕಿ ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers
ಅನುಭವವುಳ್ಳ ವಾಹನ_ಚಾಲಕರು ಬೇಕಾಗಿದ್ದಾರೆ. Heavy vehicle ಲೈಸನ್ಸ್ ಹೊಂದಿರಬೇಕು. ಸಂಪರ್ಕಿಸಿ: ಗಾಯತ್ರಿ ಅಸೋಸಿಯೆಟ್ಸ್ ಬೈರತಿ, ಬೆಂಗಳೂರು_560077. 8453353646/ 6362872796/ 9448488536.

Multiple Vacancy
REQUIRED EXPERIENCED Telecaller (BOYS & GIRLS) FieldExecutive, Team leader For MNC bank collection. 9886553838, 7019700755.

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted
ಲೇಡಿಸ್ ಬ್ಯೂಟಿ ಪಾರ್ಲರ್ ನಲ್ಲಿ ಲೇಡಿಸ್ ಬ್ಯೂಟಿಷಿಯನ್ಸ್ ಬೇಕಾಗಿದ್ದಾರೆ. ತಿಂಗಳಿಗೆ ವೇತನ 15000 ರಿಂದ 20000- Full ಟೈಮ್& Part ಟೈಮ್ ಮತ್ತು ತರಬೇತಿ ನೀಡಲಾಗುವುದು. ಶೇಷಾದ್ರಿಪುರಂ ಬೆಂಗಳೂರು. 9019626612.

MNC SAHAKARNAGAR & Koramangal new office urgently required Part/ Fulltime 30- 65yrs, Retired also apply. SSLC passed. Ph: 7795883094/ 8277059719.

ಪ್ರವಾಸ

Travel Agencies
ಕಾಮಾಕ್ಯ ಪ್ರವಾಸ 8 ದಿನಗಳು 23/9/2025 ಗುವಾಹಟಿ, ಶಿಲ್ಲೊಂಗ್, ಮೇಘಾಲಯ, ಅಸ್ಸಾಂ, ಕಾಜಿರಂಗ ನ್ಯಾಷನಲ್ ಪಾರ್ಕ್, ಚಿರಾಪುಂಜಿ, ರೂಟ್ ಬ್ರಿಡ್ಜ್ ಇತರೆ ಸ್ಥಳಗಳು ಸುವರ್ಣಯಾತ್ರಾ 9019462508 9480843945

Travel
ಶ್ರೀಶ್ರೇಯಸ್ ಟೂರ್ಸ್ 04.10.2025,04.11.2025 04.12.2025 10ದಿನಗಳು ಅಖಂಡ ಆಂದ್ರತೆಲಂಗಾಣ ರಾಜ್ಯ ಪ್ರವಾಸ.35000. 03.10.2025,03.11.2025 03.12.2025 12ದಿನಗಳು ಅಖಂಡ ಮಹಾರಾಷ್ಟ್ರ ರಾಜ್ಯ ಪ್ರವಾಸ.40000 (ಅಷ್ಟವಿನಾಯಕ 5ಜ್ಯೋತಿಲಿಂಗ). 06.10.2025 12ದಿನಗಳು ಆದಿಕೈಲಾಸ ಓಂಪರ್ವತಯಾತ್ರಾ 65000. 24.10.2025, 01.11.2025,01.12.2025 10ದಿನಗಳು 35000.ಅಖಂಡ ಗುಜರಾತ್ ಮಧ್ಯಪ್ರದೇಶ ರಾಜ್ಯ ಪ್ರವಾಸ.03.10.2025 01/21.11.2025 06.12.2025 15ದಿನಗಳು 45000.ಅಖಂಡ ಮಧ್ಯಪ್ರದೇಶ ರಾಜ್ಯ(ಅಮರಕಂಟಕ,ಚಿತ್ರಕೂಟ ಮಯ್ಯಾರ್ ಸಹಿತ) 24.10.2025,12.11.2025 12.12.2025 12ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ 40000. 23.09.2025,03.10.2025 03.11.2025 07ದಿನಗಳು ಅಖಂಡ ಒರಿಸ್ಸಾ,ಕಲ್ಕತ್ತಾ ದೇವಘರ್ 25000. 8073824856 9206979202 9606032154

07.10.2025 11.11.2025 08.12.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.11.2025 ದುಬೈ,ಅಬುದಾಬಿ 5 ದಿನಗಳು. 11.09.2025 04.10.2025 16.11.2025 24.12.2025 ಭೂತಾನ್ 8 ದಿನಗಳು. 11.10.2025 01.11.2025 ಶ್ರೀಲಂಕಾ 7 ದಿನಗಳು. 15.09.2025 06.10.2025 13.11.2025 ಕಾಶಿ,ಗಯಾ,ಅಯೋಧ್ಯ 7 ದಿನಗಳು. 11.10.2025 16.11.2025 ಅಸ್ಸಾಂ,ಮೇಘಾಲಯ 6/9 ದಿನಗಳು. 04.10.2025 16.11.2025 ಮಧ್ಯಪ್ರದೇಶ 4/10 ದಿನಗಳು. 20.09.2025 06.10.2025 03.11.2025 ಗುಜರಾತ್ 8 ದಿನಗಳು. 22.09.2025 16.10.2025 11.11.2025 ರಾಜಸ್ಥಾನ 9 ದಿನಗಳು.15.09.2025 06.10.2025 03.11.2025 ರಾಮೇಶ್ವರಂ ಮಧುರೈ,ಕನ್ಯಾಕುಮಾರಿ 5 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವೆಲ್ಸ್ ಬೆಂಗಳೂರು.03. 9448402248 7022547922

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪುಣೆಯಲ್ಲಿ ಆ್ಯಪಲ್‌ನ ಮಳಿಗೆ ಸೆ.4ಕ್ಕೆ ಉದ್ಘಾಟನೆ

ನವದೆಹಲಿ (ಪಿಟಿಐ): ಐಫೋನ್ ತಯಾರಕ ಕಂಪನಿ ಆ್ಯಪಲ್, ಸೆಪ್ಟೆಂಬರ್ 4ರಂದು ಮಹಾರಾಷ್ಟ್ರದ ಪುಣೆಯಲ್ಲಿ ಹೊಸ ಮಳಿಗೆ ತೆರೆಯಲಾಗುವುದು ಎಂದು ಮಂಗಳವಾರ ತಿಳಿಸಿದೆ. ಇದು ಭಾರತದಲ್ಲಿ ಕಂಪನಿ ಆರಂಭಿಸುತ್ತಿರುವ ನಾಲ್ಕನೇ ಮಳಿಗೆ.



ಈ ಮಳಿಗೆ ಆರಂಭಿಸುವುದರಿಂದ ಆ್ಯಪಲ್ ಕಂಪನಿಯ ಉತ್ಪನ್ನಗಳು ಗ್ರಾಹಕರಿಗೆ ದೊರೆಯಲಿವೆ. ಅಲ್ಲದೆ, ನೇರವಾಗಿ ಸೇವೆ ನೀಡಬಹುದಾಗಿದೆ ಎಂದು ಕಂಪನಿ ತಿಳಿಸಿದೆ.

ಈಗಾಗಲೇ ಬೆಂಗಳೂರಿನ ಹೆಬ್ಬಾಳದಲ್ಲಿ ಕಂಪನಿಯು ತನ್ನ ಮೂರನೇ ಮಳಿಗೆಯನ್ನು ಸೆಪ್ಟೆಂಬರ್ 2ರಂದು ಆರಂಭಿಸಲಾಗುವುದು ಎಂದು ತಿಳಿಸಿದೆ.

‘ಆರೋಗ್ಯ ವಿಮೆಗೆ ಜಿಎಸ್‌ಟಿ ರದ್ದು: ₹900 ಕೋಟಿ ನಷ್ಟ’

ಬರ್ಧಮಾನ್ (ಪಿಟಿಐ): ಆರೋಗ್ಯ ವಿಮಾ ಕಂತಿನ ಮೇಲಿನ ಜಿಎಸ್‌ಟಿ ರದ್ದು ಜಾರಿಗೆ ಬಂದರೆ, ಪಶ್ಚಿಮ ಬಂಗಾಳದ ಖಜಾನೆಗೆ ವಾರ್ಷಿಕ ₹900 ಕೋಟಿ ನಷ್ಟವಾಗಲಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.


'ಸಾಮಾನ್ಯ ಜನರಿಗೆ ವೈದ್ಯಕೀಯ ಸವಲತ್ತು ಕೈಗೆಟುಕುವಂತೆ ಮಾಡಲು ಆರೋಗ್ಯ ವಿಮಾ ಕಂತಿನ ಮೇಲಿನ ಜಿಎಸ್‌ಟಿ ವಿನಾಯಿತಿ ನೀಡುವಂತೆ ಮೊದಲು ಒತ್ತಾಯಿಸಿದ್ದು ಪಶ್ಚಿಮ ಬಂಗಾಳ. ಈ ಜಿಎಸ್‌ಟಿ ಮನ್ನಾದಿಂದ ರಾಜ್ಯದ ಬೊಕ್ಕಸಕ್ಕೆ ಹೊರೆ ಬೀಳಲಿದೆ. ಆದರೆ, ನಮಗೆ ಜನರ ಆರೋಗ್ಯವೇ ಮುಖ್ಯ' ಎಂದು ಮಂಗಳವಾರ ಹೇಳಿದ್ದಾರೆ.



ಮಮತಾ ಬ್ಯಾನರ್ಜಿ

ಜಿಎಸ್‌ಟಿ ಕಡಿತದ ಬಳಿಕ ವಿಮಾ ಕಂಪನಿಗಳು ದರ ಹೆಚ್ಚಳ ಮಾಡದಂತೆ ನೋಡಿಕೊಳ್ಳಬೇಕು. ಕುಟುಂಬಗಳ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಉದ್ದೇಶವನ್ನು ಹೊಂದಲಾಗಿದೆ ಎಂದು ಹೇಳಿದ್ದಾರೆ.

ಪ್ರಸ್ತುತ ಆರೋಗ್ಯ ವಿಮಾ ಕಂತಿನ ಮೇಲೆ ಶೇ 18ರಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸಲಾಗುತ್ತಿದೆ. ಇದರಲ್ಲಿ ರಾಜ್ಯದ ವರಮಾನದ ಪಾಲು ಶೇ 9ರಷ್ಟಾಗಿದೆ.



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,967
ಇಂದಿನ ಅಂತ್ಯ:	24,712
ದಿನದ ಕನಿಷ್ಠ:	24,989
	255

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹540
12 ಕ್ಕೆ	₹72
ಮೈಸೂರು: 100 ಕ್ಕೆ	₹548

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹331-670
ದ್ವಿತಳಿ (ಬಿ.ವಿ)	₹323-780

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹186
ಆರ್‌ಎಸ್‌ಎಸ್-5	₹181
ಗುಡ್ ಲಾಟ್	₹166

ಹೆಚ್ಚುವರಿ ಸುಂಕ; ಇಂದು ಜಾರಿ

ಒಂದನೇ ಪುಟದಿಂದ...

ರಷ್ಯಾದಿಂದ ತೈಲ ಖರೀದಿಸುವ ವಿಚಾರವಾಗಿ ಅಮೆರಿಕದ ಬೆದರಿಕೆಗೆ ಭಾರತ ಮಣಿಯದ ಕಾರಣ ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕ ವಿಧಿಸುವುದಾಗಿ ಟ್ರಂಪ್ ಘೋಷಿಸಿದ್ದರು. ಹೆಚ್ಚುವರಿ ಸುಂಕದ ಹೊರೆ ತಪ್ಪಿಸಲಿಕ್ಕಾಗಿ ಒಪ್ಪಂದ ಮಾಡಿಕೊಳ್ಳಲು ಭಾರತಕ್ಕೆ 21 ದಿನಗಳ ಕಾಲಾವಕಾಶ ನೀಡಲಾಗಿತ್ತು. ಆದರೆ, ಯಾವುದೇ ಒಪ್ಪಂದ ಏರ್ಪಡದೇ ಇರುವುದರಿಂದ ಹೆಚ್ಚುವರಿ ಸುಂಕ ಸೇರಿ ಶೇ 50ರಷ್ಟು ಸುಂಕ ಆಕರಣೆ ಜಾರಿಗೆ ಬಂದಿದೆ.

ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕ ವಿಧಿಸಿರುವ ಹೆಚ್ಚುವರಿ ಸುಂಕ ನ್ಯಾಯ ಸಮ್ಮತವಾಗಿದ್ದು, ಇದು 'ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಚಾರ' ಎಂದು ಶ್ವೇತಭವನದ ವ್ಯಾಪಾರ ಸಲಹೆಗಾರ ಪೀಟರ್ ನವ್ರೊ ಈಚೆಗೆ ಸಮರ್ಥಿಸಿಕೊಂಡಿದ್ದರು. ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಭಾರತವು ರಷ್ಯಾಕ್ಕೆ ಪರೋಕ್ಷವಾಗಿ ಹಣಕಾಸು ಒದಗಿಸುತ್ತಿದೆ ಎಂದು ಅಮೆರಿಕದ ಹಣಕಾಸು ಇಲಾಖೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಆರೋಪಿಸಿದ್ದರು.

ಉಕ್ರೇನ್–ರಷ್ಯಾ ಯುದ್ಧ ಆರಂಭವಾದ ಬಳಿಕ ಭಾರತವು ರಷ್ಯಾದಿಂದ ತೈಲ ಖರೀದಿ ಪ್ರಮಾಣವನ್ನು ಹೆಚ್ಚಿಸಿಕೊಂಡು ಲಾಭ ಗಳಿಸುತ್ತಿದೆ. ಭಾರತ ಆಮದು ಮಾಡಿಕೊಳ್ಳುತ್ತಿರುವ ಕಚ್ಚಾ ತೈಲದಲ್ಲಿ ರಷ್ಯಾದ ಪಾಲು ಶೇ 42ರಷ್ಟಿದೆ. ಯುದ್ಧದ ಬಳಿಕ ತೈಲ ಆಮದು ಪ್ರಮಾಣ ಹೆಚ್ಚಿಸಿರುವುದನ್ನು ಒಪ್ಪಲಾಗದು ಎಂದು ಬೆಸೆಂಟ್ ಈ ತಿಂಗಳ ಆರಂಭದಲ್ಲಿ ಹೇಳಿದ್ದರು.

ಅಮೆರಿಕದ ಹೋಮ್‌ಲ್ಯಾಂಡ್ ಸೆಕ್ಯುರಿಟಿ ಇಲಾಖೆ (ಕಸ್ಟಮ್ಸ್ ವಿಭಾಗ) ಹೊರಡಿಸಿರುವ ಕರಡು ಅಧಿಸೂಚನೆ ಕುರಿತು ಭಾರತದ ಹಣಕಾಸು ಸಚಿವಾಲಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. 'ಅಮೆರಿಕವು ಹೆಚ್ಚುವರಿ ಸುಂಕ ವಿಧಿಸುವ ನಿರ್ಧಾರವನ್ನು ಮುಂದೂಡುವ ಬಗ್ಗೆ ಸರ್ಕಾರಕ್ಕೆ ಯಾವುದೇ ಭರವಸೆ ಇಲ್ಲ' ಎಂದು ಹಣಕಾಸು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಹೆಚ್ಚುವರಿ ಸುಂಕದಿಂದ ತೊಂದರೆಗೆ ಒಳಗಾಗುವ ರಫ್ತುದಾರರಿಗೆ ಹಣಕಾಸಿನ ನೆರವು ನೀಡಲಾಗುವುದು ಮತ್ತು ಚೀನಾ, ದಕ್ಷಿಣ ಅಮೆರಿಕ ಹಾಗೂ ಪಶ್ಚಿಮ ಏಷ್ಯಾ ಸೇರಿದಂತೆ ಪರ್ಯಾಯ ಮಾರುಕಟ್ಟೆಗಳತ್ತ ಗಮನ ಹರಿಸಲು ರಫ್ತುದಾರರನ್ನು ಪ್ರೋತ್ಸಾಹಿಸಲಾಗುತ್ತದೆ' ಎಂದಿದ್ದಾರೆ.

ಅಮೆರಿಕದ ನಿರ್ಧಾರದಿಂದ ತೊಂದರೆಗೆ ಒಳಗಾಗಬಹುದಾದ ಕ್ಷೇತ್ರಗಳಿಗೆ ಬೆಂಬಲವಾಗಿ ನಿಲ್ಲಲು ಕ್ರಮ ಕೈಗೊಳ್ಳಲಾಗುವುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಸಂಜಯ್ ಮಲ್ಹೋತ್ರಾ ಸೋಮವಾರ ಹೇಳಿದ್ದರು.

ಟ್ರಂಪ್ ಅವರು ಹೆಚ್ಚುವರಿ ಸುಂಕ ವಿಧಿಸುವ ನಿರ್ಧಾರ ಘೋಷಿಸಿದ ಮರುದಿನವೇ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದರು. 'ಭಾರತವು ತನ್ನ ರೈತರು, ಮೀನುಗಾರರು ಮತ್ತು ಹೈನುಗಾರರ ಹಿತಾಸಕ್ತಿಯೊಂದಿಗೆ ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ' ಎಂದಿದ್ದರು.

ಗಣಪತಿ: ಭಾರತೀಯತೆಯ ಅಧಿಪತಿ

• ಎಸ್. ಸೂರ್ಯಪ್ರಕಾಶ ಪಂಡಿತ್

ಜೀವನದಲ್ಲಿ ಏನು ಮಾಡಲು ತೊಡಗಿದರೂ ಒಂದಲ್ಲ ಒಂದು ಅಡಚಣೆ ಎದುರಾಗುವುದು ಸಹಜ. ಹೀಗೆ ಎದುರಾಗುವ ವಿಘ್ನಗಳನ್ನು ಪರಿಹರಿಸಬಲ್ಲ ಶಕ್ತಿಯೊಂದು ನಮ್ಮ ಜೊತೆಗೆ ಇರಬಾರದಿತ್ತೆ – ಎಂದು ನಮಗೆ ಆ ಸಮಯದಲ್ಲಿ ಅನಿಸುವುದು ಸುಳ್ಳಲ್ಲ. ನಮ್ಮ ವಿಘ್ನಗಳ ಪರಂಪರೆಯನ್ನು ನಾಶಮಾಡಬಲ್ಲ ದೇವರೇ ಗಣೇಶ. ಅವನಿಗೆ ಒಂದು ಹೆಸರಿಲ್ಲ, ಸಾವಿರಾರು ಹೆಸರುಗಳು. ಅವನು ವಿಘ್ನನಾಯಕನೂ ಹೌದು, ವಿಘ್ನನಿವಾರಕನೂ ಹೌದು. ನಾವು ತಮಸ್ಸಿನಲ್ಲಿದ್ದಾಗ ಅವನು ನಮಗೆ ವಿಘ್ನನಾಯಕನೇ; ಆದರೆ ನಮ್ಮ ಸಾತ್ತ್ವಿಕತೆಯೇ ಅವನನ್ನು ನಮಗೆ ಸುಮುಖವಾಗಿಸುತ್ತದೆ, ವಿಘ್ನನಿವಾರಕನಾಗಿ ಒದಗಿಸುತ್ತದೆ. ಗಣಪತಿ, ವಿನಾಯಕ, ಲಂಬೋದರ, ಪಾರ್ವತೀತನಯ, ಗಜಾನನ, ಈಶಪುತ್ರ, ಗೌರೀಸುತ, ಏಕದಂತ – ಹೀಗೆ ಅವನಿಗೆ ಹೆಸರುಗಳೂ ಹಲವು, ತತ್ತ್ವಗಳೂ ಹಲವು. ಅವನ ಹುಟ್ಟು, ಆಕಾರ, ಆಹಾರ, ಶಕ್ತಿ, ವಾಹನ, ವಿಹಾರ – ಪ್ರತಿಯೊಂದು ಕೂಡ ನಮ್ಮ ಜೀವನದ ಆಶಯ–ಆದರ್ಶಗಳೊಂದಿಗೆ ತಾದಾತ್ಮ್ಯವನ್ನು ಸಾಧಿಸಿರುವುದು ವಿಶೇಷ.

ಅವನು ಹುಟ್ಟು ಕಾಮಾತೀತ ತತ್ತ್ವದ ಆದರ್ಶ; ಅವನ ಆಕಾರ, ಅದು ವಿಶ್ವತೋಮುಖವೂ ವಿಶ್ವಾತ್ಮಕವೂ ಆದದ್ದು; ಅವನ ಇಷ್ಟದ ಮೋದಕ, ಅದು ನಾವು ಬಯಸುವ ಆನಂದದ ಬೋಧಕ; ಅವನ ಶಕ್ತಿ, ಅದು ಇಡಿಯ ಸೃಷ್ಟಿಯನ್ನೇ ಪೊರೆಯಬಲ್ಲ ಮಹಾಶಕ್ತಿ; ಅವನ ವಾಹನ, ಅದು ಅವನ ಔದಾರ್ಯದ ಕಾರಣ, ಅದರಿಂದ ಆಗುವುದು ನಮ್ಮ ಅಹಂಕಾರದ ದಮನ; ಅವನ ವಿಹಾರ, ಅದು ಸದಾ ಪ್ರಣವದಲ್ಲಿಯ ಸಂಚಾರ, ಸಿದ್ಧಿ–ಬುದ್ಧಿಗಳ ಸಾಮರಸ್ಯದ ವಿಚಾರ.



ಗಣಪತಿಯ ಒಂದೊಂದು ನಾಮದಲ್ಲಿಯೂ ಅಡಗಿರುವ ತತ್ತ್ವವನ್ನು ಸವಿಸ್ತಾರವಾಗಿ ವಿವರಿಸಲಾದೀತು. ಗಣಪತಿಯ ಕಲ್ಪನೆಯನ್ನು ವೇದಕಾಲದಿಂದಲೂ ನೋಡಬಹುದು. ಗಣಪತಿಯನ್ನು ಕುರಿತಾದ ಪುರಾಣಗಳೂ ಇವೆ; ಸ್ತೋತ್ರಸಾಹಿತ್ಯವೂ ಸಮೃದ್ಧವಾಗಿವೆ; ಅವನ ತತ್ತ್ವವನ್ನು ಎತ್ತಿಹಿಡಿದಿರುವ ಉಪನಿಷತ್ತೂ ಇದೆ; ಅವನ ಶಿಲ್ಪ–ಚಿತ್ರಗಳಿಗೂ ಕೊರತೆಯಿಲ್ಲ; ಅವನ ಗುಡಿಗಳಿಗಂತೂ ಗಡಿಗಳೇ ಇಲ್ಲ; ಪ್ರಪಂಚದಾದ್ಯಂತ ಗಣಪತಿಯ ಆರಾಧನೆಯ ಕುರುಹುಗಳು ಸಿಗುತ್ತವೆ.

ಗಣೇಶನ ಹಬ್ಬ ನಮ್ಮ ದೇಶದ ದೊಡ್ಡ ಹಬ್ಬಗಳಲ್ಲಿ ಒಂದು. ಜಾತಿ, ಮತ, ಪ್ರಾಂತ, ಭಾಷೆಗಳ ಹಂಗಿಲ್ಲದೆ ಎಲ್ಲರನ್ನೂ ಬೆಸೆಯುತ್ತಿರುವ ಈ ಹಬ್ಬ ದಿಟವಾಗಿಯೂ ರಾಷ್ಟ್ರೀಯ ಹಬ್ಬವೇ ಸರಿ. ನಮ್ಮ ಕಾಲದ ಹಲವು ಸಮಸ್ಯೆಗಳಿಗೆ ಸುಲಭ ಪರಿಹಾರಗಳನ್ನು ಗಣಪತಿಯ ತತ್ತ್ವಗಳಲ್ಲಿ ಕಾಣಬಹುದು. ವಿದ್ಯಾರ್ಥಿಗಳಿಗೆ ಅವನು ವಿದ್ಯಾಗಣಪತಿಯಾಗಿ ವಿದ್ಯೆ–ಬುದ್ಧಿಗಳ ಒಡೆಯನಾಗಿ ಒದಗುತ್ತಾನೆ. ವಿನಯವನ್ನು ಮರೆತು ಅಹಂಕಾರದ ಪೀಠದಲ್ಲಿ ಕುಳಿತಿರುವ ಇಂದಿನ ಜನಾಂಗಕ್ಕೆ ಅವನು ಅರಿವಿನ ಅಂಕುಶವಾಗಬಲ್ಲ. ಅಪಹಾಸ್ಯವನ್ನೇ ಉದ್ಯಮವನ್ನಾಗಿಸಿಕೊಂಡಿರುವ ಮಾನಸಿಕತೆಗೆ ಅವನು ಆನಂದದ ಔಷಧವನ್ನು ಉಣಿಸುವ ಪೂರ್ಣಚಂದ್ರನಾಗಬಲ್ಲ. ಅವನು ಯೋಗಿಗಳಿಗೂ ಬೇಕಾದವನು, ಸಂಸಾರಿಗಳನ್ನೂ ಕಾಪಾಡುವವನು. ಸಾಧಕರ ಏಕಾಂತದಲ್ಲೂ ಅವನಿರುತ್ತಾನೆ, ಮಕ್ಕಳ ಆಟಪಾಠಗಳಲ್ಲೂ ನಲಿಯುತ್ತಿರುತ್ತಾನೆ; ಅವನು ಓಂಕಾರಕ್ಕೂ ಒಲಿಯುತ್ತಾನೆ, ಸಪ್ತಸ್ವರಗಳಿಗೂ ಕುಣಿಯುತ್ತಾನೆ. ಅವನನ್ನು ಯಜ್ಞದಿಂದಲೂ ಒಲಿಸಿಕೊಳ್ಳಬಹುದು, ಗರಿಕೆಯ ಹುಲ್ಲಿನಿಂದಲೂ ಪೂಜಿಸಬಹುದು. ಎಕ್ಕದ ಹೂವನ್ನು ಅಕ್ಕರೆಯಿಂದ ಸ್ವೀಕರಿಸುವ ಅವನು, ಸಕ್ಕರೆಯ ಕಡುಬನ್ನೂ ಚಪ್ಪರಿಸುವವನೇ.

ಗಣೇಶನಂಥ ಸರಳವೂ ಗಹನವೂ ಆದ ದೈವದ ಪರಿಕಲ್ಪನೆಯೇ ಸ್ವಾರಸ್ಯಕರ. ಭಾರತೀಯ ಸಂಸ್ಕೃತಿಯ ಸಂಭ್ರಮ, ಜೀವನೋತ್ಸಾಹ, ಆಧ್ಯಾತ್ಮಿಕತೆ, ಕಲಾಶ್ರೀಮಂತಿಕೆ, ಕೌಟುಂಬಿಕ ಸೌಹಾರ್ದ, ವಿದ್ಯೆಯ ಔದಾರ್ಯ, ಸಿದ್ಧಿಯ ನೆಲೆ, ಸೌಹಾರ್ದದ ಸೆಲೆ – ಇಂಥ ಹತ್ತುಹಲವು ಮಹಾತತ್ತ್ವಗಳ ಮಹಾದರ್ಶನವೇ ಗಣಪತಿಯ ಕಲ್ಪನೆಯಲ್ಲಿ ಸಾಕಾರಗೊಂಡಿದೆ.

ಸಿಫ್ಟ್ ಕೌರ್‌ಗೆ ಸ್ವರ್ಣ ಡಬಲ್

ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್: ಪದಕಪಟ್ಟಿಯಲ್ಲಿ ಭಾರತ ಎರಡನೇ ಸ್ಥಾನ

ಶಿಮ್ಕೆಂಟ್ (ಕಜಾಕಸ್ತಾನ) (ಪಿಟಿಐ): ಭಾರತದ ಶೂಟರ್‌ಗಳು ಇಲ್ಲಿ ನಡೆಯುತ್ತಿರುವ 16ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರವೂ ಪ್ರಾಬಲ್ಯ ಮುಂದುವರಿಸಿದರು. ಒಲಿಂಪಿಯನ್ ಸಿಫ್ಟ್ ಕೌರ್ ಸಮ್ರಾ ಅವರು ಎರಡು ಚಿನ್ನದ ಪದಕಗಳನ್ನು ಗೆದ್ದುಕೊಂಡರು.

ಮಹಿಳೆಯರ 50 ಮೀ. ರೈಫಲ್ ತ್ರೀ ಪೊಸಿಷನ್ ಸ್ಪರ್ಧೆಯಲ್ಲಿ ಸ್ವರ್ಣಕ್ಕೆ ಗುರಿಯಿಟ್ಟ ಸಮ್ರಾ, ತಂಡ ವಿಭಾಗದಲ್ಲಿಯೂ ಭಾರತಕ್ಕೆ ಚಿನ್ನದ ಪದಕ ತಂದುಕೊಟ್ಟರು.

ವಿಶ್ವದಾಖಲೆ ಹೊಂದಿರುವ 23 ವರ್ಷ ವಯಸ್ಸಿನ ಸಮ್ರಾ ಅವರು ಫೈನಲ್ ಕಣದಲ್ಲಿ 459.2 ಸ್ಕೋರ್ ಮಾಡಿದರು. ಈ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಶೂಟರ್ ಎಂಬ ಗೌರವಕ್ಕೂ ಪಾತ್ರರಾದರು. 2022ರ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಗೆಲ್ಲುವ ಹಾದಿಯಲ್ಲಿ ಅವರು ವಿಶ್ವದಾಖಲೆ (469.6) ರಚಿಸಿದ್ದರು.

ಚೀನಾದ ಯಾಂಗ್ ಯುಜೀ (458.8) ಬೆಳ್ಳಿ ಗೆದ್ದರೆ, ಜಪಾನ್ ದೇಶದ ಮಿಸಾಕಿ ನೊಬಾಟಾ (448.2) ಕಂಚು ಗೆದ್ದರು. ಕಣದಲ್ಲಿದ್ದ ಭಾರತದ ಅಶಿ ಚೋಕ್ಸಿ (402.8) ಅವರು 7ನೇ ಸ್ಥಾನ ಪಡೆದರು. ತಂಡ ವಿಭಾಗದಲ್ಲಿ ಸಮ್ರಾ, ಚೋಕ್ಸಿ ಹಾಗೂ ಒಲಿಂಪಿಯನ್ ಅಂಜುಮ್ ಮೌದ್ಗಿಲ್ ಅವರು ಒಟ್ಟು 1,753 ಪಾಯಿಂಟ್ಸ್ ಸಂಪಾದಿಸಿದರು. ಜಪಾನ್ ತಂಡವು 1,750 ಅಂಕಗಳೊಂದಿಗೆ ರಜತ ಪದಕ ಗೆದ್ದರೆ, ಕೊರಿಯಾ (1,747) ಕಂಚಿನ ಪದಕ ತಮ್ಮದಾಗಿಸಿಕೊಂಡರು.



ಸಿಫ್ಟ್ ಕೌರ್ ಸಮ್ರಾ (ಎಡ), ಅಶಿ ಚೋಕ್ಸಿ ಪಿಟಿಐ ಸಂಗ್ರಹ ಚಿತ್ರ

ಟೂರ್ನಿಯಲ್ಲಿ 9 ಚಿನ್ನ ಸೇರಿ 20 ಪದಕಗಳೊಂದಿಗೆ ಭಾರತದ ಸೀನಿಯರ್ ತಂಡ ಪದಕಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿದೆ. ಚೀನಾ 24 ಪದಕಗಳೊಂದಿಗೆ (13 ಚಿನ್ನ) ಅಗ್ರಸ್ಥಾನದಲ್ಲಿದೆ.

ಕಿರಿಯರ ಪದಕ ಬೇಟೆ: ಭಾರತದ ಕಿರಿ ಯರ ಪದಕ ಬೇಟೆಗೆ ಮಂಗಳವಾರವೂ ಯಾವುದೇ ಅಡ್ಡಿ ಎದುರಾಗಲಿಲ್ಲ. ಜೂನಿಯರ್ ಪುರುಷರ 25 ಮೀಟರ್ ರ್‍ಯಾಪಿಡ್ ಫೈರ್ ವೈಯಕ್ತಿಕ ಸ್ಪರ್ಧೆಯಲ್ಲಿ ಸಮೀರ್ ಕಂಚು ಗೆದ್ದುಕೊಂಡರು. ತಂಡ ವಿಭಾಗದಲ್ಲಿ ಸಮೀರ್, ಸೂರಜ್ ಹಾಗೂ ಅಭಿನವ್ ಒಟ್ಟು 1,724 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ ಪಡೆದರು.

ಹ್ಯಾರಿಸ್ ಸಬೀರಾ ಹಾಗೂ ಆದ್ಯಾ ಕತ್ಯಾಲ್ ಜೂನಿಯರ್ ಮಹಿಳೆಯರ ಟ್ರ್ಯಾಪ್ ವೈಯಕ್ತಿಕ ಸ್ಪರ್ಧೆಯಲ್ಲಿ ಕ್ರಮವಾಗಿ ಚಿನ್ನ ಹಾಗೂ ರಜತ ಪದಕ ಜಯಿಸಿದರು. ಈ ಇಬ್ಬರು ಶೂಟರ್‌ಗಳು ಭವ್ಯಾ ತ್ರಿಪಾಠಿ ಜೊತೆ ಸೇರಿ ತಂಡ ವಿಭಾಗದಲ್ಲಿಯೂ ಚಿನ್ನಕ್ಕೆ ಮುತ್ತಿಕ್ಕಿದರು.

ತೀವ್ರ ಪೈಪೋಟಿಯಿಂದ ಕೂಡಿದ್ದ ಪುರುಷರ ಜೂನಿಯರ್ ವಿಭಾಗದ ಟ್ರ್ಯಾಪ್ ವೈಯಕ್ತಿಕ ಸ್ಪರ್ಧೆಯಲ್ಲಿ ಆರ್ಯವಂಶ ತ್ಯಾಗಿ ಬೆಳ್ಳಿ ಪದಕ ಗೆದ್ದರು. ಫೈನಲ್‌ನಲ್ಲಿ ತ್ಯಾಗಿ ಹಾಗೂ ಕಜಾಕಸ್ತಾನ ನಿಕಿಟಾ ಮೊಯ್ಸೆಯೆವ್ ತಲಾ 40 ಅಂಕ ಗಳಿಸಿದ್ದರು. ಶೂಟ್‌ಆಫ್‌ನಲ್ಲಿ ನಿಕಿಟಾ 1–0ಯಿಂದ ಚಿನ್ನವನ್ನು ತಮ್ಮದಾಗಿಸಿಕೊಂಡರು. ತಂಡ ವಿಭಾಗದಲ್ಲಿ ತ್ಯಾಗಿ, ಅರ್ಜುನ್ ಹಾಗೂ ಉದ್ಧವ್ ರಾಥೋಡ್ ಜೋಡಿ ಸ್ವರ್ಣಕ್ಕೆ ಕೊರಳೊಡ್ಡಿತು.

ಅನುಷ್ಕಾಗೆ ಎರಡು ಚಿನ್ನ



ಕರ್ನಾಟಕದ ಉದಯೋನ್ಮುಖ ಶೂಟರ್ ಅನುಷ್ಕಾ ಎಚ್.ಟಿ. ಅವರು ಜೂನಿಯರ್ ಮಹಿಳೆಯರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ವೈಯಕ್ತಿಕ ಸ್ಪರ್ಧೆಯಲ್ಲಿ ಸ್ವರ್ಣಕ್ಕೆ ಕೊರಳೊಡ್ಡಿದ್ದರು. ತಂಡ ವಿಭಾಗದಲ್ಲಿ ಪ್ರಾಚಿ ಗಾಯಕವಾಡ್ ಹಾಗೂ ಮಹಿತ್ ಸಂಧು ಜೊತೆಗೆ ಚಿನ್ನದ ಪದಕವನ್ನು ಡಬಲ್ ಮಾಡಿಕೊಂಡರು.

18 ವರ್ಷ ವಯಸ್ಸಿನ ಅನುಷ್ಕಾ, ವೈಯಕ್ತಿಕ ವಿಭಾಗದ ಫೈನಲ್‌ನಲ್ಲಿ ಅಮೋಘ 460.7 ಪಾಯಿಂಟ್ಸ್ ಗಳಿಸಿದರು. ಕೊರಿಯಾದ ಶೂಟರ್‌ಗಳಾದ ಒ ಸೆಹೀ (455.7) ಹಾಗೂ ಸಿಮ್ ಯಿಯೊಜಿನ್ (443.9) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಜಯಿಸಿದರು. ಮಹಿತ್ 5ನೇ ಸ್ಥಾನ ಹಾಗೂ ಪ್ರಾಚಿ 6ನೇ ಸ್ಥಾನ ಪಡೆದರು.


ತಂಡ ವಿಭಾಗದಲ್ಲಿ ಈ ಮೂವರು ಒಟ್ಟು 1,758 ಅಂಕಗಳೊಂದಿಗೆ ಚಾಂಪಿಯನ್ ಆದರು. ಕೊರಿಯಾ (1740) ಬೆಳ್ಳಿ ಗೆದ್ದರೆ, ಆತಿಥೇಯ ಕಜಾಕಸ್ತಾನ (1706) ಕಂಚಿಗೆ ತೃಪ್ತಿಪಟ್ಟಿತು.

ಇಂದೋರ್‌ನಲ್ಲಿ ವಿಶ್ವಕಪ್ ಟೂರ್

ಇಂದೋರ್ (ಪಿಟಿಐ): ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಟ್ರೋಫಿಯ ಪ್ರದರ್ಶನ ಪ್ರವಾಸವು ಮಧ್ಯಪ್ರದೇಶದ ಇಂದೋರ್ ತಲುಪಿತು.

ನಗರದ ಐತಿಹಾಸಿಕ ಸ್ಥಳಗಳಾದ ರಾಜವಾಡಾ ಅರಮನೆ, ಗಾಂಧಿ ಹಾಲ್, ಸೆಂಟ್ರಲ್ ಮ್ಯೂಸಿಯಂ, ಸಿರಪುರ್ ಲೇಕ್ ಮತ್ತು ಪಿತ್ರಾ ಪರ್ವತದಲ್ಲಿ ಟ್ರೋಫಿಯನ್ನು ಪ್ರದರ್ಶಿಸಲಾಯಿತು.

ಇಂದೋರ್‌ನಲ್ಲಿ ವಿಶ್ವಕಪ್ ಟೂರ್ನಿಯ ಐದು ಪಂದ್ಯಗಳು ಆಯೋಜನೆಗೊಳ್ಳಲಿವೆ. ಟ್ರೋಫಿ ಪ್ರವಾಸವನ್ನು ಈ ನಗರದಲ್ಲಿ ಐದು ದಿನಗಳ ಕಾಲ ಅಯೋಜಿಸಲಾಯಿತು. ಕೆಲವು ಶಾಲೆಗಳಲ್ಲಿಯೂ ಈ ಟ್ರೋಫಿಯನ್ನು ಪ್ರದರ್ಶಿಸಲಾಯಿತು. ವಿದ್ಯಾರ್ಥಿಗಳು ಟ್ರೋಫಿಯನ್ನು ಗೌರವ ರಕ್ಷೆ ನೀಡಿ ಬರ ಮಾಡಿಕೊಂಡರು. ಕ್ರಿಕೆಟ್ ವಿಷಯಕ್ಕೆ ಸಂಬಂಧಿಸಿದ ಗೇಮ್ಸ್ ಮತ್ತು ಕ್ವಿಜ್‌ಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದರು. ಅವರಿಗೆ ಐಸಿಸಿಯ ಪೋಷಾಕು ಮತ್ತು ಕಾಣಿಕೆಗಳನ್ನು ನೀಡಲಾಯಿತು.



ಭಾರತೀಯ ನೌಕಾಪಡೆಯ ಉದಯಗಿರಿ ಮತ್ತು ಹಿಮಗಿರಿ ಹಡಗುಗಳು ಕಾರ್ಯಾರಂಭ ಮಾಡಿವೆ.

ಮಹಾರಾಜ ಟ್ರೋಫಿ: ಅಜೇಯ 99 ರನ್ ಗಳಿಸಿದ ದೇವದತ್ತ ಪಡಿಕ್ಕಲ್

ಪ್ರಶಸ್ತಿ ಸನಿಹಕ್ಕೆ ಹುಬ್ಬಳ್ಳಿ ಟೈಗರ್ಸ್

• ಆರ್.ಜಿತೇಂದ್ರ

ಮೈಸೂರು: ಆಗಾಗ್ಗೆ ಸುರಿದ ಸೋನೆ ಮಳೆಯ ನಡುವೆಯೂ ಮಂಗಳೂರು ಡ್ರ್ಯಾಗನ್ಸ್ ಬೌಲರ್‌ಗಳ ಬೆವರಿಳಿಸಿದ ನಾಯಕ ದೇವದತ್ತ ಪಡಿಕ್ಕಲ್ (ಔಟಾಗದೇ 99, 64 ಎ, 4X10, 6X5) ಹುಬ್ಬಳ್ಳಿ ಟೈಗರ್ಸ್ ತಂಡವನ್ನು ಫೈನಲ್ ತಲುಪಿಸಿದರು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 'ಮಹಾರಾಜ ಟ್ರೋಫಿ' ಟ್ವೆಂಟಿ20 ಟೂರ್ನಿಯ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಹುಬ್ಬಳ್ಳಿ 110 ರನ್ ಅಂತರದಿಂದ ಏಕಪಕ್ಷೀಯ ಗೆಲುವು ದಾಖಲಿಸಿತು. 2023ರಲ್ಲಿ ತಂಡವು ಮೊದಲ ಬಾರಿಗೆ 'ಮಹಾರಾಜ ಟ್ರೋಫಿ' ಎತ್ತಿ ಹಿಡಿದಿತ್ತು. ಇದೀಗ ಎರಡನೇ ಪ್ರಶಸ್ತಿಗೆ ಇನ್ನೊಂದು ಹೆಜ್ಜೆ ಬಾಕಿ ಇದೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಪಡಿಕ್ಕಲ್ ತಮ್ಮ ನಿರ್ಧಾರ ಸಮರ್ಥಿಸಿಕೊಳ್ಳುವಂತೆ ಅಬ್ಬರಿಸಿದರು. ಮೊದಲ ವಿಕೆಟ್‌ಗೆ ಮೊಹಮ್ಮದ್ ತಾಹಾ (37) ಜೊತೆಗೂಡಿ 81 ರನ್ ಕಲೆಹಾಕಿದರು. ತಾಹಾ, ರೋನಿತ್ ಮೋರೆ ಎಸೆತದಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ನಂತರದಲ್ಲಿ ಪಡಿಕ್ಕಲ್‌ಗೆ ಜೊತೆಯಾದ ಅಭಿನವ್ ಮನೋಹರ್ (50 ರನ್, 23ಎ, 4X5, 6X3) ತಂಡದ ರನ್ ವೇಗ ಹೆಚ್ಚಿಸಿದರು. ಈ ಜೋಡಿಯು ಕೇವಲ 48 ಎಸೆತದಲ್ಲಿ 105 ರನ್ ಬಾರಿಸಿತು.

13ನೇ ಓವರ್ ಅಂತ್ಯಕ್ಕೆ 100 ರನ್ ಗಡಿ ದಾಟಿದ ಹುಬ್ಬಳ್ಳಿ, ಕಡೆಯ 7 ಓವರ್‌ಗಳಲ್ಲಿ 110 ರನ್‌ಗಳ ಹೊಳೆ ಹರಿಸಿತು. ಪಡಿಕ್ಕಲ್ ಅವರು ಕೊನೆ ಓವರ್‌ನಲ್ಲಿ ಎರಡು ಸಿಂಗಲ್ಸ್ ಮಾತ್ರ ತೆಗೆದುಕೊಂಡು ಶತಕ ತಪ್ಪಿಸಿಕೊಂಡರು.

ಅಲ್ಪಮೊತ್ತಕ್ಕೆ ಕುಸಿತ: ದೊಡ್ಡ ಮೊತ್ತದ ಬೆನ್ನತ್ತಿದ ಮಂಗಳೂರು ಆರಂಭದಿಂದಲೇ ಪರದಾಡಿತು. ಇಂಪ್ಯಾಕ್ಟ್ ಆಟಗಾರನಾಗಿ ಇನ್ನಿಂಗ್ಸ್ ಆರಂಭಿಸಿದ ಬಿ.ಆರ್. ಶರತ್ (1) ಬಹುಬೇಗನೆ ವಿಕೆಟ್ ಒಪ್ಪಿಸಿದರು. ತಿಪ್ಪಾರೆಡ್ಡಿ (16), ಕೆ.ವಿ. ಅನೀಶ್ (28) ಹಾಗೂ ಆದರ್ಶ್ ಪ್ರಜ್ವಲ್ (17) ಹೊರತುಪಡಿಸಿ ಉಳಿದವರು ಒಂದಂಕಿ ಸ್ಕೋರ್ ದಾಟಲಿಲ್ಲ.



ಹುಬ್ಬಳ್ಳಿ ಟೈಗರ್ಸ್ ತಂಡದ ನಾಯಕ ದೇವದತ್ತ ಪಡಿಕ್ಕಲ್ ಚಿತ್ರ: ಅನೂಪ್ ರಾಘ ಟಿ.

ಹುಬ್ಬಳ್ಳಿ ಪರ ಆಫ್ ಸ್ಪಿನ್ನರ್ ರಿತೇಶ್ ಭಟ್ಕಳ್ 3 ವಿಕೆಟ್ ಮೂಲಕ ಎದುರಾಳಿಗಳನ್ನು ಕಟ್ಟಿಹಾಕಿದರು. ಫೀಲ್ಡಿಂಗ್‌ನಲ್ಲೂ ಮಿಂಚಿದ ಪಡಿಕ್ಕಲ್ ನಾಲ್ಕು ಕ್ಯಾಚ್ ಹಿಡಿದರು. ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಿರುವ ಪಡಿಕ್ಕಲ್ 439 ರನ್ ಮೂಲಕ ಅಗ್ರ ಸ್ಕೋರರ್ ಆಗಿದ್ದಾರೆ. ಮಂಗಳೂರು ವೇಗಿ ಕ್ರಾಂತಿಕುಮಾರ್ 25 ವಿಕೆಟ್ ಮೂಲಕ ಬೌಲರ್‌ಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 2 ವಿಕೆಟ್‌ಗೆ 210(ದೇವದತ್ತ ಪಡಿಕ್ಕಲ್ ಔಟಾಗದೇ 99, ಅಭಿನವ್ ಮನೋಹರ್ 50, ಮೊಹಮ್ಮದ್ ತಾಹಾ 37. ರೋನಿತ್ ಮೋರೆ 48ಕ್ಕೆ 1, ಕ್ರಾಂತಿಕುಮಾರ್ 49ಕ್ಕೆ1). ಮಂಗಳೂರು ಡ್ರ್ಯಾಗನ್ಸ್: 16.1 ಓವರ್‌ಗಳಲ್ಲಿ 100 (ರಿತೇಶ್ ಭಟ್ಕಳ್ 20ಕ್ಕೆ 3, ಕೆ.ಸಿ. ಕಾರಿಯಪ್ಪ 14ಕ್ಕೆ 2, ಯಶ್‌ರಾಜ್ ಪೂಂಜ 30ಕ್ಕೆ2). ಪಂದ್ಯದ ಆಟಗಾರ: ದೇವದತ್ತ ಪಡಿಕ್ಕಲ್

ಬ್ಲಾಸ್ಟರ್ಸ್‌ಗೆ ಗೆಲುವು

ಮೈಸೂರು: ಎಲಿಮಿನೇಟರ್ ಪಂದ್ಯದಲ್ಲಿ ಗುಲ್ಬರ್ಗ ಮಿಸ್ಟಿಕ್ಸ್ ಅನ್ನು ಎಂಟು ವಿಕೆಟ್‌ಗಳಿಂದ ಮಣಿಸಿದ ಬೆಂಗಳೂರು ಬ್ಲಾಸ್ಟರ್ಸ್ ಕ್ವಾಲಿಫೈಯರ್–2 ಹಂತಕ್ಕೆ ಲಗ್ಗೆ ಇಟ್ಟಿತು.

ಬುಧವಾರ ನಡೆಯಲಿರುವ ಕ್ವಾಲಿಫೈಯರ್–2 ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಮಂಗಳೂರು ಡ್ರ್ಯಾಗನ್ಸ್ ತಂಡಗಳು ಮುಖಾಮುಖಿ ಆಗಲಿವೆ. ಗೆದ್ದ ತಂಡವು ಗುರುವಾರ ರಾತ್ರಿ ಫೈನಲ್‌ನಲ್ಲಿ ಹುಬ್ಬಳ್ಳಿ ಟೈಗರ್ಸ್ ಎದುರು ಆಡಲಿದೆ. ಎಲಿಮಿನೇಟರ್ ಪಂದ್ಯದಲ್ಲಿ ಗುಲ್ಬರ್ಗ ನೀಡಿದ 122 ರನ್‌ಗಳ ಸಾಧಾರಣ ಗುರಿಯನ್ನು ಬೆಂಗಳೂರು ಇನ್ನೂ 7.3 ಓವರ್ ಬಾಕಿ ಇರುವಂತೆಯೇ ಮುಗಿಸಿತು. ಸೂರಜ್ ಅಹುಜಾ (44) ಹಾಗೂ ನಾಯಕ ಮಯಾಂಕ್ ಅಗರವಾಲ್ (28) ಅಜೇಯರಾಗಿ ಉಳಿದರು.

ಸಂಕ್ಷಿಪ್ತ ಸ್ಕೋರ್: ಗುಲ್ಬರ್ಗ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 122 (ಲವೀಶ್ ಕೌಶಲ್ ಔಟಾಗದೇ 35, ಆರ್. ಸ್ಮರಣ್ 21, ಲವನೀತ್ ಸಿಸೋಡಿಯಾ 15, ವಿದ್ಯಾಧರ ಪಾಟೀಲ 30ಕ್ಕೆ 2, ಶುಭಾಂಗ್ ಹೆಗಡೆ 13ಕ್ಕೆ 1, ಮೊಹ್ಸಿನ್ ಖಾನ್ 15ಕ್ಕೆ 1). **ಬೆಂಗಳೂರು ಬ್ಲಾಸ್ಟರ್ಸ್:** 12.3 ಓವರ್‌ಗಳಲ್ಲಿ 2 ವಿಕೆಟ್‌ಗೆ 126 (ಸೂರಜ್ ಅಹುಜಾ ಔಟಾಗದೇ 44, ಎಲ್.ಆರ್. ಚೇತನ್ 40, ಮಯಾಂಕ್ ಅಗರವಾಲ್ ಔಟಾಗದೇ 28.ಪೃಥ್ವಿರಾಜ್ 19ಕ್ಕೆ 1)

ಚಿಟಿಕೆ ಸುದ್ದಿ

ಹಾಕಿ: ಏಷ್ಯಾ ಕಪ್ ಪಂದ್ಯಗಳಿಗೆ ಪ್ರವೇಶ ಉಚಿತ

ರಾಜಗೀರ್ (ಪಿಟಿಐ): ಇದೇ ಶುಕ್ರವಾರ (ಆಗಸ್ಟ್ 29) ಆರಂಭಗೊಳ್ಳಲಿರುವ ಏಷ್ಯಾ ಕಪ್ ಹಾಕಿ ಟೂರ್ನಿಯ ಎಲ್ಲ ಪಂದ್ಯಗಳಿಗೂ ಪ್ರೇಕ್ಷಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ.

ಸಾರ್ವಜನಿಕರು www.ticketgenie.in ವೆಬ್‌ಸೈಟ್ ಅಥವಾ ಹಾಕಿ ಇಂಡಿಯಾ ಮೊಬೈಲ್ ಆ್ಯಪ್ ಮುಖಾಂತರ ಉಚಿತ ಪಾಸ್‌ಗೆ ನೋಂದಣಿ ಮಾಡಿಕೊಳ್ಳಬಹುದು ಎಂದು 'ಹಾಕಿ ಇಂಡಿಯಾ' ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಆತಿಥೇಯ ಭಾರತ, ಜಪಾನ್, ಚೀನಾ, ಕಜಾಕಸ್ತಾನ, ಮಲೇಷ್ಯಾ, ಕೊರಿಯಾ, ಬಾಂಗ್ಲಾದೇಶ ಹಾಗೂ ಚೀನಾ ತಂಡಗಳು ಟೂರ್ನಿಯಲ್ಲಿ ಭಾಗವಹಿಸಲಿವೆ. ಭಾರತ ತಂಡವು ಎ ಗುಂಪಿನಲ್ಲಿದ್ದು, ಶುಕ್ರವಾರ ಚೀನಾ ಎದುರು ಆಡುವ ಮೂಲಕ ಅಭಿಯಾನ ಆರಂಭಿಸಲಿದೆ.

ಬೆಂಗಾಲ್‌ಗೆ ದೇವಾಂಕ್ ನಾಯಕ

ಕೋಲ್ಕತ್ತ (ಪಿಟಿಐ): ತಾರಾ ರೇಡರ್ ದೇವಾಂಕ್ ದಲಾಲ್ ಅವರು ಪ್ರೊ ಕಬಡ್ಡಿ ಲೀಗ್‌ನ (ಪಿಕೆಎಲ್) 12ನೇ ಆವೃತ್ತಿಯಲ್ಲಿ ಬೆಂಗಾಲ್ ವಾರಿಯರ್ಸ್ ತಂಡದ ನಾಯಕರಾಗಿ ನೇಮಕಗೊಂಡಿದ್ದಾರೆ.



ದೇವಾಂಕ್ ದಲಾಲ್

ಅನುಭವಿ ಡಿಫೆಂಡರ್ ನಿತೇಶ್ ಕುಮಾರ್ ಅವರನ್ನು ಉಪನಾಯಕರನ್ನಾಗಿ ನೇಮಕ ಮಾಡಿರುವುದಾಗಿ ಫ್ರಾಂಚೈಸಿಯು ಮಂಗಳವಾರ ತಿಳಿಸಿದೆ.

ಬೆಂಗಾಲ್ ವಾರಿಯರ್ಸ್ ತಂಡವು 25 ವರ್ಷ ವಯಸ್ಸಿನ ದಲಾಲ್ ಅವರಿಗೆ ₹2.205 ಕೋಟಿ ನೀಡಿ ಖರೀದಿಸಿತ್ತು. ಇದು ಪಿಕೆಎಲ್‌ನಲ್ಲಿ ಭಾರತೀಯ ಆಟಗಾರ ಪಡೆದ ಅತಿ ಹೆಚ್ಚಿನ ಸಂಭಾವನೆಯಾಗಿದೆ.

ಎರಡು ವರ್ಷಗಳ ಹಿಂದೆ ದೇವಾಂಕ್ ಅವರ ತಲೆಗೆ ಗಂಭೀರ ಪೆಟ್ಟು ಬಿದ್ದಿತ್ತು. ಆದರೂ, ಕಳೆದ ಆವೃತ್ತಿಯಲ್ಲಿ ಅವರು ದಾಖಲೆಯ 301 ರೇಡ್ ಪಾಯಿಂಟ್ಸ್‌ಗಳನ್ನು ಪಡೆದು, ಭರ್ಜರಿ ಪುನರಾಗಮನ ಮಾಡಿದ್ದರು.

ತ್ರಿಪುರ ತಂಡಕ್ಕೆ ಹನುಮವಿಹಾರಿ

ನವದೆಹಲಿ (ಪಿಟಿಐ): ಆಂಧ್ರಪ್ರದೇಶ ಕ್ರಿಕೆಟ್ ತಂಡದ ಬ್ಯಾಟರ್ ಹನುಮವಿಹಾರಿ ಅವರು ಮುಂಬರುವ ದೇಶಿ ಕ್ರಿಕೆಟ್ ಋತುವಿನಲ್ಲಿ ತ್ರಿಪುರ ತಂಡದಲ್ಲಿ ಆಡಲಿದ್ದಾರೆ.

2021ರಲ್ಲಿ ಆಸ್ಟ್ರೇಲಿಯಾದ ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಅವರ ವಿರೋಚಿತ ಬ್ಯಾಟಿಂಗ್ ಸ್ಮರಣಾರ್ಹವಾಗಿದೆ. 2019ರಲ್ಲಿ ಅವರು ವೆಸ್ಟ್ ಇಂಡೀಸ್ ಎದುರಿನ ಸರಣಿಯಲ್ಲಿ 289 ರನ್‌ಗಳನ್ನು ಗಳಿಸಿದ್ದರು.

ಭಾರತದ ಟೆಸ್ಟ್ ಕ್ರಿಕೆಟ್ ಬ್ಯಾಟಿಂಗ್ ಪರಿಣತರಲ್ಲಿ ಹನುಮ ಕೂಡ ಒಬ್ಬರು. 2022ರಲ್ಲಿ ಕೊನೆಯ ಬಾರಿ ಅವರು ಭಾರತ ತಂಡದಲ್ಲಿ ಆಡಿದ್ದರು.

'ಮೂರು ಮಾದರಿಗಳಲ್ಲಿಯೂ ಆಡಬೇಕೆಂಬ ಕಾರಣಕ್ಕೆ ತ್ರಿಪುರ ತಂಡ ಸೇರುತ್ತಿರುವೆ. ಆಂಧ್ರ ತಂಡದಲ್ಲಿ ಇದು ಸಾಧ್ಯವಿಲ್ಲ' ಎಂದು 31 ವರ್ಷದ ಹನುಮವಿಹಾರಿ ಹೇಳಿದ್ದಾರೆ.

ಎರಡನೇ ಸುತ್ತಿಗೆ ಅಲ್ಕರಾಜ್, ಸಿನ್ನರ್

ಅಮೆರಿಕ ಓಪನ್ ಟೆನಿಸ್: ವೀನಸ್, ಮ್ಯಾಡಿಸನ್‌ಗೆ ನಿರಾಸೆ

ನ್ಯೂಯಾರ್ಕ್ (ಎಎಫ್‌ಪಿ): ಹೊಸ ಕೇಶವಿನ್ಯಾಸದೊಂದಿಗೆ ಕಣಕ್ಕಿಳಿದ ಸ್ಪೇನ್ ತಾರೆ ಕಾರ್ಲೋಸ್ ಅಲ್ಕರಾಜ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಮಂಗಳವಾರ ಶುಭಾರಂಭ ಮಾಡಿದರು. ಆದರೆ, ಆತಿಥೇಯ ದೇಶದ ಅನುಭವಿ ಆಟಗಾರ್ತಿಯರಾದ ವೀನಸ್ ವಿಲಿಯಮ್ಸ್ ಮತ್ತು ಮ್ಯಾಡಿಸನ್ ಕೀಸ್ ಮೊದಲ ಸುತ್ತು ದಾಟಲು ವಿಫಲರಾದರು.

ಎರಡನೇ ಶ್ರೇಯಾಂಕದ ಅಲ್ಕರಾಜ್ ಅವರು ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ 6-4, 7-5, 6-4ರಿಂದ ಅತಿಥೇಯ ದೇಶದ ರೀಲಿ ಒಪೆಲ್ಕಾ ಅವರನ್ನು ಹಿಮ್ಮೆಟ್ಟಿಸಿ ಅಭಿಯಾನ ಆರಂಭಿಸಿದರು. ವಿಶ್ವದ 66ನೇ ಕ್ರಮಾಂಕದ ಅಜಾನುಬಾಹು ಆಟಗಾರನನ್ನು ಮಣಿಸಲು ಅಲ್ಕರಾಜ್ 2 ಗಂಟೆ 5 ನಿಮಿಷ ತೆಗೆದುಕೊಂಡರು. 27 ವರ್ಷದ ಒಪೆಲ್ಕಾ 6 ಅಡಿ 11 ಇಂಚು ಎತ್ತರವಿದ್ದಾರೆ.

22 ವರ್ಷದ ಅಲ್ಕರಾಜ್ ಈತನಕ ಗೆದ್ದಿರುವ ಐದು ಗ್ರ್ಯಾನ್‌ಸ್ಲಾಮ್ ಕಿರೀಟಗಳ ಪೈಕಿ ಮೊದಲ ಪ್ರಶಸ್ತಿಯನ್ನು 2022ರಲ್ಲಿ ಇಲ್ಲೇ ಮುಡಿಗೇರಿಸಿಕೊಂಡಿದ್ದರು. ಮೂರು ವರ್ಷಗಳ ಬಳಿಕ ಇಲ್ಲಿ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಅಲ್ಕರಾಜ್ ಅವರಿಗೆ ಎರಡನೇ ಸುತ್ತಿನಲ್ಲಿ ಇಟಲಿಯ ಮಟ್ಟಿಯಾ ಬೆಲ್ಲುಸಿ ಎದುರಿಸಲಿದ್ದಾರೆ.

ಸಿನ್ನರ್ ಮುನ್ನಡೆ: ಪ್ರಶಸ್ತಿ ಉಳಿಸಿಕೊಳ್ಳುವ ಪ್ರಯತ್ನದಲ್ಲಿರುವ ಇಟಲಿಯ ಯಾನಿಕ್ ಸಿನ್ನರ್ ಶುಭಾರಂಭ ಮಾಡಿದರು. ನಾಲ್ಕು ಗ್ರ್ಯಾನ್‌ಸ್ಲಾಮ್ ಕಿರೀಟ ಗೆದ್ದಿರುವ ಅಗ್ರ ಶ್ರೇಯಾಂಕದ ಸಿನ್ನರ್ 6–1, 6–1, 6–2ರಿಂದ ಕಜಾಕಸ್ತಾನದ ವಿಟ್ ಕೊಪ್ರಿವಾ ಅವರನ್ನು ನಿರಾಯಾಸವಾಗಿ ಸದೆಬಡಿದರು.

21 ವರ್ಷದ ಕ್ವಾಲಿಫೈಯರ್ ಆಟಗಾರ ಕೋಲ್ಮನ್ ವಾಂಗ್ ಎರಡನೇ ಸುತ್ತು ಪ್ರವೇಶಿಸಿದರು. ವಾಂಗ್ 6-4, 7-5, 7-6 (7/4) ರಿಂದ ಅಮೆರಿಕದ ಅಲೆಕ್ಸಾಂಡರ್ ಕೊವಾಸೆವಿಕ್ ಅವರನ್ನು ಮಣಿಸಿದರು. ಈ ಮೂಲಕ ವಾಂಗ್ ಅವರು ಓಪನ್ ಯುಗದಲ್ಲಿ ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪಂದ್ಯ ಗೆದ್ದ ಹಾಂಗ್‌ಕಾಂಗ್‌ನ ಮೊದಲ ಆಟಗಾರ ಎಂಬ ಹಿರಿಮೆಗೆ ಪಾತ್ರವಾದರು.

ವೀನಸ್‌ಗೆ ನಿರಾಸೆ: ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ 45 ವರ್ಷದ ವೀನಸ್ ಮೂರು ಸೆಟ್‌ಗಳ ಹೋರಾಟದಲ್ಲಿ ಸೋಲೊಪ್ಪಿಕೊಂಡರು. ಮಹಿಳೆಯರ ಸಿಂಗಲ್ಸ್‌ನಲ್ಲಿ 11ನೇ ಶ್ರೇಯಾಂಕದ ಕರೋಲಿನಾ ಮುಚೋವಾ (ಝೆಕ್ ರಿಪಬ್ಲಿಕ್) 6-3, 2-6, 6-1ರಿಂದ ವೀನಸ್ ಅವರನ್ನು ಮಣಿಸಿ, ಎರಡನೇ ಸುತ್ತು ಪ್ರವೇಶಿಸಿದರು.

ಏಳು ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿ ಗೆದ್ದಿರುವ ಅಮೆರಿಕದ ವೀನಸ್ ಅವರು ಅನಾರೋಗ್ಯದ ಕಾರಣಕ್ಕೆ 16 ತಿಂಗಳುಗಳಿಂದ ಟೆನಿಸ್ ಅಂಕಣದಿಂದ ದೂರವಿದ್ದರು. ಹೋದ ತಿಂಗಳು ಡಬ್ಲ್ಯುಟಿಎನಲ್ಲಿ ಆಡಿದ್ದರು.

ಆಸ್ಟ್ರೇಲಿಯಾ ಓಪನ್ ಹಾಲಿ ಚಾಂಪಿಯನ್, ಆರನೇ ಶ್ರೇಯಾಂಕದ ಕೀಸ್ ಅವರಿಗೂ ಆಘಾತಕಾರಿ ಸೋಲು ಎದುರಾಯಿತು. ಮೆಕ್ಸಿಕೊದ ರೆನಾಟಾ ಜರಾಜುವಾ (ಮೆಕ್ಸಿಕೊ) 6-7 (10/12), 7-6 (7/3), 7-5ರಿಂದ ಗೆದ್ದರು.

ವಿಂಬಲ್ಡನ್ ಹಾಲಿ ಚಾಂಪಿಯನ್, ಪೋಲೆಂಡ್‌ನ ಇಗಾ ಶ್ವಾಂಟೆಕ್ 6-1, 6-2ರಿಂದ ಎಮಿಲಿಯಾನ ಅರಂಗೊ (ಕೊಲಂಬಿಯಾ) ಅವರನ್ನು ಮಣಿಸಿದರು.



ಗೆಲುವಿನ ಸಂಭ್ರಮದಲ್ಲಿ ಕಾರ್ಲೋಸ್ ಅಲ್ಕರಾಜ್ ಎಎಫ್‌ಪಿ ಚಿತ್ರಗಳು

ಟೆನಿಸ್‌ಗೆ ಪೆಟ್ರಾ ಕ್ವಿಟೊವಾ ವಿದಾಯ



ಎರಡು ಬಾರಿಯ ವಿಂಬಲ್ಡನ್ ಚಾಂಪಿಯನ್ ಪೆಟ್ರಾ ಕ್ವಿಟೊವಾ ಮೊದಲ ಸುತ್ತಿನಲ್ಲೇ ಸೋತು ಅಭಿಯಾನ ಮುಗಿಸಿದರು. ಫ್ರಾನ್ಸ್‌ನ ಡಯೇನ್ ಪ್ಯಾರಿ 6-1, 6-0ರಿಂದ ಝೆಕ್ ಗಣರಾಜ್ಯದ ಕ್ವಿಟೊವಾ ಅವರನ್ನು ಸೋಲಿಸಿದರು. 35 ವರ್ಷದ ಅವರು ಈ ಟೂರ್ನಿಯೊಂದಿಗೆ ವೃತ್ತಿಜೀವನಕ್ಕೆ ವಿದಾಯ ಹೇಳುವುದಾಗಿ ಈ ಮೊದಲೇ ಪ್ರಕಟಿಸಿದ್ದರು. ಪಂದ್ಯದ ನಂತರ ಅಭಿಮಾನಿಗಳನ್ನು ಉದ್ದೇಶಿಸಿ ಮಾತನಾಡುವಾಗ ಕಣ್ಣೀರು ಹಾಕಿದರು. ಅವರು ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ 2011 ಮತ್ತು 2014ರಲ್ಲಿ ಪ್ರಶಸ್ತಿ ಗೆದ್ದಿದ್ದರು.

ಗೋವಾದಲ್ಲಿ ಫಿಡೆ ಚೆಸ್ ವಿಶ್ವಕಪ್

ಮುಂಬೈ (ಪಿಟಿಐ): ಫಿಡೆ ವಿಶ್ವಕಪ್ 2025 ಚೆಸ್ ಟೂರ್ನಿಯು ಗೋವಾದಲ್ಲಿ ಅಕ್ಟೋಬರ್ 31ರಿಂದ ನವೆಂಬರ್ 27ರವರೆಗೆ ನಡೆಯಲಿದೆ. ಈ ಟೂರ್ನಿ ಮೂಲಕ 2026ರ ಕ್ಯಾಂಡಿಡೇಟ್ಸ್‌ಗೆ ಮೂವರು ಅರ್ಹತೆ ಪಡೆಯಲಿದ್ದಾರೆ.

ಒಟ್ಟು ₹17.5 ಕೋಟಿ ಬಹುಮಾನ ಮೊತ್ತ ಒಳಗೊಂಡಿರುವ ಟೂರ್ನಿಯಲ್ಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್, ಆರ್. ಪ್ರಜ್ಞಾನಂದ, ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಸೇರಿ 206 ಆಟಗಾರರು ಕಣಕ್ಕೆ ಇಳಿಯಲಿದ್ದಾರೆ.

ಎಂಟು ಸುತ್ತುಗಳ ನಾಕೌಟ್ ಮಾದರಿಯಲ್ಲಿ ಟೂರ್ನಿ ನಡೆಯಲಿದೆ. ಪ್ರತೀ ಪಂದ್ಯವು ಎರಡು ಕ್ಲಾಸಿಕಲ್ ಪಂದ್ಯ ಹಾಗೂ ಅಗತ್ಯಬಿದ್ದರೆ ರ್‍ಯಾಪಿಡ್ ಮತ್ತು ಬ್ರಿಟ್ಜ್ ಟೈಬ್ರೇಕರ್ ಒಳಗೊಂಡಿದೆ.

ಆತಿಥೇಯ ಭಾರತದಿಂದ 21 ಆಟಗಾರರು ಸ್ಪರ್ಧೆಯಲ್ಲಿದ್ದಾರೆ. ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಅವರು ಜೂನ್ 2025ರ ಫಿಡೆ ರೇಟಿಂಗ್ ಪಟ್ಟಿಯ ಮೂಲಕ ಸ್ಥಾನ ಪಡೆದಿದ್ದಾರೆ. ಆದರೆ, ಅವರು ಕೆಲ ಸಮಯಗಳಿಂದ ಕ್ಲಾಸಿಕಲ್ ಚೆಸ್ ಆಡದಿರುವುದರಿಂದ ಅವರ ಸ್ಪರ್ಧೆ ಅನಿಶ್ಚಿತವಾಗಿದೆ.

ಸಿಂಕ್‌ಫೀಲ್ಡ್ ಕಪ್ ಗ್ರ್ಯಾಂಡ್ ಚೆಸ್ ಟೂರ್ನಿ

ಜಂಟಿ ಅಗ್ರಸ್ಥಾನದಲ್ಲಿ ಪ್ರಜ್ಞಾನಂದ

ಸೇಂಟ್ ಲೂಯಿಸ್ (ಅಮೆರಿಕ) (ಪಿಟಿಐ): ಅಜೇಯ ಓಟ ಮುಂದುವರಿಸಿರುವ ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಇಲ್ಲಿ ನಡೆಯುತ್ತಿರುವ ಸಿಂಕ್‌ಫೀಲ್ಡ್ ಕಪ್ ಗ್ರ್ಯಾಂಡ್ ಚೆಸ್ ಟೂರ್ ಏಳನೇ ಸುತ್ತಿನಲ್ಲಿ ಫ್ರಾನ್ಸ್‌ನ ಅಲಿರೇಜಾ ಫಿರೋಜ್ ಅವರನ್ನು ಮಣಿಸಿ ಜಂಟಿ ಅಗ್ರಸ್ಥಾನಕ್ಕೇರಿದರು.

ಚೆನ್ನೈನ 20 ವರ್ಷದ ಆಟಗಾರನಿಗೆ ಟೂರ್ನಿಯಲ್ಲಿ ಇದು ಎರಡನೇ ಗೆಲುವು. ಮೊದಲ ಸುತ್ತಿನಲ್ಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರಿಗೆ ಆಘಾತ ನೀಡಿದ್ದ ಪ್ರಜ್ಞಾನಂದ, ನಂತರ ಸತತ ಐದು ಸುತ್ತುಗಳಲ್ಲಿ ಡ್ರಾ ಸಾಧಿಸಿದ್ದರು. 4.5 ಅಂಕ ಗಳಿಸಿರುವ ಅವರು, ಅಮೆರಿಕದ ಫ್ಯಾಬಿಯಾನೊ ಕರುವಾನ (4.5) ಅವರೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಲಯಕ್ಕಾಗಿ ಪರದಾಡುತ್ತಿರುವ ಭಾರತದ ಗ್ರ್ಯಾಂಡ್‌ಮಾಸ್ಟರ್ ಗುಕೇಶ್ (3) ಅವರಿಗೆ ಮತ್ತೊಂದು ಆಘಾತ ಎದುರಾಯಿತು. ಏಳನೇ ಸುತ್ತಿನಲ್ಲಿ ಅವರು, ಅಮೆರಿಕದ ವೆಸ್ಲಿ ಸೊ ಅವರಿಗೆ ಮಣಿದರು. ಈ ಗೆಲುವಿನೊಂದಿಗೆ ವೆಸ್ಲಿ (4) ಅವರು ತಮ್ಮದೇ ದೇಶದ ಲೆವೋನ್ ಅರೋನಿಯನ್ (4) ಅವರೊಂದಿಗೆ ಜಂಟಿ ಮೂರನೇ ಸ್ಥಾನ ಹಂಚಿಕೊಂಡರು.

ಉಳಿದ ಪಂದ್ಯಗಳಲ್ಲಿ ಪೋಲೆಂಡ್‌ನ ಡುಡಾ ಯಾನ್‌- ಕ್ರಿಸ್ಟೋಫ್ (3.5) ಅವರು ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ (1.5) ವಿರುದ್ಧ ಗೆಲುವು ಸಾಧಿಸಿದರು. ಕರುವಾನ ಅವರು ಅರೋನಿಯನ್ ಜೊತೆ ಡ್ರಾ ಮಾಡಿಕೊಂಡರು. ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ (3.5) ಅವರು ಅಮೆರಿಕದ ಸಾಮುಯೆಲ್ ಸಾವಿಯಾನ್ (3.5) ಅವರೊಂದಿಗೆ ಅಂಕ ಹಂಚಿಕೊಂಡರು.



ಫ್ರಾನ್ಸ್‌ನ ಅಲಿರೇಜಾ ಫಿರೋಜ್ (ಎಡ) ಹಾಗೂ ಭಾರತದ ಆರ್. ಪ್ರಜ್ಞಾನಂದ

ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್: ಕೊಯೆಲ್ ದಾಖಲೆ

ಅಹಮದಾಬಾದ್ (ಪಿಟಿಐ): ಭಾರತದ ವೇಟ್‌ಲಿಫ್ಟರ್ ಕೊಯೆಲ್ ಬಾರ್ ಇಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್‌ನ ಮಹಿಳೆಯರ 53 ಕೆ.ಜಿ ವಿಭಾಗದ ಯೂತ್ ಮತ್ತು ಜೂನಿಯರ್ ವಿಭಾಗದಲ್ಲಿ ಡಬಲ್ ಪ್ರಶಸ್ತಿ ಗೆದ್ದುಕೊಂಡರು. ಮಾತ್ರವಲ್ಲದೆ, ಯೂತ್ ವಿಭಾಗದಲ್ಲಿ ಎರಡು ವಿಶ್ವದಾಖಲೆ ನಿರ್ಮಿಸಿದರು.

ಜೂನಿಯರ್ ಮತ್ತು ಯೂತ್ ವಿಭಾಗಗಳಲ್ಲಿ ಸ್ಪರ್ಧಿಸಿದ 17 ವರ್ಷದ ಕೊಯೆಲ್ ಒಟ್ಟು 192 ಕೆಜಿ (85 ಕೆ.ಜಿ + 107 ಕೆ.ಜಿ) ಭಾರ ಎತ್ತಿದರು. ಸ್ನ್ಯಾಚ್‌ನ ಮೊದಲ ಪ್ರಯತ್ನದಲ್ಲಿ 85 ಕೆ.ಜಿ ಭಾರ ಎತ್ತಿ ಯೂತ್ ವಿಶ್ವದಾಖಲೆ ಸಮಗೊಳಿಸಿದರು. ಕ್ಲೀನ್ ಮತ್ತು ಜರ್ಕ್‌ನ ಎರಡನೇ ಪ್ರಯತ್ನದಲ್ಲಿ ಅವರು 105 ಕೆಜಿಯ ದಾಖಲೆಯನ್ನು ಮುರಿದರು. ಒಟ್ಟು ತೂಕದಲ್ಲಿ 188 ಕೆ.ಜಿ ವಿಶ್ವ-ದಾಖಲೆಯನ್ನೂ ಮೀರಿ ನಿಂತರು.

ಸೀನಿಯರ್ ವಿಭಾಗದಲ್ಲಿ 185 ಕೆ.ಜಿ (81 ಕೆಜಿ + 104 ಕೆಜಿ) ಭಾರ ಎತ್ತಿದ ಸ್ನೇಹಾ ಸೊರೆನ್ ಬೆಳ್ಳಿ ಪದಕ ಜಯಿಸಿದರು. ನೈಜೀರಿಯಾದ ಒಮೊಲೋಲಾ ದಿದಿಹ್ 197 ಕೆಜಿ (90 ಕೆಜಿ + 107 ಕೆಜಿ) ಸಾಧನೆಯೊಂದಿಗೆ ಚಿನ್ನ ತಮ್ಮ-ದಾಗಿಸಿಕೊಂಡರು. ಪುರುಷರ 65 ಕೆಜಿ ವಿಭಾಗದಲ್ಲಿ ರಾಜಾ ಮುತ್ತುಪಾಂಡಿ ಅವರಿಗೆ ಒಂದು ಕೆಜಿ ಅಂತರದಲ್ಲಿ ಚಿನ್ನ ಕೈತಪ್ಪಿತು. ಅವರು 296 ಕೆಜಿ (128 + 168) ಭಾರ ಎತ್ತಿದರು. ಮಲೇಷ್ಯಾದ ಮುಹಮ್ಮದ್ ಅಜ್ನಿಲ್ ಬಿನ್ ಬಿದಿನ್ 297ಕೆಜಿ (125 + 172) ಪ್ರಶಸ್ತಿ ಗೆದ್ದರು.

ಒಮನ್ ತಂಡಕ್ಕೆ ಜತೀಂದರ್ ನಾಯಕ

ಮಸ್ಕಟ್ (ಪಿಟಿಐ): ಭಾರತೀಯ ಮೂಲದ ಜತೀಂದರ್ ಸಿಂಗ್ ಅವರು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಒಮನ್ ತಂಡವನ್ನು ಮುನ್ನಡೆಸಲಿದ್ದಾರೆ.

ಯುಎಇಯಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಒಮನ್ ತಂಡವು ಎ ಗುಂಪಿನಲ್ಲಿ ಆಡಲಿದೆ. ಈ ಗುಂಪಿನಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳೂ ಇವೆ. ಜತೀಂದರ್ ಸಿಂಗ್ ಬಳಗದಲ್ಲಿ ಒಟ್ಟು 17 ಆಟಗಾರರಿದ್ದಾರೆ.

ತಂಡ ಹೀಗಿದೆ: ಜತೀಂದರ್ ಸಿಂಗ್ (ನಾಯಕ), ಹಮದ್ ಮಿರ್ಜಾ (ವಿಕೆಟ್‌ಕೀಪರ್), ವಿನಾಯಕ ಶುಕ್ಲಾ (ವಿಕೆಟ್‌ಕೀಪರ್), ಸೂಫಿಯಾನ್ ಯೂಸುಫ್, ಆಶಿಶ್ ಒಡೆದೆರಾ, ಅಮೀರ್ ಕಲೀಮ್, ಮೊಹಮ್ಮದ್ ನದೀಂ, ಸೂಫಿಯಾನ್ ಮೆಹಮೂದ್, ಆರ್ಯನ್ ಬಿಷ್ಟ್, ಕರಣ್ ಸೋನಾವಳೆ, ಝಿಕ್ರಿಯಾ ಇಸ್ಲಾಂ, ಹಸ್ನೈನ್ ಅಲಿ ಶಾ, ಫೈಸಲ್ ಶಾ, ಮೊಹಮ್ಮದ್ ಇಮ್ರಾನ್, ನದೀಂ ಖಾನ್, ಶಕೀಲ್ ಅಹಮದ್, ಸಮಯ್ ಶ್ರೀವಾಸ್ತವ.

ಪುಲ್ವಾಮಾದಲ್ಲಿ ಸಂಭ್ರಮ ತಂದ ಕ್ರಿಕೆಟ್ ಹಬ್ಬ

ಪುಲ್ವಾಮಾ, ಜಮ್ಮು–ಕಾಶ್ಮೀರ (ಪಿಟಿಐ): ದಕ್ಷಿಣ ಕಾಶ್ಮೀರದ ಪುಲ್ವಾಮಾ ಎಂದಾಕ್ಷಣ ಭಯೋತ್ಪಾದಕರ ದಾಳಿಯ ಹತ್ತಾರು ಪ್ರಕರಣಗಳು ನೆನಪಿಗೆ ಬರುತ್ತವೆ. ಆದರೆ ಸೋಮವಾರ ರಾತ್ರಿ ಇದೇ ಪುಲ್ವಾಮಾದಲ್ಲಿ ನೂರಾರು ಜನರು ಸೇರಿದ್ದರು. ಹೊನಲು ಬೆಳಕಿನ ಅಂಗಳದಲ್ಲಿ ಸಂಭ್ರಮಿಸಿದರು.

ಪುಲ್ವಾಮಾ ಸ್ಪೋರ್ಟ್ಸ್ ಕ್ಲಬ್ ಮೈದಾನದಲ್ಲಿ ಆರಂಭವಾದ ರಾಯಲ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯವು ಈ ಸಂಭ್ರಮಕ್ಕೆ ಕಾರಣವಾಯಿತು. ಈ ಟೂರ್ನಿಯಲ್ಲಿ ಒಟ್ಟು 12 ತಂಡಗಳು ಭಾಗವಹಿಸಿವೆ. ಮೊದಲ ಪಂದ್ಯದಲ್ಲಿ ರಾಯಲ್ ಗುಡ್‌ವಿಲ್ ಮತ್ತು ಸುಲ್ತಾನ್ ಸ್ಪ್ರಿಂಗ್ಸ್ ಬಾರಾಮುಲ್ಲಾ ತಂಡಗಳು ಮುಖಾಮುಖಿಯಾಗಿದ್ದವು.

'ಹೊಸ ಇನಿಂಗ್ಸ್‌ನ ಆರಂಭ ಇದು' ಎಂದು ಪುಲ್ವಾಮಾದ ಪಿಡಿಪಿ ಶಾಸಕ ವಹೀದ್ ಉರ್ ರೆಹಮಾನ್ ಬಣ್ಣಿಸಿದರು.

'ಕ್ರೀಡೆಯು ಭರವಸೆ ಮತ್ತು ಅವಕಾಶ ಬೆಸೆಯುವ ಸೇತುವೆ. ಇದು ಕೇವಲ ಪಂದ್ಯ ವಲ್ಲ. ಹಲವು ಆಕಾಂಕ್ಷೆಗಳ ಹಬ್ಬವಾಗಿದೆ' ಎಂದೂ ಅವರು ಹೇಳಿದರು.

'ಸ್ಥಳೀಯ ಪ್ರತಿಭೆಗಳಿಗೆ ಕ್ರೀಡೆಯತ್ತ ಆಕರ್ಷಿಸುವುದು ನಮ್ಮ ಮುಖ್ಯ ಗುರಿ. ಯುವಜನತೆಗೆ ಒಂದು ಉತ್ತಮ ವೇದಿಕೆ ನೀಡುವುದು ಈ ಟೂರ್ನಿಯ ಉದ್ದೇಶ' ಎಂದು ಆಯೋಜಕರು ಹೇಳಿದರು.

ಕೋಲ್ಕತ್ತ ರೇಸ್

ವಿನ್ಸೆಂಟ್ ವ್ಯಾನ್ ಗೋಗ್ ಗೆಲ್ಲುವ ನಿರೀಕ್ಷೆ

ಕೋಲ್ಕತ್ತ ಮಾನ್ಸೂನ್ ಸ್ಪ್ರಿಂಟ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಿನ್ಸೆಂಟ್ ವ್ಯಾನ್ ಗೋಗ್ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗುಡ್‌ವಿಲ್ 5, ವಿನೆನೊ 3, ಜಾಂಬೇಜಿ 2
2ನೇ ರೇಸ್: ಲೈವ್ ಇಟ್ ಲವ್ ಇಟ್ 1, ರೊಸಾಲಿಯಾ 3, ಜಾಲಿಯಾ 5
3ನೇ ರೇಸ್: ರೋಮನ್ ಸ್ಪಿರಿಟ್ 6, ಲಾ ಡಾಮಿನೇಟ್ 2, ಸ್ಟಾರ್ಮಿ ಓಷನ್ 1
4ನೇ ರೇಸ್: ವಿನ್ಸೆಂಟ್ ವ್ಯಾನ್ ಗೋಗ್ 3, ದುಬೈ ಪ್ರಿನ್ಸೆಸ್ 4, ಬ್ಲಾಕ್ ಈಗಲ್ 2
5ನೇ ರೇಸ್: ಗೋ ಫಾರ್ ದಿ ಮೂನ್ 3, ಮದ್ರಾಸ್ ಚೆಕ್ 9, ಇನ್ ಟು ದಿ ಸ್ಟಾರ್ಮ್ 7
6ನೇ ರೇಸ್: ಸ್ವಿಫ್ಟ್ ಲೇಡಿ 5, ಐ ಸ್ಮೆಲ್ ದಿ ಡೇಂಜರ್ 4, ರುದ್ರ 1

ಉತ್ತಮ ಬೆಟ್: ಗುಡ್‌ವಿಲ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

ಭಾರತದ ಸಿಂಧು, ಪ್ರಣಯ್ ಶುಭಾರಂಭ

ಪ್ಯಾರಿಸ್ (ಪಿಟಿಐ): ಭಾರತದ ಒಲಿಂಪಿಯನ್ ಪಿ.ವಿ. ಸಿಂಧು ಮತ್ತು ಎಚ್.ಎಸ್. ಪ್ರಣಯ್ ಅವರು ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಮಂಗಳವಾರ ನಡೆದ ಮಹಿಳೆಯರ ಸಿಂಗಲ್ಸ್ ಪಂದ್ಯದಲ್ಲಿ ವಿಶ್ವ ರ್‍ಯಾಂಕಿಂಗ್‌ನಲ್ಲಿ 15ನೇ ಸ್ಥಾನದಲ್ಲಿರುವ ಅನುಭವಿ ಸಿಂಧು ಅವರು 23–21, 21–6ರಿಂದ ಬಲ್ಗೇರಿಯಾದ 69ನೇ ರ್‍ಯಾಂಕ್ ಆಟಗಾರ್ತಿ ಕಲೊಯಾನಾ ನಲಬಂತೋವಾ ವಿರುದ್ಧ ಜಯಿಸಿದರು.

ಪಂದ್ಯದ ಮೊದಲ ಗೇಮ್‌ನಲ್ಲಿ ಭಾರತದ 30 ವರ್ಷ ವಯಸ್ಸಿನ ಸಿಂಧು ಪ್ರಯಾಸದಾಯಕ ಜಯ ಸಾಧಿಸಿದರು. ಅವರು ಆರಂಭದಲ್ಲಿ 0–4ರಿಂದ ಹಿನ್ನಡೆಯಲ್ಲಿದ್ದರು. ಅನಿಯಂತ್ರಿತ ತಪ್ಪುಗಳಿಂದಾಗಿ ಸಿಂಧು ತುಸು ದುರ್ಬಲವಾಗಿ ಕಂಡಿದ್ದರು. ಇದರ ಲಾಭ ಪಡೆದ ನಲಬಂತೊವಾ 11–7ರ ಮುನ್ನಡೆ ಪಡೆದಿದ್ದರು. ಅಲ್ಪವಿರಾಮದ ನಂತರದ ಸಿಂಧು ಲಯಕ್ಕೆ ಮರಳಿದರು.

ಕ್ರಾಸ್ ಕೋರ್ಟ್ ವಿನ್ನರ್‌ಗಳನ್ನು ಪ್ರದರ್ಶಿಸಿದರು. ಶರವೇಗ ಸ್ಮ್ಯಾಷ್‌ಗಳ ಮೂಲಕ ಬಲ್ಗೇರಿಯಾದ ಆಟಗಾರ್ತಿಯ ಲಯ ತಪ್ಪಿಸಿದರು. ಇದರಿಂದಾಗಿ ಕೆಲವೇ ನಿಮಿಷಗಳಲ್ಲಿ 12–12ರ ಸಮಬಲಕ್ಕೆ ಬಂದು ನಿಂತರು. ನಲಬಂತೋವಾ ಎಸಗಿದ ಎರಡು ತಪ್ಪುಗಳಿಂದಾಗಿ ಸಿಂಧು 14–12ರ ಮಹತ್ವದ ಮುನ್ನಡೆ ಸಾಧಿಸಿದರು. ನಂತರದ ಆಟವು ರೋಚಕವಾಗಿತ್ತು. ಒಂದು ಹಂತದಲ್ಲಿ 19–20ರಿಂದ ಮುಂದಿದ್ದ ನಲಬಂತೋವಾ ಗೇಮ್ ಪಾಯಿಂಟ್ ಗಳಿಸುವಲ್ಲಿ ವಿಫಲರಾದರು. ಅವರು ಹೊಡೆದ ಶಟಲ್, ನೆಟ್‌ಗೆ ಅಪ್ಪಳಿಸಿತ್ತು. ಇದರಿಂದಾಗಿ 20–20ರ ಸಮಬಲಕ್ಕೆ ಗೇಮ್ ಬಂದಿತು. ಅದರ ನಂತರವೂ ಮತ್ತೊಂದು ಪಾಯಿಂಟ್ ಗಳಿಸಿದ ಬಲ್ಗೇರಿಯನ್ ಆಟಗಾರ್ತಿ ಮತ್ತೊಮ್ಮೆ ಎಡವಿದರು. ಆದರೆ ಸಿಂಧು ಈ ಅವಕಾಶ ಬಿಡದೆ, ಗೇಮ್ ತಮ್ಮದಾಗಿಸಿಕೊಂಡರು.



ಪಿ.ವಿ. ಸಿಂಧು ಎಎಫ್‌ಪಿ ಚಿತ್ರ

ಎರಡನೇ ಗೇಮ್‌ನಲ್ಲಿ ಸಿಂಧು ತಮ್ಮ ಎದುರಾಳಿಗೆ ಯಾವುದೇ ಅವಕಾಶ ನೀಡಲಿಲ್ಲ. ಆರಂಭದಲ್ಲಿಯೇ 5–1ರ ಮುನ್ನಡೆ ಸಾಧಿಸಿದರು. ಆದರೂ ತಿರುಗೇಟು ನೀಡುವ ಪ್ರಯತ್ನ ಮಾಡಿದ ನಲಬಂತೋವಾ 5–6ರ ಸ್ಕೋರ್‌ಗೆ ಬಂದರು. ಆದರೆ ಈ ಹಂತದಿಂದ ಚುರುಕಾಗಿ ಆಡಿದ ಸಿಂಧು 17–5ರ ಮುನ್ನಡೆ ಸಾಧಿಸಿದರು. ನಂತರದ ಹಂತದಲ್ಲಿ ಎದುರಾಳಿಗೆ ಒಂದು ಅಂಕ ಮಾತ್ರ ಕೊಟ್ಟರು. ತಾವು ಗೆಲುವಿನತ್ತ ಸಾಗಿದರು.

ಸಿಂಧು ಅವರು ಎರಡನೇ ಸುತ್ತಿನಲ್ಲಿ ಥಾಯ್ಲೆಂಡ್‌ನ ಕರುಪತೆವನ್ ಲೆತ್ಷಾನಾ ಅವರನ್ನು ಎದುರಿಸಲಿದ್ದಾರೆ.

ಪ್ರಣಯ್ ಜಯಭೇರಿ: 2023ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದಿದ್ದ ಪ್ರಣಯ್ ಅವರು ಪುರುಷರ ಸಿಂಗಲ್ಸ್ ಪಂದ್ಯದಲ್ಲಿ 21–18, 21–15ರಿಂದ ಫಿನ್ಲೆಂಡ್‌ನ ಜೋಕಿಮ್ ಒಲ್ಡೋರ್ಫ್ ಅವರ ಸವಾಲು ಮೀರಿ ನಿಂತರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ 34ನೇ ಸ್ಥಾನದಲ್ಲಿರುವ ಪ್ರಣಯ್ ಅವರು 47 ನಿಮಿಷ ನಡೆದ ಹಣಾಹಣಿಯಲ್ಲಿ ಫಿನ್ಲೆಂಡ್ ಆಟಗಾರ (47ನೇ ರ್‍ಯಾಂಕ್) ನನ್ನು ಮಣಿಸಿದರು.

ಪ್ರಣಯ್ ಅವರು ಮುಂದಿನ ಸುತ್ತಿನಲ್ಲಿ ಆ್ಯಂಡರ್ಸ್ ಆ್ಯಂಟೋನ್ಸೆನ್ ವಿರುದ್ಧ ಆಡುವ ಸಾಧ್ಯತೆ ಇದೆ.

ಇದರ ಮುಂದೆ ಎಲ್ಲವೂ ಕಳಪೆ
PACK TWO



ಇದನ್ನು ನಿಮ್ಮದಾಗಿಸಿಕೊಳ್ಳಿ. ಇದು ಇತ್ತೀಚೆಗೆ ಬಿಡುಗಡೆಗೊಂಡ 'XEV 9e Pack Two'. ಇದರ ಪ್ರತಿಯೊಂದು ವಿಷಯವೂ ಶ್ರೇಷ್ಠತೆಯ ಸಂಕೇತವಾಗಿದೆ, ನಮ್ಮ ಟಾಪ್ ಎಂಡ್ Pack Threeಯಂತೆ; ಮತ್ತೆ ಆಕರ್ಷಕ ಬೆಲೆ, ಕೇವಲ ₹24.90 ಲಕ್ಷಗಳು*; EMI ಕೂಡ ಸುಲಭ, ಕೇವಲ ₹45 716.00#. ಮುಖದಲ್ಲಿ ಮಂದಹಾಸ ಮೂಡಿತಲ್ಲವೇ! ಈಗ ನಮ್ಮ ಕೆಲವು ಟಾಪ್ ಎಂಡ್ ವೈಶಿಷ್ಟ್ಯಗಳ ಮೇಲೆ ಗಮನ ಹರಿಸಿರಿ; ಇವು ನಿಮಗೆ ದೊರೆಯುತ್ತವೆ Pack Twoದಲ್ಲಿ:

ಕೋಸ್ಟ್-ಟು-ಕೋಸ್ಟ್ 3 ಸ್ಕ್ರೀನ್ಸ್ ಡಿಸ್‌ಪ್ಲೇ • ಪ್ರೀಮಿಯಂ ಲೆದರೆಟ್ ಇಂಟೀರಿಯರ್ಸ್ • ಸೋನಿಕ್ ಸ್ಟುಡಿಯೋ
16-ಸ್ಪೀಕರ್ ಹರ್ಮನ್ ಕಾರ್ಡನ್ ಸಿಸ್ಟಮ್‌ನೊಂದಿಗೆ ಡಾಲ್ಬಿ ಅಟ್ಮಾಸ್ • ಲೆವೆಲ್ 2 ADAS • LED ಲ್ಯಾಂಪ್ಸ್
R19 ಅಲಾಯ್ ವ್ಹೀಲ್ಸ್ • ಫಿಕ್ಸ್ಡ್-ಗ್ಲಾಸ್ ಇನ್ಫಿನಿಟಿ ರೂಫ್ • 5-ಸ್ಟಾರ್ ಭಾರತ್ NCAP ಸೇಫ್ಟಿ ರೇಟಿಂಗ್

ಸಿಂಗಲ್ ಚಾರ್ಜ್‌ನಲ್ಲಿ 79 kWh ಬ್ಯಾಟರಿ ನಿಮಗೆ ನೀಡುತ್ತದೆ 500 km^ ಮತ್ತು 59 kWh ಬ್ಯಾಟರಿ ನಿಮಗೆ ನೀಡುತ್ತದೆ 400 km^ನ ರಿಯಲ್-ವರ್ಲ್ಡ್ ರೇಂಜ್; ಅಂದರೆ ವಾರಕ್ಕೊಮ್ಮೆ ಇದನ್ನು ಚಾರ್ಜ್ ಮಾಡಿದರೆ ಸಾಕಾಗುತ್ತದೆ. ಅಲ್ಲದೆ, ನಿಮಗೆ ಬ್ಯಾಟರಿಯ ಮೇಲೆ ಲೈಫ್‌ಟೈಮ್ ವಾರಂಟಿ### ಸಿಗುತ್ತದೆ. ಈಗ ಪ್ರಯಾಣ ಟೆನ್ಷನ್-ಫ್ರೀ.

ಆರಂಭಿಕ ಬೆಲೆ
₹24.90 ಲಕ್ಷಗಳು*
ಸುಲಭ EMI - ₹45 716.00#
ಬಿಸಿನೆಸ್‌ಗಳಿಗೆ 40% ಡಿಪ್ರಿಸಿಯೇಶನ್ ಲಾಭ## • 0% ರೋಡ್ ಟ್ಯಾಕ್ಸ್^^

XEV 9e PACK TWO | ಡೆಲಿವರಿ ಈಗ ಆರಂಭಗೊಂಡಿದೆ

ನಿಮ್ಮ ಸಮೀಪದ ಡೀಲರ್‌ಶಿಪ್ ಹುಡುಕಲು ಸ್ಕ್ಯಾನ್ ಮಾಡಿ

*ಚಾರ್ಜರ್ ಮತ್ತು ಇನ್‌ಸ್ಟಾಲೇಶನ್ ವೆಚ್ಚವಿಲ್ಲದೆ, XEV 9e Pack Two 59 kWhನ ಎಕ್ಸ್-ಶೋರೂಮ್ ಆರಂಭಿಕ ಬೆಲೆ. #MMFSLನಿಂದ ಬಲೂನ್ ಪೇಮೆಂಟ್‌ನೊಂದಿಗೆ ವಿಶೇಷ EMI ಯೋಜನೆ. ##ಅರ್ಹತೆಗಾಗಿ ನಿಮ್ಮ ಆರ್ಥಿಕ ಸಲಹೆಗಾರರನ್ನು ಸಂಪರ್ಕಿಸಿ. ###ಮೊದಲ ರಿಜಿಸ್ಟರ್ಡ್ ಮಾಲೀಕರಿಗೆ. ಪ್ರೈವೇಟ್ ರಿಜಿಸ್ಟ್ರೇಶನ್‌ಗೆ ಮಾತ್ರ ಅನ್ವಯಿಸುತ್ತದೆ. ಮಾಲೀಕತ್ವ ಬದಲಾದಾಗ, HV ಬ್ಯಾಟರಿಯ ವಾರಂಟಿಯು 10 ವರ್ಷ ಅಥವಾ 2 00 000 km, ಈ ಪೈಕಿ ಯಾವುದು ವಾಹನದ ಡೆಲಿವರಿಗೆ ಮೊದಲು ಆಗುತ್ತದೆಯೋ ಅದು. ^AC ಆನ್ ಮಾಡಿ, ನಗರದ ಸ್ಥಿತಿಗಳಲ್ಲಿ ವೈಯಕ್ತಿಕ ಪರೀಕ್ಷೆಗಳ ಪ್ರಕಾರ. ನಿಜವಾದ ಫಲಿತಾಂಶಗಳು ಭಿನ್ನವಾಗಿರಬಹುದು. ARAI MIDC P1+P2 ಪ್ರಮಾಣೀಕೃತ ರೇಂಜ್: 59 kWh: 542 km, 79 kWh: 656 km. ^^ಕರ್ನಾಟಕದಲ್ಲಿ ₹25 ಲಕ್ಷಗಳಿಗಿಂತ ಕಡಿಮೆ ಬೆಲೆಯ EVsಗೆ ಅನ್ವಯಿಸುತ್ತದೆ, ಎಕ್ಸ್-ಶೋರೂಮ್, ₹25 ಲಕ್ಷಗಳಿಗಿಂತ ಮೇಲ್ಪಟ್ಟವುಗಳಿಗೆ 10% ರೋಡ್ ಟ್ಯಾಕ್ಸ್ ಅನ್ವಯಿಸುತ್ತದೆ. **ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.

ವಿವರವಾದ ನಿಬಂಧನೆಗಳು ಮತ್ತು ಷರತ್ತುಗಳಿಗಾಗಿ, ಇಲ್ಲಿಗೆ ಭೇಟಿಕೊಡಿ: www.mahindraelectricsuv.com/tnc.html

ELECTRIC ORIGIN SUVs
mahindra